ಹುಬ್ಬಳ್ಳಿ
ಸೋಮವಾರ, 16 ಮಾರ್ಚ್ 2026
ಸಂಪುಟ 15, ಸಂಚಿಕೆ 357, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಎನ್‌ಡಿಎ ತೆಕ್ಕೆಗೆ ತ.ನಾಡು, ಅಸ್ಸಾಂ?| ೦೭ ಭಾರತದತ್ತ ಮತ್ತೊಂದು ಕಚ್ಚಾ ತೈಲ ಟ್ಯಾಂಕರ್| ೦೭ ಜನಪರವಾಗಿ ಸ್ವಾಸ್ಥ್ಯ ರಂಗ ಬದಲಿಸಿದ ಬಿಜೆಪಿ| ೦೭

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಧನಿಷ್ಠೆ

ದಿನದ ಮಾತು

ಸಾಧ್ಯವಾದಷ್ಟು ನಾವು ರಾಕ್ಷಸರಾಗಬಾರದು. ಪಶುಗಳಾಗಬಾರದು. ಮನುಷ್ಯರೇ ಆಗಬೇಕು. ಅದು ಮಾನವ ಧರ್ಮದ ಮುಖ್ಯವಾದ ತತ್ವ.

▲ಶ್ರೀ ವಾಣಿ

ವಿಶ್ವಯುದ್ಧ: ಸಾವರ್ಕರ್ ದೃಷ್ಟಿಕೋನ ಹೇಗಿತ್ತು?

ನೇರ ನೋಟ

• ದು.ಗು. ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಏಪ್ರಿಲ್‌ನಿಂದ ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್ ದರ ಏರಿಕೆ

• **ಹೊಸದಿಲ್ಲಿ:** ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ(ಎನ್‌ಎಚ್‌ಎಐ) ಇತ್ತೀಚಿನ ಪ್ರಕಟಣೆಯಂತೆ ಏ.1ರಿಂದ ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್ ಬೆಲೆಯಲ್ಲಿ ಅಲ್ಪ ಏರಿಕೆ ಮಾಡಲಾಗುತ್ತದೆ. ಹಣದುಬ್ಬರಕ್ಕೆ ಅನುಗುಣವಾಗಿ ಶುಲ್ಕವನ್ನು 3,000 ರೂ. ನಿಂದ 3,075 ರೂ.ಗೆ (ಶೇ. 2.5 ರಷ್ಟು) ಹೆಚ್ಚಿಸಲು ನಿರ್ಧರಿಸಲಾಗಿದೆ.

• ಪುಟ ೭

ಕೌಡಿಯಾರ್ ಅರಮನೆಯಲ್ಲಿ ಅಪಾರ ಮೌಲ್ಯ ಚಿನ್ನ ಕಳವು

• **ತಿರುವನಂತಪುರಂ(ಕೇರಳ):** ಕೌಡಿಯಾರ್ ಅರಮನೆಯಲ್ಲಿ ಸುಮಾರು 2 ಕೋಟಿ ರೂ. ಮೌಲ್ಯದ ಚಿನ್ನಾಭರಣಗಳು ಹಾಗೂ ಅಮೂಲ್ಯ ಪ್ರಾಚೀನ ವಸ್ತುಗಳು ಕಳ್ಳತನವಾಗಿರುವ ಘಟನೆ ಬೆಳಕಿಗೆ ಬಂದಿದೆ. ಈ ಕುರಿತು ತಿರುವಾಂಕೂರು ರಾಜಮನೆತನದ ಸದಸ್ಯೆ ಅಶ್ವತಿ ತಿರುನಾಳ್ ಗೌರಿ ಲಕ್ಷ್ಮಿ ಬಾಯಿ ಅವರು ಪೇರೂರ್ಕಡ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

• ಪುಟ ೭

ಇರಾನ್ ನಗರಗಳ ಮೇಲೆ ಬಿ-52 ಬಾಂಬರ್ಸ್ ದಾಳಿ!

• ಪುಟ ೭

ಚುನಾವಣೆ ಘೋಷಣೆ ಮುನ್ನ ಡಿಎ, ಅರ್ಚಕರ ಭತ್ಯೆ ಹೆಚ್ಚಳ

• ಪುಟ ೭

ಗಡಿ ನುಸುಳಲು ಯತ್ನ: ಪಾಕಿಸ್ತಾನಿ ಉಗ್ರ ಹತ

• ಪುಟ ೭

ರಾಷ್ಟ್ರೀಯ ಚಿಂತನೆಯ ವಿಸ್ತರಣೆಗೆ ವೇಗ

• ಪುಟ ೩

ಶಾಸಕರಿಗೆ 5 ಕೋಟಿ ರೂ. ಆಮಿಷ: ಡಿಕೆಶಿ

• ಪುಟ ೩

ಅನಿಲ ಪೂರೈಕೆ: ಪರ್ಯಾಯ ಮಾರ್ಗ ಕೋರಿ ಕೇಂದ್ರಕ್ಕೆ ಸಿಎಂ ಪತ್ರ

• ಪುಟ ೩

ಕೇರಳ, ತ.ನಾಡು, ಅಸ್ಸಾಂ, ಪ.ಬಂಗಾಳ, ಪುದುಚೇರಿ ಚುನಾವಣಾ ದಿನ ಪ್ರಕಟ | ಮೇ 4ರಂದು ಫಲಿತಾಂಶ

ಮತಯುದ್ಧಕ್ಕೆ ವೇದಿಕೆ

- ಏ.9: ಅಸ್ಸಾಂ, ಕೇರಳ, ಪುದುಚೇರಿ, ದಾವಣಗೆರೆ, ಬಾಗಲಕೋಟೆ
- ಏ.23: ತಮಿಳುನಾಡು, ಪಶ್ಚಿಮ ಬಂಗಾಳ
- ಏ.29: ಪಶ್ಚಿಮ ಬಂಗಾಳ (2ನೇ ಹಂತ)

• **ಹೊಸದಿಲ್ಲಿ:** ಬಹು ನಿರೀಕ್ಷಿತ ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಕೇರಳ ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೇರಿ ವಿಧಾನಸಭಾ ಚುನಾವಣೆಯ ವೇಳಾಪಟ್ಟಿಯನ್ನು ಕೇಂದ್ರ ಚುನಾವಣಾ ಆಯೋಗ ಭಾನುವಾರ ಪ್ರಕಟಿಸಿದೆ. ಜತೆಗೆ ಕರ್ನಾಟಕದ ಎರಡು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆಯ ದಿನಾಂಕವನ್ನೂ ಘೋಷಿಸಲಾಗಿದೆ.

ಅಸ್ಸಾಂ, ಕೇರಳ ಮತ್ತು ಪುದುಚೇರಿಯಲ್ಲಿ ಏ.9ರಂದು ಒಂದೇದಿನ, ತಮಿಳುನಾಡಿನಲ್ಲಿ ಏ.23ರಂದು ಮತ್ತು ಪಶ್ಚಿಮ ಬಂಗಾಳದಲ್ಲಿ ಏ.23 ಮತ್ತು 29ರಂದು ಎರಡು ಹಂತಗಳಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿದ್ದು, ಮೇ 4ರಂದು ಎಲ್ಲಾ ಚುನಾವಣೆಗಳ ಮತ ಎಣಿಕೆ ನಡೆಯಲಿದೆ.

ಇಲ್ಲಿನ ವಿಜ್ಞಾನ ಭವನದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಈ ಕುರಿತು ಅಧಿಕೃತ ಮಾಹಿತಿ ನೀಡಿದರು. ಅವರೊಂದಿಗೆ ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಉಪಸ್ಥಿತರಿದ್ದರು.

824 ವಿಧಾನಸಭಾ ಸ್ಥಾನಕ್ಕೆ ಚುನಾವಣೆ: 4 ರಾಜ್ಯ ಒಂದು ಕೇಂದ್ರಾಡಳಿತ ಪ್ರದೇಶದ ಒಟ್ಟು 824 ವಿಧಾನ ಸಭಾ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಈ ಚುನಾ ವಣೆಯಲ್ಲಿ ಸುಮಾರು 17.4 ಕೋಟಿ ಮತದಾರರು ತಮ್ಮ ಹಕ್ಕನ್ನು ಚಲಾಯಿಸಲಿದ್ದಾರೆ. 2.18 ಲಕ್ಷಕ್ಕೂ ಹೆಚ್ಚು ಮತಗಟ್ಟೆಗಳು ಸ್ಥಾಪಿಸಲಾಗಲಿದ್ದು, ಸುಮಾರು 25 ಲಕ್ಷ ಚುನಾವಣಾ ಸಿಬ್ಬಂದಿ ಕರ್ತವ್ಯ ನಿರ್ವಹಿಸಲಿದ್ದಾರೆ.

ಪುಟ ೪



ಏ.9ಕ್ಕೆ ದಾವಣಗೆರೆ, ಬಾಗಲಕೋಟೆ ಉಪಚುನಾವಣೆ

ಕರ್ನಾಟಕದ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಿಗೆ ಕೂಡ ಉಪಚುನಾವಣೆ ಘೋಷಿಸಲಾಗಿದೆ. ದಾವಣಗೆರೆ ದಕ್ಷಿಣ ಕ್ಷೇತ್ರವು ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದು, ಬಾಗಲಕೋಟೆ ಕ್ಷೇತ್ರವು ಮಾಜಿ ಸಚಿವ ಎಚ್.ವೈ. ಮೇಟಿ ಅವರ ಅಗಲಿಕೆಯಿಂದ ಖಾಲಿಯಾಗಿದೆ. ಈ ಎರಡು ಕ್ಷೇತ್ರಗಳಿಗೂ ಏ.9ರಂದು ಮತದಾನ ನಡೆಯಲಿದ್ದು, ಇವುಗಳ ಫಲಿತಾಂಶವೂ ಮೇ 4ರಂದು ಪ್ರಕಟವಾಗಲಿದೆ ಎಂದು ಮುಖ್ಯ ಚುನಾವಣಾ ಆಯುಕ್ತರು ತಿಳಿಸಿದ್ದಾರೆ.

ಮತದಾನ ವೇಳಾಪಟ್ಟಿ

- ಅಸ್ಸಾಂ, ಕೇರಳ ಮತ್ತು ಪುದುಚೇರಿ: ಏಪ್ರಿಲ್ 9ರಂದು ಒಂದೇ ಹಂತದಲ್ಲಿ ಮತದಾನ
- ತಮಿಳುನಾಡು: ಏಪ್ರಿಲ್ 23ರಂದು ಒಂದೇ ಹಂತದಲ್ಲಿ ಮತದಾನ

ಪಶ್ಚಿಮ ಬಂಗಾಳದಲ್ಲಿ 2 ಹಂತದ ಮತದಾನ

ಮೊದಲ ಹಂತ: ಏಪ್ರಿಲ್ 23
ಎರಡನೇ ಹಂತ: ಏಪ್ರಿಲ್ 29

ಈ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ನಡೆದ ಮತದಾನದ ಫಲಿತಾಂಶ ಮೇ 4ರಂದು ಪ್ರಕಟವಾಗಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ವಿಧಾನಸಭೆ	ಕ್ಷೇತ್ರಗಳು
ತಮಿಳುನಾಡು	234
ಪಶ್ಚಿಮ ಬಂಗಾಳ	294
ಕೇರಳ	140
ಅಸ್ಸಾಂ	126
ಪುದುಚೇರಿ	33

20 ದೇಶಗಳ ಚುನಾವಣಾ ವೀಕ್ಷಕರು

ನೀತಿಸಂಹಿತೆ ಜಾರಿ

• ಪುಟ ೪

ದೇಶದಲ್ಲಿ 80ಕ್ಕೂ ಹೆಚ್ಚು ಸಂಭಾಗ: ಹೊಸಬಾಳೆ

ಆರೆಸ್ಸೆಸ್ ಶತಾಬ್ದಿ ವರ್ಷ ಬಳಿಕ ಸಂಭಾಗ ರಚನೆ

• **ಸಮಾಲ್ಖಾ(ಹರಿಯಾಣ):** ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ಮೂರು ದಿನಗಳ ಅಖಿಲ ಭಾರತೀಯ ಪ್ರತಿನಿಧಿ ಸಭಾವು ಸಂಘಟನಾ ಕಾರ್ಯ ವಿಸ್ತರಿಸಲು, ಸಮಾಜದ ಉದಾತ್ತ ಶಕ್ತಿಗಳನ್ನು ರಾಷ್ಟ್ರೀಯ ಹಿತಾಸಕ್ತಿಯಲ್ಲಿ ಸಜ್ಜುಗೊಳಿಸಲು ಮತ್ತು ಸಾಮಾಜಿಕ ಸಾಮರಸ್ಯ ಉತ್ತೇಜಿಸುವ ನಿರ್ಣಯದೊಂದಿಗೆ ಮುಕ್ತಾಯವಾಯಿತು.

ಹರಿಯಾಣದ ಸಮಾಲ್ಖಾದಲ್ಲಿರುವ ಮಾಧವ ಸೃಷ್ಟಿ ಆವರಣದಲ್ಲಿ ಮೂರು ದಿನಗಳಿಂದ ಆರ್‌ಎಸ್‌ಎಸ್‌ನ ವಾರ್ಷಿಕ ಅಖಿಲ ಭಾರತೀಯ ಪ್ರತಿನಿಧಿ ಸಭಾ ನಡೆಯಿತು. ಅಂತಿಮ ದಿನವಾದ ಭಾನುವಾರ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಸುದ್ದಿಗೋಷ್ಠಿ ನಡೆಸಿದರು.

ಶತಾಬ್ದಿ ವರ್ಷದ ತರುವಾಯ ಸಂಘದ ಭೌಗೋಳಿಕ ರಚನೆಯಲ್ಲಿ ಪ್ರಾಂತ ರಚನೆಯ ಬದಲು ಇನ್ನೂ ಚಿಕ್ಕ ಘಟಕವಾಗಿರುವ ಸಂಭಾಗ ರಚನೆಯಾಗಲಿದೆ. ದೇಶಾದ್ಯಂತ ಸಂಘಕಾರ್ಯ ವಿಸ್ತಾರವಾಗಿರುವುದರಿಂದ ಸಹಜವಾಗಿಯೇ ವಿಕೇಂದ್ರೀಕರಣದ ಅಗತ್ಯ ಗಮನದಲ್ಲಿರಿಸಿ, ಈ ಪರಿವರ್ತನೆ ಮಾಡಲಾಗಿದೆ. ಹೆಚ್ಚು ವಿಕೇಂದ್ರೀಕರಣಕ್ಕೆ ಗಮನ ನೀಡಲಾಗಿದೆ. ಅದರ ಅನುಷ್ಠಾನದ ನಂತರ ದೇಶದಲ್ಲಿ 46 ಪ್ರಾಂತಗಳ ಬದಲು 80 ಕ್ಕೂ ಹೆಚ್ಚು ಸಂಭಾಗಗಳು ಇರಲಿವೆ ಎಂದು ಅವರು ಹೇಳಿದರು.

ಯುದ್ಧ ಆದಷ್ಟು ಬೇಗ ಕೊನೆಯಾಗಬೇಕು: ಭಾರತೀಯ ಮೂಲದವರಾಗಿ ಭಾರತಕ್ಕೆ ಮಾತ್ರ ನಿಷ್ಠರಾಗಿರದೆ ನೀವು ನೆಲೆಸಿರುವ ದೇಶಗಳಲ್ಲಿನ ಕರ್ತವ್ಯಗಳನ್ನೂ ನೀವು ಪಾಲನೆ ಮಾಡಬೇಕು. ವಿಶ್ವ ಶಾಂತಿ ನಮ್ಮ ದೃಷ್ಟಿ. ಅನೇಕ ಕಾರಣಗಳಿಂದ ಯುದ್ಧಗಳು ನಡೆಯುತ್ತವೆ. ಆದಷ್ಟು ಬೇಗ ಅದು ಮುಕ್ತಾಯಗೊಂಡು ಅಲ್ಲಿನ ಜನಜೀವನ ಸುಖ ಶಾಂತಿಯಲ್ಲಿ ನೆಲೆಸಬೇಕು ಎನ್ನುವುದು ನಮ್ಮ ಅಪೇಕ್ಷೆ. ಈಗ ಆಗುತ್ತಿರುವ ಯುದ್ಧದ ಕುರಿತು ಸಂಘಕ್ಕೆ ಯಾವುದೇ ನಿಲುವಿಲ್ಲ, ಆದರೆ, ವಿಶ್ವದಲ್ಲಿ ಶಾಂತಿ ನೆಲೆಸಬೇಕು.

ಪುಟ ೪



ಭಾರತದ ಹಿತಕ್ಕಾಗಿ ಸರ್ಕಾರ ನಿಲ್ಲುತ್ತದೆ

ಭಾರತ ಸರ್ಕಾರ ಭಾರತದ ದೃಷ್ಟಿಯಿಂದ ಯಾವುದು ಹಿತವೋ ಅದನ್ನು ಮಾಡುವುದಕ್ಕಾಗಿ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತದೆ ಎಂಬ ವಿಶ್ವಾಸವಿದೆ. ಸರ್ಕಾರದಲ್ಲಿರುವ ಸಚಿವರು ವಿಶ್ವದ ದೇಶಗಳೊಂದಿಗೆ ಸಂಬಂಧ, ಸಂಪರ್ಕ, ವಾಣಿಜ್ಯ, ವ್ಯವಹಾರ, ಸುರಕ್ಷತೆಯ ಕುರಿತು ಮಾತುಕತೆ ನಡೆಸುವುದರ ಜೊತೆಗೆ ರಾಷ್ಟ್ರ ಮೊದಲು ಎಂಬ ಪ್ರಧಾನ ಆಸಕ್ತಿ ಆಧಾರಿತವಾಗಿ ಕೆಲಸ ಮಾಡುತ್ತಿದೆ ಎಂದು ದತ್ತಾತ್ರೇಯ ಹೊಸಬಾಳೆ ಹೇಳಿದರು.

> ಸಮಾಜದಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ಕೊನೆಗೊಳಿಸಲು ಮತ್ತು ಯಾವುದೇ ಚುನಾವಣೆಯಲ್ಲಿ ಜಾತಿ ಆಧಾರಿತವಾಗಿ ಮತದಾರರ ಮನದಾನದ ಬಳಕೆ ನಿಲ್ಲಿಸಲು ಮಾಧ್ಯಮಗಳು ಸಹ ಮುಂದಾಗಬೇಕು.
>
> ■ ದತ್ತಾತ್ರೇಯ ಹೊಸಬಾಳೆ, ಆರ್‌ಎಸ್‌ಎಸ್ ಸರಕಾರ್ಯವಾಹ

ಲೋಕಸಭಾ ಸ್ಪೀಕರ್ ಓಂ ಬಿರ್ಲಾಗೆ ಪ್ರಧಾನಿ ಮೋದಿ ಪತ್ರ

ಅವಿಶ್ವಾಸದ ಹಿಂದೆ ಸ್ವಹಿತಾಸಕ್ತಿ

• **ಹೊಸದಿಲ್ಲಿ:** ಲೋಕಸಭಾ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ ರಾಜಕೀಯ ಹೊಣೆಗೇಡಿತನ. ಸ್ವಹಿತಾಸಕ್ತಿ ಇದರ ಹಿಂದಿದೆ. ವಂಶಪಾರಂಪರ್ಯ ಚಿಂತನೆಯಲ್ಲಿ ಮುಳುಗಿರುವ ಕೆಲವರು ಪ್ರಜಾತಾಂತ್ರಿಕ ಸಂಸ್ಥೆಗಳನ್ನು ತಮ್ಮ ಸೀಮಿತ ವರ್ತುಲದೊಳಗೆ ಸೀಮಿತಗೊಳಿಸಲು ಯತ್ನಿಸುತ್ತಿರುವುದು ಸರ್ವತ್ರ ಖಂಡನೀಯ ಎಂದು ಪ್ರಧಾನಿ ನರೇಂದ್ರ ಮೋದಿ ಕಾಂಗ್ರೆಸ್‌ನ್ನು ಕಟುವಾಗಿ ತರಾಟೆಗೆತ್ತಿಕೊಂಡಿದ್ದಾರೆ.



ಸಭಾಪತಿ ಓಂ ಬಿರ್ಲಾ ಪದಚ್ಯುತಿಗಾಗಿ ಕಾಂಗ್ರೆಸ್ ನೇತೃತ್ವದ ವಿಪಕ್ಷ ಕೂಟ ಮಂಡಿಸಿದ್ದ ಅವಿಶ್ವಾಸ ನಿರ್ಣಯ ವಿಫಲಗೊಂಡ ನಂತರದಲ್ಲಿ, ಬಿರ್ಲಾ ಅವರಿಗೆ ಬರೆದ ಪತ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಕಾಂಗ್ರೆಸ್ ನಡೆ ಟೀಕಿಸಿದ್ದಾರೆ. ಪ್ರಧಾನಿ ಪತ್ರಕ್ಕೆ ಕೃತಜ್ಞತೆ ವ್ಯಕ್ತಪಡಿಸಿರುವ ಬಿರ್ಲಾ, ಪ್ರಧಾನಿ ಮೋದಿ ಯಾವತ್ತೂ ಸಂಸದೀಯ ಪ್ರಜಾಸತ್ತೆಯ ನಿಯಮಗಳು, ನಿಯಮಾವಳಿಗಳು ಮತ್ತು ಪರಂಪರೆಯಲ್ಲಿ ಅಚಲ ನಂಬುಗೆ ಕಾಯ್ದುಕೊಂಡವರು ಎಂದು ಪ್ರಶಂಸಿಸಿದ್ದಾರೆ.

ಪುಟ ೪

ಸಂಸದರ ಅಸಭ್ಯ ಭಾಷೆ ಬಗ್ಗೆ ಸ್ಪೀಕರ್ ಆತಂಕ

ಸಂಸದರು ಸದನದೊಳಗೆ ಬ್ಯಾನರ್, ಭಿತ್ತಿಪತ್ರ, ಪೋಸ್ಟರ್‌ಗಳನ್ನು ಪ್ರದರ್ಶಿಸುವುದು ಮತ್ತು ಅಸಭ್ಯ ಭಾಷೆ ಬಳಸುವ ಬಗ್ಗೆ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಗಂಭೀರ ಆತಂಕ ವ್ಯಕ್ತಪಡಿಸಿ, ಎಲ್ಲಾ ರಾಜಕೀಯ ಪಕ್ಷಗಳ ನಾಯಕರಿಗೆ ಪತ್ರ ಬರೆದಿದ್ದಾರೆ. ಅವರು ಸದನದಲ್ಲಿ ಶಿಸ್ತು ಮತ್ತು ನಡವಳಿಕೆಯನ್ನು ಕಾಪಾಡಲು ತಮ್ಮ ಪಕ್ಷದ ಸದಸ್ಯರಿಗೆ ಸೂಚನೆ ನೀಡುವಂತೆ ಮನವಿ ಮಾಡಿದ್ದಾರೆ. ಲೋಕಸಭೆಗೆ ಸದಾ ಗೌರವಯುತ ಚರ್ಚೆ ಮತ್ತು ಸಂವಾದದ ಮಹತ್ವದ ಪರಂಪರೆ ಇದೆ.

ಪುಟ ೪

ಇರಾನ್ ದಾಳಿ ತಡೆದ ಗಲ್ಫ್ ರಾಷ್ಟ್ರಗಳು | 3 ಇಸ್ರೇಲಿಗರಿಗೆ ಗಾಯ

ಗಲ್ಫ್‌ಗೆ ಇರಾನ್ ದಾಳಿ ವಿಸ್ತರಣೆ!

• **ಕೈರೋ:** ಮಧ್ಯಪ್ರಾಚ್ಯ ಯುದ್ಧ ಮೂರನೇ ವಾರ ಪ್ರವೇಶಿಸಿದ ಹಿನ್ನೆಲೆ ನೆರೆರಾಷ್ಟ್ರಗಳ ಮೇಲಿನ ದಾಳಿಯನ್ನು ಇರಾನ್ ಭಾನುವಾರ ವಿಸ್ತರಿಸಿದ್ದು, ಯುಎಇನಲ್ಲಿನ ಮೂರು ಬಂದರುಗಳನ್ನು ಖಾಲಿ ಮಾಡಲು ಕರೆ ನೀಡಿದೆ. ಇದೇ ಮೊದಲ ಬಾರಿಗೆ ಯುಎಇ ವಿರುದ್ಧ ಇರಾನ್ ದಾಳಿ ಬೆದರಿಕೆ ಹಾಕಿದೆ.

ಭಾನುವಾರ ಕ್ಷಿಪಣಿ ಮತ್ತು ಡ್ರೋನ್‌ಗಳಿಂದ ಇರಾನ್ ನಡೆಸಿದ ಹೊಸ ದಾಳಿಗಳನ್ನು ತಡೆಗಟ್ಟಿರುವುದಾಗಿ ಗಲ್ಫ್ ರಾಷ್ಟ್ರಗಳು ಹೇಳಿಕೊಂಡಿವೆ.

ಇಸ್ರೇಲ್ ಮೇಲೆ ಇರಾನ್ ಮತ್ತಷ್ಟು ಕ್ಷಿಪಣಿ ದಾಳಿ: ಭಾನುವಾರ ಇಸ್ರೇಲ್ ಮೇಲೆ ಇರಾನ್ ಮತ್ತಷ್ಟು ಕ್ಷಿಪಣಿ ದಾಳಿಗಳನ್ನು ನಡೆಸಿದ್ದು, ಇಸ್ರೇಲ್‌ನಲ್ಲಿ ಸೈರನ್ ಧ್ವನಿಗಳು ಕೇಳಿಬಂದಿವೆ. ಸೈರನ್ ಧ್ವನಿ ಕೇಳಿಬಂದಂತೆ ಜನರು ಆಶ್ರಯ ಕೇಂದ್ರಗಳಿಗೆ ಓಡಿದ್ದಾರೆ. ಕೆಲ ಕ್ಷಿಪಣಿಗಳು ಮಧ್ಯ ಇಸ್ರೇಲ್ ಮತ್ತು ಟೆಲ್ ಅವಿವ್ ಪ್ರದೇಶಗಳಿಗೆ ಹಾನಿಯನ್ನು ಉಂಟುಮಾಡಿವೆ.

ಪುಟ ೪



ಬಾಹ್ಯಾಕಾಶ ಕೇಂದ್ರದ ಮೇಲೆ ದಾಳಿ

ಇರಾನ್‌ನ ಪ್ರಮುಖ ಬಾಹ್ಯಾಕಾಶ ಸಂಶೋಧನಾ ಕೇಂದ್ರ ಮತ್ತು ವಾಯು ರಕ್ಷಣಾ ವ್ಯವಸ್ಥೆ ತಯಾರಿಕಾ ಕಾರ್ಖಾನೆಯ ಮೇಲೆ ದಾಳಿ ನಡೆಸಿರುವುದಾಗಿ ಶನಿವಾರ ತಡರಾತ್ರಿ ಇಸ್ರೇಲ್ ತಿಳಿಸಿದೆ. ಭಾನುವಾರ ವೂ ಇರಾನ್ ಮೇಲಿನ ದಾಳಿ ಮುಂದುವರಿಸಿರುವುದಾಗಿ ಇಸ್ರೇಲ್ ತಿಳಿಸಿದೆ. ಇದೇ ಸಮಯದಲ್ಲಿ ಬಹ್ರೈನ್, ಸೌದಿ ಅರೇಬಿಯಾ ಮತ್ತು ಯುಎಇ ತಮ್ಮ ನಾಗರಿಕರ ರಕ್ಷಣೆಗಾಗಿ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಂಡಿವೆ.

ಪಾಕ್ ವಿರುದ್ಧ ಆಫ್ಘನ್ ಪ್ರತಿದಾಳಿ

- ಕಂದಹಾರ್ ಮೇಲೆ ಪಾಕಿಸ್ತಾನದ ಹೊಸ ದಾಳಿ
- ಆಫ್ಘನ್ ರಕ್ಷಣಾ ಪಡೆ ಪ್ರತಿದಾಳಿಗೆ 14 ಪಾಕ್ ಸೈನಿಕರ ಸಾವು

• **ಕಾಬುಲ್:** ಅಫ್ಘಾನಿಸ್ತಾನದ ಸೇನಾ ಮೂಲಸೌಕರ್ಯ ಮತ್ತು ತಾಲಿಬಾನಿ ಅಡಗುದಾಣಗಳನ್ನು ಗುರಿಯಾಗಿಸಿ ಪಾಕಿಸ್ತಾನ ನಡೆಸಿದ ದಾಳಿಗೆ ತಾಲಿಬಾನ್ ಪ್ರತಿದಾಳಿ ನಡೆಸಿದ್ದು, 14 ಪಾಕ್ ಸೈನಿಕರು ಹತರಾಗಿದ್ದಾರೆ. ವಾರಾಂತ್ಯದಲ್ಲಿ ಉದ್ವಿಗ್ನತೆ ಹೆಚ್ಚಾಗಿದ್ದು, ಕದನ ವಿರಾಮಕ್ಕಾಗಿ ಚೀನಾ ಮತ್ತು ಟರ್ಕಿ ನಡೆಸಿದ ಮಧ್ಯಸ್ಥಿಕೆ ವ್ಯರ್ಥವಾಗಿದೆ. ತಾಲಿಬಾನಿಗಳ ಸರ್ವೋಚ್ಚ ನಾಯಕ ಹಿಬಾತುಲ್ಲಾ ಅಖುಂಡ್‌ಜಾದಾ ಆಡಳಿತದ ಕಂದಹಾರ್ ನಗರದ ಮೇಲೆ ಪಾಕಿಸ್ತಾನ ದಾಳಿ ನಡೆಸಿರುವುದಾಗಿ ಭಾನುವಾರ ಹೇಳಿದೆ.

ಪುಟ ೪

ಅಪಘಾತದಲ್ಲಿ ಮೂವರು ಪಿಎಸ್‌ಐ ಸಾವು

• **ಚಳ್ಳಕೆರೆ(ಚಿತ್ರದುರ್ಗ):** ಹೆಗ್ಗೆರೆ ಸಮೀಪ ಭಾನುವಾರ ಬೆಳಗ್ಗೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮೂವರು ರಿಸರ್ವ್ ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಇಬ್ಬರು ಎಸ್‌ಐಗಳ ಸ್ಥಿತಿ ಚಿಂತಾಜನಕವಾಗಿದೆ. ಮಂಜುನಾಥ್, ಅಂಬರೀಷ್, ಸಚಿನ್ ಮೃತಪಟ್ಟವರು. ಈಶ್ವರ್, ಮಹಾಂತೇಶ್ ಗಂಭೀರ ಗಾಯಗೊಂಡಿದ್ದು, ದಾವಣಗೆರೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಳ್ಳಾರಿಯಲ್ಲಿ ನಡೆಯಲಿದ್ದ ವಿವಾಹದಲ್ಲಿ ಭಾಗಿಯಾಗಲು ತೆರಳುತ್ತಿದ್ದರು.

ಪುಟ ೪

ಕಿರುಸುದ್ದಿ

ಪೊಲೀಸ್ ಉಪಠಾಣೆ ಉದ್ಘಾಟನೆ



ಯಲ್ಲಾಪುರ: ಕಾನೂನು ಸುವ್ಯವಸ್ಥೆಯನ್ನು ಬಲಪಡಿಸುವಲ್ಲಿ ಹಾಗೂ ಸಾರ್ವಜನಿಕರಿಗೆ ವೇಗವಾದ ಪೊಲೀಸ್ ಸೇವೆ ಒದಗಿಸುವಲ್ಲಿ ಈ ಹೊಸ ಠಾಣೆ ಮಹತ್ವದ ಪಾತ್ರ ವಹಿಸಲಿದೆ ಎಂದು ಶಾಸಕ ಶಿವರಾಮ ಹೆಬ್ಬಾರ್ ಹೇಳಿದರು. ಅವರು ಭಾನುವಾರ ತಾಲೂಕಿನ ಕಿರವತ್ತಿ ಗ್ರಾಮದಲ್ಲಿ ನೂತನ ಪೊಲೀಸ್ ಉಪಠಾಣೆಯನ್ನು ಉದ್ಘಾಟಿಸಿ ಮಾತನಾಡಿ ಅವರು, ಗ್ರಾಮೀಣ ಭಾಗದ ಜನರಿಗೆ ಸುಲಭವಾಗಿ ಪೊಲೀಸ್ ಸೇವೆ ಲಭ್ಯವಾಗುವಂತೆ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದ್ದು, ಕಿರವತ್ತಿ, ಮದನೂರ ಪ್ರದೇಶದ ಜನರ ಬಹುಕಾಲದ ಬೇಡಿಕೆಯಾಗಿದ್ದ ಪೊಲೀಸ್ ಠಾಣೆ ಇಂದು ಕಾರ್ಯರೂಪಕ್ಕೆ ಬಂದಿರುವುದು ಸಂತೋಷದ ವಿಷಯ. ಸಾರ್ವಜನಿಕರು ಕಾನೂನು ಪಾಲನೆಗೆ ಸಹಕರಿಸಿ, ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಬೇಕು ಎಂದು ಹೇಳಿದರು. ಡಿವೈಎಸ್‌ಪಿ ಗೀತಾ ಪಾಟೀಲ, ಸಿಪಿಐ ರಮೇಶ ಹಾನಾಪುರ, ಪಿಎಸ್‌ಐ ಸಿದ್ದಪ್ಪ ಗುಡಿ, ಕಿರವತ್ತಿ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಸಂಜೀವ ಮಿರಾಶಿ, ಪ್ರಮುಖರಾದ ರಾಘವೇಂದ್ರ ಗೊಂದಿ, ಪೊಲೀಸ್ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಸಿಂಧೂರ ಸೇವಾ ರತ್ನ ಪ್ರಶಸ್ತಿಗೆ ಭಾಜನ



ಹೊನ್ನಾವರ: ಹಾವೇರಿಯ ಸದ್ಗುರು ತಿಪ್ಪಯ್ಯ ಸ್ವಾಮಿ ಆಶ್ರಯ ಕೂಸನೂರ ಹಾಗೂ ವಿವಿಧ ಸಂಘ–ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಕೊಡಮಾಡುವ ರಾಜ್ಯ ಮಟ್ಟದ ಪ್ರತಿಷ್ಠಿತ ಕರುನಾಡ ಸಿಂಧೂರ ಸೇವಾ ರತ್ನ ಪ್ರಶಸ್ತಿಗೆ ತಾಲೂಕಿನ ಕೆಕ್ಕಾರಿನ ರಾಜೇಶ ವಾಸುದೇವ ಗುನಗಾ ಅವರು ಭಾಜನರಾಗಿದ್ದಾರೆ. ಇವರು ರಂಗಭೂಮಿ ನೀಡಿದ ಅಪಾರ ಸೇವೆ ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಸಾಮಾಜಿಕ ಹಾಗೂ ಪೌರಾಣಿಕ ನಾಟಕ ಕ್ಷೇತ್ರದಲ್ಲಿ ಅತ್ಯುತ್ತಮ ಕಲಾವಿದರಾಗಿ ಜನಪ್ರಿಯರಾಗಿದ್ದಾರೆ. ಬಹುಮುಖ ಪ್ರತಿಭೆಯ ಇವರಿಗೆ ಸಂದ ರಾಜ್ಯ ಮಟ್ಟದ ಪ್ರಶಸ್ತಿಗೆ ಹಲವರು ಹರ್ಷ ವ್ಯಕ್ತಪಡಿಸಿದ್ದಾರೆ.

ನಿಯಂತ್ರಣ ತಪ್ಪಿ ಕಾರು ಪಲ್ಟಿ

ದಾಂಡೇಲಿ: ಹಳಿಯಾಳದ ಕಡೆಯಿಂದ ದಾಂಡೇಲಿಗೆ ಬರುತ್ತಿದ್ದ ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾದ ಘಟನೆ ತಾಲೂಕಿನ ಅಲೂರು ಹತ್ತಿರ ನಡೆದಿದೆ. ಕಾರಿನಲ್ಲಿ ನಾಲ್ವರಿದ್ದು, ಹುಬ್ಬಳ್ಳಿ ಮೂಲದವರೆಂದು ತಿಳಿದು ಬಂದಿದೆ. ಅದೃಷ್ಟವಶಾತ್ ಯಾವುದೇ ಸಾವು ನೋವು ಸಂಭವಿಸಿಲ್ಲ ಎಂದು ತಿಳಿದು ಬಂದಿದೆ.



ಶತಾಯುಷಿ ಲಕ್ಷ್ಮೀ ಹೆಗಡೆ ನಿಧನ

ಸಿದ್ದಾಪುರ: ತಾಲೂಕಿನ ಪ್ರತಿಷ್ಠಿತ ದೊಡ್ಡನ ಕುಟುಂಬದ ಗಣೇಶ ಹೆಗಡೆಯವರ ಧರ್ಮಪತ್ನಿ ಲಕ್ಷ್ಮೀದೇವಿ ಹೆಗಡೆ (100) ನಿಧನರಾದರು. ಮೃತರು ಶಿಕ್ಷಣ ಪ್ರಸಾರಕ ಸಮಿತಿಯ ಚೇರಮನ್ ವಿನಾಯಕರಾವ್ ಹೆಗಡೆ, ಉದ್ಯಮಿ ರಾಮನಂದನ ಹೆಗಡೆ ಹುಬ್ಬಳ್ಳಿ, ಸಿದ್ದಾಪುರದ ಶೃಂಗೇರಿ ಶಂಕರಮಠದ ಧರ್ಮಾಧಿಕಾರಿ ವಿಜಯ ಹೆಗಡೆ ಸೇರಿದಂತೆ ಮೂವರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು, ಮರಿಮಕ್ಕಳು, ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಸಾಮಾಜಿಕ ಮುಂದಾಳು ಡಾ.ಶಶಿಭೂಷಣ ಹೆಗಡೆ ಮೃತರ ಮೊಮ್ಮಗ ಆಗಿರುತ್ತಾರೆ. ಅವರ ನಿಧನಕ್ಕೆ ಹಲವರು ಸಂತಾಪ ಸೂಚಿಸಿದ್ದಾರೆ.



ಸುರೇಂದ್ರ ಕೂರ್ಸೆ ನಿಧನ

ಗೋಕರ್ಣ: ಇಲ್ಲಿನ ಕೋಟಿತೀರ್ಥಕಟ್ಟೆ ನಿವಾಸಿ ಸುರೇಂದ್ರ ವಿಶ್ವೇಶ್ವರ ಭಟ್ಟ ಕೂರ್ಸೆ (62) ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. 90 ದಶಕದಲ್ಲಿ ವಾಚನಾಲಯ ನಡೆಸಿದ್ದು, ಪತ್ರಿಕೆ ವಿತರಕರಾಗಿಯೂ ಕೆಲ ಕಾಲ ಕಾರ್ಯನಿರ್ವಹಿಸಿದ್ದು, ನಂತರ ಗೋವಾ ಪಣಜಿ ಶಿವೋಲಿಯಲ್ಲಿ ಮೂರು ದಶಕಗಳ ಕಾಲ ಪುರೋಹಿತ್ಯ ವೃತ್ತಿ ಮಾಡಿಕೊಂಡಿದ್ದರು.





ಗೋಕರ್ಣ: ಇಲ್ಲಿನ ಆರೋಗ್ಯ ಸೇವಾ ಸಮಿತಿ ವತಿಯಿಂದ ಸ್ವಚ್ಛತಾ ಕಾರ್ಯಕ್ರಮ ಭಾನುವಾರ ಇಲ್ಲಿನ ಮುಖ್ಯ ಕಡಲತೀರದಲ್ಲಿ ನಡೆಯಿತು. ಕಡಲತೀರದ ಸುತ್ತಮುತ್ತ ಪ್ರವಾಸಿಗರು ಎಲ್ಲೆಂದರಲ್ಲಿ ಬಿಸಾಡಿದ ಪ್ಲಾಸ್ಟಿಕ್ ಮತ್ತಿತರ ತ್ಯಾಜ್ಯ ಪದಾರ್ಥಗಳನ್ನ ಸಂಗ್ರಹಿಸಿ ಸ್ವಚ್ಛಗೊಳಸಲಾಯಿತು. ಸ್ವಚ್ಛತಾ ಕಾರ್ಯದಲ್ಲಿ ಸಂಸ್ಥೆಯ ಸಂಸ್ಥಾಪಕ ಡಾ. ದಯಾಪ್ರಸಾದ, ಕೃತಕ ಬುದ್ದಿಮತ್ತೆ ತಜ್ಞ ಗೋಪಾಲ ಕೃಷ್ಣ, ಸ್ಟೆಪ್ ಔಟ್ ಗ್ರೂಪ್ ಸಂಸ್ಥಾಪಕ ಸುಧೀಂದ್ರ, ಶಿಕ್ಷಕಣ ತಜ್ಞೆ ವಿದ್ಯಾ ಹರೀಶ, ಸಹನಾ ಗೋಕರ್ಣ, ಕುಮಾರಿ ಅವನಿ ಮತ್ತಿತರರಿದ್ದರು.

ಅಭಿವೃದ್ಧಿ ಕಾಮಗಾರಿಗೆ ಶಾಸಕ ಭೂಮಿಪೂಜೆ

ಸಿದ್ದಾಪುರ: ತಾಲೂಕಿನ ವಿವಿಧ ಗ್ರಾಪಂ ವ್ಯಾಪ್ತಿಗಳಲ್ಲಿ ಒಟ್ಟು 2.15 ಕೋಟಿ ರೂಪಾಯಿ ವೆಚ್ಚದ ವಿವಿಧ ರಸ್ತೆ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಭೀಮಣ್ಣ ನಾಯ್ಕ ಅವರು ಭೂಮಿಪೂಜೆ ನೆರವೇರಿಸಿದರು. ಗ್ರಾಮೀಣ ಭಾಗದ ಜನರಿಗೆ ಸುಗಮ ಸಂಚಾರ ಒದಗಿಸುವ ನಿಟ್ಟಿನಲ್ಲಿ ಹಲಗೇರಿ, ಕಾನಗೋಡು, ಕೋಲಸಿರ್ಸಿ, ಮನ್ಮನೆ ಮತ್ತು ಬಿದ್ರಕಾನ ಗ್ರಾಪಂ ವ್ಯಾಪ್ತಿಯಲ್ಲಿ ಈ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿಯೇ ನಮ್ಮ ಆದ್ಯತೆ. ಹಳ್ಳಿಗಳ ಅಭಿವೃದ್ಧಿಯಾದಾಗ ಮಾತ್ರ ದೇಶದ ಪ್ರಗತಿ ಸಾಧ್ಯ ಎಂದರು. ಈ ಅಭಿವೃದ್ಧಿ ಯೋಜನೆಯಲ್ಲಿ ಹಲಗೇರಿ ಗ್ರಾಪಂ ವ್ಯಾಪ್ತಿಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು ಇಲ್ಲಿನ ಕಲ್ಲರ ಮೋಟಿಯಿಂದ ಮುಂಡಗಳ್ಳಿ ರಸ್ತೆ ಅಭಿವೃದ್ಧಿಗೆ 50 ಲಕ್ಷ ರೂ., ಚಿಕ್ಕನಮಡಿಕೆ ರಸ್ತೆಗೆ 20 ಲಕ್ಷ ರೂ., ಕಾನ್ನನೆ ರಸ್ತೆಗೆ 20 ಲಕ್ಷ ರೂ. ಹೆಜನಿ ರಸ್ತೆ ಅಭಿವೃದ್ಧಿಗೆ 20 ಲಕ್ಷ ರೂ. ಸೇರಿದಂತೆ ದೊಡ್ಡ ಮೊತ್ತದ ಅನುದಾನ ವಿನಿಯೋಗಿಸಲಾಗುತ್ತಿದೆ. ಅದೇ ರೀತಿ, ಕಾನಗೋಡು ಗ್ರಾಪಂ ವ್ಯಾಪ್ತಿಯ ಕಾನಗೋಡು ಊರ ಒಳಗಿನ ರಸ್ತೆ ಅಭಿವೃದ್ಧಿಗೆ 25 ಲಕ್ಷ ರೂ. ವೆಚ್ಚ ಮಾಡಲಾಗುತ್ತಿದೆ. ಕಾಮಗಾರಿಗಳನ್ನು ನಡೆಸಲಾಗುತ್ತಿದೆ ಎಂದರು. ಸ್ಥಳೀಯ ಪಂಚಾಯತಗಳ ಮಾಜಿ ಅಧ್ಯಕ್ಷರು, ಸದಸ್ಯರು, ಇಂಜಿನಿಯರ್‌ಗಳು ಹಾಗೂ ಪಕ್ಷದ ಮುಖಂಡರು ಉಪಸ್ಥಿತರಿದ್ದರು.



ಸಿದ್ದಾಪುರ: ತಾಲೂಕಿನ ವಿವಿಧ ಗ್ರಾಪಂ ವ್ಯಾಪ್ತಿಗಳಲ್ಲಿ ಒಟ್ಟು 2.15 ಕೋಟಿ ರೂಪಾಯಿ ವೆಚ್ಚದ ವಿವಿಧ ರಸ್ತೆ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಭೀಮಣ್ಣ ನಾಯ್ಕ ಭೂಮಿಪೂಜೆ ನೆರವೇರಿಸಿದರು.

ರಸ್ತೆಯಲ್ಲಿ ಓಡಾಡುವವರಿಗೆ ಸಂಕಟ | ಜೀವಕ್ಕೆ ಅಪಾಯ

ಬೀದಿನಾಯಿಗಳ ಕಾಟಕ್ಕೆ ಹೈರಾಣ

ನಾಗರಾಜ ಶೆಟ್ಟಿ

ದಿಗಂತ ವಿಶೇಷ

ಅಂಕೋಲಾ: ಪಟ್ಟಣದ ಮಠಾಕೇರಿಯಲ್ಲಿ ಬೀದಿ ನಾಯಿಗಳ ಉಪಟಳ ಹೆಚ್ಚಾಗಿದ್ದು, ರಾತ್ರಿ ಸಮಯದಲ್ಲಿ ದಾರಿ ಹೋಕರ ಮೈ ಮೇಲೆ ಏರಿ ಹೋಗುವ ಈ ನಾಯಿಗಳು ದನ ಕರುಗಳ ಮೇಲೆ ಆಕ್ರಮಣ ಮಾಡುವ ಮೂಲಕ ಆತಂಕ ಸೃಷ್ಟಿಸಿವೆ.

ರಾತ್ರಿ ವೇಳೆಯಲ್ಲಿ ದ್ವಿಚಕ್ರ ವಾಹನಗಳನ್ನು ಬೆನ್ನಟ್ಟುವ ಈ ನಾಯಿಗಳಿಂದ ಬೈಕ್ ಸವಾರರು ನಿಯಂತ್ರಣ ತಪ್ಪುತ್ತಿದ್ದು ಏಕಾಏಕಿ ವಾಹನಗಳಿಗೆ ಅಡ್ಡ ಬರುವ ನಾಯಿಗಳಿಂದ ಜನ ಸಾಮಾನ್ಯರ ಜೀವಕ್ಕೆ ಅಪಾಯ ಆಗುವ ಸಾಧ್ಯತೆ ಇದೆ.

ನಸುಕಿನ ಜಾವ ವಾಯು ವಿಹಾರಕ್ಕೆ ತೆರಳುವ ಜನರ ಮೇಲೆ ಈ ಬೀದಿನಾಯಿಗಳು ಏರಿ ಬರುತ್ತಿದ್ದು, ಒಬ್ಬರೇ ಓಡಾಟ ನಡೆಸುವುದು ಕಷ್ಟಕರವಾಗಿದೆ.

ಮಠಾಕೇರಿಯಲ್ಲಿ ವಾಸವಾಗಿರುವ ವ್ಯಕ್ತಿಯೋರ್ವರು ಎಲ್ಲೋ ಇರುವ ಬೀದಿ ನಾಯಿಗಳಿಗೆ ತಿಂಡಿ ತಿನಿಸುಗಳನ್ನು ನೀಡಿ ಅವುಗಳೊಂದಿಗೆ ಸಲುಗೆ ಬೆಳೆಸಿಕೊಂಡ ಪರಿಣಾಮ ತಿಂಡಿ ಆಶೆಗೆ ಅವರ ಹಿಂದೆ ಬರುವ ನಾಯಿಗಳ ಗುಂಪು ಇಲ್ಲಿನ ಕುಂಡೋದರಿ ದೇವಾಲಯದ ಸುತ್ತ ಮುತ್ತಲಿನ ಬೀದಿಗಳಲ್ಲಿ ಬೀಡು ಬಿಡುವಂತಾಗಿದ್ದು ಸಾರ್ವಜನಿಕ ರಸ್ತೆಯಲ್ಲಿ ಓಡಾಡುವವರಿಗೆ ಉಪದ್ರವ ನೀಡುತ್ತಿವೆ.



ಸಾಂದರ್ಭಿಕ ಚಿತ್ರ

ಬೀದಿ ನಾಯಿಗಳಿಗೆ ಪ್ರತಿದಿನ ಆಹಾರ ನೀಡುವ ವ್ಯಕ್ತಿಗೆ ಅವುಗಳಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ ಎಂದು ದೂರಿದರೆ ಜನರ ವಿತಂಡ ವಾದಕ್ಕಿಳಿಯುವುದು, ಅಸಂಬದ್ಧ ವರ್ತನೆ ತೋರುವುದು ಸ್ಥಳೀಯರ ಬೇಸರಕ್ಕೆ ಕಾರಣವಾಗಿದೆ. ತಾಲೂಕಿನ ಹಟ್ಟಿಕೇರಿ ಮಾವಿನಕೇರಿಯಲ್ಲಿ ಬೀದಿ ನಾಯಿ ಕಡಿತಕ್ಕೊಳಗಾಗಿದ್ದ ಮಹಿಳೆ ರೇಬಿಸ್ ರೋಗದ ಲಕ್ಷಣದಿಂದ ಮೃತ ಪಟ್ಟಿರುವುದು ಸ್ಥಳೀಯ ಜನರಲ್ಲಿ ಭಯ ಹುಟ್ಟಿಸಿದ್ದು, ಮಠಾಕೇರಿಯಲ್ಲೂ ಬೀದಿ ನಾಯಿಯೊಂದು ಸುಮಾರು 13 ಜನರಿಗೆ ಕಡಿದು ಕೆಲವು ದಿನಗಳ ನಂತರ ನಾಯಿ ಸಹ ಸತ್ತು ಹೋದ ಘಟನೆ ಕೆಲವು ದಿನಗಳ ಹಿಂದೆ ನಡೆದಿರುವ ಕುರಿತಂತೆ ಸ್ಥಳೀಯರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಬೀದಿ ನಾಯಿಗಳ ಕುರಿತಂತೆ ಪ್ರೇಮ ಮತ್ತು ಕಾಳಜಿ ಇರುವ ವ್ಯಕ್ತಿ ಅವುಗಳನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಕಟ್ಟಿ ಹಾಕಿ ಸಾಕಿದರೆ ಯಾರ ಅಭ್ಯಂತರ ಇಲ್ಲ, ಬೀದಿ ನಾಯಿಗಳಿಗೆ ಆಹಾರ ನೀಡುವವರು ಅವುಗಳ ಜವಾಬ್ದಾರಿಯನ್ನು ಹೊರಬೇಕು ಸಾರ್ವಜನಿಕ ಸ್ಥಳಗಳಲ್ಲಿ ಬೀದಿ ನಾಯಿಗಳಿಗೆ ಆಹಾರ ನೀಡುವಂತಿಲ್ಲ ಎಂದು ಸುಪ್ರಿಂ ಕೋರ್ಟ್ ಸಹ ಸೂಚಿಸಿದೆ ಎಂದು ಸ್ಥಳೀಯ ನಾಗರಿಕರು ಹೇಳುತ್ತಿದ್ದಾರೆ.

ನ್ಯಾಯಾಲಯದ ಸೂಚನೆಯಂತೆ ಆಶ್ರಯತಾಣ ಶೆಲ್ಟರ್ ನಿರ್ಮಿಸಿ ಪಟ್ಟಣದ ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚುತ್ತಿರುವ ಬೀದಿ ನಾಯಿಗಳ ಸ್ಥಳಾಂತರಕ್ಕೆ ಪುರಸಭೆಯ ವತಿಯಿಂದ ಕ್ರಮ ಜರುಗಿಸಬೇಕಿದೆ.

ರೇಬಿಸ್‌ನಿಂದ ಮೃತ

ತಾಲೂಕಿನ ಮಾವಿನಕೇರಿಯ ಸೀ ಬರ್ಡ್ ಕಾಲನಿಯ ಸಾವಿತ್ರಿ, ಗೌಡ ಎಂಬ ಕೃಷಿಕ ಮಹಿಳೆಗೆ ಮೂರು ತಿಂಗಳುಗಳ ಹಿಂದೆ ಬೀದಿ ನಾಯಿಯೊಂದು ಕಚ್ಚಿದ್ದು, ನಾಟಿ ಔಷಧಿ ತೆಗೆದುಕೊಂಡಿದ್ದ ಮಹಿಳೆ ಇತ್ತೀಚೆಗೆ ರೇಬಿಸ್ ಉಲ್ಬಣಿಸಿ ಮೃತ ಪಟ್ಟಿರುವ ಘಟನೆ ನಡೆದಿದೆ.



ಗೋಕರ್ಣ: ಅಂಕೋಲಾ ಕೇಣಿ–ತದಡಿ ರಾಜ್ಯ ಹೆದ್ದಾರಿ ಅಂಚಿನ ಮರ, ಗಿಡಗಳು ರಸ್ತೆ ಬಂದಿದ್ದು ವಾಹನ ಸಂಚಾರಕ್ಕೆ ತೊಡಕಾಗುತ್ತಿದ್ದು ಇದನ್ನ ತೆರವುಗೊಳಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಹಳಿಯಾಳ ಬಂದ್‌ಗೆ ಬೆಂಬಲ: ಸುನೀಲ್ ಹೆಗಡೆ

ಹಳಿಯಾಳ: ನೀರಿಗಾಗಿ ಹೋರಾಟ ಮಾಡುತ್ತಿರುವ ರೈತರ ಹಳಿಯಾಳ ಬಂದ್ ಗೆ ಬಿಜೆಪಿ ಹಾಗೂ ವೈಯುಕ್ತಿಕವಾಗಿ ಸಂಪೂರ್ಣ ಬೆಂಬಲವಿದೆ ಎಂದು ಮಾಜಿ ಶಾಸಕ ಸುನೀಲ್ ಹೆಗಡೆ ತಿಳಿಸಿದ್ದಾರೆ.

ನಾನು ಕ್ಷೇತ್ರದ ಶಾಸಕನಾಗಿದ್ದಾಗ ಹಳಿಯಾಳ ದಾಂಡೇಲಿ ಜೊಯಿಡಾ ಕ್ಷೇತ್ರದಾದ್ಯಂತ ಕಾಳಿ ನದಿಯಿಂದ ಸಮಗ್ರ ನೀರಾವರಿ ಯೋಜನೆಗಾಗಿ ಪಾದಯಾತ್ರೆ ನಡೆಸುವ ಮೂಲಕ ಸರ್ಕಾರದ ಗಮನ ಸೆಳೆದಿದ್ದು, ಆ ಪಾದಯಾತ್ರೆಯಿಂದಲೇ ಅಂದಿನ ಸರ್ಕಾರ 200 ಕೋಟಿ ರೂ. ಯೋಜನೆಗಾಗಿ ಮಂಜೂರಿ ಮಾಡಿತ್ತು. ಅಂದು ನಾನು ಆಗ್ರಹಿಸಿದ್ದ ಕಾಳಿ ನದಿ ನೀರಾವರಿ ಯೋಜನೆಯ ರೂಪರೇಷೆಗೂ ಇಂದು ಜಾರಿಯಾಗುತ್ತಿರುವ ಯೋಜನೆಗೂ ಅಜಗಜಾಂತರ ವ್ಯತ್ಯಾಸವಿದ್ದು ಅದರ ಮೂಲ ರೂಪುರೇಷೆಯು ದಾಂಡೇಲಿಯ ಕಾಳಿ ನದಿಯಿಂದ ಕೆನಾಲ್ ಮೂಲಕವೇ ನೀರಾವರಿ ಯೋಜನೆ ಜಾರಿಗೊಳಿಸಿ ಕ್ಷೇತ್ರದ ಎಲ್ಲಾ ಕೆರೆಸೇರಿದಂತೆ ಎಲ್ಲಾ ಬಾಂದಾರುಗಳನ್ನು ತುಂಬಿಸುವುದು ಮತ್ತು ಕೆನಾಲ್ ಹಾದು ಹೋಗುವ ಮಾರ್ಗಗಳಲ್ಲಿಯು ಎಲ್ಲೆಡೆ ಪೈಪ್ ಲೈನ್ ಗಳ ಮೂಲಕ ಪ್ರತಿಯೊಂದು ಹಳ್ಳಿಗೆ ಕುಡಿಯುವ ನೀರನ್ನು ಪೂರೈಸುವ ಸಮಗ್ರ ನೀರಾವರಿ ಯೋಜನೆ ಆಗಿತ್ತು. ಆ ಬಳಿಕ 2013ರಲ್ಲಿ ಚುನಾವಣೆಯ ಬಳಿಕ ಶಾಸಕರಾಗಿ ಆಯ್ಕೆಯಾಗಿದ್ದ ಆರ್.ವಿ.ದೇಶಪಾಂಡೆ ಅವರು ಮಂಜೂರಿಯಾಗಿದ್ದ ಈ ನೀರಾವರಿ ಯೋಜನೆಯನ್ನು ರದ್ದು ಪಡಿಸಿ, ಯೋಜನೆಯ ರೂಪು ರೇಷೆಯನ್ನೇ ಸಂಪೂರ್ಣವಾಗಿ ಬದಲಿಸಿ ಕೇವಲ ಆಯ್ದ ಕೆರೆ ಮತ್ತು ಬಾಂಧಾರಗಳಿಗೆ ವರ್ಷಕ್ಕೆ ಒಂದು ಬಾರಿ ಮಾತ್ರ ನೀರು ತುಂಬಿಸುವ ಯೋಜನೆಯಾಗಿ ಮಾರ್ಪಾಡು ಮಾಡುವ ಮೂಲಕ ಕ್ಷೇತ್ರದ ರೈತರಿಗೆ ಮಹಾ ಮೋಸ ಮಾಡಿದ್ದಾರೆ. ದೇಶಪಾಂಡೆ ಅವರಿಗೆ ನೀರಾವರಿ ಯೋಜನೆ ಜಾರಿಗೆ ತರುವ ಯಾವುದೇ ಆಸೆ, ಇಚ್ಛಾಶಕ್ತಿ ಇಲ್ಲ ಎಂದು ಆರೋಪ ಮಾಡಿದರು.



ಹಳಿಯಾಳ ಕ್ಷೇತ್ರದಲ್ಲಿ ರೈತರಾಗಲಿ ಕಾರ್ಮಿಕರಾಗಲಿ ತಮ್ಮ ಹಕ್ಕಿಗಾಗಿ ಬೀದಿಗಿಳಿದು ನಡೆಸುವ ಹೋರಾಟಕ್ಕೆ ನನ್ನ ಹಾಗೂ ಬಿಜೆಪಿಯ ಸಂಪೂರ್ಣ ಬೆಂಬಲವಿದೆ. ರೈತರ ಹೋರಾಟದ ಬಗ್ಗೆ ಈಗಾಗಲೇ ರಾಜ್ಯ ಬಿಜೆಪಿ ಹೈಕಮಾಂಡ್ ಮತ್ತು ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದೆ. ಮುಂದಿನ ದಿನಗಳಲ್ಲಿ ಕಾಳಿ ನದಿಯಿಂದ ಕೆನಾಲ್ ಮೂಲಕ ಸಮಗ್ರ ನೀರಾವರಿ ಯೋಜನೆಯನ್ನೇ ಜಾರಿಗೊಳಿಸುವ ಬಗ್ಗೆ ಯೋಚನೆ ಮಾಡಲಾಗುವುದು ಎಂದಿದ್ದಾರೆ.

ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ದಾಂಡೇಲಿ: ದಿನ ಬಳಕೆಯ ಅಡುಗೆ ಅನಿಲದ ಕೊರತೆ ಮತ್ತು ಅಡುಗೆ ಅನಿಲದ ಬೆಲೆ ಏರಿಕೆಯನ್ನು ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದ ಕೇಂದ್ರ ಬಸ್ ನಿಲ್ದಾಣದ ಮುಂಭಾಗದಲ್ಲಿ ಕಟ್ಟಿಗೆ ಒಲೆಯಲ್ಲಿ ಚಹಾ ತಯಾರಿಸಿ ಕೇಂದ್ರ ಸರ್ಕಾರದ ವಿರುದ್ಧ ಭಾನುವಾರ ಪ್ರತಿಭಟನೆ ನಡೆಸಿ ಕೇಂದ್ರ ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ ಹಲವಾಯಿ ಮಾತನಾಡಿ, ವಿಶ್ವದಲ್ಲಿ ಭಾರತ ನಂಬರ್ ಒನ್ ಎಂದು ಹೇಳಿಕೊಳ್ಳುವ ಅಂಧ ಭಕ್ತರು, ಈಗ ದೇಶದಲ್ಲಿ ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಕೊರತೆಯಾದರೂ ಮೌನ ವಹಿಸಿರುವುದು ಏಕೆ. ದಾಂಡೇಲಿಯಂತಹ ನಗರವಾಸಿ ಜನರು ಕಟ್ಟಿಗೆ ಬಳಕೆ ಮಾಡಿ ಅಡುಗೆ ಮಾಡದಂತಹ ಸ್ಥಿತಿಯಿದೆ. ಕೇವಲ ಧರ್ಮ, ದೇವರ ಹೆಸರನ್ನು ತಲೆಯಲ್ಲಿ ತುಂಬಿಕೊಂಡು ಬದುಕಲು ಸಾಧ್ಯವಿಲ್ಲ, ಅಂಧ ಭಕ್ತರು ಈಗಲಾದರೂ ಎಚ್ಚೆತ್ತುಕೊಳ್ಳಬೇಕಾಗಿದೆ. ಕೇಂದ್ರದ ಬಿಜೆಪಿ ಸರ್ಕಾರದಿಂದ ಈ ದೇಶದ ಜನರಿಗೆ ಅದರಲ್ಲೂ ಮುಖ್ಯವಾಗಿ ಬಡ ಜನರಿಗೆ ದೇವರ ಅನ್ಯಾಯವಾಗುತ್ತಿದೆ. ದೇಶದ ಜನರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದರೇ ಮಾತ್ರ ಭವಿಷ್ಯ ಉಜ್ವಲವಾಗಲಿದೆ. ಇಲ್ಲದಿದ್ದರೆ ಸ್ವಾತಂತ್ರ್ಯಕ್ಕೂ ಪೂರ್ವದಲ್ಲಿದ್ದ ಭಾರತ ನಮಗೆ ಕಾಣ ಸಿಗಲಿದೆ ಎಂದರು. ಹಿರಿಯ ಮುಖಂಡ ತಸವರ ಸೌದಾಗರ್, ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೀರ್ತಿ ಗಾಂವಕರ, ಬ್ಲಾಕ್ ಕಾಂಗ್ರೆಸ್ ಮಹಿಳಾಧ್ಯಕ್ಷೆ ರೇಣುಕಾ ಬಂದಂ ಅವರು ಮಾತನಾಡಿ, ಅಡುಗೆ ಅನಿಲದ ಕೊರತೆಯಿಂದ ರಾಜ್ಯದ ಬಹುತೇಕ ಹೋಟೆಲ್‌ಗಳು ಬೀಗ ಹಾಕಿಕೊಳ್ಳಲೇ ಬೇಕಾದ ಸನ್ನಿವೇಶ ಸೃಷ್ಟಿಯಾಗಿದೆ. ಗೃಹಿಣಿಯರ ಪರಿಸ್ಥಿತಿಯಂತೂ ಯಾರಿಗೂ ಬೇಡವಾಗಿದೆ. ಬಿಜೆಪಿ ಬೆಂಬಲಿಸುವ ಜನರು ಈಗ ಉತ್ತರಿಸಬೇಕಾಗಿದೆ, ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗಿನ ಅಡುಗೆ ಅನಿಲದ ಬೆಲೆಯಲ್ಲಿ ದುಪ್ಪಟ್ಟು ಏರಿಕೆಯಾಗಿ ಜನಸಾಮಾನ್ಯರ ಬದುಕು ದುಸ್ತರವಾಗಿದೆ ಎಂದರು. ನಗರ ಸಭೆಯ ನಿಕಟಪೂರ್ವ ಅಧ್ಯಕ್ಷ ಅಷ್ಫಾಕ್ ಶೇಖ, ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷರಾದ ಬಶೀರ ಗಿರಿಯಾಲ ಮತ್ತು ಆಡಿವೆಪ್ಪ ಭದ್ರಕಾಳಿ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಆರ್.ಪಿ. ನಾಯ್ಕ, ತಾಲೂಕು ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಅಧ್ಯಕ್ಷ ರಿಯಾಜ್ ಬಾಬು ಸೈಯದ್, ಕೆಪಿಸಿಸಿ ಸದಸ್ಯ ಕರೀಂ ಅಜ್ರೇಕರ, ಕಾಂಗ್ರೆಸ್ ಮುಖಂಡರಾದ ಸಂಜಯ ನಂದ್ಯಾಳ್ಕರ, ಅನೀಲ್ ದಂಡಗಲ್, ಯಾಸ್ಮಿನ್ ಕಿತ್ತೂರ್, ಸರಸ್ವತಿ ರಜಪೂತ, ದಿವಾಕರ ನಾಯ್ಕ, ದಾದಾಪೀರ್ ನದೀಮುಲ್ಲಾ, ಸುಜಾತಾ ಸಂದಂ, ಸಪೂರ ಯರಗಟ್ಟಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.



ಲೋಕ ಅದಾಲತ್ : 220 ಪ್ರಕರಣ ಇತ್ಯರ್ಥ

ಮುಂಡಗೋಡ: ಪಟ್ಟಣದ ಜೆಎಮ್‌ಎಫ್‌ಸಿ ನ್ಯಾಯಾಲಯದಲ್ಲಿ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ವಿವಿಧ ಬಗೆಯ ಒಟ್ಟು 220 ಪ್ರಕರಣಗಳು ಇತ್ಯರ್ಥಗೊಂಡವು.

ಸಂಧಾನಕಾರರಾಗಿ ನ್ಯಾಯಾಧೀಶೆ ಅಕ್ಷತಾ ಸಿ.ಆರ್. ಮತ್ತು ನ್ಯಾಯವಾದಿ ಭಾರತಿ ಡಿ.ಕೆ ಹಾಜರಿದ್ದರು. ನ್ಯಾಯಾಲಯದಲ್ಲಿ ಬಾಕಿ ಇರುವ 24 ಎನ್.ಐ. ಆಕ್ಟ್ ಪ್ರಕರಣಗಳು, 38 ಅಮಲ್ಜಾರಿ ಪ್ರಕರಣಗಳು, 5 ಮೂಲದಾವಾ ಪ್ರಕರಣಗಳು, 45 ಜನನ–ಮರಣ ಪ್ರಕರಣಗಳು 1 ಪಿ.ಸಿ.ಆರ್. ಪ್ರಕರಣಗಳು, 2 ಕ್ರಿಮಿನಲ್ ಮಿಸಿಲೆನಿಯಸ್ ಪ್ರಕರಣ, 5 ಐಪಿಎಸ್ ಪ್ರಕರಣ ಹಾಗೂ 100 ಕೆ.ಪಿ. ಆಕ್ಟ್ ಪ್ರಕರಣಗಳು ಸೇರಿ ಒಟ್ಟು 220 ಪ್ರಕರಣಗಳು ಇತ್ಯರ್ಥಗೊಂಡು ಅವುಗಳ ಪೈಕಿ 92,00,768 ರೂಪಾಯಿ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳು ಇತ್ಯರ್ಥಗೊಂಡು ಅವುಗಳ ಪೈಕಿ 79,38,886 ರೂಪಾಯಿ ವಸೂಲಿ ಮಾಡಿ ಹಣವನ್ನು ಸರ್ಕಾರಕ್ಕೆ ಹಾಗೂ ಬ್ಯಾಂಕುಗಳಿಗೆ ಭರಣ ಮಾಡಲಾಯಿತು. ಸರ್ಕಾರದ ಪರವಾಗಿ ಸಹಾಯಕ ಸರಕಾರಿ ಅಭಿಯೋಜಕ ಪ್ರಸಾದ ರಮೇಶ ಹೆಗಡೆ ಅವರು 5 ಕ್ರಿಮಿನಲ್ ಪ್ರಕರಣ, ಹಾಗೂ 1 ಕ್ರಿಮಿನಲ್ ಮಿಸಿಲೆನಿಯಸ್ ಪ್ರಕರಣವನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥ ಪಡಿಸಿದರು.



ವಕೀಲರ ಸಂಘದ ಅಧ್ಯಕ್ಷ ಎನ್.ಎ.ನಿಂಬಾಯಿ, ಉಪಾಧ್ಯಕ್ಷ ಎಸ್.ಎಮ್. ಮಲವಳ್ಳಿ, ಕಾರ್ಯದರ್ಶಿ ಎಸ್.ಕೆ. ಕೊಳ್ಳಾನವರ, ಕೆ.ಎಸ್.ಗುಲ್ಯಾನವರ, ಸಿ.ಎಸ್.ಗಾಣಿಗೇರ, ಕೆ.ಎನ್.ಹೆಗಡೆ, ಬಿ.ಎಫ್. ಪೂಜಾರ, ಗುಡ್ಡಪ್ಪ ಕಾತೂರ, ಎಮ್.ಎ. ನಂದಿಕಟ್ಟಿ, ಸುಜಿತ ಎಸ್., ಎನ್.ಎಸ್. ಕಾತೂರ, ಆರ್.ಎಸ್.ಹಂಚಿನಮನಿ, ಜ್ಯೋತಿತಲ್ಲೂರ, ಎನ್.ಬಿ.ಸಣ್ಣಳಿಮನಿ, ಭಾರತಿ, ರವಿ ಹೆಗಡೆ, ಪ್ರಮೋದ ಸಣ್ಣಮನಿ, ನ್ಯಾಯಾಲಯದ ಸಿಬ್ಬಂದಿಗಳು, ಪೊಲೀಸ್ ಸಿಬ್ಬಂದಿಗಳು ಹಾಗೂ ಬ್ಯಾಂಕ್ ಸಿಬ್ಬಂದಿ ಉಪಸ್ಥಿತರಿದ್ದರು.

ಹೆಣ್ಣು ಸಮಾಜದ ಏಳ್ಗೆಗೆ ಪ್ರೇರಕ

ಹೊನ್ನಾವರ: ಹೆಣ್ಣು ಅಡಿಗೆ ಮನೆಗೆ ಸೀಮಿತವಲ್ಲ, ಅವಳು ಜಗದ ಕಣ್ಣು. ಮಹಿಳೆ ಜಾಗೃತಿಯ ಸೂಚಕ, ಭದ್ರತೆಗೂ ಪೂರಕ, ಸಮಾಜದ ಏಳ್ಗೆಗೆ ಪ್ರೇರಕ ಮತ್ತು ಬದುಕಿಗೆ ಸ್ಫೂರ್ತಿದಾಯಕ ಎಂದು ಸಾಹಿತಿ ಶುಭಾ ಸಭಾಹಿತ ಹೇಳಿದರು.

ಪಟ್ಟಣದ ಪ್ರಭಾತನಗರ ಶಾಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಆಯೋಜಿಸಿದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿ, ಸಹನೆ, ಸಮಾಧಾನ, ಸದ್ಗುಣ, ಸರಳತೆ, ಮಮತೆ, ಕರುಣೆ, ಪ್ರೀತಿ ಇದರ ದ್ಯೋತಕವೇ ಹೆಣ್ಣು. ಮಗಳಾಗಿ, ಸೊಸೆಯಾಗಿ, ಸತಿಯಾಗಿ, ಮಾತೆಯಾಗಿ ಮನೆ ಮನವ ಬೆಳಗುತ್ತಾಳೆ. ಅನೇಕ ಮಹಿಳಾ ಸಾಧಕಿಯರು ಸಾಧಿಸಿ ಜಗಕ್ಕೆ ಉದಾಹರಣೆಯಾಗಿದ್ದಾರೆ ಎಂದರು.

ಅಕ್ಷರ ದಾಸೋಹದ ಸಹಾಯಕ ನಿರ್ದೇಶಕಿ ಸಹನಾ ಭಾನು ಪಠಾಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಎಲ್ಲ ರಂಗದಲ್ಲಿಯೂ ಮಹಿಳೆಯರು ಮಂಚೂಣಿಯಲ್ಲಿ ಕೆಲಸ ಮಾಡುತ್ತಿದ್ದು, ಇನ್ನೂ ಹೆಚ್ಚು ಜಾಗೃತರಾಗಿ ಸಮಾಜದ ಬದಲಾವಣೆಗೆ ಕಾರಣೀಕರ್ತರಾಗಬೇಕು ಎಂದರು. ಕಿತ್ತೂರ ರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತ ಸಾಹಿತಿ ಶುಭಾ ವಿಷ್ಣು ಸಭಾಹಿತ ಅವರನ್ನು ಸನ್ಮಾನಿಸಲಾಯಿತು. ಸಹನಾ ಭಾನು ಪಠಾಣ್, ಜಯಶ್ರೀ ನಾಯ್ಕ, ಶಿಕ್ಷಕಿಯರಾದ ಕುಳಿಮನೆ ಶಾಲೆಯ ಮೆಬಲ್ ಡಿಕೋಸ್ಟ, ಗಾಂಧಿ ನಗರದ ನಸೀಮಾ, ಕೆಂಚಗಾರದ ಚಂದ್ರಭಾಗಿ ನಾಯ್ಕ, ಹೈಗುಂದದ ವಿಜಯಾ ಪೈ, ಕಲ್ಕಟ್ಟು ಶಾಲೆಯ ಸವಿತಾ ಭಟ್‌ರನ್ನು ಗೌರವಿಸಲಾಯಿತು.



ಕ್ಷೇತ್ರ ಸಮನ್ವಯಾಧಿಕಾರಿ ಜಯಶ್ರೀ ನಾಯ್ಕ, ಜಿಲ್ಲಾ ಮಹಿಳಾ ನೌಕರರ ಸಂಘದ ಕಾರ್ಯದರ್ಶಿ ಉಷಾ ನಾಯಕ, ಕಸಾಪ ಗೌರವ ಕಾರ್ಯದರ್ಶಿ ಪಿ.ಆರ್.ನಾಯ್ಕ, ಶಿಕ್ಷಕರ ಸಂಘದ ಎಂ.ಜಿ.ನಾಯ್ಕ, ಸುಧೀಶ ನಾಯ್ಕ, ಲಕ್ಷ್ಮೀ ಎಚ್., ಶಾರದಾ ಹೆಗಡೆ ಇತರರಿದ್ದರು.

ಹಿಂದು ಎನ್ನುವುದು ಒಂದು ಸಂಸ್ಕೃತಿ: ಮಾಧವಾನಂದ ಶ್ರೀಗಳು

ಯಲ್ಲಾಪುರ: ತಾಲೂಕಿನ ಭರತನಹಳ್ಳಿಯಲ್ಲಿ ನಡೆದ ಮಾವಿನಕಟ್ಟಾ ಮಂಡಳದ ಬೃಹತ್ ಹಿಂದೂ ಸಮಾವೇಶದಲ್ಲಿ ಜಗದ್ಗುರು ಶಂಕರಾಚಾರ್ಯ ಶ್ರೀಮದ್ ಮಾಧವಾನಂದ ಭಾರತೀ ಮಹಾಸ್ವಾಮಿ ನೆಲೆಮಾವಿನ ಮಠ ಇವರು ಭಾರತ ಮಾತೆಗೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿ, ಹಿಂದು ಎಂದರೆ ಅದೊಂದು ಜಾತಿಯಲ್ಲ ಅದೊಂದು ಸಂಸ್ಕೃತಿ. ಯಾವುದು ಕೆಟ್ಟದಿರುತ್ತದೋ ಅದರಿಂದ ದೂರ ಇರುವವನೇ ಹಿಂದು. ಇದರ ಮೂಲ ತತ್ವ ವಸುದೈವ ಕುಟುಂಬ ಎಂಬುದಾಗಿದೆ. ಧರ್ಮ ರಕ್ಷಿಸುವವರನ್ನು ಧರ್ಮ ರಕ್ಷಣೆ ನೀಡುವಂತೆ, ಧರ್ಮ ಆಚರಿಸದವನಿಗೆ ಧರ್ಮವೇ ನಾಶ ಮಾಡುತ್ತದೆ. ಮನುಷ್ಯನಿಗೆ ಮನರಂಜನೆಯೇ ಜೀವನವಲ್ಲ, ಅದರೊಟ್ಟಿಗೆ ನಮ್ಮ ಜೀವನ ಸಾರ್ಥಕ್ಯ ಪಡೆಯಲು ಧರ್ಮಾಚರಣೆ ಮಾಡಬೇಕು ಎಂದು ಹೇಳಿದರು.

ಯುವ ವಾಗ್ಮಿ ಹಾರಿಕ ಮಂಜುನಾಥ ದಿಕ್ಸೂಚಿ ಭಾಷಣ ಮಾಡಿ, ಹಿಂದುಪರಂಪರೆ ನಾಶ ಮಾಡಬೇಕು, ನಮ್ಮನ್ನು ನಾಶ ಮಾಡಬೇಕು ಎಂದು ಕೊಂಡು ಸಾವಿರಾರು ವರ್ಷಗಳಿಂದ ಯತ್ನ ನಡೆಯುತ್ತಿದೆ. ಆದರೆ ಅದು ಸಾಧ್ಯವಿಲ್ಲ. ಪೂರ್ವಜರು ವೇದ, ಉಪನಿಷತ್ತು, ಪುರಾಣಗಳು ಆಚಾರ ವಿಚಾರಗಳ ಮುಖಾಂತರ ಉಳಿಸಿದ್ದಾರೆ. ನಾವು ಅದನ್ನು ಪಾಲಿಸಿ ಮುಂದುವರೆಸಿಕೊಂಡು ಹೋಗಬೇಕಿದೆ. ಅದರೊಟ್ಟಿಗೆ ಜಾತಿಗಳನ್ನು ಬದಿಗಿಟ್ಟು ಹಿಂದೂಗಳು ಒಗ್ಗಟ್ಟಾಗಿ ಬರಬೇಕಿದೆ. ಈ ನಿಟ್ಟಿನಲ್ಲಿ ಆರ್‌ಎಸ್‌ಎಸ್ ಕೆಲಸ ಮಾಡುತ್ತಿದೆ. ಹಿಂದು ಸಮಾಜ ಅಥವಾ ಸಂಘವು ಹೆಸರಿಗಾಗಿ ಅಲ್ಲ ಪ್ರೇರಣೆಗಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿದರು.



ಈ ವೇಳೆ ಮಾವಿನಕಟ್ಟಾ ಮಂಡಳದ ವಿವಿಧ ಕ್ಷೇತ್ರದಲ್ಲಿ ಸಾಧಕರಾದ ಸುಬ್ರಮಣ್ಯ ಭಟ್ಟ, ಹುಲಿಯಾ ಮರಾಠಿ, ಶ್ರೀಪಾದ ಕೊಡಿಯಾ, ಕೊಂಡುಬಾಯಿ ದಾವು ಬೋರೆ, ಚಂದ್ರಕಾಂತ ಶೇಟ್, ಸಿದ್ದೇಶ್ವರ ಠಕ್ಕು ಮರಾಠಿ, ನಾರಾಯಣ ಕೊಡಿಯಾ ಇವರಿಗೆ ಸನ್ಮಾನಿಸಲಾಯಿತು.

ಮಲ್ಲಿಕಾರ್ಜುನ ದೇವಸ್ಥಾನದಿಂದ ಆರಂಭವಾದ ಶೋಭಾಯಾತ್ರೆ ಬ್ರಹ್ಮರಾಂಬ ದೇವಸ್ಥಾನದ ಮುಖಾಂತರ ವೇದಿಕೆಗೆ ಆಗಮಿಸಿತು. ಮಾವಿನಕಟ್ಟಾ ಹಿಂದೂ ಸಮ್ಮೇಳನ ಸಂಚಾಲನ ಸಮಿತಿಯ ಸರ್ವ ಸದಸ್ಯರು ಭಾಗವಹಿಸಿದರು. ಹಿಂದೂ ಸಮಾಜೋತ್ಸವದ ಸಮಿತಿ ಅಧ್ಯಕ್ಷ ಗಣಪತಿ ಹೆಗಡೆ ಬಾಳೆಕೊಪ್ಪ, ಗೌರವಾಧ್ಯಕ್ಷ ಹೇರಂಭ ಹೆಗಡೆ, ಉಪಾಧ್ಯಕ್ಷೆ ನಿರ್ಮಲಾ ನಾಯ್ಕ, ನರಸಿಂಹ ನಾಯ್ಕ ಇದ್ದರು. ನಟರಾಜ ಗೌಡರ್ ಸ್ವಾಗತಿಸಿದರು. ವಿನಾಯಕ ಭಟ್ಟ ಪ್ರಸ್ತಾವನೆಗೈದರು. ಪ್ರಗತಿ ವಿದ್ಯಾನಿಲಯ ವಿದ್ಯಾರ್ಥಿಗಳು ಒಂದೇ ಮಾತರಂ ಗೀತೆ ಹಾಡಿದರು. ಕುಮಾರ ಗೌಡರ್ ವಂದಿಸಿದರು. ಸತೀಶ ಹೆಗಡೆ ನಿರೂಪಿಸಿದರು.

ದರ ಏರಿಕೆ ಖಂಡಿಸಿ ಪ್ರತಿಭಟನೆ

ಹೊನ್ನಾವರ: ನಮ್ಮ ನೆರವಿಗೆ ಇರುತ್ತಿದ್ದ ದೇಶದೊಂದಿಗೆ ಉತ್ತಮ ಸಂಭದ ಇಟ್ಟುಕೊಳ್ಳದೇ, ಯಾರದೊ ಒಲೈಸಿಕೊಳ್ಳುವ ಕೇಂದ್ರ ಸರ್ಕಾರದ ನಿರ್ಧಾರದ ಪರಿಣಾಮವಾಗಿ ಇಂದು ಗ್ಯಾಸ್ ಹಾಗೂ ಪೆಟ್ರೋಲ್, ಡಿಸೇಲ್ ದರ ಏರಿಕೆ ಕಾಣುತ್ತಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ಕೆಪಿಸಿಸಿ ಸದಸ್ಯ ಎಂ.ಎನ್.ಸುಬ್ರಹ್ಮಣ್ಯ ಆಕ್ರೋಶ ವ್ಯಕ್ತಪಡಿಸಿದರು. ಪಟ್ಟಣದ ಶರಾವತಿ ವೃತ್ತದಲ್ಲಿ ಹೊನ್ನಾವರ ಬ್ಲಾಕ್ ಕಾಂಗ್ರೆಸ್ ವತಿಯಿಂದ ಹಮ್ಮಿಕೊಂಡ ಅಡುಗೆ ಅನಿಲ ಹಾಗೂ ಪೆಟ್ರೋಲ್ ಡಿಸೆಲ್ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಶರಾವತಿ ವೃತ್ತದಲ್ಲಿ ಕಾರ್ಯಕರ್ತರು ಸಾಂಕೇತಿಕವಾಗಿ ಹೆದ್ದಾರಿ ತಡೆದು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ ನಾಯ್ಕ ಹಳದೀಪುರ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜಗದೀಪ ತೆಂಗೇರಿ ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ಕೇಶವ ಮೇಸ್ತ, ಯುವ ಕಾಂಗ್ರೆಸ್ ಅಧ್ಯಕ್ಷರಾದ ವೈಭವ ನಾಯ್ಕ, ನವೀನ ಪಟಗಾರ, ನಿಖಿಲ್ ನಾಯ್ಕ, ಜಿಲ್ಲಾ ಯುವ ಕಾರ್ಯದರ್ಶಿ ಅಜಯ್ ಮೇಸ್ತ, ಮುಖಂಡರಾದ ಲಕ್ಷ್ಮೀ ಗೊಂಡ, ಆಶಾ ಮಡಿವಾಳ, ಕಲ್ಪನಾ ನರೋನಾ, ಕಿರಣ ಭಂಡಾರಿ, ಮೋಹನ ಆಚಾರಿ, ಹನೀಫ ಶೇಖ್, ಸಂದೀಪ ಪೂಜಾರಿ, ಶ್ರೀರಾಮ ಜಾದುಗಾರ, ಕಾರ್ಯಕರ್ತರು ಇದ್ದರು.



ಕುಡಿಯುವ ನೀರಿಗಾಗಿ ಹಾಹಾಕಾರ

ಮುಂಡಗೋಡ: ತಾಲೂಕಿನ ಕಾತೂರ ಗ್ರಾಪಂ ವ್ಯಾಪ್ತಿಯ ಸಿದ್ದನಕೊಪ್ಪ ಗ್ರಾಮದಲ್ಲಿ ಕುಡಿಯುವ ನೀರಿನ ಹಾಹಾಕಾರ ಎದುರಾಗಿದ್ದು, ಸ್ಥಳೀಯರು ನೀರಿಗಾಗಿ ಬಡಿದಾಡುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ತಾಲೂಕಿನ ಕೆಲ ಗ್ರಾಮದಲ್ಲಿ ಕೊಳವೆ ಬಾವಿಗಳು ಅಂತರ್ಜಲ ಕುಸಿದ್ದು, ಕೆಲ ಗ್ರಾಮಗಳಲ್ಲಿ ಗ್ರಾಪಂಯವರು ಖಾಸಗಿ ಬೋರವೆಲದಿಂದ ಟ್ಯಾಂಕರಗಳಿಗೆ ನೀರು ತುಂಬಿಸಿ ಜನರಿಗೆ ನೀರು ಸರಬರಾಜು ಮಾಡುತ್ತಿದೆ. ಆದರಲ್ಲಿಯೂ ಕಾತೂರಿನ ಸಿದ್ದನಕೊಪ್ಪದಲ್ಲಿ ಕಳೆದ 8 ದಿನಗಳಿಂದ ನೀರ ಇಲ್ಲದೆ ಜನರು ಪರದಾಡುತ್ತಿದ್ದಾರೆ. ತಾಲೂಕಿನ ಕಾತೂರ ಗ್ರಾಪಂ ವ್ಯಾಪ್ತಿಯ ಸಿದ್ದನಕೊಪ್ಪದಲ್ಲಿ ಸುಮಾರು 50 ಕುಟುಂಬಗಳು ಇವೆ. ಕೊಳವೆ ಬಾವಿಯಲ್ಲಿ ನೀರ ಇಲ್ಲದ ಕಾರಣ ಎಂಟು ದಿನ ಕುಡಿಯುವ ನೀರು ಇಲ್ಲದೆ ಜನರು ಪರದಾಡುತ್ತಿದ್ದಾರೆ. ಈ ಬಗ್ಗೆ ಸ್ಥಳೀಯರು ಗ್ರಾಪಂಯವರ ಗಮನಕ್ಕೆ ತಂದ ನಂತರ ಶನಿವಾರ ಪಿಡಿಒ ಅವರು ಪರ್ಯಾಯವಾಗಿ ಮತ್ತೊಂದು ಕೊಳವಿ ಬಾವಿಯಿಂದ ನೀರಿನ ಸೌಲಭ್ಯ ಒದಗಿಸಿದಾದರು ಸಮರ್ಪಕವಾಗಿ ನೀರು ಸೀಗುತ್ತಿಲ್ಲ, ಕಳೆದ ಒಂದು ವರ್ಷಗಳ ಹಿಂದೆ ಜೆಜೆಎಂ ಯೋಜನೆಯಲ್ಲಿ ವಾಟರ್ ಟ್ಯಾಂಕನ್ನು ನಿರ್ಮಿಸಿ ಪ್ರತಿ ಮನೆಗೆ ನಲ್ಲಿಗಳ ಸಂಪರ್ಕ ಕೊಟ್ಟಿದ್ದಾರೆ. ಆದರೆ ಈವರೆಗೂ ಆ ನಲ್ಲಿಗಳಲ್ಲಿ ನೀರು ಬರುತ್ತಿಲ್ಲ, ನೂತನವಾಗಿ ನಿರ್ಮಿಸಿದ ವಾಟರ್ ಟ್ಯಾಂಕ ಬಿರುಕು ಬಿಟ್ಟಿದೆ. ಸರಿಯಾದ ಕಾಮಗಾರಿ ಮಾಡಿಲ್ಲ, ಹಳೆಯ ಪೈಪ್ ಲೈನಿಗೆ ಜೆಜೆಎಂ ಅವರು ಸಂಪರ್ಕ ನೀಡಿದ್ದಾರೆ. ವಾಟರ್ ಟ್ಯಾಂಕಿಗೆ ನೀರು ಬಾರದಿದ್ದರು ಸಹ ಗ್ರಾಪಂಯವರು ಸ್ಥಳೀಯರಿಂದ ಸಹಿ ಮಾಡಿಸಿಕೊಂಡು ಹಸ್ತಾಂತರ ಮಾಡಿಕೊಂಡಿದ್ದಾರೆ. ಇದು ಹೇಗೆ ಸಾಧ್ಯ ಎಂದು ಆರೋಪಿಸಿ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಾತೂರ ಗ್ರಾಪಂ ಮಾಜಿ ಸದಸ್ಯ ನಾಗೇಂದ್ರ ವರದಿ ಸಲ್ಲಿಸಿದರು.



> ಇದೀಗ ಎರಡು ಬೋರವೆಲ್ ದುರಸ್ಥಿ ಮಾಡಿ ನೀರು ಪೂರೈಕೆ ಮಾಡಲಾಗುತ್ತಿದೆ. ಸದ್ಯ ಅಧಿಕಾರಿ ವಹಿಸಿಕೊಂಡಿದ್ದೇನೆ. ನಾನು ಜೆಜೆಎಂ ಕಾಮಗಾರಿ ಹಸ್ತಾಂತರ ಮಾಡಿಕೊಂಡಿಲ್ಲ. ಈ ಬಗ್ಗೆ ನನ್ನ ಗಮನಕ್ಕೆ ಇಲ್ಲ. ಇನ್ನೂ ನೂರ ಮೀಟರ್ ಅಪ್ಪು ಪೈಪ್ ಲೈನ ಸಂಪರ್ಕ ನೀಡಬೇಕಾಗಿದೆ. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ಪ್ರಸ್ತಾವನೆ ಕಳುಹಿಸಿ ಮಾತನಾಡಿದ್ದೇನೆ. ಈ ಬಾರಿ ಟಾಸ್ ಫೋರ್ಸ್ ನಲ್ಲಿ ಮಾಡಿಕೊಡುವುದಾಗಿ ಹೇಳಿದ್ದಾರೆ. ವಾಟರ್ ಟ್ಯಾಂಕ್ ಬಿರುಕು ಬಿಟ್ಟಿರುವುದು ಮಾಹಿತಿ ಇಲ್ಲ. ನಾಳೆಯೇ ತೆರಳಿ ಪರಿಶೀಲಿಸುತ್ತೇನೆ.
>
> ■ ಬಸವರಾಜ ಕೆ.,ಕಾತೂರ ಪಿಡಿಒ

ಹರ್ಯಾಣ ಸಮಾಲ್ಖಾದ ಮಾಧವ ಸೃಷ್ಟಿ ಆವರಣದಲ್ಲಿ ಅಖಿಲ ಭಾರತೀಯ ಪ್ರತಿನಿಧಿ ಸಭಾ ಸಂಪನ್ನ

ರಾಷ್ಟ್ರೀಯ ಚಿಂತನೆಯ ವಿಸ್ತರಣೆಗೆ ವೇಗ



ಸಮಾಲ್ಖಾ (ಹರ್ಯಾಣ): ಕಳೆದ ವರ್ಷದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ (ಸಂಘ)(ಆರ್‌ಎಸ್‌ಎಸ್)ದ ಕೆಲಸ ಗಮನಾರ್ಹವಾಗಿ ವಿಸ್ತರಿಸಿದೆ. ಸಂಘದ ವಿಸ್ತರಣೆ ಎಂದರೆ ರಾಷ್ಟ್ರೀಯ ಚಿಂತನೆಯ ವಿಸ್ತರಣೆ ಎಂದು ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ತಿಳಿಸಿದ್ದಾರೆ.

ಹರಿಯಾಣದ ಸಮಾಲ್ಖಾದಲ್ಲಿರುವ ಮಾಧವ ಸೃಷ್ಟಿ ಆವರಣದಲ್ಲಿ ಮೂರು ದಿನಗಳಿಂದ ನಡೆಯುತ್ತಿದ್ದ ಆರ್‌ಎಸ್‌ಎಸ್‌ನ ವಾರ್ಷಿಕ ಅಖಿಲ ಭಾರತೀಯ ಪ್ರತಿನಿಧಿ ಸಭಾ ಸಂಪನ್ನಗೊಂಡಿತು. ಅಂತಿಮ ದಿನವಾದ ಭಾನುವಾರ ಹೊಸಬಾಳೆ ಅವರು ಸುದ್ದಿಗೋಷ್ಠಿ ನಡೆಸಿದರು.

ಹರಿಯಾಣದ ಸಮಾಲ್ಖಾದ ಈ ಪರಿಸರದಲ್ಲಿ ಸಂಘದ ಅಖಿಲ ಭಾರತೀಯ ಪ್ರತಿನಿಧಿ ಸಭಾ ಎರಡನೇ ಬಾರಿಗೆ ನಡೆಯುತ್ತಿದೆ. ದೇಶದಾದ್ಯಂತ 46 ಪ್ರಾಂತಗಳಿಂದ ಒಟ್ಟು 1487 ಅಪೇಕ್ಷಿತರಿದ್ದರು. ಸಂಘದ ಕಾರ್ಯವಿಸ್ತಾರ ಮತ್ತು ಈ ವರ್ಷ ವಿಶೇಷವಾಗಿ ಸಂಘದ ಶತಾಬ್ದಿಯ ನಿಮಿತ್ತ ನಡೆದ ಕಾರ್ಯಕ್ರಮಗಳ ಕುರಿತು ವಿಚಾರ ವಿನಿಮಯ ನಡೆಯಿತು. ಸಂಘಟನಾತ್ಮಕವಾಗಿ ಎರಡು ವಿಷಯಗಳು ಮತ್ತು ಸಮಾಜದ ಕುರಿತಾದ 3 ವಿಷಯಗಳನ್ನು ಇಲ್ಲಿ ಚರ್ಚಿಸಲಾಯಿತು ಎಂದರು.

ಈಗ ಪ್ರಸ್ತುತ ದೇಶದಲ್ಲಿ 88,949 ಶಾಖೆಗಳಿವೆ. ಸಂಘದ ಶಾಖೆ ಎಲ್ಲಿರುವುದೋ ಅಲ್ಲಿಗೆ ಬರುವ ಸ್ವಯಂಸೇವಕ ದೇಶವನ್ನು ಏಕಾತ್ಮ ದೃಷ್ಟಿಯಿಂದ ನೋಡುತ್ತಾನೆ. ಜಾತಿ ಸಮುದಾಯಗಳ ಕುರಿತು ಮಾತ್ರ ಯೋಚಿಸದೇ ಸಂಪೂರ್ಣ ಸಮಾಜದ ಕುರಿತು ಯೋಚಿಸುವುದು ಅವನ ದೃಷ್ಟಿಯಾಗುತ್ತದೆ. ಸಮಾಜಕ್ಕೆ ನಾನು ಏನಾದರೂ ನೀಡಬೇಕೆಂಬ ಮನೋಭಾವ ಬೆಳೆಸಿಕೊಳ್ಳುತ್ತಾನೆ. ಹಾಗಾಗಿ, ಸಂಘಟನಾತ್ಮಕವಾಗಿ ಒಂದೊಂದು ಶಾಖೆ ಹೆಚ್ಚಾದರೂ ಕೇವಲ ಸಂಘದ ಶಾಖೆಯ ಸಂಖ್ಯೆ ಹೆಚ್ಚಾದಂತಲ್ಲ; ಬದಲಾಗಿ ದೇಶದ ಕುರಿತು ಯೋಚಿಸುವವರ ಸಂಖ್ಯೆ ಹೆಚ್ಚಾಗಿದೆ ಎಂದರ್ಥ. ಕೇವಲ ಕಾರ್ಯದ ವಿಸ್ತಾರವಾದರೆ ಸಾಲದು, ಬದಲಾಗಿ ಕಾರ್ಯಕರ್ತರ ಗುಣಾತ್ಮಕ ವಿಕಾಸವೂ ಆಗಬೇಕೆಂಬುದು ನಮ್ಮ ಗುರಿ. ವಸತಿಗಳಲ್ಲಿ ಇಂತಹ ಕಾರ್ಯಕರ್ತರ ನಿರ್ಮಾಣವಾಗಬೇಕು ಎನ್ನುವುದು ಕಳೆದ 100 ವರ್ಷಗಳ ನಮ್ಮ ಪ್ರಯತ್ನವಾಗಿದೆ ಎಂದು ವಿವರಿಸಿದರು.

ಸಮಾಜದಲ್ಲಿ ಆಗಬೇಕಿದೆ ಬದಲಾವಣೆ

ಸಮಾಜದ ದೃಷ್ಟಿಯಿಂದ ಸಮಾಜದ ಎದುರು ಪಂಚಪರಿವರ್ತನೆ (ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ, ಸಾಮಾಜಿಕ ಸಾಮರಸ್ಯ, ಸ್ವದೇಶಿ ಭಾವ ಜಾಗರಣ ಮತ್ತು ನಾಗರಿಕ ಶಿಷ್ಟಾಚಾರ)ಯನ್ನು ಇಟ್ಟಿದ್ದೆವು. ಭಾರತದ ಇತಿಹಾಸ, ಸಂಸ್ಕೃತಿ, ಜನಜೀವನ, ಜ್ಞಾನ ಪರಂಪರೆಯ ಕುರಿತು ಸರಿಯಾದ ವಿಮರ್ಶೆ (ಕಥನ) ದೇಶ ಮತ್ತು ಜಗತ್ತಿನಲ್ಲಿ ಆಗಬೇಕು. ಈ ದೃಷ್ಟಿಯಿಂದ ದೇಶದ ಯೋಚನೆಯಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ, ಪಠ್ಯಪುಸ್ತಕಗಳಲ್ಲಿ, ಅಂಕಣಗಳು ಮತ್ತು ಮಾಧ್ಯಮಗಳಲ್ಲಿ ಸರಿಯಾದ ವಿಚಾರ ಬರಬೇಕು. ನಮ್ಮ ದೇಶದಲ್ಲಿ ಆಂಗ್ಲರ ಆಡಳಿತದ ಸಂದರ್ಭದಲ್ಲಿ ಮತ್ತು ಅದರ ನಂತರವೂ ಕೆಲವು ಸಮಯ ನಮ್ಮ ಮಾನಸಿಕತೆ, ವಸಾಹತೀಕರಣಕ್ಕೆ ಒಳಗಾಯಿತು. ಹಾಗಾಗಿ, ಮಾನಸಿಕತೆಯ ನಿರ್ವಸಾಹತೀಕರಣ ಆಗಬೇಕಿದೆ ಎಂದು ಅಭಿಪ್ರಾಯಪಟ್ಟರು.


ದೇಶಕ್ಕಾಗಿ ಸಜ್ಜನಶಕ್ತಿ ಒಂದಾಗಬೇಕು

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರು ಮಾತ್ರ ದೇಶಭಕ್ತರು ಎಂದು ನಾವು ಎಂದೂ ಹೇಳುವುದಿಲ್ಲ. ದೇಶದಲ್ಲಿ, ಸಮಾಜದಲ್ಲಿ ದೇಶ ಮತ್ತು ಸಮಾಜಕ್ಕಾಗಿ ಕಾರ್ಯ ಮಾಡುವುದಕ್ಕಾಗಿ ತಮ್ಮ ಸಮಯ, ಬುದ್ಧಿ, ಧನ, ಪ್ರತಿಭೆಯನ್ನು ಉಪಯೋಗಿಸಿ ಒಟ್ಟಿಗೆ ಕೆಲಸ ಮಾಡಲು ಬಯಸುವವರು ಬಹಳಷ್ಟು ಜನರಿದ್ದಾರೆ. ಅಂತಹ ಸಜ್ಜನಶಕ್ತಿಯ ಸಹಯೋಗದೊಂದಿಗೆ ದೇಶದ ಸರಿಯಾದ ಕಥನವನ್ನು ಪ್ರಸ್ತುತಪಡಿಸಲು, ಪಂಚಪರಿವರ್ತನೆಯನ್ನು ಅನುಷ್ಠಾನಗೊಳಿಸಲು, ದೇಶದ ದೃಷ್ಟಿಯಿಂದ ಸಜ್ಜನಶಕ್ತಿ ಒಂದಾಗಬೇಕಿದೆ. ಈ ದೃಷ್ಟಿಯಿಂದ ಶತಾಬ್ದಿ ವರ್ಷದಲ್ಲಿ ಪ್ರಮುಖ ನಾಗರಿಕ ಗೋಷ್ಠಿ, ಹಿಂದು ಸಮ್ಮೇಳನದಂತಹ ಕಾರ್ಯಕ್ರಮದಲ್ಲಿ ಗ್ರಾಮ ಮತ್ತು ನಗರ ಮಟ್ಟದಲ್ಲಿ ಎಲ್ಲರೂ ಜೊತೆಯಾಗಿ ಕಾರ್ಯನಿರ್ವಹಿಸಿದ್ದಾರೆ. ಅನೇಕ ಮಂದಿ ಸಾಧು ಸಂತರು ತಮ್ಮ ಬೆಂಬಲವನ್ನು ಈ ಕಾರ್ಯಕ್ಕೆ ಸೂಚಿಸಿದ್ದಾರೆ, ಮಾರ್ಗದರ್ಶನ ನೀಡಿದ್ದಾರೆ. ಸಂಘದ ಪದಾಧಿಕಾರಿಗಳು, ಮಾತೃಶಕ್ತಿಯೂ ಈ ಕಾರ್ಯಕ್ರಮಗಳಲ್ಲಿ ಮಾರ್ಗದರ್ಶನ ಮಾಡಿದ್ದಾರೆ ಎಂದರು. ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್ ಸುದ್ದಿಗೋಷ್ಠಿಯಲ್ಲಿದ್ದರು.

75 ಶಿಕ್ಷಾ ವರ್ಗಗಳು

ಮುಂಬರುವ ವರ್ಷಕ್ಕೆ ಸಂಘದ ನಿಯಮಿತ ಶಿಕ್ಷಾ ವರ್ಗಗಳ ಬಗ್ಗೆ ಮಾಹಿತಿ ನೀಡಲಾಯಿತು. ಮುಂಬರುವ ದಿನಗಳಲ್ಲಿ 63 ಕಡೆಗಳಲ್ಲಿ ಸಂಘ ಶಿಕ್ಷಾ ವರ್ಗಗಳು ನಡೆಯಲಿವೆ. ಕ್ಷೇತ್ರೀಯ ಮಟ್ಟದಲ್ಲಿ 11 ಕಡೆಗಳಲ್ಲಿ ಕಾರ್ಯಕರ್ತರ ವಿಕಾಸ ವರ್ಗ-1 ಮತ್ತು ನಾಗ್ಪುರದಲ್ಲಿ ಕಾರ್ಯಕರ್ತರ ವಿಕಾಸ ವರ್ಗ-2 ವರ್ಗ ನಡೆಯಲಿದೆ. ಕೆಲವು ವರ್ಗಗಳು 15 ದಿನಗಳದ್ದಾದರೆ, ಇನ್ನೂ ಕೆಲವು 21 ದಿನಗಳದ್ದಾಗಿವೆ. ಇವು ಏಪ್ರಿಲ್‌ನಿಂದ ಜೂನ್‌ವರೆಗೆ ಜರುಗಲಿವೆ ಎಂದು ದತ್ತಾತ್ರೇಯ ಹೊಸಬಾಳೆ ವಿವರಿಸಿದರು.

> ಭಾರತೀಯತೆ ಎಂದರೇನು? ಹಿಂದುತ್ವ ಎಂದರೇನು? ಅದು ಕೇವಲ ಸಿದ್ಧಾಂತ ಅಥವಾ ಆಧ್ಯಾತ್ಮಿಕ ವಿಚಾರವಲ್ಲ, ಅದು ಜೀವನ ಶೈಲಿಯಾಗಿದೆ ಎಂದು ವಿವೇಕಾನಂದರು, ದಯಾನಂದ ಸರಸ್ವತಿ ಸೇರಿದಂತೆ ಅನೇಕರು ತಿಳಿಸಿದ್ದಾರೆ. ನಾವು ಅವರನ್ನು ಸ್ಮರಿಸುತ್ತೇವೆ. ಭಾರತೀಯ ಕಥನ ವಿಶ್ವಕ್ಕೆ ಅವಶ್ಯವಾದ ಒಂದು ಚಿಂತನೆ ಎಂಬುದನ್ನು ತಿಳಿಸಬೇಕಿದೆ.
>
> ■ ದತ್ತಾತ್ರೇಯ ಹೊಸಬಾಳೆ, ಆರ್‌ಎಸ್‌ಎಸ್ ಸರಕಾರ್ಯವಾಹ



ಮುಂದುವರಿಯುತ್ತದೆ ಶತಾಬ್ದಿ ವರ್ಷ ಕಾರ್ಯಕ್ರಮ

ಶತಾಬ್ದಿ ವರ್ಷ 2026ರ ವಿಜಯದಶಮಿಯವರೆಗೆ ಮುಂದುವರಿಯುತ್ತದೆ. ಇನ್ನೂ ಅನೇಕ ಪ್ರಾಂತಗಳಲ್ಲಿ ಯುವಕರ ಕಾರ್ಯಕ್ರಮ ನಡೆಯಬೇಕಿದೆ. ಆದ್ದರಿಂದ ಯುವಕರ ಕೇಂದ್ರಿತವಾದ ಕಾರ್ಯಕ್ರಮಗಳು, ಪ್ರಾಂತಗಳ ಸಂವಾದ, ಯುವ ಪ್ರತಿಭೆಗಳ ಗುರುತಿಸುವಿಕೆ, ವಿವಿಧ ಚಟುವಟಿಕೆಗಳು, ಪಂಚಪರಿವರ್ತನೆಯ ವಿಷಯಗಳನ್ನು ಪ್ರಯೋಗಿಸಿ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಸಹಕಾರಿಯಾಗುವಂತೆ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಸಂಘಟನಾತ್ಮಕ ದೃಷ್ಟಿಯಿಂದಲೂ ಯುವಕರನ್ನು ಒಗ್ಗೂಡಿಸುವಂತಹ ಪ್ರಯತ್ನಗಳು ನಡೆದಿವೆ ಎಂದು ಹೊಸಬಾಳೆ ಹೇಳಿದರು.

ಪರಿಸರಸ್ನೇಹಿ ಮನೆಗೆ ಒತ್ತು

ಸಂಘದ ದೃಷ್ಟಿಯಿಂದ ಸ್ವಯಂಸೇವಕರು ಗೋಸೇವಾ, ಗ್ರಾಮವಿಕಾಸದಂತಹ ಕಾರ್ಯಗಳನ್ನು ಮಾಡುತ್ತಿದ್ದಾರೆ. ಗ್ರಾಮಗಳಲ್ಲಿ ಗೋಸೇವಾ ಕಾರ್ಯ ಮಾಡಬಹುದು. ಆದರೆ, ನಗರಗಳಲ್ಲಿ ಹೇಗೆ ಸಾಧ್ಯ ಎಂಬ ಪ್ರಶ್ನೆಗೆ ಉತ್ತರ ಇಲ್ಲಿದೆ – ಪರಿಸರಸ್ನೇಹಿ ಮನೆ ನಿರ್ಮಿಸುವುದು. ನಗರಗಳಲ್ಲಿ ವಾಸವಿರುವವರು ತಮ್ಮ ಮನೆಗಳ ತಾರಸಿಯಲ್ಲಿ ಚಿಕ್ಕ ತೋಟ ಮಾಡಿ ಅದಕ್ಕೆ ಗೋ ಮೂತ್ರ, ಸಗಣಿ ಉಪಯೋಗಿಸಿ ಗೋಸೇವಾ ಕಾರ್ಯಕ್ಕೆ ಕೈ ಜೋಡಿಸಬಹುದು. ಅದೇ ರೀತಿ, ನಾಗರಿಕರು ಪರಿಸರಸ್ನೇಹಿ ಮನೆಗಳನ್ನು ನಿರ್ಮಿಸಲು ಪ್ರತಿಜ್ಞೆ ಮಾಡಬಹುದು. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬಹುದು, ನೀರನ್ನು ಸಂರಕ್ಷಿಸಬಹುದಾಗಿದೆ. ದೇಶಾದ್ಯಂತ ಅನೇಕರು ಇದನ್ನು ಅನುಸರಿಸುತ್ತಿದ್ದಾರೆ.

- ಅಂಡಮಾನ್‌ನ ಒಂಬತ್ತು ಪ್ರಮುಖ ದ್ವೀಪಗಳಿಂದ 13,000ಕ್ಕೂ ಹೆಚ್ಚು ಜನರು ಸರಸಂಘಚಾಲಕರ ಸಮ್ಮುಖದಲ್ಲಿ ಪೋರ್ಟ್‌ಬ್ಲೇರ್‌ನಲ್ಲಿ ನಡೆದ ಹಿಂದು ಸಮಾವೇಶದಲ್ಲಿ ಭಾಗಿ
- ಅರುಣಾಚಲ ಪ್ರದೇಶದಂತಹ ಕಡಿಮೆ ಜನಸಂಖ್ಯಾ ಸಾಂದ್ರತೆ ಹೊಂದಿರುವ ರಾಜ್ಯದಲ್ಲಿ 37,000ಕ್ಕೂ ಹೆಚ್ಚು ಜನರು 21 ಸ್ವಧರ್ಮ ಸಮಾವೇಶಗಳಲ್ಲಿ ಭಾಗಿ
- ತೇಗಬಹದ್ದೂರ್ ಅವರ 350ನೇ ವರ್ಷದ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ದೇಶಾದ್ಯಂತ 2,134 ಕಾರ್ಯಕ್ರಮಗಳ ಆಯೋಜನೆ, 7 ಲಕ್ಷ ಜನರು ಭಾಗಿ
- ವಂದೇ ಮಾತರಂನ 150ನೇ ವರ್ಷದ ಕಾರ್ಯಕ್ರಮಗಳು ದೇಶಾದ್ಯಂತ ಉತ್ಸಾಹದಿಂದ ಜರುಗಿದವು
- ಈ ವರ್ಷ ಸಂತ ಶಿರೋಮಣಿ ರವಿದಾಸ ಅವರ 650ನೇ ಜಯಂತಿಯನ್ನು ಸ್ಮರಿಸಲು ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ

ಕಿರುಸುದ್ದಿ

ಲಕ್ಷಾಂತರ ಹಣ ಲೂಟಿ ಮಾಡಿದವರ ಬಂಧನ

ಚಿತ್ರದುರ್ಗ: ಜಿಲ್ಲಾಧಿಕಾರಿ, ಅಪರ ಜಿಲ್ಲಾಧಿಕಾರಿ ಹೆಸರನ್ನು ಬಳಸಿಕೊಂಡು ನಗರಾಭಿವೃದ್ಧಿ ಕೋಶದ ಸಿಬ್ಬಂದಿ ಲಕ್ಷ ಲಕ್ಷ ಹಣ ದೋಚಿರುವ ಘಟನೆ ಚಿತ್ರದುರ್ಗದಲ್ಲಿ ಬೆಳಕಿಗೆ ಬಂದಿದೆ. ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ ಅವರ ಡಿಜಿಟಲ್ ಸಹಿಯನ್ನು ಬಳಸಿಕೊಂಡು ನಕಲಿ ದಾಖಲೆ ಸೃಷ್ಟಿಸಿ ಹಣ ದೋಚಲಾಗಿದೆ. ಈ ಸಂಬಂಧ ಚಿತ್ರದುರ್ಗ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಿಲ್ಲಾ ನಗರಾಭಿವೃದ್ಧಿ ಕೋಶದ ಸಿಟಿ ಲೆವೆಲ್ ಟೆಕ್ನಿಕಲ್ ಸೆಲ್ ಸಿಬ್ಬಂದಿಯ ವೇತನದ ಹೆಸರಿನಲ್ಲಿ ಸುಮಾರು 15 ಲಕ್ಷ ರೂಪಾಯಿ ಮೌಲ್ಯದ ನಕಲಿ ಬಿಲ್ ಸಲ್ಲಿಸಿರುವುದು ತಿಳಿದುಬಂದಿದೆ. ಖಜಾನೆ ಇಲಾಖೆಯು ಡಿಜಿಟಲ್ ಸಹಿ ಕುರಿತು ಆಕ್ಷೇಪಣೆ ವ್ಯಕ್ತಪಡಿಸಿದ ಹಿನ್ನೆಲೆ ಈ ಅಕ್ರಮ ಬೆಳಕಿಗೆ ಬಂದಿದೆ. ನಗರಾಭಿವೃದ್ಧಿ ಕೋಶದ ನಿರ್ದೇಶಕಿ ರೇಷ್ಮಾ ಹಾನಗಲ್ ನೀಡಿದ ದೂರಿನ ಆಧಾರದ ಮೇಲೆ ಹೊರಗುತ್ತಿಗೆ ನೌಕರರಾದ ಸೈಯದ್ ಸಾದಿಕ್, ವಿನಯ್ ಶರ್ಮಾ, ವಿಜಯ್ ಕುಮಾರ್, ಬಸವರಾಜ್, ಮೆಹಬೂಬ್ ಭಾಷಾ ಹಾಗೂ ವಿಎಂಎಚ್ ಎಂಟರ್‌ಪ್ರೈಸಸ್‌ನ ವೆಂಕಟೇಶ್ ವಿರುದ್ಧ ಪ್ರಕರಣ ದಾಖಲಾಗಿದೆ. ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಪ್ರಮುಖ ಆರೋಪಿ ಸೈಯದ್ ಸಾದಿಕ್ ಪರಾರಿಯಾಗಿದ್ದಾನೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾಧಿಕಾರಿ ಮತ್ತು ಅಪರ ಜಿಲ್ಲಾಧಿಕಾರಿ ಅವರ ಸಹಿ ಸರ್ಟಿಫಿಕೇಟ್ ಕೀ ಕಳವು ಮಾಡಿ ದುರುಪಯೋಗ ಪಡಿಸಿಕೊಂಡಿರುವ ಆರೋಪವೂ ಇವರ ಮೇಲಿದೆ. ಈ ಸಂಬಂಧ ತನಿಖೆ ನಡೆಯುತ್ತಿದೆ.

ಡಿಸಿ, ಎಡಿಸಿ ಅವರ ಡಿಜಿಟಲ್ ಸಹಿ ದುರ್ಬಳಕೆ

ಇಬ್ಬರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ ಸ್ಥಳೀಯ ನಾಗರಿಕರು

ಶಾಸಕರಿಗೆ ₹5 ಕೋಟಿ ಆಮಿಷ

ಪೊಲೀಸರಿಂದ ವಿಚಾರಣೆ

ರೆಸಾರ್ಟ್‌ನಲ್ಲಿದ್ದ ಎಲ್ಲಾ ಶಾಸಕರನ್ನು ಬೆಂಗಳೂರಿನ ಖರ್ಗೆ ಮನೆಗೆ ಶಿಫ್ಟ್ ಮಾಡಲಾಗಿದೆ. ಸ್ಥಳೀಯ ಕಾಂಗ್ರೆಸ್ ಮುಖಂಡರು ಹಾಗೂ ಪೊಲೀಸ್ ಎಸ್ಕಾರ್ಟ್ ಭದ್ರತೆಯಲ್ಲಿ ಬಸ್ ಮೂಲಕ 8 ಮಂದಿ ಶಾಸಕರು ಬೆಂಗಳೂರಿನ ಸದಾಶಿವನಗರದ ಖರ್ಗೆ ಮನೆಗೆ ಸ್ಥಳಾಂತರ ಮಾಡಲಾಗಿದೆ. ಇತ್ತ ರೆಸಾರ್ಟ್‌ಗೆ ಎಸ್‌ಪಿ ಶ್ರೀನಿವಾಸ್‌ಗೌಡ ಭೇಟಿ ನೀಡಿ ಪೊಲೀಸರ ವಶದಲ್ಲಿರುವ ಇಬ್ಬರು ವ್ಯಕ್ತಿಗಳನ್ನು ವಿಚಾರಣೆ ನಡೆಸಿದ್ದಾರೆ.




ರಾಮನಗರ: ಬಿಡದಿಯ ವಂಡರ್ ಲಾ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿದ್ದ ಒಡಿಶಾ ಕೈ ಶಾಸಕರ ಖರೀದಿಗೆ ಬಂದಿದ್ದ ಇಬ್ಬರು ಒಡಿಶಾ ವ್ಯಕ್ತಿಗಳು ಸ್ಥಳೀಯ ಕಾಂಗ್ರೆಸ್ ಮುಖಂಡರ ಕೈಗೆ ಸಿಕ್ಕಿಬಿದ್ದಿದ್ದಾರೆ. ಶಾಸಕರಿಗೆ 5 ಕೋಟಿ ರೂ. ಆಫರ್ ನೀಡಿದ್ದ ವ್ಯಕ್ತಿಗಳನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ಆರಂಭಿಸಿದ್ದಾರೆ.

ರಾಜ್ಯಸಭಾ ಚುನಾವಣೆಯಲ್ಲಿ ಹಿನ್ನೆಲೆಯಲ್ಲಿ ಮಾ.12ರಂದು ಒಡಿಶಾದಿಂದ ರಾಮನಗರದ ಬಿಡದಿ ವಂಡರ್ ಲಾ ರೆಸಾರ್ಟ್‌ಗೆ ಬಂದು ವಾಸ್ತವ್ಯ ಹೂಡಿದ್ದ ಕಾಂಗ್ರೆಸ್ ಶಾಸಕರಿಗೆ ಆಪರೇಷನ್ ಯತ್ನ ನಡೆದಿದೆ. ಭಾನುವಾರ ಬೆಳಗ್ಗೆ ಒಡಿಶಾದಿಂದ ಮೂವರು ವ್ಯಕ್ತಿಗಳು, ಸ್ಥಳೀಯ ಓರ್ವ ವ್ಯಕ್ತಿ ಜೊತೆ ಸೇರಿ ಶಾಸಕರ ಖರೀದಿಗೆ ಮುಂದಾಗಿದ್ದು, ಈ ವೇಳೆ ಸ್ಥಳೀಯ ಕಾಂಗ್ರೆಸ್ ಮುಖಂಡರ ಕೈಗೆ ಸಿಕ್ಕಿಬಿದ್ದಿದ್ದಾರೆ.

ಬಿರೇಂದ್ರ ಪ್ರಸಾದ್, ಅಜಿತ್ ಕುಮಾರ್ ಸಾಹು ಎಂಬುವವರು ಸಿಕ್ಕಿಬಿದ್ದಿದ್ದು, ಸ್ಥಳಕ್ಕೆ ಬಿಡದಿ ಪೊಲೀಸರು ಆಗಮಿಸಿ, ಒಡಿಶಾ ವ್ಯಕ್ತಿಗಳ ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಈ ಬಗ್ಗೆ ಒಡಿಶಾ ಕಾಂಗ್ರೆಸ್ ಎಂಪಿ ಸಪ್ತಗಿರಿ ಶಂಕರ್ ಉಲಾಖ ಮಾತನಾಡಿ, ನಾಲ್ವರು ವ್ಯಕ್ತಿಗಳು ರೆಸಾರ್ಟ್‌ಗೆ ಬಂದು ಶಾಸಕರ ಜತೆ ಮಾತನಾಡಲು ಯತ್ನಿಸಿದ್ದರು. ನಮ್ಮ ಶಾಸಕರಿಗೆ 5 ಕೋಟಿ ರೂ. ಹಣದ ಆಫರ್ ಮಾಡಿದ್ದಾರೆಂದು ದೂರಿದರು.

ದೂರು ದಾಖಲು

ಒಡಿಶಾ ಸಿಎಂ ಮೋಹನ್ ಚರಣ್ ಆಪ್ತ ಇಲ್ಲಿಗೆ ಬಂದು ಶಾಸಕರ ಖರೀದಿಗೆ ಯತ್ನಿಸಿದ್ದಾನೆ. ಆದರೆ ನಮ್ಮ ಯಾವ ಶಾಸಕರು ಆಮಿಷಕ್ಕೆ ಒಳಗಾಗಿಲ್ಲ. ಆಮಿಷ ತೋರಲು ಬಂದ ವ್ಯಕ್ತಿಗಳನ್ನು ಸ್ಥಳೀಯ ಕಾಂಗ್ರೆಸ್ ಮುಖಂಡರು ಹಿಡಿದು ಪೊಲೀಸರಿಗೆ ಕೊಟ್ಟಿದ್ದಾರೆ. ಅವರ ವಿರುದ್ಧ ನಾವು ಕೂಡಾ ಪೊಲೀಸರಿಗೆ ದೂರು ನೀಡಿದ್ದೇವೆ ಎಂದರು.



ಶಾಸಕರು ಕುದುರೆ ವ್ಯಾಪಾರಕ್ಕೆ ಸಿದ್ಧರಿಲ್ಲ: ಡಿ.ಕೆ.ಶಿವಕುಮಾರ್

ಬೆಂಗಳೂರು: ಬಿಡದಿಯಲ್ಲಿ ವಾಸ್ತವ್ಯ ಹೂಡಿರುವ ಒಡಿಶಾದ ನಮ್ಮ ಪಕ್ಷದ ನಾಲ್ವರು ಶಾಸಕರನ್ನು ಭೇಟಿ ಮಾಡಿ, ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡಮತ ದಾನಕ್ಕೆ ತಲಾ 5 ಕೋಟಿ ರೂ. ಹಣದ ಆಮಿಷ ಒಡ್ಡಿದ್ದಾರೆ. ಆದರೆ ನಮ್ಮ ಶಾಸಕ ರು ಕುದುರೆ ವ್ಯಾಪಾರಕ್ಕೆ ಸಿದ್ಧರಿಲ್ಲ ಎಂದು ಹೇಳಿ ಕಳುಹಿಸಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಮಿಷ ಒಡ್ಡಿದ ನಾಲ್ವರ ಪೈಕಿ ಇಬ್ಬರು ತಪ್ಪಿಸಿಕೊಂಡಿದ್ದು ಮತ್ತಿಬ್ಬರನ್ನು ಹಿಡಿಯ ಲಾಗಿದೆ. ಅವರು ಇದೇ ಕೆಲಸಕ್ಕೆ ಬಂದಿರುವುದಾಗಿ ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು. ಆಮಿಷ ಒಡ್ಡಿದವರು ಖಾಲಿ ಚೆಕ್ ತಂದಿದ್ದಾರೆ. ಆ ಮೂಲಕ ಆಪರೇಷನ್ ಕಮಲ ಮಾಡಲಾಗುತ್ತಿದೆ. ಒಡಿಶಾದಿಂದ ಬಂದಿರುವ ನಾಲ್ಕು ಜನರು ಸ್ಥಳೀಯ ಬ್ಯಾಟರಾಯನಪುರ ನಿವಾಸಿ ಸುರೇಶ್ ಎಂಬಾತನ ಸಹಾಯ ಪಡೆದು ರೂಮ್ ಬುಕ್ ಮಾಡಿಸಿದ್ದಾರೆ. ನಂತರ ನಮ್ಮ ಶಾಸಕರಿಗೆ ಆಮಿಷ ಒಡ್ಡಿದಾಗ ನಮ್ಮ ಪಕ್ಷದ ಶಾಸಕರು ಈ ವಿಚಾರವನ್ನು ನಮ್ಮ ಗಮನಕ್ಕೆ ತಂದಿದ್ದಾರೆ ಎಂದರು.

ಒಡಿಶಾಗೆ ಪ್ರಯಾಣ

ಮಲ್ಲಿಕಾರ್ಜುನ ಖರ್ಗೆ ಭೇಟಿ ಬಗ್ಗೆ ಉತ್ತರಿಸಿದ ಅವರು, ಪಕ್ಷದ ಶಾಸಕರು ಪಕ್ಷದ ಅಧ್ಯಕ್ಷರನ್ನು ಭೇಟಿ ಮಾಡದೆ ಬಿಜೆಪಿ ಅಧ್ಯಕ್ಷರನ್ನು ಭೇಟಿ ಮಾಡಲು ಆಗುತ್ತದೆಯೇ? ನಮ್ಮ ಪಕ್ಷದ ಶಾಸಕರು ತಮ್ಮ ಆಸೆಯಂತೆ ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿದ್ದು, ಅವರ ಆಶೀರ್ವಾದ ಪಡೆದಿದ್ದಾರೆ. ಅವರೊಂದಿಗೆ ಫೋಟೋ ತೆಗೆಸಿಕೊಂಡಿದ್ದು, ಸೋಮವಾರ ಬೆಳಗ್ಗೆ ಅವರು ಒಡಿಶಾಗೆ ಪ್ರಯಾಣ ಬೆಳೆಸಲಿದ್ದಾರೆ ಎಂದರು.

> ನಾವು ಇಂತಹ ಪರಿಸ್ಥಿತಿ ಎದುರಿಸುತ್ತಲೇ ಇರುತ್ತೇವೆ. ನಾನು ಸದಾ ಮಂದ ಹಾಸದಲ್ಲೇ ಇರುತ್ತೇನೆ. ನಾನು ನನ್ನ ಆತ್ಮಸಾಕ್ಷಿಯನ್ನು ನಂಬಿದ್ದೇನೆ, ಯಾವ ಟ್ರಬಲ್ಲೂ ಇಲ್ಲ.
>
> ■ ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಅನಿಲ ಪೂರೈಕೆಗೆ ಪರ್ಯಾಯ ಮಾರ್ಗಕ್ಕೆ ಕೇಂದ್ರಕ್ಕೆ ಪತ್ರ: ಮುಖ್ಯಮಂತ್ರಿ

ಬೆಂಗಳೂರು: ಎಲ್‌ಪಿಜಿ ಸಿಲಿಂಡರ್ ಅಭಾವವನ್ನು ನೀಗಿಸಲು ಹೊರದೇಶದಿಂದ ಅನಿಲ ಪೂರೈಕೆಯಂತಹ ಪರ್ಯಾಯ ಮಾರ್ಗಕ್ಕೆ ಒತ್ತಾಯಿಸಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗಿರುವ ಬಗ್ಗೆ ಭಾನುವಾರ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಎಲ್‌ಪಿಜಿ ಪೂರೈಕೆಯಲ್ಲಿ ತೊಂದರೆಯಾಗದಂತೆ ನಿರ್ವಹಿಸುವ ಬಗ್ಗೆ ಭರವಸೆ ನೀಡಿದ್ದಾರೆ ಎಂದರು. ಎಲ್‌ಪಿಜಿ ಸಿಲಿಂಡರ್ ವ್ಯತ್ಯಯದ ಬಗ್ಗೆ ವಿಧಾನಮಂಡಲ ಅಧಿವೇಶನದಲ್ಲಿ ಸರ್ಕಾರದ ವತಿಯಿಂದ ಈ ಬಗ್ಗೆ ಈಗಾಗಲೇ ಉತ್ತರ ನೀಡಲಾಗಿದೆ. ಆಹಾರಕ್ಕಾಗಿ ಹೋಟೆಲ್‌ಗಳ ಮೇಲೆ ಅವಲಂಬಿತರಾಗುವ ಜನಸಂಖ್ಯೆ ಸಾಕಷ್ಟಿದೆ. ಹೋಟೆಲ್ ವ್ಯವಸ್ಥೆ ಸ್ಥಗಿತಗೊಂಡರೆ, ಜನಜೀವನ ಅಸ್ತವ್ಯಸ್ತವಾಗುತ್ತದೆ ಎಂದು ಹೇಳಿದರು. ರಾಜ್ಯದಲ್ಲಿ ಮಾತ್ರ ಎಲ್‌ಪಿಜಿ ಪೂರೈಕೆ ಸಮಸ್ಯೆಯಾಗಿದೆ ಎಂದು ಬಿಜೆಪಿಯ ನಾಯಕರ ಟೀಕೆಗೆ ಪ್ರತಿಕ್ರಿಯೆ ನೀಡಿ, ರಾಜ್ಯ ಬಿಜೆಪಿಯವರು ಮಾತನಾಡುವ ಬದಲು, ಎಲ್‌ಪಿಜಿ ಸಿಲಿಂಡರ್ ಹೆಚ್ಚಿನ ಸರಬರಾಜಿಗೆ ಕ್ರಮ ವಹಿಸಲಿ ಎಂದು ತಿಳಿಸಿದರು.

ಗೋವು ಸಂಸ್ಕೃತಿ ಭಾರತೀಯ ಸೇವಾ ಸಂಸ್ಕಾರದ ಪ್ರತೀಕ: ಶಾಸಕ

ರಾಷ್ಟ್ರಾದ್ಯಂತ ಅಭಿಯಾನ ಶ್ಲಾಘನೀಯ

ಬೆಂಗಳೂರು: ಗೋವು ಸಂಸ್ಕೃತಿ ಭಾರತೀಯ ಸೇವಾ ಸಂಸ್ಕಾರದ ಪ್ರತೀಕವಾಗಿದ್ದು, ಈ ಸಂಸ್ಕೃತಿಯನ್ನು ಮುಂದುವರಿಸಲು ರಾಷ್ಟ್ರಾದ್ಯಂತ ಅಭಿಯಾನನಡೆಸುತ್ತಿರುವುದು ಶ್ಲಾಘನೀಯಎಂದು ಶಾಸಕ ಕೆ.ಗೋಪಾಲಯ್ಯ ಅಭಿಪ್ರಾಯಪಟ್ಟರು.

ಮಹಾಲಕ್ಷ್ಮಿಪುರದ ಸಾದರ ಸಮುದಾಯ ಕ್ಷೇಮಾಭಿವೃದ್ಧಿ ಸಂಘದ ಸಭಾಂಗಣದಲ್ಲಿ ಭಾನುವಾರ ಶ್ರೀ ಸಿದ್ಧಾರೂಢ ಮಿಷನ್ ಆಶ್ರಮದ ನೇತೃತ್ವದಲ್ಲಿ ನಡೆದ ರಾಜ್ಯಮಟ್ಟದ ಗೋ-ಸಮ್ಮಾನ ಅಭಿಯಾನದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ರಾಷ್ಟ್ರಾದ್ಯಂತಮಠಮಾನ್ಯಗಳಸ್ವಾಮೀಜಿಗಳನ್ನು ಒಂದೆಡೆ ಸೇರಿಸಿರುವುದು ಡಾ.ಆರೂಢಭಾರತಿ ಸ್ವಾಮೀಜಿ ಅವರ ಹೆಗ್ಗಳಿಕೆಯಾಗಿದೆ. ಗೋವುಗಳ ಮತ್ತು ಅವುಗಳ ಸಂರಕ್ಷಣೆಯ ಬಗ್ಗೆ ಒಲವಿರುವ ಕುಟುಂಬಗಳು ಸಹ ಇಲ್ಲಿ ಸೇರಿರುವುದು ಸಂತಸವನ್ನು ಉಂಟುಮಾಡಿದೆ. ದೇಶಾದ್ಯಂತ ನಾಲ್ಕು ಹಂತಗಳಲ್ಲಿ ನಡೆಯುವ ಗೋಸಮ್ಮಾನ ಅಭಿಯಾನಕ್ಕೆ ಪೂರ್ವಭಾವಿಯಾಗಿ ಇಂದು



ರಾಜ್ಯಮಟ್ಟದ ಪ್ರಚಾರಕರ ಕಾರ್ಯಾಗಾರ ಏರ್ಪಡಿಸಲಾಗಿದೆ. ಇದರಲ್ಲಿ ರಾಜ್ಯ, ಹೊರರಾಜ್ಯದ ಅನೇಕ ಸಂತರು ರಾಜ್ಯದ ಪ್ರತಿ ತಾಲೂಕಿನ ಪ್ರಾತಿನಿಧಿಕ ಗೋ ಭಕ್ತರು, ಗೋ ಸಂರಕ್ಷಕರು ಭಾಗವಹಿಸಿರುವುದು ಸಂತಸ ತಂದಿದೆ ಎಂದರು.

ಗೋವು ರಾಷ್ಟ್ರಮಾತೆಎಂದು ಉದ್ಘೋಷಿಸಬೇಕು. ದೇಶಾದ್ಯಂತ ಒಂದೇ ಕಾನೂನಿನ ಅಡಿಯಲ್ಲಿ ಗೋ ಹತ್ಯೆ ನಿಷೇಧಿಸಬೇಕು. ಗೋಮಾಳವನ್ನು ಗೋವಿಗಾಗಿಯೇ ಉಳಿಸಬೇಕು ಎಂಬ ಮುಖ್ಯ ಬೇಡಿಕೆಗಳ ಕುರಿತು ಈ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯುತ್ತದೆ ಎಂದು ಮಾಹಿತಿ ನೀಡಿದರು.

ಈ ಅಭಿಯಾನದ ಮುಂದಿನ ಭಾಗವಾಗಿ ಮೊದಲ ಹಂತದಲ್ಲಿ ಏ.27 ರಂದು ದೇಶದ ಎಲ್ಲ 5,400 ತಹಸೀಲ್ದಾರರಿಗೆ ಈ ಕುರಿತು ಮನವಿ ಸಲ್ಲಿಸಲಾಗುವುದು. ಎರಡನೇ ಹಂತದಲ್ಲಿ ಜು.27ರಂದು ದೇಶದ ಎಲ್ಲ ಜಿಲ್ಲಾಧಿಕಾರಿಗಳಿಗೆ, ಮೂರನೇ ಹಂತದಲ್ಲಿ ಅ. 27ರಂದು ಎಲ್ಲ ರಾಜ್ಯಗಳ ಮುಖ್ಯಮಂತ್ರಿ ಹಾಗೂ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು. ನಾಲ್ಕನೇ ಹಂತದಲ್ಲಿ 2027ರ ಫೆ. 27 ರಿಂದ ಆ.15 ರವರೆಗೆ ದಿಲ್ಲಿಯಲ್ಲಿ ಹೆಚ್ಚಿನ ಸಂಖ್ಯೆಯ ಸಂತರು ಹಾಗೂ ಗೋ ಭಕ್ತರು ಶಾಂತಿಯುತ ಧರಣಿ ನಡೆಸಲಿದ್ದಾರೆ. ಆಗಲೂ ಬೇಡಿಕೆ ಈಡೇರದಿದ್ದಲ್ಲಿ ಅಂತಿಮವಾಗಿ 2027ರ ಆ. 16ರಿಂದ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸಲಾಗುವುದು ಎಂದು ತಿಳಿಸಿದರು.

ಈ ವೇಳೆ ಸಿದ್ಧಾರೂಢ ಮಠದ ಶ್ರೀ ಪ್ರಭುಲಿಂಗ ದೇವರು ಸ್ವಾಮೀಜಿ, ಮಾಜಿ ಶಾಸಕ ನೆ.ಲ.ನರೇಂದ್ರಬಾಬು ಸೇರಿದಂತೆ ಗೋ ಸಂರಕ್ಷಣಾ ಪ್ರತಿನಿಧಿಗಳು ಇದ್ದರು.

ಸರ್ಕಾರಕ್ಕೆ ಆರ್ಥಿಕ ಬಿಕ್ಕಟ್ಟು: ಅಶೋಕ

ಬೆಂಗಳೂರು: ತುಘಲಕ್ ನೀತಿಗಳಿಂದಲೇ ದುರಾಡಳಿತಕ್ಕೆ ಹೆಸರಾಗಿ ರುವ ಕಾಂಗ್ರೆಸ್ ಸರ್ಕಾರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದೆ. ಇದರಿಂದ ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೂ ಸರ್ಕಾರದ ಬಳಿ ದುಡ್ಡಿಲ್ಲ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.



ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, ರಾಜ್ಯಾದ್ಯಂತ ಸರ್ಕಾರಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸುಮಾರು 51,000 ಅತಿಥಿ ಶಿಕ್ಷಕರು ಕಳೆದ 4 ತಿಂಗಳಿಂದ ಸಂಬಳ ವಿಲ್ಲದೆ ಪರದಾಡುತ್ತಿದ್ದಾರೆ. ಮಾರ್ಚ್ 15ರೊಳಗೆ ಸಂಬಳ ಪಾವತಿಸದಿದ್ದರೆ ಬೀದಿಗಿಳಿದು ಹೋರಾಟ ಮಾಡಲು ಹೊರಟಿದ್ದಾರೆ ಎಂದಿದ್ದಾರೆ. ಸ್ವ ಘೋಷಿತ ಆರ್ಥಿಕ ತಜ್ಞ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದಿಕ್ಕೆಟ್ಟ ನೀತಿಗಳು ಸರ್ಕಾರಿ ನೌಕರರನ್ನು ಬೀದಿಗೆ ತಂದಿವೆ. ದಿವಾಳಿ ಸರ್ಕಾರ ತೊಲಗುವವರೆಗೂ ಕನ್ನಡಿಗರಿಗೆ ನೆಮ್ಮದಿ ಇಲ್ಲ ಎಂದು ಅಶೋಕ ದೂರಿದ್ದಾರೆ.

ನಾನು ಕೂಡ ಸಚಿವ ಸ್ಥಾನದ ಆಕಾಂಕ್ಷಿ: ಸಲೀಮ್ ಅಹ್ಮದ್

ವಿಜಯಪುರ: ಮೇ, ಜೂನ್‌ನಲ್ಲಿ ಸಚಿವ ಸಂಪುಟ ವಿಸ್ತರಣೆಯಾಗಲಿದ್ದು, ನಾನು ಕೂಡ ಸಚಿವಸ್ಥಾನದ ಆಕಾಂಕ್ಷಿಯಾಗಿರುವೆ ಎಂದು ವಿಧಾನ ಪರಿಷತ್ ಸದಸ್ಯ ಸಲೀಮ್ ಅಹ್ಮದ್ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ, ಜೂನನಲ್ಲಿ ಸಂಪುಟ ವಿಸ್ತರಣೆಯಗಲಿದ್ದು, ಶೇ.50ರಷ್ಟು ಹೊಸ ಶಾಸಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ಚರ್ಚೆಯಾಗಿದೆ. ಹಾಲಿ ಇರುವ ಶೇ.50ರಷ್ಟು ಸಚಿವರು ತಮ್ಮ ಸ್ಥಾನವನ್ನು ತ್ಯಜಿಸಿದ ನಂತರ ಮುಂದಿನ ಚುನಾವಣೆಗೆ ಕೆಲಸ ಮಾಡ ಬೇಕು ಎನ್ನುವ ತೀರ್ಮಾನವಾಗಿದೆ ಎಂದರು. ಪಕ್ಷದಲ್ಲಿ ನಾಯಕತ್ವ ಗೊಂದಲ ಇಲ್ಲ, ತಾವು ಡಿ.ಕೆ.ಶಿವಕುಮಾರ ಹಾಲು, ಜೇನು ಎಂದು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಹೇಳಿದ್ದಾರೆ. ಹಾಗಾಗಿ ಯಾವುದೇ ಗೊಂದಲ ಬೇಡ ಎಂದರು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು 2 ವರ್ಷ 9 ತಿಂಗಳು ಕಳೆದಿವೆ. ನಾವು ನುಡಿದಂತೆ ನಡೆದಿದ್ದೇವೆ. ನಮ್ಮದು ನುಡಿದಂತೆ ನಡೆಯುವ ಸರ್ಕಾರ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 4 ಲಕ್ಷ ಕೋಟಿಗೂ ಅಧಿಕ ಮೊತ್ತದ ಬಜೆಟ್ ಮಂಡಿಸಿದ್ದು, ಎಲ್ಲ ಜನರನ್ನು, ಎಲ್ಲ ಸಮುದಾಯಗಳನ್ನು ಒಟ್ಟಾಗಿ ತೆಗೆದುಕೊಂಡು ಹೋಗುತ್ತಿದ್ದಾರೆ. ಸಿದ್ದರಾಮಯ್ಯ ಅವರ 17ನೇ ಬಜೆಟ್ ಇದಾಗಿದ್ದು, ಜನಪ್ರಿಯ ಬಜೆಟ್ ಮೂಲಕ ಗ್ಯಾರಂಟಿ ಯೋಜನೆ ಸೇರಿದಂತೆ ಇನ್ನಿತರೆ ಅಭಿವೃದ್ಧಿ ಕಾರ್ಯಕ್ರಮಗಳಿಗೂ ವೇಗ ನೀಡಿದ್ದಾರೆ ಎಂದರು. ಮೇನಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ನಡೆಯುವ ಸಾಧ್ಯತೆ ಇದೆ. ಹಾಗಾಗಿ ಆ ಚುನಾವಣೆಯಲ್ಲಿ ನಮ್ಮ ಸರ್ಕಾರದ ಜನಪರ ಯೋಜನೆಗಳು, ಸರ್ಕಾರದ ಸಾಧನೆಗಳು ನಮ್ಮ ಕೈ ಹಿಡಿಯಲಿವೆ ಎಂದರು. ಎಸ್ಸಿ, ಎಸ್ಟಿ ಹಣವನ್ನು ದುರ್ಬಳಕೆ ಮಾಡಿಲ್ಲ ಎಂದರು.

ರಾಮ ಬಾಣ



ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಆಗ್ರಹ | ಆಯ್ಕೆ ಸಮಿತಿಗೆ ಪತ್ರ

ವೈರಮುತ್ತು ಜ್ಞಾನಪೀಠ ಪ್ರಶಸ್ತಿ ಮರುಪರಿಶೀಲಿಸಿ

ಬೆಂಗಳೂರು: ವೈರಮುತ್ತು ಅವರಿಗೆ ಘೋಷಣೆಯಾಗಿರುವ ಜ್ಞಾನಪೀಠ ಪ್ರಶಸ್ತಿಯನ್ನು ಮರುಪರಿಶೀಲಿಸುವಂತೆ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಆಗ್ರಹಿಸಿದೆ.

ಈ ಬಗ್ಗೆ ಜ್ಞಾನಪೀಠ ಪ್ರಶಸ್ತಿಯ ಆಯ್ಕೆ ಸಮಿತಿಗೆ ಪತ್ರ ಬರೆದ ಪರಿಷತ್‌ನ ಅಧ್ಯಕ್ಷ ಎಸ್.ಜಿ.ಕೋಟಿ, ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯುನ್ನತವಾದ ಜ್ಞಾನಪೀಠ ಪ್ರಶಸ್ತಿಗೆ ಅದರದ್ದೇ ಆದ ಪರಂಪರೆ, ಘನತೆ ಮತ್ತು ಪಾವಿತ್ರ್ಯತೆ ಇದೆ. ಈ ಪ್ರಶಸ್ತಿಯು ಕೇವಲ ಒಬ್ಬ ವ್ಯಕ್ತಿಯ ಸಾಹಿತ್ಯಕ ಸಾಧನೆಯನ್ನು ಮಾತ್ರವಲ್ಲದೆ, ಲೇಖಕರ ನೈತಿಕತೆ ಮತ್ತು ಉನ್ನತ ಸಾಮಾಜಿಕ ಮೌಲ್ಯಗಳನ್ನೂ ಪ್ರತಿನಿಧಿಸುತ್ತದೆ ಎಂದು ನಾವು ದೃಢವಾಗಿ ನಂಬಿದ್ದೇವೆ ಎಂದು ತಿಳಿಸಿದ್ದಾರೆ.

ಇತ್ತೀಚೆಗೆ ಕವಿ ವೈರಮುತ್ತು ಅವರಿಗೆ ಈ ಸಾಲಿನ ಜ್ಞಾನಪೀಠ ಪ್ರಶಸ್ತಿಯನ್ನು ಘೋಷಿಸಿರುವುದು ಸಮಾಜದಲ್ಲಿ ತೀವ್ರ ಕಳವಳವನ್ನು ಉಂಟುಮಾಡಿದೆ ಹಾಗೂ ಅನೇಕರು ತಮ್ಮ ಪ್ರತಿಭಟನೆಯನ್ನು ವೈಯಕ್ತಿಕ ನೆಲೆಯಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ಜಾಗತಿಕ ಮಟ್ಟದಲ್ಲಿ ನಡೆದ ಮೀಟೂ ಚಳವಳಿಯ ಸಂದರ್ಭದಲ್ಲಿ ಅವರ ಮೇಲೆ ಕೇಳಿಬಂದಿರುವ ಗಂಭೀರ ಸ್ವರೂಪದ ಲೈಂಗಿಕ ಕಿರುಕುಳದ ಆರೋಪಗಳು ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ದೊಡ್ಡ ಚರ್ಚೆಗೆ ಗ್ರಾಸವಾಗಿವೆ. ಕೇವಲ ಒಬ್ಬಿಬ್ಬರಲ್ಲ, ಬದಲಾಗಿ ಅನೇಕ ಮಹಿಳಾ ಕಲಾವಿದರು, ಗಾಯಕಿಯರು ಮತ್ತು ಬರಹಗಾರ್ತಿಯರು ಅವರ ವಿರುದ್ಧ ಅತ್ಯಂತ ನೋವಿನಿಂದ ತಮ್ಮ ಕಹಿ ಅನುಭವಗಳನ್ನು ಸಾರ್ವಜನಿಕ ವೇದಿಕೆಗಳಲ್ಲಿ ಹಂಚಿಕೊಂಡಿದ್ದಾರೆ.

> ಜ್ಞಾನಪೀಠ ಪ್ರಶಸ್ತಿ ಲೇಖಕರ ನೈತಿಕತೆ ಮತ್ತು ಉನ್ನತ ಸಾಮಾಜಿಕ ಮೌಲ್ಯಗಳನ್ನೂ ಪ್ರತಿನಿಧಿಸುತ್ತದೆ

ಇಂದಿಗೂ ಈ ಗಂಭೀರ ದೂರುಗಳ ಬಗ್ಗೆ ಸಮರ್ಪಕವಾದ ತನಿಖೆ ನಡೆದು, ಅವರ ಮೇಲಿನ ಕಳಂಕ ನಿವಾರಣೆಯಾಗಿಲ್ಲ ಎಂಬುದು ಗಮನಾರ್ಹ ಸಂಗತಿಯಾಗಿದೆ.

ಇದೇ ಹಿನ್ನೆಲೆಯಲ್ಲಿ, ಹಿಂದೆ ಕೇರಳದ ಒಎನ್‌ವಿ ಸಾಹಿತ್ಯ ಪುರಸ್ಕಾರವನ್ನು ಅವರಿಗೆ ನೀಡುವ ನಿರ್ಧಾರವನ್ನು ಸಾರ್ವಜನಿಕರ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರರ ತೀವ್ರ ವಿರೋಧದ ಕಾರಣದಿಂದಾಗಿ ಮರುಪರಿಶೀಲಿಸಲಾಯಿತು ಮತ್ತು ಅಂತಿಮವಾಗಿ ಆ ಪ್ರಶಸ್ತಿಯು ಹಿಂಪಡೆಯಲ್ಪಟ್ಟಿದೆ.

ಹಾಗೇ ಮಹಿಳೆಯರ ಘನತೆಗೆ ಕುಂದು ತಂದಿರುವ ಇಂತಹ ಗಂಭೀರ ಆರೋಪಗಳನ್ನು ಎದುರಿಸುತ್ತಿರುವ ಮತ್ತು ನೈತಿಕವಾಗಿ ಪ್ರಶ್ನೆಗೀಡಾಗಿರುವ ವ್ಯಕ್ತಿಗೆ ದೇಶದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿಯನ್ನು ನೀಡುವುದು, ಈ ಪುರಸ್ಕಾರದ ಘನತೆಗೆ ಚ್ಯುತಿ ತರಬಹುದು ಎಂಬುದು ನಮ್ಮ ಆತಂಕವಾಗಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಜ್ಞಾನಪೀಠದಂತಹ ಗೌರವಾನ್ವಿತ ಪ್ರಶಸ್ತಿಯು ಯಾವುದೇ ರೀತಿಯ ವಿವಾದಗಳಿಗೆ ಮತ್ತು ಕಳಂಕಗಳಿಗೆ ಹೊರತಾಗಿರಬೇಕು ಎಂಬುದು ನಮ್ಮ ಕಳಕಳಿಯಾಗಿದೆ. ಮಹಿಳೆಯರ ಘನತೆ ಮತ್ತು ರಾಷ್ಟ್ರೀಯ ಹಿತಾಸಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಅತ್ಯಂತ ಸಹಾನುಭೂತಿಯಿಂದ ಮತ್ತು ಗಂಭೀರವಾಗಿ ಪರಿಗಣಿಸಿ, ವೈರಮುತ್ತು ಅವರಿಗೆ ಘೋಷಿಸಿರುವ ಪ್ರಶಸ್ತಿಯನ್ನು ಮರುಪರಿಶೀಲಿಸುವಂತೆ ಪತ್ರದಲ್ಲಿ ವಿನಂತಿಸಿದ್ದಾರೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕನೇಜಿ

ಜಾತಿ, ಮತ, ಪಂಥಗಳು ಬಿಡಿ ಬಿಡಿ ಹೂವುಗಳು ಇದ್ದಂತೆ.ಇವುಗಳನ್ನು ಸಾಮರಸ್ಯ ಎಂಬ ದಾರದಲ್ಲಿ ಪೋಣಿಸುವುದೇ ಹಿಂದುತ್ವ – ರಘುನಂದನ

-ಜಾತಿ, ಮತ, ಪಂಥಗಳನ್ನು ಅಳಿಸಿ ಹಿಂದುತ್ವವನ್ನು ದೂಷಿಸಿ ಹೊಸ ಪಂಥವನ್ನು ನಿರ್ಮಿಸಿ ಧರ್ಮವೆಂಬ ಆಕರ್ಷಕ ಬೋರ್ಡನ್ನು ಹಾಕಿಕೊಂಡು ಮಾಡಬಾರದ್ದನ್ನು ಮಾಡುವುದು ಮೂಲಭೂತವಾದ!

ದಿನ ಭವಿಷ್ಯ

ಮೇಷ ಗ್ರಹಗತಿ ಪೂರಕ. ವೃತ್ತಿಯಲ್ಲಿ ನಿಮ್ಮ ಸಾಮರ್ಥ್ಯ ತೋರುವಿರಿ. ವಿವಾಹಕಾಂಕ್ಷಿಗಳಿಗೆ ಸಂಗಾತಿ ಲಭ್ಯ. ಹಣದ ಸಮಸ್ಯೆ ಪರಿಹಾರ.

ವೃಷಭ ನಿಮ್ಮ ಕೆಲಸ ಸಾಧಿಸಲು ಹೆಚ್ಚಿನ ಪ್ರಯತ್ನ ಬೇಕು. ಆರ್ಥಿಕ ಉನ್ನತಿಯ ದಾರಿ ತೋರಲಿದೆ. ಪ್ರೀತಿಯಲ್ಲಿ ಹಿನ್ನಡೆ ಉಂಟಾದೀತು.

ಮಿಥುನ ಇಂದು ದುಡುಕು ಬಿಟ್ಟು ತಾಳ್ಮೆಯಿಂದ ವ್ಯವಹರಿಸಿ. ಕಾರ್ಯ ಸುಲಲಿತ. ಮಹತ್ವದ ನಿರ್ಣಯ ಇಂದು ತಾಳಬೇಡಿ. ಸ್ವಲ್ಪ ಕಾಯಿರಿ.

ಕಟಕ ವೃತ್ತಿಯಲ್ಲಿ ಯಶ. ಎಲ್ಲರು ಮೆಚ್ಚುವ ನಿರ್ವಹಣೆ. ಕುಟುಂಬದ ಹಿತಾಸಕ್ತಿಗೆ ಹೆಚ್ಚು ಗಮನ ಕೊಡಿ. ತುಸು ಬೇಸರದ ಭಾವ ಆವರಿಸಲಿದೆ.

ಸಿಂಹ ಈ ದಿನ ಉತ್ತಮ ಫಲ ತರಲಿದೆ. ಮಹತ್ವದ ನಿರ್ಧಾರ ಫಲದಾಯಕ. ಏಕಾಂಗಿಗಳಿಗೆ ಪ್ರೀತಿಯಲ್ಲಿ ಯಶಸ್ಸು. ಉದ್ಯೋಗ ಅವಕಾಶ ಉಜ್ವಲ.

ಕನ್ಯಾ ವಿಶ್ವಾಸ ವೃದ್ಧಿಯ ದಿನ. ಕಠಿಣ ಕಾರ್ಯವೂ ಇಂದು ಸುಗಮವಾಗಿ ಸಾಗಲಿದೆ. ಹಣ ಗಳಿಕೆ. ಸಾಂಸಾರಿಕ ಬಿಕ್ಕಟ್ಟು ಪರಿಹಾರ ಕಾಣಲಿದೆ.

ತುಲಾ ಕೈಗೆ ಎಟುಕದ ಆಕಾಂಕ್ಷೆ ಬಿಡಿ. ನಿಮ್ಮ ಮಿತಿಯಲ್ಲೆ ವ್ಯವಹರಿಸಿ. ಎಲ್ಲರ ಜತೆ ಆತ್ಮೀಯವಾಗಿ ವರ್ತಿಸಿ. ಕೋಪತಾಪ ವಿರಸ ಸೃಷ್ಟಿಸಬಹುದು.

ವೃಶ್ಚಿಕ ಇಂದು ಕಠಿಣ ಪರಿಸ್ಥಿತಿ ಎದುರಿಸಿದರೂ ಆಪ್ತರಿಂದ ಬೆಂಬಲ. ಹಣ ಗಳಿಕೆ ಹೆಚ್ಚಳ. ಹಿರಿಯರಿಗೆ ಬೆನ್ನು ನೋವಿನಿಂದ ನಿರಾಳತೆ.

ಧನು ಅದೃಷ್ಟದ ದಿನ. ನೀವು ಬಯಸಿದ ಪ್ರಗತಿ ಸಾಧಿತ. ಮನೆಯಲ್ಲಿ ಹೆಚ್ಚು ಹೊಣೆಗಾರಿಕೆ. ದೈಹಿಕ ಬಸವಳಿಕೆ ಕಾಡಬಹುದು. ವಿಶ್ರಾಂತಿಗೆ ಗಮನಕೊಡಿ.

ಮಕರ ಕೌಟುಂಬಿಕ ಸಮ್ಮಿಲನ. ವ್ಯವಹಾರದಲ್ಲಿ ಯಶಸ್ಸು. ಇತರರ ಚುಚ್ಚುಮಾತಿಗೆ ತಲೆ ಕೆಡಿಸಿಕೊಳ್ಳದಿರಿ. ಆರ್ಥಿಕ ಒತ್ತಡ ಅಧಿಕ.

ಕುಂಭ ವೃತ್ತಿ ಸಂಬಂಧ ದೂರ ಪ್ರಯಾಣ ಸಾಧ್ಯತೆ. ಕಾರ್ಯ ಸಫಲ. ಸಾಂಸಾರಿಕ ಒತ್ತಡ ಹೆಚ್ಚು. ಧಾರ್ಮಿಕ ಚಟುವಟಿಕೆಯಿಂದ ಮನಸ್ಸಿಗೆ ನಿರಾಳತೆ.

ಮೀನ ಬಿಕ್ಕಟ್ಟು ಉಂಟಾದರೆ ಕ್ಷಿಪ್ರವಾಗಿ ಕಾರ್ಯಾಚರಿಸಿ. ಗುರಿ ಸಾಧನೆ ನಿಮಗೆ ಕಷ್ಟವಲ್ಲ. ಆದರೆ ಹಲವರ ವಿರೋಧ ಕಟ್ಟಿಕೊಳ್ಳುವಿರಿ. ತುಸು ಆರ್ಥಿಕ ನಷ್ಟ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ 5,0,4,1

ದಾವಣಗೆರೆ ದಕ್ಷಿಣ, ಬಾಗಲಕೋಟೆ ವಿಧಾನಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ಘೋಷಿಸಿದ ಆಯೋಗ

ಏಪ್ರಿಲ್ 9ಕ್ಕೆ ಮತದಾನ, ಮೇ 4 ಫಲಿತಾಂಶ



ಬೆಂಗಳೂರು: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭೆ ಕ್ಷೇತ್ರಗಳ ಉಪ ಚುನಾವಣೆಗೆ ವೇಳಾಪಟ್ಟಿಯನ್ನು ಕೇಂದ್ರ ಚುನಾವಣಾ ಆಯೋಗವು ಪ್ರಕಟಿಸಿದೆ. ಈ ಜಿಲ್ಲೆಗಳಲ್ಲಿ ಭಾನುವಾರದಿಂದಲೇ ಮಾದರಿ ನೀತಿ ಸಂಹಿತೆಯು ಜಾರಿಗೆ ಬಂದಿದೆ.

ಶಾಮನೂರು ಶಿವಶಂಕರಪ್ಪ ಮತ್ತು ಎಚ್.ವೈ.ಮೇಟಿ ಅವರ ನಿಧನದಿಂದ ತೆರವಾಗಿರುವ ಎರಡು ಕ್ಷೇತ್ರಗಳಲ್ಲಿ ಸೋಮವಾರ ಅಧಿಸೂಚನೆ ಪ್ರಕಟಣೆಗೊಳ್ಳಲಿದೆ. ಮಾ.23 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಏ.9ರಂದು ಮತದಾನ ನಡೆಯಲಿದ್ದು, ಮೇ 4ರಂದು ಫಲಿತಾಂಶ ಪ್ರಕಟವಾಗಲಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಒಟ್ಟು 2,31,683 ಮತದಾರರಿದ್ದಾರೆ. ಇವರಲ್ಲಿ 1,13,654 ಪುರುಷ ಹಾಗೂ 1,17,986 ಮಹಿಳಾ ಮತದಾರರಿದ್ದಾರೆ. ಯುವ ಮತದಾರರು 2,774 ಇದ್ದು, ಇತರರು 43 ಹಾಗೂ 44 ಮಂದಿ ನೂರು ವರ್ಷ ದಾಟಿದ ಹಿರಿಯರಿದ್ದಾರೆ.

ಬಾಗಲಕೋಟೆ ಕ್ಷೇತ್ರದಲ್ಲಿ ಒಟ್ಟು 2,59,260 ಮತದಾರರಿದ್ದಾರೆ. ಇವರಲ್ಲಿ 1,26,761 ಪುರುಷ ಹಾಗೂ 1,32,476 ಮಹಿಳೆಯರಿದ್ದಾರೆ. ಯುವ ಮತದಾರರು 4,188, ಇತರರು 23 ಹಾಗೂ 38 ಮಂದಿ ನೂರು ವರ್ಷ ದಾಟಿದ ಹಿರಿಯ ಮತದಾರರಿದ್ದಾರೆ. ಎರಡೂ ಕ್ಷೇತ್ರಗಳಲ್ಲಿ ಒಟ್ಟು 5,151 ವಿಶಿಷ್ಟಚೇತನ ಮತದಾರರನ್ನು ಗುರುತಿಸಲಾಗಿದೆ.

603 ಮತದಾನ ಕೇಂದ್ರಗಳು: ಬಾಗಲಕೋಟೆಯಲ್ಲಿ 319 ಮತ್ತು ದಾವಣಗೆರೆ ದಕ್ಷಿಣದಲ್ಲಿ 284 ಸೇರಿದಂತೆ ಒಟ್ಟು 603 ಮತದಾನ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಎಲ್ಲಾ ಕೇಂದ್ರಗಳಲ್ಲಿ ಎಲೆಕ್ಟ್ರಾನಿಕ್ ಮತಯಂತ್ರ (ಇವಿಎಂ) ಮತ್ತು ವಿವಿ ಪ್ಯಾಟ್ ಬಳಸಲಾಗುವುದು. ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ (ಸುಮಾರು ಶೇ.160 ರಿಂದ 200 ರಷ್ಟು) ಯಂತ್ರಗಳನ್ನು ಸಿದ್ಧವಾಗಿಟ್ಟುಕೊಳ್ಳಲಾಗಿದೆ ಆಯೋಗ ತಿಳಿಸಿದೆ.

ಉಭಯ ಪಕ್ಷಗಳಲ್ಲಿ ಹೆಚ್ಚಿದ ಟಿಕೆಟ್ ಕುತೂಹಲ

ಬಾಗಲಕೋಟೆ: ಬಾಗಲಕೋಟೆಯ ಉಪಚುನಾವಣೆಗೆ ಚುನಾವಣಾ ಆಯೋಗ ಮುಹೂರ್ತ ನಿಗದಿ ಮಾಡಿದ್ದು ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷದಲ್ಲಿ ಟಿಕೆಟ್ ಯಾರಿಗೆ ಸಿಗುತ್ತದೆ ಎಂಬುದು ಮಾತ್ರ ಕುತೂಹಲ ಕೆರಳಿಸಿದೆ.

ಕಾಂಗ್ರೆಸ್ ಪಕ್ಷದ ದಿ.ಎಚ್.ವೈ.ಮೇಟಿಯವರ ನಿಧನದ ನಂತರ ಅವರ ಸ್ಥಾನಕ್ಕೆ ಈಗ ಉಪಚುನಾವಣೆ ನಡೆಯಲಿದ್ದು ಬಾಗಲಕೋಟೆ ಮತಕ್ಷೇತ್ರದಲ್ಲಿ ಎಚ್.ವೈ.ಮೇಟಿಯವರ ಕುಟುಂಬಕ್ಕೆ ಟಿಕೆಟ್ ಸಿಗುವ ಸಾಧ್ಯತೆ ಹೆಚ್ಚಾಗಿದ್ದರೆ ಬಾಗಲಕೋಟೆಯಲ್ಲಿ ವೀರಣ್ಣ ಚರಂತಿಮಠವರಿಗೆ ಬಿಜೆಪಿಯಿಂದ ಟಿಕೆಟ್ ಸಿಗುವ ಸಾಧ್ಯತೆ ಹೆಚ್ಚಿದೆ. ಇನ್ನೂ ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಅವರು ಕೂಡ ಆಕಾಂಕ್ಷಿಯಾಗಿದ್ದು ಪಕ್ಷದ ಹೈಕಮಾಂಡ್ ಕೈಗೊಳ್ಳುವ ನಿರ್ಧಾರಕ್ಕೆ ಎಲ್ಲ ನಾಯಕರು ಬದ್ಧರಾಗಿದ್ದಾರೆ.

ಸಿಎಂ ಬಂದರೂ ಘೋಷಣೆಯಾಗದ ಟಿಕೆಟ್: ನವನಗರದಲ್ಲಿ ಮೆಡಿಕಲ್ ಕಾಲೇಜ್ ನಿರ್ಮಾಣಕ್ಕೆ ಶಂಕುಸ್ಥಾಪನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಂದ ಸಂದರ್ಭದಲ್ಲಿ ವೇದಿಕೆಯಲ್ಲಿ ಭಾಷಣ ಮಾಡುವ ಸಂದರ್ಭದಲ್ಲಿಯೂ ಕೂಡ ಯಾರಿಗೆ ಟಿಕೆಟ್ ಕೊಡುತ್ತೇವೆ ಎಂಬುದು ಹೇಳಲಿಲ್ಲ. ಇನ್ನೂ ಡಿ.ಕೆ.ಶಿವುಕುಮಾರ ಮೇಟಿಯವರು ಎಷ್ಟು ಮತಗಳ ಅಂತರದಿಂದ ಗೆದ್ದಿದ್ದರೂ ಡಬಲ್ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಬೇಕು ಎಂದು ಹೇಳಿದನ್ನು ಬಿಟ್ಟರೆ ಯಾರಿಗೆ ಟಿಕೆಟ್ ಸಿಗಲಿದೆ ಎಂಬುದು ಮಾತ್ರ ಸುಳಿವು ನೀಡಲಿಲ್ಲ.

ಚುನಾವಣಾ ಆಯೋಗವು ಚುನಾವಣಾ ಅಧಿಸೂಚನೆ ಹೊರಡಿಸಿ ಏ.9ಕ್ಕೆ ಮತದಾನ ನಡೆಯಲಿದ್ದು, ಮಾ.23ರಂದು ನಾಮಪತ್ರ ಸಲ್ಲಿಸಲು ಕೊನೆಯ ದಿನ ಪ್ರಕಟ ಮಾಡಿದ್ದರಿಂದ ಆಕಾಂಕ್ಷಿಗಳಲ್ಲಿ ಮಾತ್ರ ಕುತೂಹಲ ಮೂಡಿಸಿದೆ. ಚುನಾವಣಾ ಅಭ್ಯರ್ಥಿಗಳಿಗೆ ಸದ್ಯಕ್ಕೆ ಸಮಯಾವಕಾಶ ಕಡಿಮೆ ಇದ್ದಿದ್ದರಿಂದ ಎಷ್ಟು ಬೇಗ ಟಿಕೆಟ್ ಘೋಷಣೆ ಮಾಡುತ್ತಾರೆ, ಅಷ್ಟು ಒಳ್ಳೆಯದಾಗಲಿದೆ ಎಂಬುದು ಆಕಾಂಕ್ಷಿಗಳ ಮನದಲ್ಲಿ ಮೂಡಿದೆ.

ಬಾಗಲಕೋಟೆ ಮತಕ್ಷೇತ್ರದಲ್ಲಿ 143 ನಗರ, 176 ಗ್ರಾಮೀಣ ಪ್ರದೇಶದಲ್ಲಿ ಬೂತ್‌ಗಳಿದ್ದು 2,59,260 ಮತದಾರರು ಇದ್ದಾರೆ. ಈ ಬಾರಿ ನಡೆಯುವ ವಿಧಾನಸಭೆಯ ಉಪಚುನಾವಣೆಯ ಕಾವು ಮಾತ್ರ ಬಾಗಲಕೋಟೆಯಲ್ಲಿ ಹೆಚ್ಚಾಗಿದೆ ಆದರೆ ಅಭ್ಯರ್ಥಿಗಳ ಎರಡೂ ಪಕ್ಷದಲ್ಲಿ ಘೋಷಣೆ ಮಾತ್ರ ಬಾಕಿ ಉಳಿದಿದೆ.

ಪಕ್ಷ, ಟಿಕೆಟ್ ಆಕಾಂಕ್ಷಿಗಳಲ್ಲಿ ಸಂಚಲನ

ದಾವಣಗೆರೆ: ಸಾಕಷ್ಟು ಕುತೂಹಲ ಕೆರಳಿಸಿರುವ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗೆ ಮುಹೂರ್ತ ಫಿಕ್ಸ್ ಆಗಿದ್ದು, ಮಿನಿ ದಂಗಲ್ ದಿನಾಂಕ ಘೋಷಣೆಯಾಗಿರುವುದು ರಾಜಕೀಯ ಪಕ್ಷ ಹಾಗೂ ಟಿಕೆಟ್ ಆಕಾಂಕ್ಷಿಗಳಲ್ಲಿ ಸಂಚಲನ ಮೂಡಿಸಿದೆ.

ದಾವಣಗೆರೆ ವಿಧಾನಸಭಾ ಕ್ಷೇತ್ರದಿಂದ ಪ್ರತ್ಯೇಕಗೊಂಡು ಅಸ್ತಿತ್ವಕ್ಕೆ ಬಂದ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮುಸ್ಲಿಮರು ಸೇರಿದಂತೆ ಅಹಿಂದ ಮತದಾರರ ಸಂಖ್ಯೆ ನಿರ್ಣಾಯಕವಾಗಿದೆ. ಕ್ಷೇತ್ರದಲ್ಲಿ ನಿರಂತರವಾಗಿ ಕಾಂಗ್ರೆಸ್ ಅಧಿಪತ್ಯ ಸಾಧಿಸುತ್ತಿದ್ದರೂ ಬಿಜೆಪಿ ಕೂಡ ವಿರೋಚಿತ ಸ್ಪರ್ಧೆ ನೀಡುತ್ತಾ ಗೆಲುವಿಗಾಗಿ ಕಸರತ್ತು ಮಾಡುತ್ತಲೇ ಬಂದಿದೆ. ಹೀಗಾಗಿ ಪ್ರಸ್ತುತ ಉಪಚುನಾವಣೆಯು ಉಭಯ ಪಕ್ಷಗಳ ಪ್ರತಿಷ್ಠೆಯ ಕಣವಾಗಿದೆ. ಕ್ಷೇತ್ರದಲ್ಲಿ ಪಾರುಪತ್ಯ ಮುಂದುವರೆಸಲು ಕಾಂಗ್ರೆಸ್ ಹವಣಿಸುತ್ತಿದ್ದರೆ ಈ ಬಾರಿ ಶತಾಯಗತಾಯ ಗೆಲುವು ಸಾಧಿಸಲೇಬೇಕೆಂಬ ಇರಾದೆ ಬಿಜೆಪಿ ಪಕ್ಷದ್ದಾಗಿದೆ. ಕ್ಷೇತ್ರದ ಹಿಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆಯೇ ನೇರ ಹಣಾಹಣಿ ನಡೆದಿದೆ. ಈ ಬಾರಿ ಕೂಡ ಅದೇ ರೀತಿಯ ಜಿದ್ದಾಜಿದ್ದಿಯ ಹೋರಾಟ ಜರುಗುವ ಎಲ್ಲ ಲಕ್ಷಣಗಳು ಗೋಚರಿಸುತ್ತಿವೆ. ಉಭಯ ಪಕ್ಷಗಳಲ್ಲೂ ಅಧಿಕೃತ ಅಭ್ಯರ್ಥಿ ಹೆಸರು ಅಂತಿಮವಾಗಿಲ್ಲ, ಆದರೆ ಎರಡೂ ಪಕ್ಷಗಳಲ್ಲಿ ತಲಾ ಅರ್ಧ ಡಜನ್ ಆಕಾಂಕ್ಷಿಗಳು ಮಿನಿ ಸಮರದಲ್ಲಿ ಪಕ್ಷದ ಟಿಕೆಟ್ ಗಿಟ್ಟಿಸಲು ತಮ್ಮದೇ ಪ್ರಯತ್ನದಲ್ಲಿ ತೊಡಗಿದ್ದಾರೆ. ಚುನಾವಣೆ ದಿನಾಂಕ ಘೋಷಣೆವರೆಗೆ ಕಾದು ನೋಡುವ ತಂತ್ರ ಅನುಸರಿಸಿಕೊಂಡು ಬಂದಿದ್ದ ಪಕ್ಷದ ವರಿಷ್ಠ ನಾಯಕರು ಕೂಡ ಇದೀಗ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಡ್ಯಾಮೇಜ್ ಕಂಟ್ರೋಲ್ ಮಾಡುವ ಜೊತೆಗೆ ಪಕ್ಷದ ಗೆಲುವಿಗಾಗಿ ಗಟ್ಟಿ ನಿರ್ಧಾರ ಕೈಗೊಳ್ಳುವ ಅನಿವಾರ್ಯತೆಗೆ ಸಿಲುಕಿದ್ದಾರೆ.



ಮತಯುದ್ಧಕ್ಕೆ ವೇದಿಕೆ

ಪುಟ 1ರಿಂದ ಶೇ.100 ವೆಬ್‌ಕಾಸ್ಟಿಂಗ್ ವ್ಯವಸ್ಥೆ: ಚುನಾವಣೆಯಲ್ಲಿ ಪಾರದರ್ಶಕತೆ ಹಾಗೂ ಭದ್ರತೆಯನ್ನು ಹೆಚ್ಚಿಸಲು ಚುನಾವಣಾ ಆಯೋಗ ಹಲವು ಕ್ರಮಗಳನ್ನು ಕೈಗೊಂಡಿದೆ. ಎಲ್ಲಾ ಮತಗಟ್ಟೆಗಳಲ್ಲಿ ಮೊದಲ ಬಾರಿಗೆ ಶೇ.100ರಷ್ಟು ವೆಬ್‌ಕಾಸ್ಟಿಂಗ್ ವ್ಯವಸ್ಥೆ ಜಾರಿಗೊಳಿಸಲಾಗುತ್ತದೆ. ಇದರಿಂದ ಮತದಾನದ ಪ್ರಕ್ರಿಯೆಯನ್ನು ನೇರವಾಗಿ ಮೇಲ್ವಿಚಾರಣೆ ಮಾಡಬಹುದು. ಜತೆಗೆ ಮತದಾರರಿಗೆ ಕುಡಿಯುವ ನೀರು, ಶೌಚಾಲಯ, ವೃದ್ಧರು ಮತ್ತು ವಿಶಿಷ್ಟಚೇತನರಿಗೆ ರ‍್ಯಾಂಪ್ ಸೇರಿದಂತೆ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

ನೀತಿಸಂಹಿತೆ ಜಾರಿ

ಚುನಾವಣಾ ವೇಳಾಪಟ್ಟಿ ಪ್ರಕಟವಾದ ತಕ್ಷಣದಿಂದಲೇ ಸಂಬಂಧಿಸಿದ ರಾಜ್ಯಗಳಲ್ಲಿ ಮಾದರಿ ನೀತಿ ಸಂಹಿತೆ ಜಾರಿಗೆ ಬಂದಿದೆ. ಸರ್ಕಾರಗಳು ಯಾವುದೇ ಹೊಸ ಘೋಷಣೆಗಳು ಅಥವಾ ಯೋಜನೆಗಳನ್ನು ಪ್ರಕಟಿಸುವಲ್ಲಿ ಚುನಾವಣಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ. ಚುನಾವಣೆಯ ಸಮಯದಲ್ಲಿ ಹಿಂಸಾಚಾರ, ಪ್ರಚೋದನೆ ಅಥವಾ ಅಕ್ರಮಗಳನ್ನು ತಡೆಯಲು ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಚುನಾವಣಾ ಆಯೋಗ ಎಚ್ಚರಿಸಿದೆ. ಯಾವುದೇ ರೀತಿಯ ನಿಯಮ ಉಲ್ಲಂಘನೆ ಕಂಡುಬಂದರೆ ಕಾನೂನುಬದ್ಧವಾಗಿ ತಕ್ಷಣ ಕ್ರಮ ಕೈಗೊಳ್ಳಲಾಗುವುದು ಎಂದು ಆಯುಕ್ತರು ಸ್ಪಷ್ಟಪಡಿಸಿದರು.

20 ದೇಶಗಳ ಚುನಾವಣಾ ವೀಕ್ಷಕರು

ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಭಾರತದ ಚುನಾವಣಾ ವ್ಯವಸ್ಥೆ ಗಮನ ಸೆಳೆಯುತ್ತಿರುವ ಹಿನ್ನೆಲೆಯಲ್ಲಿ, ಸುಮಾರು 20 ದೇಶಗಳ ಚುನಾವಣಾ ವೀಕ್ಷಕರು ಈ ಪ್ರಕ್ರಿಯೆ ವೀಕ್ಷಿಸಲು ಭಾರತಕ್ಕೆ ಭೇಟಿ ನೀಡಲಿದ್ದಾರೆ ಎಂದು ಆಯೋಗ ತಿಳಿಸಿದೆ. ಇದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಮತ್ತಷ್ಟು ಬಲಪಡಿಸುವ ಕ್ರಮವೆಂದು ಅಧಿಕಾರಿಗಳು ಹೇಳಿದ್ದಾರೆ. ಒಟ್ಟಾರೆ, ಐದು ವಿಧಾನಸಭಾ ಚುನಾವಣೆಗಳು ದೇಶದ ರಾಜಕೀಯ ಭವಿಷ್ಯಕ್ಕೆ ಮಹತ್ವದ್ದಾಗಿದ್ದು, ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗೆ ಚುನಾವಣಾ ಆಯೋಗ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಗಲ್ಫ್‌ಗೆ ಇರಾನ್ ದಾಳಿ ವಿಸ್ತರಣೆ!

ಪುಟ 1ರಿಂದ ಇಸ್ರೇಲ್ ರಕ್ಷಣಾ ಸೇವೆ ಮಾಗೆನ್ ಡೇವಿಡ್ ಆಡೋಮ್ ಬಿಡುಗಡೆಗೊಳಿಸಿದ ವಿಡಿಯೋದಲ್ಲಿ ರಸ್ತೆಯಲ್ಲಿ ದೊಡ್ಡ ಗುಂಡಿ ಮತ್ತು ಅಪಾರ್ಟ್‌ಮೆಂಟ್ ಕಟ್ಟಡದ ಮೇಲೆ ಭಾರೀ ಹಾನಿ ಆಗಿರುವುದು ಸ್ಪಷ್ಟವಾಗಿ ಕಾಣಿಸಿದೆ. ಟೆಲ್ ಅವಿವ್ ಮೇಲೆ ಇರಾನ್ ನಡೆಸಿದ ಹೊಸ ದಾಳಿಗೆ 23 ಸ್ಥಳಗಳಲ್ಲಿ ಹಾನಿಯಾಗಿವೆ. ಒಂದು ಕಡೆ ಸಣ್ಣದಾಗಿ ಬೆಂಕಿ ಕಾಣಿಸಿಕೊಂಡಿದೆ.

ಇಸ್ರೇಲ್ ಸೇನೆಯ ಪ್ರಕಾರ, ಇರಾನ್ ಕ್ಲಸ್ಟರ್ ಬಾಂಬ್‌ಗಳನ್ನು ಬಳಸಿ ದಾಳಿ ನಡೆಸುತ್ತಿದೆ. ಇವು ಕೆಲವು ವಾಯು ರಕ್ಷಣಾ ವ್ಯವಸ್ಥೆಗಳನ್ನು ತಪ್ಪಿಸಿ ಹಲವು ಸ್ಥಳಗಳಲ್ಲಿ ಪರಿಣಾಮಕಾರಿ ದಾಳಿ ನಡೆಸುವ ಸಾಮರ್ಥ್ಯ ಹೊಂದಿವೆ.

ಯುಎಇಯಿಂದ ಅಮೆರಿಕ ದಾಳಿ: ಇರಾನ್ ಅಮೆರಿಕ ಸೇನೆ ಯುಎಇಯಿಂದಲೇ ಖಾರ್ಗ್ ಮತ್ತು ಅಬು ಮೂಸಾ ದ್ವೀಪಗಳ ಮೇಲೆ ದಾಳಿ ನಡೆಸಿದೆಯೆಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಆರೋಪಿಸಿದ್ದಾರೆ. ಯುಎಇ ಭೂಭಾಗ ಮತ್ತು ವಾಯುಪ್ರದೇಶವನ್ನು ಬಳಸಿಕೊಂಡು ಅಮೆರಿಕ ದಾಳಿ ನಡೆಸಿದೆಯೆಂಬ ಇರಾನ್ ಆರೋಪವನ್ನು ಯುಎಇ ತಳ್ಳಿಹಾಕಿದ್ದು, ಅಮೆರಿಕ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಆರೆಸ್ಸೆಸ್ ಶತಾಬ್ದಿ ವರ್ಷ ಬಳಿಕ ಸಂಭಾಗ ರಚನೆ

ಪುಟ 1ರಿಂದ ಭಾರತದ ಸಮಾಜ ಈ ದೃಷ್ಟಿ ಮತ್ತು ಪ್ರಯತ್ನದಲ್ಲಿ ಇರಬೇಕು. ಸಂಘವು ಜಗತ್ತಿನಲ್ಲಿ ಶಾಂತಿ ಮತ್ತು ಅಭಿವೃದ್ಧಿಯ ಬೆಂಬಲಿಗ ಎಂದು ಅಭಿಪ್ರಾಯಪಟ್ಟರು.

ಹೈದರಾಬಾದ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ 71 ದೇಶಗಳ ಪ್ರತಿನಿಧಿಗಳಿಗೆ, ನೀವು ಯಾವ ದೇಶಗಳಲ್ಲಿ ಇದ್ದೀರಿ, ಅಲ್ಲಿನ ಆಹಾರವನ್ನು ಸೇವಿಸುತ್ತೀರಿ. ಆದ್ದರಿಂದ ಆ ದೇಶವನ್ನು ಸಮರ್ಥಗೊಳಿಸುವುದೂ ನಿಮ್ಮ ಕರ್ತವ್ಯವಾಗಿದೆ ಎಂದು ನಾವು ತಿಳಿಸಿದೆವು. ಇದು ವಿಶ್ವ ಕುಟುಂಬವೆಂಬ ಹಿಂದುತ್ವದ ದೃಷ್ಟಿಯಾಗಿದೆ ಎಂದರು.

ಪಾಕ್ ವಿರುದ್ಧ ಆಫ್ಘನ್ ಪ್ರತಿದಾಳಿ

ಪುಟ 1ರಿಂದ ಕಂದಹಾರ್‌ನಲ್ಲಿ ಸೇನಾ ಮೂಲಸೌಕರ್ಯಗಳನ್ನು ಮತ್ತು ಸೇನಾ ಸಾಮಗ್ರಿಗಳ ಸಂಗ್ರಹಾಗಾರಗಳನ್ನು ನಾಶ ಮಾಡಿರುವುದಾಗಿ ಪಾಕ್ ಹೇಳಿಕೊಂಡಿದೆ.

ಪಾಕಿಸ್ತಾನ ನಡೆಸಿದ ದಾಳಿಗೆ ಪ್ರತಿಯಾಗಿ ಡುರಾಂಡ್ ರೇಖೆ ಸಮೀಪ ಪಾಕ್ ಸೇನೆಯ ಮೇಲೆ ಪ್ರತಿದಾಳಿ ನಡೆಸಿರುವುದಾಗಿ ಆಫ್ಘಾನಿಸ್ತಾನದ ರಕ್ಷಣಾ ಸಚಿವಾಲಯ (ಎಂಒಡಿ) ಹೇಳಿದೆ. ಕುನಾರ್ ಮತ್ತು ನಂಗರ್‌ಹಾರ್ ಪ್ರದೇಶಗಳಲ್ಲಿ ಆಫ್ಘನ್ ಸೇನಾ ಕಾರ್ಯಾಚರಣೆ ನಡೆಸಿದ್ದು, ಪಾಕ್ ದಾಳಿಗೆ ತಕ್ಕ ಪ್ರತ್ಯುತ್ತರ ನೀಡಿರುವುದಾಗಿ ಎಂಒಡಿ ಹೇಳಿದೆ. ಕುನಾರ್ ಮತ್ತು ನಂಗರ್ ಹಾರ್ ಪ್ರದೇಶದಲ್ಲಿನ ಡುರಾಂಡ್ ರೇಖೆ ಬಳಿ ಆಫ್ಘನ್ ರಕ್ಷಣಾ ಪಡೆಗಳು ನಡೆಸಿದ ಕಾರ್ಯಾಚರಣೆ ವೇಳೆ 14 ಪಾಕಿಸ್ತಾನಿ ಸೈನಿಕರನ್ನು ಹೊಡೆದುರುಳಿಸಿದ್ದೇವೆ. ಇನ್ನೂ 11 ಪಾಕ್ ಸೈನಿಕರು ಗಾಯಗೊಂಡಿದ್ದಾರೆ ಎಂದು ಆಫ್ಘನ್ ರಕ್ಷಣಾ ಸಚಿವಾಲಯ ಹೇಳಿದೆ.

ಪಾಕ್ ಮೇಲೆ ಆಫ್ಘನ್ ಡ್ರೋನ್ ದಾಳಿ?

ತಾಲಿಬಾನ್ ಸರ್ಕಾರ ಅಂತಾರಾಷ್ಟ್ರೀಯ ನಿಯಮಗಳನ್ನು ಉಲ್ಲಂಘಿಸಿ ತಮ್ಮ ನಾಗರಿಕರನ್ನು ಗುರಿಯಾಗಿಸಿ ಡ್ರೋನ್ ದಾಳಿ ನಡೆಸಿದೆಯೆಂದು ಪಾಕಿಸ್ತಾನ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಆರೋಪಿಸಿದ್ದಾರೆ. ಕೆಲವೇ ಗಂಟೆಗಳಲ್ಲಿ ಪಾಕ್ ಆಫ್ಘನ್ ಡ್ರೋನ್ ಸಂಗ್ರಹಾಗಾರಗಳ ಮೇಲೆ ಕ್ಷಿಪಣಿ ದಾಳಿ ನಡೆಸಿರುವುದು ವರದಿಯಾಗಿದೆ.

ಅವಿಶ್ವಾಸದ ಹಿಂದೆ ಸ್ವಹಿತಾಸಕ್ತಿ

ಪುಟ 1ರಿಂದ ಪ್ರಭಾವಿಯಾಗಿತ್ತು ಹೇಳಿಕೆ: ಲೋಕಸಭೆಯಲ್ಲಿ ತಮ್ಮ ವಿರುದ್ಧ ವಿಪಕ್ಷಕೂಟ ಮಂಡಿಸಿದ್ದ ಅವಿಶ್ವಾಸ ನಿರ್ಣಯ ವಿಫಲವಾಗಿದೆ. ಈ ರಾಜಕೀಯ ದುಷ್ಕಾರ್ಯವನ್ನು ನಿರ್ಣಾಯಕವಾಗಿ ತಿರಸ್ಕರಿಸಿದ ಸದನದ ಸದಸ್ಯರೆಲ್ಲರನ್ನೂ ನಾನು ಅಭಿನಂದಿಸುತ್ತೇನೆ. ನಿರ್ಣಯ ವಿಫಲಗೊಂಡ ಬೆನ್ನಲ್ಲೇ ಸದನವನ್ನುದ್ದೇಶಿಸಿ ತಾವು ನೀಡಿದ ಹೇಳಿಕೆಯನ್ನು ನಾನು ಗಮನವಿಟ್ಟು ಆಲಿಸಿದ್ದೇನೆ. ಸಂಸದೀಯ ಇತಿಹಾಸ, ಸಭಾಪತಿಯಾಗಿ ತಮ್ಮ ಕರ್ತವ್ಯಗಳು ಮತ್ತು ನಿಯಮಗಳ ಸರ್ವೋಚ್ಚತೆಯನ್ನು ತಾವು ಅತ್ಯಂತ ಸಮತೋಲಿತವಾಗಿ, ತಾಳ್ಮೆಯಿಂದ ಹಾಗೂ ಸ್ಪಷ್ಟವಾಗಿ ಉಲ್ಲೇಖಿಸಿದ್ದು, ವಿವರಿಸಿದ್ದು ನಿಜಕ್ಕೂ ಪ್ರಭಾವಿಯಾಗಿತ್ತು. ಇದಕ್ಕಾಗಿ ತಮಗೆ ನನ್ನ ತುಂಬು ಪ್ರಶಂಸೆಗಳು. ನಿಮ್ಮ ಹೇಳಿಕೆ ಆ ನಿರ್ದಿಷ್ಟ ಕ್ಷಣಗಳಿಗೆ ಪ್ರತಿಕ್ರಿಯೆಯಷ್ಟೇ ಅಲ್ಲ, ಭಾರತೀಯ ಸಂಸದೀಯ ಪರಂಪರೆಗಳು ಮತ್ತು ಪ್ರಜಾತಾಂತ್ರಿಕ ಮರ್ಯಾದೆಯನ್ನು ಅತ್ಯಂತ ಗಾಢವಾಗಿ ಮತ್ತು ತುಲನಾತ್ಮಕವಾಗಿ ಎತ್ತಿಹಿಡಿದಿದೆ.

ಮಿಲಿಯಂತರ ಜನರ ಭರವಸೆಗಳ ಪ್ರತಿಫಲನ: ಸಾಂವಿಧಾನಿಕ ಸಂಸ್ಥೆಗಳು ಭಾರತೀಯ ಪ್ರಜಾಸತ್ತೆಯ ಮಹಾನ್ ಬಲವಾಗಿದೆ. ಸಾಂವಿಧಾನಿಕ ಸಂಸ್ಥೆಗಳ ಪೈಕಿ ಸಂಸತ್ತು ಪರಮೋಚ್ಚ ವೇದಿಕೆಯಾಗಿದೆ. ಸದನದಲ್ಲಿ ಎತ್ತುವ ಪ್ರತಿ ಧ್ವನಿಯೂ ದೇಶಾದ್ಯಂತದ ಮಿಲಿಯಂತರ ಜನರ ಆಶೋತ್ತರ, ಭರವಸೆಗಳ ಪ್ರತಿಫಲನವಾಗಿದೆ. ಈ ನಿಟ್ಟಿನಲ್ಲಿ ಲೋಕಸಭಾ ಸಭಾಪತಿಗಳ ಹೊಣೆಗಾರಿಕೆ ಕಲಾಪಗಳನ್ನು ನಿರ್ವಹಿಸುವುದಷ್ಟೇ ಅಲ್ಲ, ಇದನ್ನು ಮೀರಿ ಸಭಾಪತಿಗಳು ಪ್ರಜಾತಾಂತ್ರಿಕ ಪರಂಪರೆಗಳ, ಸಂಸದೀಯ ನಿಯಮಗಳು ಮತ್ತು ಸಾಂಸ್ಥಿಕ ಘನತೆಯ ಕಾವಲುಗಾರ ಕೂಡ. ಈ ಸದನದಲ್ಲಿ ಯಾರೂ ನಿಯಮಗಳಿಗೆ ಅತೀತರಲ್ಲ ಎಂಬ ನಿಮ್ಮ ಸುಸ್ಪಷ್ಟ ಹೇಳಿಕೆ, ಪ್ರಜಾಸತ್ತೆಯ ಮೂಲಭೂತ ಸ್ಫೂರ್ತಿಯನ್ನು ಮರುದೃಢೀಕರಿಸಿದ ಸಂದೇಶವನ್ನು ಸಾರಿದೆ ಎಂದು ಪ್ರಧಾನಿ ಮೋದಿ ಹಿಂದಿಯಲ್ಲಿ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಭಿನ್ನಾಭಿಪ್ರಾಯ, ಅಗೌರವ ಬೇರೆ ಬೇರೆ: ಪ್ರಜಾಸತ್ತೆಯಲ್ಲಿ ಭಿನ್ನಾಭಿಪ್ರಾಯಗಳು ಸಹಜ. ವೈವಿಧ್ಯಮಯ ಚಿಂತನೆಗಳು ಪ್ರಜಾಸತ್ತೆಗೆ ಹೊಸ ಚೈತನ್ಯ ನೀಡುವುದು. ಭಿನ್ನಾಭಿಪ್ರಾಯಕ್ಕೂ, ಅಗೌರವಕ್ಕೂ ತುಂಬು ವ್ಯತ್ಯಾಸವಿದೆ. ರಾಜಕೀಯ ಭಿನ್ನಾಭಿಪ್ರಾಯಗಳು ಸಂಸದೀಯ ವ್ಯವಸ್ಥೆಗೇ ಅಗೌರವವಾಗಿ ಮಾರ್ಪಾಡಾಗುವುದು, ಪ್ರಜಾಸತ್ತೆಯಲ್ಲಿ ತುಂಬು ಶ್ರದ್ಧೆ ಹೊಂದಿರುವವರ ಪಾಲಿಗೆ ಕಳವಳಕಾರಿಯಾಗುವುದು ಸಹಜ. ಇಂತಹ ಕ್ಷಣಗಳು ಸಭಾಪತಿ ಪೀಠದಲ್ಲಿರುವವರ ಪಾಲಿಗೆ ಸತ್ವಪರೀಕ್ಷೆಯನ್ನೊಡ್ಡುತ್ತವೆ. ಅತ್ಯಂತ ಸಂಯಮ, ಶಾಂತತೆ ಹಾಗೂ ನಿಷ್ಪಕ್ಷಪಾತಿಯಾಗಿ ಈ ಸನ್ನಿವೇಶಗಳ ತಾವು ನಿಭಾಯಿಸಿದ ರೀತಿ ಅತ್ಯಂತ ಪ್ರಶಂಸಾರ್ಹ. ತಮ್ಮ ವಿರುದ್ಧ ವೈಯಕ್ತಿಕ ಹಿತಾಸಕ್ತಿ ಮತ್ತು ದುರಹಂಕಾರದಿಂದ ಅವಿಶ್ವಾಸ ನಿರ್ಣಯ ಮಂಡಿಸಲಾಗಿದೆ ಎಂಬುದು ಪ್ರಜಾತಾಂತ್ರಿಕ ಸಿದ್ಧಾಂತಗಳನ್ನು ಗೌರವಿಸುವ ಈ ದೇಶದ ಪ್ರತಿ ಪ್ರಜೆಗೂ ಸ್ಪಷ್ಟ ವೇದ್ಯವಾಗಿದೆ ಮತ್ತು ಪ್ರಜಾತಾಂತ್ರಿಕ ಪ್ರಕ್ರಿಯೆಯಲ್ಲಿ ನಂಬಿಕೆ ಹೊಂದಿರುವ ಪ್ರತಿಯೊಬ್ಬರಿಗೂ ಈ ವಿದ್ಯಮಾನಗಳಿಂದ ತೀರಾ ನೋವಾಗಿದೆ ಎಂದು ಪ್ರಧಾನಿ ಮೋದಿ ಪತ್ರದಲ್ಲಿ ತಿಳಿಸಿದ್ದಾರೆ.

ಸಂಸದರ ಅಸಭ್ಯ ಭಾಷೆ ಬಗ್ಗೆ ಸ್ಪೀಕರ್ ಆತಂಕ

ಪುಟ 1ರಿಂದ ಆದರೆ, ಇತ್ತೀಚಿನ ದಿನಗಳಲ್ಲಿ ಕೆಲವು ಸಂಸದರು ಸದನದೊಳಗೆ ಹಾಗೂ ಸಂಸತ್ ಆವರಣದಲ್ಲಿ ತೋರಿಸುತ್ತಿರುವ ವರ್ತನೆಯಿಂದ ಭಾರತದ ಸಂಸದೀಯ ಪ್ರಜಾಪ್ರಭುತ್ವದ ಗೌರವ ಮತ್ತು ಪ್ರತಿಷ್ಠೆಗೆ ಧಕ್ಕೆಯಾಗುತ್ತಿದೆ ಎಂದು ತಿಳಿಸಿದ್ದಾರೆ. ಬ್ಯಾನರ್, ಪ್ಲೆಕಾರ್ಡ್, ಪೋಸ್ಟರ್‌ಗಳನ್ನು ಪ್ರದರ್ಶಿಸುವುದು, ಅಸಭ್ಯ ಭಾಷೆ ಬಳಸುವುದು ಹಾಗೂ ತೋರಿಸುವ ವರ್ತನೆ ಎಲ್ಲರಿಗೂ ಚಿಂತೆಯ ವಿಷಯವಾಗಿದೆ ಎಂದು ಅವರು ಹೇಳಿದ್ದಾರೆ. ಸಂಸತ್ತು ದೇಶದ 140 ಕೋಟಿ ಜನರ ಆಶೆಗಳು ಮತ್ತು ಕನಸುಗಳನ್ನು ಪ್ರತಿನಿಧಿಸುವ ಪರಮ ಪ್ರಜಾಪ್ರಭುತ್ವ ಸಂಸ್ಥೆಯಾಗಿದ್ದು, ಇಲ್ಲಿ ವ್ಯಕ್ತವಾಗುವ ಪ್ರತಿ ಧ್ವನಿಯೂ ಜನರ ನಿರೀಕ್ಷೆಗಳನ್ನು ಪ್ರತಿಬಿಂಬಿಸುತ್ತದೆ ಎಂದು ಬಿರ್ಲಾ ಹೇಳಿದ್ದಾರೆ. ಆದ್ದರಿಂದ ಎಲ್ಲ ಪಕ್ಷಗಳ ನಾಯಕರು ತಮ್ಮ ಸದಸ್ಯರಲ್ಲಿ ಶಿಸ್ತು ಮತ್ತು ನೈತಿಕತೆ ಕಾಪಾಡುವಂತೆ ವಿಶೇಷ ಗಮನ ಕೊಡಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಅಪಘಾತದಲ್ಲಿ ಮೂವರು ಪಿಎಸ್‌ಐ ಸಾವು

ಪುಟ 1ರಿಂದ ಒಟ್ಟು ಐವರು ಪೊಲೀಸ್ ಅಧಿಕಾರಿಗಳು ಬೆಂಗಳೂರಿನಿಂದ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ಬೆಳಗ್ಗೆ 7 ಗಂಟೆ ಸುಮಾರಿಗೆ ಹೆಗ್ಗೆರೆ ಸಮೀಪದ ಪ್ರಕಾಶ್ ಸ್ಪಾಂಜ್ ಐರನ್ ಕಂಪನಿ ಬಳಿ ಬರುತ್ತಿದ್ದ ಲಾರಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಡಿಕ್ಕಿಯ ರಭಸಕ್ಕೆ ಕಾರಿನ ಮುಂಭಾಗ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಅಪಘಾತದ ಪರಿಣಾಮ ಎಷ್ಟು ತೀವ್ರವಾಗಿತ್ತೆಂದರೆ ಕಾರು ಸುಮಾರು 300 ಮೀಟರಗಳಷ್ಟು ಮುಂದಕ್ಕೆ ಎಳೆದೊಯ್ಯಲ್ಪಟ್ಟಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೃತ ಸಿಬ್ಬಂದಿಗೆ ಐಜಿ ಸಲೀಂ ಸಂತಾಪ

ಬೆಂಗಳೂರು: ಚಿತ್ರದುರ್ಗದ ಚಳ್ಳಕೆರೆ ತಾಲೂಕಿನ ಹೆಗ್ಗೆರೆ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಸ್ಥಳದಲ್ಲಿ ಸಾವನ್ನಪ್ಪಿದ್ದ ಮೂವರು ರಿಸರ್ವ್ ಸಬ್ ಇನ್‌ಸ್ಪೆಕ್ಟರ್‌ಗಳಿಗೆ ಪೊಲೀಸ್ ಮಹಾ ನಿರ್ದೇಶಕ ಡಾ. ಎಂ.ಎ. ಸಲೀಂ ಅವರು ಸಂತಾಪ ಸೂಚಿಸಿದ್ದಾರೆ. ಮಂಜುನಾಥ್ ದಾರಿಮಣಿ, ಅಮರೇಶ್ ಬಿ. ಮತ್ತು ಸಚಿನ್ ವಿ. ರಿಸರ್ವ್ ಪೊಲೀಸ್ ಇಲಾಖೆಯಲ್ಲಿ ಸಬ್ ಇನ್‌ಸ್ಪೆಕ್ಟರ್‌ಗಳಾಗಿ ಸೇವೆ ಸಲ್ಲಿಸುತ್ತಿದ್ದರು.

ಮರಕ್ಕೆ ಬಸ್ ಡಿಕ್ಕಿ: 11 ಜನರಿಗೆ ಗಂಭೀರ ಗಾಯ

ಬೆಳಗಾವಿ: ಖಾನಾಪುರ ತಾಲೂಕಿನ ನಂದಗಡದ ಸರ್ಕಾರಿ ಆಸ್ಪತ್ರೆ ಬಳಿ ಎದುರುಗಡೆ ಕಾರೊಂದು ವೇಗವಾಗಿ ಬಂದಾಗ ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿದ್ದ ಹನ್ನೊಂದು ಪ್ರಯಾಣಿಕರು ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ.

ಗಾಯಾಳುಗಳನ್ನು ತಕ್ಷಣವೇ ಬೆಳಗಾವಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಸ್‌ನಲ್ಲಿ ತೆರಳುತ್ತಿದ್ದ ಪ್ರಯಾಣಿಕರು, ನಂದಗಡದ ಸರ್ಕಾರಿ ಆಸ್ಪತ್ರೆ ಎದುರುಗಡೆ ಬರುತ್ತಿದ್ದಾಗ, ಏಕಾಏಕಿ ರಸ್ತೆಗೆ ಅಡ್ಡ ಬಂದ ಕಾರನ್ನು ತಪ್ಪಿಸಲು ಯತ್ನಿಸಿದ ಬಸ್ ಚಾಲಕನ ನಿಯಂತ್ರಣ ತಪ್ಪಿ, ಬಸ್ ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದಿರುವುದರಿಂದ ಬಸ್‌ನಲ್ಲಿದ್ದ ಪ್ರಯಾಣಿಕರಿಗೆ ಗಾಯಗಳಾಗಿವೆ. ಅಪಘಾತದಲ್ಲಿ ಗಾಯಗೊಂಡವರು, ಜ್ಯೋತಿ ತಹಶೀಲ್ದಾರ(20), ಶ್ರೇಯಸ್ ಮಾದಾರ(17), ಮೆಹಬೂಬಿ ಸನದಿ(60), ಅಣ್ಣಪೂರ್ಣ ಹುಡೇದಾರ್(36), ಸುನೀತಾ ಕಡಬಿ(27), ಮಂಜುಳಾ ಹುಡೇದಾರ್(28), ಪವಿತ್ರಾ ಹುಡೇದಾರ್(28), ಶಿವಾನಿ ಅಂಬೇವಾಡ್ಕರ್(37) ಮತ್ತು ಶೀಲಾ ಮಿಟಗಾರ (35) ಎಂದು ಗುರುತಿಸಲಾಗಿದೆ.

ಘನ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಆಕಸ್ಮಿಕ ಬೆಂಕಿ

ವಿದ್ಯಾರ್ಥಿನಿ ಅಸ್ವಸ್ಥ: ಸಾರ್ವಜನಿಕರ ಆಕ್ರೋಶ



ಸಿರುಗುಪ್ಪ: ನಗರದ ಹೊರವಲಯದ ಸಿರುಗುಪ್ಪ ನಗರಸಭೆ ಘನ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಆಕಸ್ಮಿಕ ಬೆಂಕಿ ಕಾಣಿಸಿಕೊಂಡಿದ್ದು, ದಟ್ಟ ಹೊಗೆ ಹಾಗೂ ದುರ್ವಾಸನೆಗೆ ಸಾರ್ವಜನಿಕರ ಮತ್ತು ವಿದ್ಯಾರ್ಥಿಗಳ ಆಕ್ರೋಶಕ್ಕೆ ಕಾರಣವಾಯಿತು.

ಹೊಗೆ, ದುರ್ವಾಸನೆಯಿಂದ ಪಕ್ಕದ ತೆಕ್ಕಲಕೋಟೆ ಹೊನ್ನೂರಮ್ಮ ಎಂ.ಸಿದ್ದಪ್ಪ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಅಸ್ವಸ್ಥಗೊಂಡು ತರಗತಿಗಳನ್ನು ರದ್ದುಗೊಳಿಸಿದ ಘಟನೆ ಶನಿವಾರ ನಡೆದಿದೆ.

ನಗರಸಭೆಗೆ ಸೇರಿದ ಘನ ತ್ಯಾಜ್ಯ ವಿಲೇವಾರಿ ಘಟಕದಿಂದ ದುರ್ನಾತ ಹರಡುತ್ತಿದ್ದು, ಸಾರ್ವಜನಿಕ ಆರೋಗ್ಯದ ಮತ್ತು ಪರಿಸರದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಸಿದ್ದಪ್ಪ ನಗರದ ಸಾರ್ವಜನಿಕರಿಗೆ, ಕಾಲೇಜು ವಿದ್ಯಾರ್ಥಿಗಳಿಗೆ, ಉಪನ್ಯಾಸಕರಿಗೆ, 5 ವಸತಿ ನಿಲಯದ ವಿದ್ಯಾರ್ಥಿಗಳಿಗೆ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಉಸಿರಾಟದ ತೊಂದರೆ, ಅಸ್ತಮಾ, ಕಣ್ಣು ಉರಿ ಮತ್ತು ಚರ್ಮದ ಅಲರ್ಜಿಗಳು ಸಮಸ್ಯೆಗಳು ಉಂಟಾಗುತ್ತಿದೆ ಎಂದು ವಿದ್ಯಾರ್ಥಿಗಳು, ಸಾರ್ವಜನಿಕರು, ಉಪನ್ಯಾಸಕರು ಆಕ್ರೋಶ ವ್ಯಕ್ತಪಡಿಸಿದರು.

> 2020ರಿಂದ ಇಲ್ಲಿವರೆಗೆ ಘನ ತ್ಯಾಜ್ಯ ವಿಲೇವಾರಿ ಘಟಕ ಸ್ಥಳಾಂತರಿಸಲು ಸಂಬಂಧ ಪಟ್ಟ ಇಲಾಖೆಗಳಿಗೆ ಅನೇಕ ಬಾರಿ ಮನವಿ ಸಲ್ಲಿಸಿದರೂ ಯಾವುದೇ ಕ್ರಮವಿಲ್ಲ. ವಿದ್ಯಾರ್ಥಿಗಳು ಮತ್ತು ಭೋದಕ ಸಿಬ್ಬಂದಿಯು ಘನ ತ್ಯಾಜ್ಯದಿಂದ ಬರುವ ಕಲ್ಮಷವಾದ ಗಾಳಿಯಿಂದ ರಕ್ಷಿಸಿಕೊಳ್ಳಲು ಮೂಗು, ಬಾಯಿ, ಮುಚ್ಚಿಕೊಂಡು ಕಾರ್ಯನಿರ್ವಹಿಸುವಂತಾಗಿದೆ.
>
> ■ ಕೊಟ್ರಪ್ಪ, ಪ್ರಾಚಾರ್ಯ ತೆ.ಹೊ.ಎಂ.ಎಸ್.ಸರ್ಕಾರಿ ಪ್ರಥಮ ದರ್ಜೆ ಕಾಲೇಜ್, ಸಿರುಗುಪ್ಪ

ಸಿದ್ದಪ್ಪ ನಗರದ ಪಕ್ಕದಲ್ಲಿ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜ ಕಟ್ಟಡಕ್ಕೆ ಹೊಂದಿಕೊಂಡೂ ಘನ ತ್ಯಾಜ್ಯ ವಿಲೇವಾರಿ ಘಟವನ್ನು ಸ್ಥಾಪಿಸಿದ್ದು, ಇದು ಸಾರ್ವಜನಿಕ ಹಾಗೂ ವಿದ್ಯಾರ್ಥಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ಉಪನ್ಯಾಸಕರೊಬ್ಬರು ಆಕ್ರೋಶ ವ್ಯಕ್ತಪಡಿಸಿದರು.

ಹೊಗೆಯ ದರ್ವಾಸನೆಯಿಂದಾಗಿ ಪ್ರಜ್ಞೆ ತಪ್ಪಿ ಬಿದ್ದಿದ್ದ ಬಿ.ಎಸ್ಸಿ ವಿದ್ಯಾರ್ಥಿ ತಿವ್ರ ಅಸ್ವಸ್ಥಗೊಂಡಿದ್ದು, ಉಪನ್ಯಾಸಕರು ಖಾಸಗಿ ಕ್ಲಿನಿಕ್‌ನಲ್ಲಿ ಸೋಮವಾರ ಆರೋಗ್ಯ ತಪಾಸಣೆಗೆ ಒಳಪಡಿಸಿದ್ದಾರೆ. ಈ ಕಾಲೇಜಿನ ಸುಮಾರು 389 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದು, ವಾರಕ್ಕೊಮೆ ಕಾಣಿಸಿಕೊಳ್ಳುವ ಈ ದಟ್ಟ ಹೊಗೆ, ವಾಸನೆಯಿಂದ ವಿದ್ಯಾರ್ಥಿಗಳಲ್ಲಿ ಅಲರ್ಜಿ ಸಮಸ್ಯೆ, ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ. ಉಪನ್ಯಾಸಕರ ಹಾಗೂ ವಿದ್ಯಾರ್ಥಿಗಳಲ್ಲಿ ಕಣ್ಣು ಉರಿ ಕಾಣಿಸಿಕೊಂಡಿದ್ದು, ಅಸ್ತಮ ಖಾಯಿಲೆ ಹಿಂಡಿದ ಕೆಲ ಉಪನ್ಯಾಸಕರಿಗೆ ತೀವ್ರ ಉಸಿರಾಟದ ಸಮಸ್ಯೆ ಎದುರಾಗಿದೆ. ಇದರಿಂದಾಗಿ ಶನಿವಾರ ತರಗತಿಗಳಿಗೆ ವಿದ್ಯಾರ್ಥಿಗಳು ಕುಳಿತುಕೊಳ್ಳದೆ ಮನೆಗೆ ತೆರಳಿದ ಘಟನೆ ನಡೆದಿದೆ.

> ಘನ ತ್ಯಾಜ್ಯ ವಿಲೇವಾರಿ ಘಟಕದಿಂದ ಆಗಿರುವ ತೊಂದರೆ ನಮ್ಮ ಗಮನಕ್ಕೆ ಬಂದಿದೆ. ಘಟಕದಲ್ಲಿ ಅಗ್ನಿ ಶಾಮಕ ಹಾಗೂ ನಗರಸಭೆ ಸಿಬ್ಬಂದಿ ಮೂಲಕ ಬೆಂಕಿ ನಂದಿಸುವ ಕಾರ್ಯ ನಡೆಯುತ್ತಿದೆ. ನಂದಿಸುವಾಗ ದಟ್ಟವಾದ ಹೊಗೆ ಆವರಿಸಿಕೊಂಡಿದೆ. ಶೀಘ್ರದಲ್ಲಿ ಪರಿಹಾರ ಕಂಡುಕೊಳ್ಳಲಾಗುವುದು.
>
> ■ ಗಂಗಾಧರ, ಪೌರಾಯುಕ್ತ, ನಗರಸಭೆ, ಸಿರುಗುಪ್ಪ

ಕೆಪಿಸಿಸಿ ಪ್ರಚಾರ ಸಮಿತಿಯಿಂದ ಸಕಲ ಸಿದ್ಧತೆ

ಉಪಚುನಾವಣೆ ಗೆಲ್ಲುವ ವಿಶ್ವಾಸ: ಸೊರಕೆ



ಬಾಗಲಕೋಟೆ: ರಾಜ್ಯ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಗಮನಿಸಿ ಉಪಚುನಾವಣೆಯಲ್ಲಿ ಬಾಗಲಕೋಟೆ ಜನತೆ ಕಾಂಗ್ರೆಸ್ ಅಭ್ಯರ್ಥಿಗೆ ಸಂಪೂರ್ಣ ಬೆಂಬಲಿ ನೀಡಲಿದ್ದಾರೆ ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯಕುಮಾರ್ ಸೊರಕೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನೆ ಕೇಂದ್ರ ನಿರ್ಮಾಣಕ್ಕೆ ಶನಿವಾರ ಆಗಮಿಸಿದ ವೇಳೆಯಲ್ಲಿ ತಿಳಿಸಿದರು. ಬಾಗಲಕೋಟೆ ವಿಧಾಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ದಿವಂಗತ ಎಚ್.ವೈ. ಮೇಟಿ ಅವರು ಉತ್ತಮ ಕಾರ್ಯಗಳನ್ನು ಕೈಗೊಂಡಿದ್ದಾರೆ. ವೈದ್ಯಕೀಯ ಕಾಲೇಜ್ ಅವರ ಕನಸಾಗಿತ್ತು. ಈ ಕನಸು ಸಾಕಾರಗೊಂಡಿರುವುದು ಈ ಭಾಗದ ಜನತೆಯಲ್ಲಿ ಸಂತಸ ಮೂಡಿಸಿದೆ. ಯುಕೆಪಿ ಸಂತ್ರಸ್ತರ ಮೊರೆಗೂ ರಾಜ್ಯ ಸರಕಾರ ಸ್ಪಂದಿಸಿದೆ. ಇದರಿಂದ ಜನ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಲಿದ್ದಾರೆ ಎಂದಿದ್ದಾರೆ. ಪಶ್ಚಿಮ ಬಂಗಾಳ, ಕೇರಳ ಹಾಗೂ ಅಸ್ಸಾಂ ರಾಜ್ಯಗಳ ವಿಧಾನಸಭೆ ಚುನಾವಣೆ ಸಂದರ್ಭದಲ್ಲೇ ರಾಜ್ಯದ ಎರಡು ವಿಧಾನಸಭೆ ಮತಕ್ಷೇತ್ರಗಳಿಗೆ ಉಪಚುನಾವಣೆ ನಡೆಯುವ ಸಾಧ್ಯತೆಗಳಿವೆ.

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರವಿದ್ದು, ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸಿದರೆ ಅಭಿವೃದ್ಧಿ ಕಾರ್ಯಗಳಿಗೆ ವೇಗ ದೊರೆಯಲಿದೆ ಎಂಬ ದೂರದೃಷ್ಟಿ ಬಾಗಲಕೋಟೆ ಜನತೆಯದ್ದಾಗಿದೆ. ಕೆಪಿಸಿಸಿ ಪ್ರಚಾರ ಸಮಿತಿ ವತಿಯಿಂದ ಉಪಚುನಾವಣೆಗೆ ಸಕಲ ಸಿದ್ಧತೆ ನಡೆಸಲಾಗುತ್ತಿದೆ ಎಂದರು.

ಗ್ಯಾರಂಟಿ ಯೋಜನೆಗಳು ಯಶಸ್ವಿಯಾಗಿ ನಡೆದಿವೆ. ಅಭಿವೃದ್ಧಿ ಕಾರ್ಯಗಳಿಗೆ ಯಾವುದೇ ಅನುದಾನದ ಕೊರತೆ ಇಲ್ಲ. ಎಲ್ಲವನ್ನೂ ಸಿಎಂ ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ. ಖಾತೆಗೆ ನೀಡಲು ಮುಂದಾಗಿರುವುದು ಸಿದ್ದರಾಮಯ್ಯ ಅವರ ಜನಪರ ಕಳಕಳಿಗೆ ಸಾಕ್ಷಿಯಾಗಿದೆ. ತಲಾ ಆದಾಯದಲ್ಲಿ ಕರ್ನಾಟಕ ರಾಜ್ಯ ಒಂದನೇ ಸ್ಥಾನದಲ್ಲಿದೆ. 10.2 ಜಿಡಿಪಿಯೊಂದಿಗೆ ರಾಜ್ಯ ಪ್ರಗತಿ ಸಾಧಿಸುತ್ತಿದೆ ಎಂದರು.

ಸರ್ಕಾರದ ಯಾವುದೇ ಸಹಕಾರ ಇಲ್ಲದೆ ರಾಜ್ಯದ ಆರ್ಥಿಕ ವ್ಯವಸ್ಥೆ ಸದೃಢವಾಗಿದೆ. ಕೇಂದ್ರ ಸರ್ಕಾರ 168 ಕೋಟಿ ರೂ.ಸಾಲ ಮಾಡಿದೆ. ಈ ಬಗ್ಗೆ ನಮ್ಮ ರಾಜ್ಯದ ಸಂಸದರು, ರಾಜ್ಯದ ಕೇಂದ್ರ ಸಚಿವರು ಧ್ವನಿ ಎತ್ತದಿರುವುದು ವಿಷಾದದ ಸಂಗತಿ. ಈ ಎಲ್ಲ ಸಂಗತಿಗಳನ್ನು ಗಮನಿಸಿ ಬಾಗಲಕೋಟೆ ಜನತೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸಲಿದ್ದಾರೆ ಎಂಬ ವಿಶ್ವಾಸವಿದೆ ಎಂದು ಸೊರಕೆ ತಿಳಿಸಿದ್ದಾರೆ.

ಎಸ್‌ಬಿಆರ್ ಸಿಇಟಿ 2026 ಪ್ರವೇಶ ಪರೀಕ್ಷೆ

ವಿವಿಧ ಭಾಗಗಳಿಂದ 2 ಸಾವಿರ ವಿದ್ಯಾರ್ಥಿಗಳು ಹಾಜರು

ಕಲಬುರಗಿ: ಶರಣಬಸವೇಶ್ವರ ವಸತಿ ಸಂಯುಕ್ತ ಪದವಿ ಪೂರ್ವ (ಎಸ್.ಬಿ.ಆರ್) ಕಾಲೇಜಿನಲ್ಲಿ ಪಿ.ಯು.ಸಿ ಪ್ರಥಮ ವರ್ಷಕ್ಕೆ ಪ್ರವೇಶ ಪಡೆಯಲು ಬಯಸುವ ದಶಮ ತರಗತಿಯ ಸಿ.ಬಿ.ಎಸ್.ಇ ವಿದ್ಯಾರ್ಥಿಗಳಿಗಾಗಿ ಎಸ್.ಬಿ.ಆರ್ ಸಿ.ಇ.ಟಿ. 2026 ಪ್ರವೇಶ ಪರೀಕ್ಷೆ ಭಾನುವಾರ ನಡೆಯಿತು. ರಾಜ್ಯದ ವಿವಿಧ ಭಾಗಗಳಿಂದ 2000ಕ್ಕೂ ಅಧಿಕ ವಿದ್ಯಾರ್ಥಿಗಳು ಈ ಪರೀಕ್ಷೆಗೆ ಹಾಜರಾಗಿ ಪರೀಕ್ಷೆ ಬರೆದರು.

ಈ ಪ್ರವೇಶ ಪರೀಕ್ಷೆಯಲ್ಲಿ ಗರಿಷ್ಠ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ 9ನೇ ಮಹಾದಾಸೋಹ ಪೀಠಾಧಿಪತಿಗಳಾದ ದೊಡ್ಡಪ್ಪ ಅಪ್ಪ ಅವರ ಹೆಸರಿನಲ್ಲಿ ಸ್ಕಾಲರ್‌ಶಿಪ್ ರೂಪದಲ್ಲಿ ಒಟ್ಟು 5 ಕೋಟಿ ರೂ.ಗಳ ನೆರವು ನೀಡಲಾಗುತ್ತಿದೆ. ಈ ಪರೀಕ್ಷೆಯನ್ನು ಎಸ್.ಬಿ.ಆರ್ ಪಿ.ಯು ಕಾಲೇಜು ಮತ್ತು ಎಸ್.ಬಿ.ಆರ್ ಪಬ್ಲಿಕ್ ಶಾಲೆಯ ಆವರಣದಲ್ಲಿ ಶಾಂತ ಹಾಗೂ ಪರಿಶುದ್ಧ ವಾತಾವರಣದಲ್ಲಿ ಸುಸೂತ್ರವಾಗಿ ನಡೆಸಲಾಯಿತು.

ದಶಮ ತರಗತಿಯ ವಿಜ್ಞಾನ ಹಾಗೂ ಗಣಿತ ವಿಷಯಗಳನ್ನು ಆಧಾರವಾಗಿಟ್ಟುಕೊಂಡು ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಲಾಗಿದ್ದು, ಅದು 16 ವಿಭಿನ್ನ ವರ್ಷನ್‌ಗಳಿಂದ ಕೂಡಿತ್ತು. ಪಾರದರ್ಶಕವಾಗಿ ಪರೀಕ್ಷೆಯನ್ನು ನಡೆಸಲಾಗಿದ್ದು, ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ಆಗದಂತೆ ಹೆಲ್ಪ್‌ಡೆಸ್ಕ್ ವ್ಯವಸ್ಥೆ ಕೂಡ ಮಾಡಲಾಗಿತ್ತು. ಮುಂಚಿತವಾಗಿ ಆನ್ ಲೈನ್‌ನಲ್ಲಿ ನೋಂದಣಿ ಮಾಡಿಸದ ವಿದ್ಯಾರ್ಥಿಗಳಿಗೆ ಸ್ಪಾಟ್ ರೆಜಿಸ್ಟ್ರೇಶನ್ ವ್ಯವಸ್ಥೆಯೂ ಕಲ್ಪಿಸಲಾಗಿತ್ತು.

ಕಾಲೇಜಿನ ಪ್ರಾಚಾರ್ಯರಾದ ಎನ್.ಎಸ್. ದೇವರಕಲ್ ಮಾರ್ಗದರ್ಶನದಲ್ಲಿ ಗುರು ವೃಂದ ಹಾಗೂ ಸಿಬ್ಬಂದಿಗಳ ಸಹಕಾರದಿಂದ ಪರೀಕ್ಷೆ ಯಶಸ್ವಿಯಾಗಿ ನಡೆಸಲಾಯಿತು. ಪರೀಕ್ಷೆಯ ಫಲಿತಾಂಶವನ್ನು ಟೆಲಿಗ್ರಾಮ್ ಮೂಲಕ ಪ್ರಕಟಿಸಲಾಗುತ್ತದೆ. ಮುಂದಿನ ಪ್ರವೇಶ ಪರೀಕ್ಷೆಗಳು ಏಪ್ರಿಲ್ 5 ರಂದು ಐಸಿಎಸ್‌ಇ ವಿದ್ಯಾರ್ಥಿಗಳಿಗೆ ಹಾಗೂ ಏಪ್ರಿಲ್ 12 ರಂದು ಕರ್ನಾಟಕ ಸ್ಟೇಟ್ ಬೋರ್ಡ್ ವಿದ್ಯಾರ್ಥಿಗಳಿಗೆ ನಡೆಯಲಿವೆ ಎಂದು ಪ್ರಾಚಾರ್ಯರು ತಿಳಿಸಿದ್ದಾರೆ.

ಹುಚ್ಚು ನಾಯಿ ಕಡಿತ: 13 ಜನರಿಗೆ ಗಾಯ

ಕೊಟ್ಟೂರು: ಪಟ್ಟಣದ ಕೆಲ ಓಣಿಗಳಲ್ಲಿ ಹುಚ್ಚು ನಾಯಿಯೊಂದು ಒಂದು ತಾಸಿನ ಅವಧಿಯೊಳಗೆ 13 ಜನರಿಗೆ ಕಚ್ಚಿ ಗಾಯಗೊಳಿಸಿರುವ ಘಟನೆ ಶನಿವಾರ ಸಂಜೆ ಪಟ್ಟಣದಲ್ಲಿ ನಡೆದಿದೆ. ಕೊಟ್ಟೂರು ಪಟ್ಟಣದ ಅಗಡೇರ ಓಣಿ, ಕುಂಬಾರ ಓಣಿ, ಮತ್ತು ಛಲವಾದಿ ಓಣಿಗಳಲ್ಲಿ ಹುಚ್ಚುನಾಯಿ ದಾರಿಯಲ್ಲಿ ಸಿಕ್ಕ ಸಿಕ್ಕವರು ಹಾಗೂ ಮನೆಯ ಮುಂದೆ ಆಟವಾಡುತ್ತಿದ್ದ ಮಕ್ಕಳ ಮೇಲೆ ಎರಗಿ ಕಚ್ಚಿ ಗಾಯಗೊಳಿಸಿದ್ದು ಸಾರ್ವಜನಿಕರಲ್ಲಿ ಭೀತಿ ಉಂಟು ಮಾಡಿತ್ತು. ಸಾರ್ವಜನಿಕರು ಸ್ಥಳೀಯ ಆಡಳಿತಕ್ಕೆ ಮಾಹಿತಿ ನೀಡುತ್ತಿದ್ದಂತೆ ಪಟ್ಟಣ ಪಂಚಾಯಿತಿ ಸಿಬ್ಬಂದಿಯವರು ಹುಡುಕಾಟ ನಡೆಸಿದ್ದಾರೆ. ಹುಚ್ಚು ನಾಯಿಯು ಛಲವಾದಿಯವರ ಓಣಿಗೆ ಬಂದಾಗ ಅಲ್ಲಿನ ಜನರೆಲ್ಲರೂ ಸೇರಿ ನಾಯಿಯನ್ನು ಅಡ್ಡ ಹಾಕಿ ಹೊಡೆದು ಸಾಯಿಸಿದ್ದಾರೆ. ನಾಯಿ ಕಡಿತಕ್ಕೊಳಗಾದ 13 ಜನರು ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸೂಕ್ತ ಚಿಕಿತ್ಸೆ ಪಡೆದಿದ್ದಾರೆ. ಆಸ್ಪತ್ರೆಯಲ್ಲಿ ರೇಬಿಸ್ ಇಂಜೆಕ್ಷನ್ ಹಾಗೂ ನಂಜು ನಿರೋಧಕ ಮಾತ್ರೆಗಳನ್ನು ನೀಡಲಾಗಿದ್ದು ಗಾಯಗೊಂಡವರು ಚೇತರಿಸಿಕೊಳ್ಳುತ್ತಿದ್ದಾರೆ.

ಗಾಂಜಾ ಮಾರಾಟ: ಇಬ್ಬರ ಬಂಧನ

ರಾಣೇಬೆನ್ನೂರ: ಅಕ್ರಮವಾಗಿ ಗಾಂಜಾ ಸಂಗ್ರಹಿಸಿಟ್ಟು ಮಾರಾಟ ಮಾಡುತ್ತಿದ್ದ ವ್ಯಕ್ತಿಗಳ ಮೇಲೆ ಪೊಲೀಸರು ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿದ ಘಟನೆ ನಗರದ ಹೊರವಲಯದಲ್ಲಿರುವ ಅಡವಿ ಆಂಜನೇಯ ಬಡಾವಣೆಯಲ್ಲಿ ಭಾನುವಾರ ನಡೆದಿದೆ.

ನಗರದ ಕೆನರಾ ಬ್ಯಾಂಕ್‌ನಲ್ಲಿ ಸೆಕ್ಯೂರಿಟಿ ಕೆಲಸ ಮಾಡುತ್ತಿದ್ದ ಅಡವಿ ಆಂಜನೇಯ ಬಡಾವಣೆಯ ನಿವಾಸಿ ಚಂದ್ರು ಮಲ್ಲೇಶಪ್ಪ ಮತ್ತೂರ(32) ಮತ್ತು ಇನ್ನೊರ್ವ ತರಕಾರಿ ವ್ಯಾಪಾರ ಮಾಡುತ್ತಿದ್ದ ಹಾವೇರಿಯ ಸುಹಾಸ್ ಸರ್ಕಲ್‌ನ ಮುನ್ನಾಬಾದ್ ಓಣಿಯ ನಿವಾಸಿ ದಾವುಲ್ ಮಲ್ಲಿಕಾ ರಫೀಕ್ ಅಹಮ್ಮದ್ ಧಾರವಾಡ(21) ಇವರುಗಳಿಂದ ಅಂದಾಜು 1ಕೆಜಿ ಗಾಂಜಾ, ಬ್ಯಾಗ್, ಒಂದು ತೂಕದ ಯಂತ್ರ, ಪಲ್ಸರ್ ಬೈಕ್ ಸೇರಿದಂತೆ ಒಟ್ಟು 87 ಸಾವಿರ ಮೌಲ್ಯದ ಸ್ವತ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಯಶೋಧ ವಂಟಗೋಡಿ ಹಾಗೂ ರಾಣೇಬೆನ್ನೂರ ಉಪಾಧೀಕ್ಷಕರಾದ ಜೆ ಲೋಕೇಶ ಇವರ ಮಾರ್ಗದರ್ಶನದಲ್ಲಿ ಗ್ರಾಮೀಣ ಸಿಪಿಐ ಎನ್.ಸಿ.ಕಾಡದೇವರಮಠ, ಪಿಎಸ್‌ಐ ಪರಶುರಾಮ ಲಮಾಣಿ, ಆರ್.ಕೆ. ನಿಂಗಜ್ಜೇರ, ಎಎಸ್‌ಐ ಗಣೇಶ ಅಬ್ಬಿಗೇರಿ, ಸಿಬ್ಬಂಧಿಗಳಾದ ಮೃತ್ಯುಂಜಯ ಸಂಕಣ್ಣನವರ, ಎನ್.ಆರ್.ಕುಂಟಿಮೆಂಟಿ, ರಮೇಶ ಕರಿಯಣ್ಣನವರ, ಕೃಷ್ಣ ರೆಡ್ಡಿ ಆರ್ ಎಲ್, ಜಿ.ಎಸ್. ಪೂಜಾರ, ಬಿ.ಎಸ್.ಕರಡೆಣ್ಣನವರ, ಮಂಜು ಹುಚ್ಯಾಳವರ ದಾಳಿಯಲ್ಲಿ ಪಾಲ್ಗೊಂಡಿದ್ದರು.

ಏರ್‌ಗನ್ ಗುಂಡು ಎದೆಗೆ ತಗುಲಿ ಯುವಕ ಸಾವು

ಹೊನ್ನಾವರ: ತಾಲೂಕಿನ ನಗರಬಸ್ತಿಗೇರಿ ಗ್ರಾಮ ಪಂಚಾಯತ ವ್ಯಾಪ್ತಿಯ ಹಾಡಗೇರಿ ಗ್ರಾಮದಲ್ಲಿ ಏರ್ ಗನ್ ಗುಂಡು ಎದೆಗೆ ತಗುಲಿ ಯುವಕನೊರ್ವ ಮೃತಪಟ್ಟ ಘಟನೆ ಶನಿವಾರ ಸಾಯಂಕಾಲ ನಡೆದಿದೆ.

ಮೃತಪಟ್ಟ ಯುವಕನನ್ನು ಹಾಡಗೇರಿ ನಿವಾಸಿಯಾದ ಸುಬ್ರಹ್ಮಣ್ಯ ಮಂಜುನಾಥ ಮರಾಠಿ(19) ಎಂದು ತಿಳಿದು ಬಂದಿದೆ. ತೋಟಕ್ಕೆ ಬಂದ ಮಂಗನನ್ನು ಓಡಿಸಲು ಇಟ್ಟುಕೊಂಡಿದ್ದ ಏರ್‌ಗನ್ ಸಿಡಿದು ಗುಂಡು ಹಾರಿ ಮೃತಪಟ್ಟಿದ್ದಾನೆ ಎಂದು ಈತನ ಕುಟುಂಬ ಸದಸ್ಯರು ಹೇಳಿದ್ದಾರೆ.

ಹೊನ್ನಾವರ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಮೃತದೇಹ ಇರಿಸಲಾಗಿದೆ. ಸ್ಥಳದಲ್ಲಿ ಪಿ.ಐ ಸಿದ್ದರಾಮೇಶ್ವರ ಹಾಗೂ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ. ಈ ಸಂಭದ ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ಮುಂದುವರಿಸಿದ್ದಾರೆ.

ಗಾಂಜಾ ಸೇವನೆ: ಯುವಕನ ಬಂಧನ

ಬೆಳಗಾವಿ: ಇಲ್ಲಿನ ಶೆಟ್ಟಿ ಗಲ್ಲಿಯ ಸಾರ್ವಜನಿಕ ರಸ್ತೆಯಲ್ಲಿ ಮಾದಕ ದ್ರವ್ಯ ಸೇವಿಸಿ ಅಸಹಜವಾಗಿ ವರ್ತಿಸುತ್ತಿದ್ದ ಯುವಕನನ್ನು ಮಾರ್ಕೆಟ್ ಪೊಲೀಸರು ಬಂಧಿಸಿದ್ದಾರೆ.

ಆರೋಪಿತನ ವಿರುದ್ಧ ಎನ್ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಈ ಕಾರ್ಯಾಚರಣೆ ನಡೆಸಿದ ಪೊಲೀಸ್ ತಂಡಕ್ಕೆ ಮೇಲಾಧಿಕಾರಿಗಳು ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

ಬೆಳಗಾವಿಯ ಶೆಟ್ಟಿ ಗಲ್ಲಿಯ ಸಾರ್ವಜನಿಕ ರಸ್ತೆಯ ಮೇಲೆ ಅಸಹಜವಾಗಿ ವರ್ತಿಸುತ್ತಿದ್ದ ಸುಜಲ್ ಕೃಷ್ಣಾನಾಥ ಪಾಟೀಲ (19) ಎಂಬಾತನನ್ನು ಮಾರ್ಕೆಟ್ ಠಾಣೆಯ ಪಿಎಸ್‌ಐ ವಿಠ್ಠಲ ಹಾವನ್ನವರ ಮತ್ತು ಸಿಬ್ಬಂದಿ ವಶಕ್ಕೆ ಪಡೆದಿದ್ದಾರೆ.

ವಿಚಾರಣೆ ಮತ್ತು ವೈದ್ಯಕೀಯ ಪರೀಕ್ಷೆಯಲ್ಲಿ ಆತನು ಗಾಂಜಾದಂತಹ ಮಾದಕ ಪದಾರ್ಥಗಳನ್ನು ಸೇವಿಸಿರುವುದು ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ ಆರೋಪಿತನ ವಿರುದ್ಧ ಮಾರ್ಕೆಟ್ ಪೊಲೀಸ್ ಠಾಣೆ ಪ್ರಕರಣ ದಾಖಲಿಸಿ ತನಿಖೆ ಮುಂದುವರಿಸಲಾಗಿದೆ.

ಅಪಘಾತ: ಬೈಕ್ ಸವಾರ ಸಾವು

ಧಾರವಾಡ: ದ್ವಿಚಕ್ರ ವಾಹನ ಮತ್ತು ಕಾರು ನಡುವೆ ಅಪಘಾತ ಸಂಭವಿಸಿ, ಓರ್ವ ಸ್ಥಳದಲ್ಲಿಯೇ ಮೃತಪಟ್ಟ ಘಟನೆ ನಗರದ ಜರ್ಮನ್ ಆಸ್ಪತ್ರೆ ಬಳಿ ಶನಿವಾರ ತಡರಾತ್ರಿ ಸಂಭವಿಸಿದೆ. ರಾಣೆಬೇನ್ನೂರ ಮೂಲದ ನಿವಾಸಿ ಬಸವರಾಜ ಕಲ್ಲೆರಪ್ಪನವರ ಮೃತ ವ್ಯಕ್ತಿ ಎಂದು ತಿಳಿದು ಬಂದಿದೆ. ಕಾರು ಚಾಲಕ ಪರಾರಿಯಾಗಿದ್ದು, ಈ ಕುರಿತು ಶೋಧ ಕಾರ್ಯ ನಡೆದಿದೆ. ಧಾರವಾಡ ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪ್ರಕರಣದ ತನಿಖೆ ಮುಂದುವರಿದಿದೆ.

ಅಪಘಾತ: ಓರ್ವ ಸಾವು

ಹೊನ್ನಾವರ: ತಾಲೂಕಿನ ಹೆರಂಗಡಿ ಸಮೀಪ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಓಮ್ನಿ ನಡುವೆ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಓಮ್ನಿ ಚಾಲಕ ಮೃತಪಟ್ಟಿರುವ ದುರ್ಘಟನೆ ಭಾನುವಾರ ಸಾಯಂಕಾಲ ನಡೆದಿದೆ.

ಸಿದ್ದಾಪುರ ಮೂಲದ ಓಮ್ನಿ ಚಾಲಕ ಇಬ್ರಾಹಿಂ ಎಂಬಾತ ಭಟ್ಕಳದಿಂದ ಸಿದ್ದಾಪುರದತ್ತ ಓಮ್ನಿಯಲ್ಲಿ ತೆರಳುತ್ತಿದ್ದ ವೇಳೆ, ಗೇರುಸೊಪ್ಪದಿಂದ ಹೊನ್ನಾವರ ಕಡೆಗೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಹೆರಂಗಡಿ ಸಮೀಪ ಡಿಕ್ಕಿ ಹೊಡೆದಿದೆ. ಅಪಘಾತದ ತೀವ್ರತೆಗೆ ಓಮ್ನಿ ವಾಹನ ಸಂಪೂರ್ಣವಾಗಿ ಜಖಂಗೊಂಡಿದ್ದು, ಓಮ್ನಿ ಚಾಲಕ ಇಬ್ರಾಹಿಂ ತೀವ್ರವಾಗಿ ಗಾಯಗೊಂಡಿದ್ದಾನೆ. ಬಳಿಕ ಆಸ್ಪತ್ರೆಗೆ ಸಾಗಿಸುವಷ್ಟರಲ್ಲಿ ಆತ ಮೃತಪಟ್ಟಿದ್ದಾನೆ ಎಂದು ತಿಳಿದುಬಂದಿದೆ.

ಅಪಘಾತದ ವೇಳೆ ಬಸ್‌ನಲ್ಲಿದ್ದ ಕೆಲ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಘಟನೆ ಹಿನ್ನೆಲೆ ಕೆಲಕಾಲ ರಸ್ತೆ ಮೇಲೆ ವಾಹನ ಸಂಚಾರ ದಟ್ಟಣೆ ಉಂಟಾಯಿತು.ಸುದ್ದಿ ತಿಳಿದ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸಂಪಾದಕೀಯ

ಕೋಲ್ಕೊತ್ತಾ ರ್‍ಯಾಲಿ ಸಂದೇಶ ನೀಡಿದೆ

ಕೋಲ್ಕೊತ್ತಾದ ಬ್ರಿಗೇಡ್ ಪರೇಡ್ ಮೈದಾನ ಐತಿಹಾಸಿಕ ಘಟನೆಗೆ ಸಾಕ್ಷಿಯಾಗಿದೆ. ಪ್ರಧಾನಿ ಪ್ರವಾಸದ ಭಾಗ ಮತ್ತು ಬಿಜೆಪಿಯ ರ್‍ಯಾಲಿಯ ಕಾರಣಕ್ಕಲ್ಲದೆ ಪ.ಬಂಗಾಳದ ಪ್ರತಿ ಪ್ರಜೆಯೂ ಅಂದು ಮೂಗಿನ ಮೇಲೆ ಬೆರಳಿಟ್ಟು ಅದನ್ನು ಗಮನಿಸಿದ. ಪ. ಬಂಗಾಳದಲ್ಲಿ ಐತಿಹಾಸಿಕ ಮಹತ್ವವಿರುವ ಬ್ರಿಗೇಡ್ ಪರೇಡ್ ಮೈದಾನ ಬ್ರಿಟಿಷ್ ಕಾಲದಿಂದಲೇ ರಾಜ್ಯದ ಹೆಗ್ಗುರುತು. ವಿಶಾಲ ಮೈದಾನದ ಸಮೀಪದಲ್ಲೇ ವಸಾಹತುಶಾಹಿಯ ಕುರುಹಾದ ವಿಕ್ಟೋರಿಯಾ ಭವನ ತನ್ನ ಕತೆಯನ್ನು ಹೇಳುತ್ತದೆ. ಅಂಥ ಬ್ರಿಗೇಡ್ ಮೈದಾನ ಮೊನ್ನೆ ಮೊಟ್ಟಮೊದಲ ಬಾರಿಗೆ ತುಂಬಿತ್ತು. ಇದುವರೆಗೆ ಕಾಂಗ್ರೆಸಿಗರು, ಕಮ್ಯುನಿಸ್ಟರು ಮತ್ತು ತೃಣಮೂಲ ಹಲವು ಬಾರಿ ಆ ಮೈದಾನದಲ್ಲಿ ರ್‍ಯಾಲಿ ನಡೆಸಿ ಮೈದಾನ ತುಂಬಿಸಲು ಪ್ರಯತ್ನಿಸಿದರೂ ಇದುವರೆಗೂ ಯಶಸ್ಸು ಕಂಡಿರಲಿಲ್ಲ. ಸುಮಾರು ಐದು ಲಕ್ಷ ಜನ ನೆರೆಯಬಹುದಾದ ಮೈದಾನ ಅಂದು ಹೊಸ ರಾಜಕೀಯ ವ್ಯಾಖ್ಯಾನವನ್ನೂ ನಿರ್ಮಿಸಿತು. ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ದೌರ್ಜನ್ಯ, ಕೇಂದ್ರವನ್ನು ಲೆಕ್ಕಿಸದಿರುವ ಅದರ ದುಂಡಾವರ್ತನೆಗಳ ತರುವಾಯವೂ ಜನ ಬಿಜೆಪಿಯ ರ್‍ಯಾಲಿಯನ್ನು ಬೆಂಬಲಿಸಿದ್ದರೆಂದರೆ ಬಂಗಾಳ ಬದಲಾಗುತ್ತಿದೆ ಎಂದೇ ಅರ್ಥ.



ರ್‍ಯಾಲಿಗೆ ಡಾರ್ಜಲಿಂಗ್‌ನ ಕೊನೆಯ ಹಳ್ಳಿಯಿಂದ ಪರಗಣ ಜಿಲ್ಲೆಗಳ ಕೊನೆಯ ಹಳ್ಳಿಯವರೆಗೆ, ಕೂಚ್ ಬಿಹಾರಿನ ಪೂರ್ವದಿಂದ ಪುರುಲಿಯಾದ ಪಶ್ಚಿಮ ತುದಿಯವರೆಗೆ ಪ್ರವಾಹದಂತೆ ಜನರು ಆಗಮಿಸಿದ್ದರು. ಕೆಲವು ಜಿಲ್ಲೆಗಳಿಂದ ಕೋಲ್ಕೊತ್ತಾಕ್ಕೆ ರೈಲು ಪ್ರಯಾಣದ ಅವಧಿಯೇ 20 ಗಂಟೆಗಳಿಗೂ ಹೆಚ್ಚು. ಅಂಥ ಸುದೀರ್ಘ ಪ್ರಯಾಣದಲ್ಲಿ ಸ್ವಂತ ಊಟ ಮತ್ತು ವಸತಿಯ ವ್ಯವಸ್ಥೆಯೊಂದಿಗೆ ಜನರು ಮೋದಿಯವರ ಮಾತನ್ನು ಆಲಿಸಲು ಬಂದಿದ್ದರೆಂದರೆ ಅವರು ವಾಸ್ತವದಿಂದ ಹೊರಗೆ ಬರಲು ತಹತಹಿಸುತ್ತಿದ್ದಾನೆಂದೇ ಅರ್ಥ. ಒಂದು ಕಾಲದಲ್ಲಿ ಇದೇ ಜನರು ಕಾಂಗ್ರೆಸನ್ನು ನಂಬಿ ಗೆಲ್ಲಿಸಿದ್ದರು. ಅನಂತರ ಕಮ್ಯುನಿಸ್ಟರ ಘೋಷಣೆಗಳಿಗೆ ಮರುಳಾಗಿ ಕಾಮ್ರೆಡ್‌ಗಳಿಂದ ಆಳಿಸಿಕೊಂಡಿದ್ದರು. ಕಮ್ಯುನಿಸ್ಟರ ಅರಾಜಕತೆಯನ್ನು ದೂರ ಮಾಡುವ ನೆಪದಲ್ಲಿ ಮಮತಾ ಬ್ಯಾನರ್ಜಿ ರಾಜ್ಯಾದ್ಯಂತ ಚಳವಳಿಯನ್ನು ನಡೆಸಿ ಅಧಿಕಾರಕ್ಕೆ ಬಂದರು. ಆದರೆ ಬಂಗಾಳಕ್ಕೆ ಸಿಕ್ಕಿದ್ದು ಕಮ್ಯುನಿಸ್ಟರಿಗಿಂತ ಹೆಚ್ಚಿನ ದುರಾಡಳಿತ. ಇಂದು ತೃಣಮೂಲ ಕಾಂಗ್ರೆಸಿನ ಪಾಪದ ಕೊಡ ತುಂಬಿದೆ. ಅದಕ್ಕೆ ಸಾಕ್ಷಿ ಕೋಲ್ಕೊತ್ತಾದ ಈ ರ್‍ಯಾಲಿ. ಒಂದು ಮೈದಾನದಲ್ಲಿ ಐದು ಲಕ್ಷಕ್ಕಿಂತಲೂ ಹೆಚ್ಚು ಸೇರುವುದೊಂದು ಸಾಹಸವಾದರೆ, ಆ ಬೃಹತ್ ಸಂಖ್ಯೆಯನ್ನು ಭಾಷಣದವರೆಗೆ ಶಾಂತಿಯುತವಾಗಿ, ಶಿಸ್ತಿನಿಂದ ಕೂರಿಸುವುದು ಇನ್ನೊಂದು ಸಾಹಸ. ಮೋದಿಯವರ ಭಾಷಣವಿದ್ದುದು ಅಪರಾಹ್ನ. ಮುಂಜಾನೆಯಿಂದಲೇ ಮೈದಾನದತ್ತ ಆಗಮಿಸುತ್ತಿದ್ದ ಜನಸಾಗರ ಮಧ್ಯಾಹ್ನದ ಹೊತ್ತಿಗೆ ತುಂಬಿತ್ತೆಂದರೆ ಪಶ್ಚಿಮ ಬಂಗಾಳ ಏನನ್ನು ನಿರೀಕ್ಷಿಸುತ್ತಿದೆ ಎನ್ನುವುದನ್ನು ನಾವು ಅಂದಾಜಿಸಬಹುದು.

ಮೋದಿಯವರು ಸಹಜವಾಗಿಯೇ ಆಕ್ರಮಣಕಾರಿಯಾಗಿ ಮಾತುಗಳನ್ನಾಡಿದರು. ನೊಂದ ಬಂಗಾಳಕ್ಕೆ ಅದರ ಅವಶ್ಯಕತೆ ಇತ್ತು. ಮುಂದಿನ ದಿನಗಳಲ್ಲಿ ಅದರ ಫಲವನ್ನು ಪ.ಬಂಗಾಳದಲ್ಲಿ ಕಾಣಬಹುದು ಎಂಬುದನ್ನು ಕಾರ್ಯಕ್ರಮ ಹೇಳುತ್ತಿತ್ತು.

ವಿಶ್ವಯುದ್ಧ: ಸಾವರ್ಕರ್ ದೃಷ್ಟಿಕೋನ ಹೇಗಿತ್ತು?

ಯುದ್ಧ ಯಾರ ನಡುವೆಯೇ ನಡೆದಿರಲಿ, ಹಿಂದುಸ್ತಾನದ ಹಿತರಕ್ಷಣೆಗೇ ಆದ್ಯತೆ ನೀಡಬೇಕೆಂಬುದು ಸಾವರ್ಕರ್ ದೃಷ್ಟಿಕೋನವಾಗಿತ್ತು.

ನೇರ ನೋಟ

• ದು.ಗು. ಲಕ್ಷ್ಮಣ

dugulakshman@yahoo.com



ಜಾಗತಿಕ ಮಟ್ಟದಲ್ಲಿ ಯುದ್ಧೋನ್ಮಾದ ಹೆಚ್ಚಾಗಿ ಅಮೆರಿಕ, ಇಸ್ರೇಲ್ ಜಂಟಿ ದಾಳಿಯಿಂದ ಇರಾನ್ ಎಂಬ ತೈಲ ಸಂಪದ್ಭರಿತ ರಾಷ್ಟ್ರ ಸ್ಮಶಾನಸದೃಶವಾಗಿರುವುದು, ಇರಾನ್ ಕೂಡ ಅಮೆರಿಕ, ಇಸ್ರೇಲ್ ನೆಲೆಗಳನ್ನು ಧ್ವಂಸಗೊಳಿಸುತ್ತಿರುವುದು, ತತ್ಪರಿಣಾಮವಾಗಿ ಜಾಗತಿಕವಾಗಿ ತೈಲ ಬೆಲೆಯೇರಿಕೆ, ಅಡುಗೆ ಅನಿಲಕ್ಕೆ ತತ್ವಾರ– ಇತ್ಯಾದಿ ಗಂಭೀರ ಸಮಸ್ಯೆ ಉದ್ಭವಿಸಿರುವುದು ವರ್ತಮಾನದ ವಿದ್ಯಮಾನಗಳು.

ಈಗಿನಯುದ್ಧದಹಿನ್ನೆಲೆಯಲ್ಲಿ,ಹಿಂದೆಎರಡನೇಜಾಗತಿಕಸಮರನಡೆದಾಗ ಭಾರತದ ಪರಿಸ್ಥಿತಿ ಹೇಗಿತ್ತು? ಆಗ ವೀರ ಸಾವರ್ಕರ್, ಆ ಯುದ್ಧದಲ್ಲಿ ಪಾರತಂತ್ರ್ಯದಲ್ಲಿನರಳುತ್ತಿದ್ದಭಾರತದನಿಲುವುಹೇಗಿರಬೇಕೆಂಬುದನ್ನುತಮ್ಮ ಭಾಷಣ, ಬರೆಹಗಳಲ್ಲಿ ಸೂಚಿಸಿದ್ದರು? ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ದೇಶ ನಾಯಕರ ನಿಲುವು ಹೇಗಿರಬೇಕೆಂದು ಹೇಳಿದ್ದರು? ಮುಂತಾದ ಕುತೂಹಲಕರ ಸಂಗತಿಗಳತ್ತ ಒಮ್ಮೆ ಗಮನಹರಿಸುವ ಪ್ರಯತ್ನ, ಉದ್ದೇಶ ಈ ಲೇಖನದ್ದು.

ಸಾವರ್ಕರ್ ಅಂಡಮಾನ್ ಸೆರೆಯಿಂದ ಬಿಡುಗಡೆಯಾಗಿ ಭಾರತಕ್ಕೆ ಬಂದ ಬಳಿಕಹಿಂದುಮಹಾಸಭಾಸ್ಥಾಪಿಸಿ,ಅಖಂಡಹಿಂದುಸ್ತಾನದಹೋರಾಟದಲ್ಲಿ ಪಾಲ್ಗೊಂಡಿದ್ದರು.1940ರಲ್ಲಿಮಧುರೈಯಲ್ಲಿನಡೆದಹಿಂದುಮಹಾಸಭಾದ ವಾರ್ಷಿಕ ಅಧಿವೇಶನದ ಅಧ್ಯಕ್ಷತೆ ವಹಿಸಿ ದೀರ್ಘ ಭಾಷಣ ಮಾಡಿದ ಸಾವರ್ಕರ್, ಆಗ ನಡೆಯುತ್ತಿದ್ದ ವಿಶ್ವಯುದ್ಧದ ಬಗ್ಗೆಯೂ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದರು. ಸಾವರ್ಕರ್ ಮಾತುಗಳಲ್ಲೇ ಅದನ್ನು ಕೇಳಿ:

"ಎರಡನೇ ವಿಶ್ವಯುದ್ಧಕ್ಕೆ ಯಾವುದೇ ಘನ ಉದ್ದೇಶವಿಲ್ಲ. ಯಾವ ನೈತಿಕ ಕಾರಣವೂ ಇಲ್ಲ. ಯುದ್ಧನಿರತ ಇಂಗ್ಲೆಂಡ್, ಅಮೆರಿಕಾ, ರಷ್ಯಾ, ಜಪಾನ್, ಜರ್ಮನಿ, ಫ್ರಾನ್ಸ್, ಇಟಲಿ ಇತ್ಯಾದಿ ದೇಶಗಳಿಗೆ ಯಾವುದೇ ಉದಾತ್ತ ಉದ್ದೇಶವೂಇಲ್ಲ.ಎಲ್ಲರೂಸ್ವಾರ್ಥಿಗಳೇ.ಎಲ್ಲರೂಕಳ್ಳರೇ.ಕಳ್ಳನನಡೆಯನ್ನು ಕಳ್ಳನೇಬಲ್ಲ.... ಯುದ್ಧದಕುರಿತಂತೆಹಿಂದುಮಹಾಸಭಾಮತ್ತು ರಾಷ್ಟ್ರೀಯ ಕಾಂಗ್ರೆಸ್‌ನ ನಿಲುವುಗಳು ಭಿನ್ನವಾಗಿವೆ. ಕಾಂಗ್ರೆಸ್ ಇಂಗ್ಲೆಂಡ್, ಅಮೆರಿಕಗಳ ಉದಾತ್ತ ನೀತಿಯನ್ನು ಸಮರ್ಥಿಸುತ್ತಿದೆ. ಕಾಂಗ್ರೆಸ್‌ನ ಸ್ವಯಂಭೂ ನೇತಾರ ಸರ್ವಾಧಿಕಾರಿ ಗಾಂಧೀಜಿಯವರು ಅದರ ಪ್ರಬಲ ಸಮರ್ಥಕರಾಗಿದ್ದಾರೆ. ಗಾಂಧೀಜಿ ಪ್ರಕಾರ, 'ಯುದ್ಧದ ಸಂದರ್ಭದಲ್ಲಿ ಸ್ವಾತಂತ್ರ್ಯದ ಬೇಡಿಕೆ ಇಡುವುದುಸರಿಯಲ್ಲ.ಈಸಂದರ್ಭದಲ್ಲಿಇಂಗ್ಲೆಂಡ್,ಫ್ರಾನ್ಸ್‌ಗಳರಕ್ಷಣೆಯೇ ಮುಖ್ಯ. ಪ್ರಜಾತಂತ್ರದ ರಕ್ಷಣೆಗಾಗಿ ನಾವು ಈಗ ಯಾವುದೇ ಷರತ್ತಿಲ್ಲದೆ ಆ ದೇಶಗಳ ಪರವಾಗಿ ನಿಲ್ಲಬೇಕು. ಅವರಿಗೆ ಸಹಾಯ ಮಾಡಬೇಕು. ಅದಕ್ಕಾಗಿ ಭಾರತೀಯರು ಸಿದ್ಧರಾಗಿರಬೇಕು' ನೆಹರೂ ಹೇಳುವಂತೆ, 'ಫ್ರಾನ್ಸ್, ಇಂಗ್ಲೆಂಡ್‌ಗಳಿಗೆ ಪ್ರಜಾತಂತ್ರದ ಉಳಿವಿಗಾಗಿ ಸಹಾಯ ಮಾಡಲು ನಾವು ತಯಾರಾಗಿರಬೇಕು. ಏಕೆಂದರೆ ಆ ದೇಶಗಳ ಮೇಲೆ ಸಾಮ್ರಾಜ್ಯವಾದಿ ಜರ್ಮನಿ ಆಕ್ರಮಣ ಮಾಡಿದೆ'

ಆದರೆ ಯುದ್ಧದ ಕುರಿತಂತೆ ಹಿಂದು ಮಹಾಸಭಾದ ನಿಲುವು ತೀರಾ ಭಿನ್ನವಾಗಿದೆ. ನಮ್ಮ ಪ್ರಕಾರ, ಯುದ್ಧನಿರತ ಯುರೋಪಿನ ದೇಶಗಳಿಗೆ ಯಾವುದೇ ಘನವಾದ ಉದ್ದೇಶವಿಲ್ಲ. ಪ್ರಜಾತಂತ್ರ ಸ್ಥಾಪನೆ ಅಥವಾ ತತ್ವ, ಸಿದ್ಧಾಂತಗಳಪ್ರತಿಷ್ಠಾಪನೆ ಇತ್ಯಾದಿಯಾವ ಉದಾತ್ತ ಕಾರಣವೂ ಅದರಲ್ಲಿಲ್ಲ. ಯುದ್ಧ ನಡೆಯುತ್ತಿರುವುದು ಕೇವಲ ಸ್ವಾರ್ಥಕ್ಕಾಗಿ, ಪ್ರತಿಷ್ಠೆಗಾಗಿ, ಅಷ್ಟೆ. ತಮಾಷೆಯೆಂದರೆ ಇಂಗ್ಲೆಂಡ್‌ನ ಚರ್ಚಿಲ್ ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್‌ಗೆ ಹೇಳಿದ–ಪೋಲೆಂಡ್ ಅನ್ನು ಬಿಟ್ಟುಬಿಡು ಎಂದು. ಆಗ ಹಿಟ್ಲರ್ ಹೇಳಿದ್ದು – ಸರಿ, ನಾನು ಪೋಲೆಂಡ್ ಅನ್ನು ಬಿಡುವೆ. ಆದರೆ ನೀವು (ಇಂಗ್ಲೆಂಡ್) ಹಿಂದುಸ್ತಾನವನ್ನು ಬಿಡುವಿರಾ? ಅದಕ್ಕೇ ಹೇಳುವುದು– ಕಳ್ಳನೇ ಕಳ್ಳನ ನಡೆಯನ್ನು ಬಲ್ಲ. ಏಕೆಂದರೆ ಎಲ್ಲರೂ ಕಳ್ಳರೇ ಆಗಿದ್ದಾರೆ!

ತಮ್ಮ ತಮ್ಮ ಸಾಮ್ರಾಜ್ಯಗಳ ರಕ್ಷಣೆ, ವಸಾಹತುಗಳು ವಿಸ್ತರಣೆ ಮತ್ತು ಅದರ ಸ್ಥಿರತೆಗಾಗಿ ಯುರೋಪಿನ ದೇಶಗಳು ಯುದ್ಧದಲ್ಲಿ ನಿರತವಾಗಿವೆ. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ರಷ್ಯಾ, ಚೀನಾ ಇತ್ಯಾದಿ ಎಲ್ಲ ದೇಶಗಳೂ ಸಾಮ್ರಾಜ್ಯವಾದಿ ದೇಶಗಳೇ. ಆದರೆ ಆ ದೇಶಗಳು ಬಳಸುವುದು ಮಾತ್ರ ಪ್ರಜಾತಂತ್ರದ ರಕ್ಷಣೆ ಎಂಬ ಘೋಷಣೆ. ಇಂತಹ ಸಾಮ್ರಾಜ್ಯಶಾಹಿ ದೇಶಗಳ ಕಪಿಮುಷ್ಟಿಯಲ್ಲಿ ಸಿಲುಕಿದ ಏಷ್ಯಾ, ಆಫ್ರಿಕಾ, ಯುರೋಪಿನ ಹಲವಾರು ದೇಶಗಳು ದಾಸ್ಯದಲ್ಲಿ ನರಳಿ ನರಳಿ ಸಾಯುತ್ತಿವೆ....



ಎರಡನೇ ವಿಶ್ವಯುದ್ಧ ಹಿನ್ನೆಲೆಯಲ್ಲಿ ವಿಭಿನ್ನ, ವಿಚಿತ್ರ ವಾದ(ಇಸಂ) ಕೇಳಿಬರುತ್ತಿದೆ. ಪ್ರಜಾಪ್ರಭುತ್ವ, ಸಾಮ್ರಾಜ್ಯವಾದ, ವಸಾಹುತುಶಾಹಿ, ನಾಝಿಸಂ, ಫ್ಯಾಸಿಸಂ, ಸೋಶಿಯಲಿಸಂ ಇತ್ಯಾದಿ ಎಲ್ಲವೂ ಒಂದೇ ಚೀಲದೊಳಗಿರುವ ಬೇರೆ ಬೇರೆ ಪದಗಳು. ಇವರೆಲ್ಲರ ಉದ್ದೇಶ ಒಂದೇ– ತಮ್ಮ ತಮ್ಮ ಸಾಮ್ರಾಜ್ಯದ (ವಸಾಹತು) ಹಿತರಕ್ಷಣೆ ಹಾಗೂ ವಿಸ್ತರಣೆ. ಅದಕ್ಕಾಗಿ ಕತ್ತಿಯ ಬಲಪ್ರಯೋಗ ಮತ್ತು ಅದರ ಬಲದಿಂದ ಗೆಲ್ಲುವ ಪ್ರಯತ್ನ. ಜಿಸ್‌ಕೀ ಲಾಠೀ ಉಸ್‌ಕೀ ಭೈಂಸ್(ಲಾಠಿ ಉಳ್ಳವನದ್ದೇ ಕೋಣ). ಹಾಗಾಗಿ ಯುದ್ಧನಿರತ ದೇಶಗಳ ಮೂಲ ಉದ್ದೇಶವನ್ನೇ ಅರ್ಥ ಮಾಡಿಕೊಳ್ಳದೆ ಕೇವಲ ಆಕರ್ಷಕ ಘೋಷಣೆಗೆ ಮರುಳಾಗಿ ಬೆಂಬಲ, ಸಮರ್ಥನೆ ನೀಡುವುದು ಮೂರ್ಖತನವಷ್ಟೇ ಅಲ್ಲ, ಆತ್ಮಹತ್ಯಾಕಾರಕವೂ ಹೌದು.

ಹಿಟ್ಲರ್‌ನನ್ನು ರಾಕ್ಷಸ, ನಾಝೀವಾದಿ, ಸರ್ವಾಧಿಕಾರಿ, ಕ್ರೂರಿ ಹಾಗೂ ಚರ್ಚಿಲ್‌ನನ್ನು ಪ್ರಜಾತಂತ್ರವಾದಿ, ದೇವದೂತ ಎಂಬಂತೆ ಬಣ್ಣಿಸುವುದು ಎರಡೂಮೂರ್ಖತನವೇ.ಇಬ್ಬರೂಒಂದೇ.ಜರ್ಮನಿಗೆನಾಝಿಸಂ,ರಷ್ಯಾಕ್ಕೆ ಬೋಲ್ಷೇಯಿಸಂ, ಇಟಲಿಗೆ ಫ್ಯಾಸಿಸಂ ಲಾಭದಾಯಕವೇ. ಪ್ರಜಾತಂತ್ರ ಸ್ಥಾಪನೆಗಾಗಿ ಇಂಗ್ಲೆಂಡ್ ತೆತ್ತ ಬೆಲೆ ಎಷ್ಟು ಎಂಬುದು ನಮಗೆ ತಿಳಿದೇ ಇದೆ.

ರಾಜನೀತಿಯಲ್ಲಿ ವಾಸ್ತವಿಕ ಕಾರ್ಯನೀತಿ, ಪದ್ಧತಿ ಹೇಗಿರಬೇಕು, ಅದು ಹೇಗೆವ್ಯಾವಹಾರಿಕವಾಗಿರಬೇಕುಎಂಬುದುಚಿಂತನಾರ್ಹಸಂಗತಿ. ರಾಜನೀತಿ ಶಾಸ್ತ್ರ ಮತ್ತು ವಿಶ್ವದ ಇತಿಹಾಸಕ್ಕೆ ಒಂದು ನಿರ್ದಿಷ್ಟ ಸಿದ್ಧಾಂತವಿದೆ. ಹಾಗೆಯೇ ಜಗತ್ತಿನ ಎಲ್ಲ ಜನರಿಗೆ ಎಲ್ಲ ಕಾಲಕ್ಕೂ ಉಪಯುಕ್ತವಾದ ಘಟನಾವಳಿ ಇಲ್ಲವೇ ಸಮಾಜ ರಚನಾ ಪದ್ಧತಿ (ಸಾಮಾಜಿಕ ವ್ಯವಸ್ಥೆ)ಗಳು ಶಾಶ್ವತವಾಗಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ.

ಪ್ರಜಾತಾಂತ್ರಿಕ ಮೌಲ್ಯಗಳು, ವೈಯಕ್ತಿಕ ಸ್ವಾತಂತ್ರ್ಯ ಇತ್ಯಾದಿ ವಿಷಯಗಳಲ್ಲಿ ಆಂಗ್ಲರಿಗಿರುವ ನಂಬಿಕೆ, ಬದ್ಧತೆಗಳನ್ನು ಸರಿಗಟ್ಟುವವರು ಜಗತ್ತಿನಲ್ಲಿಯಾರೂಇಲ್ಲ,ನಿಜ.ಆದರೆಯುದ್ಧಪ್ರಾರಂಭವಾಗುತ್ತಿದ್ದಂತೆಯೇ ಅವರು ತಮ್ಮ ಸಂವಿಧಾನ, ಪ್ರಜಾತಾಂತ್ರಿಕ ಮೌಲ್ಯ ಆದಿಗಳನ್ನು ಬದಿಗಿಟ್ಟು ಯುದ್ಧತಂತ್ರವನ್ನಷ್ಟೇ ಅನುಸರಿಸುವುದು ಯಾಕೆ? ಜರ್ಮನಿಯಲ್ಲಾದರೋ ಹಿಟ್ಲರನ ಮಾತೇ ಕಾನೂನು. ಇಂಗ್ಲೆಂಡ್‌ನ ಚರ್ಚಿಲ್‌ನದ್ದೂ ಅದೇ ರೀತಿ. ಜರ್ಮನಿ ಸಾಮ್ರಾಜ್ಯವಾದಿ ದೇಶ. ಹಿಟ್ಲರ್‌ನದು ನಾಝೀವಾದ. ಅವರದ್ದು ಆಕ್ರಮಕ ನೀತಿ. ಆದ್ದರಿಂದ ಜರ್ಮನ್ ವಿರುದ್ಧ ಭಾರತೀಯರು ಹೋರಾಡಲೇಬೇಕು, ಅದು ಭಾರತೀಯರ ಕರ್ತವ್ಯವೆಂದೋ ಅಥವಾ ಇಂಗ್ಲೆಂಡ್, ಅಮೆರಿಕಾ, ಫ್ರಾನ್ಸ್‌ಗಳು ಪ್ರಜಾತಂತ್ರದ ಸಮರ್ಥಕರು, ಹಾಗಾಗಿ ಅವರನ್ನು ಬೆಂಬಲಿಸಬೇಕೆಂದೋ ಹೇಳುವುದು ಸರಿಯಲ್ಲ. ಏಕೆಂದರೆ ಹಾಗೆ ಹೇಳುವುದರಲ್ಲಿ ಯಾವುದೇ ಸತ್ಯವಿಲ್ಲ.

ಹಾಗಾಗಿ ಯುದ್ಧದ ಈ ಸಂದರ್ಭದಲ್ಲಿ ಯಾವ ದೇಶ ಹಿಂದುಸ್ತಾನದ ಹಿತ ರಕ್ಷಿಸಬಲ್ಲುದೋ ಅದೇ ನಮ್ಮ ಮಿತ್ರದೇಶ. ಅದೇ ನಮ್ಮ ವಾಸ್ತವಿಕ, ವ್ಯಾವಹಾರಿಕ ಮತ್ತು ರಾಜನೈತಿಕ ಕಾರ್ಯನೀತಿಯಾಗಬೇಕು. ಅವರು (ಆ ದೇಶಗಳು) ಯಾವ ವಾದ(ಇಸಂ)ಕ್ಕೆ ಸೇರಿದ್ದರೂ ಸರಿಯೇ, ನಮ್ಮ ಹಿತರಕ್ಷಕ ದೇಶವೇ ನಮ್ಮ ಮಿತ್ರ.

ಇಂಗ್ಲೆಂಡ್, ಅಮೆರಿಕಾ, ಫ್ರಾನ್ಸ್, ಜರ್ಮನಿ, ರಷ್ಯಾ ಮತ್ತಿತರ ದೇಶಗಳು ಪರಸ್ಪರ ಯುದ್ಧ ಮಾಡಿರುವ ನಿದರ್ಶನಗಳಿವೆ. ಉದಾಹರಣೆಗೆ–ಇಂಗ್ಲೆಂಡ್ ವಿರುದ್ಧ ಅಮೆರಿಕಾ, ಇಂಗ್ಲೆಂಡ್ ವಿರುದ್ಧ ಫ್ರಾನ್ಸ್, ಜರ್ಮನಿ ವಿರುದ್ಧ ಫ್ರಾನ್ಸ್ ಇತ್ಯಾದಿ. ಅಮೆರಿಕನ್ನರು ತಮ್ಮ ಸ್ವಾತಂತ್ರ್ಯಕ್ಕಾಗಿ ಬ್ರಿಟನ್ ವಿರುದ್ಧವೇ ಹೋರಾಡಿದ್ದಾರೆ. ಈ ಎಲ್ಲ ಯುದ್ಧಗಳಿಗೆ ಮೂಲ ಕಾರಣ– ಸಾಮ್ರಾಜ್ಯ ವಿಸ್ತರಣೆ. ಇನ್ನು ನಾಝಿಗಳು ಮತ್ತು ಬೋಲ್ಷೆವಿಕರು ಕಟ್ಟರ್ ಶತ್ರುಗಳು. ಆದರೆ ಪೋಲೆಂಡ್ ಪ್ರಶ್ನೆ ಬಂದಾಗ ಇಬ್ಬರೂ ಒಂದಾದರು. ಒಂದು ಕಾಲಘಟ್ಟದಲ್ಲಿ ಪರಸ್ಪರ ಕತ್ತಿ ಹಿಡಿದು ಯುದ್ಧ ಮಾಡಿದ್ದವರು. ಇಂದು ಅನಿವಾರ್ಯವಾಗಿ ಮಿತ್ರರಾಗಿದ್ದಾರೆ. ಕಾಲಕ್ಕೆ ತಕ್ಕಂತೆ ಕೋಲ ಕಟ್ಟುವವರಂತೆ, ಅಷ್ಟೇ. ಇದು ಸಮಯಸಾಧಕ ನೀತಿ. ಅನುಕೂಲಸಿಂಧು ಶಾಸ್ತ್ರ. ಒಂದು ಕಾಲದ ಮಿತ್ರರು ಇದೀಗ ಶತ್ರುಗಳಾಗಿದ್ದಾರೆ. ಶತ್ರು ಪಕ್ಷದಲ್ಲಿದ್ದವರು ಮಿತ್ರರಾಗಿದ್ದಾರೆ. ಇದಕ್ಕೆ ಯಾವ ನೈತಿಕ ಆಧಾರವೂ ಇಲ್ಲ.

ಶತ್ರು ಇನ್ನೊಂದು ದೇಶದೊಂದಿಗೆ ಯುದ್ಧ ನಿರತನಾಗಿರುವಾಗ ಸ್ವಾತಂತ್ರ್ಯ ಪ್ರಾಪ್ತಿಗಾಗಿ ಸಶಸ್ತ್ರ ಕ್ರಾಂತಿ ಮಾಡುವುದು ಗುಲಾಮೀ ದೇಶದ ಜನರ ಪ್ರಮುಖ ದಾರಿಯಾಗಿದೆಎಂದುಸಾಕ್ರಟೀಸ್ ಹೇಳಿದ್ದಾನೆ. ಆದರೆಪ್ರಸ್ತುತ ಸನ್ನಿವೇಶದಲ್ಲಿ ನಮ್ಮನ್ನು ನಿಃಶಸ್ತ್ರರನ್ನಾಗಿ ಮಾಡಲಾಗಿದೆ.... ಅಹಿಂಸಾವಾದ ಮಾರ್ಗ ನೈತಿಕ ಮತ್ತು ವ್ಯಾವಹಾರಿಕ ದೃಷ್ಟಿಯಿಂದಲೂ ತ್ಯಾಜ್ಯವೇ ಸರಿ. ಯುದ್ಧನೀತಿ ಶಾಸ್ತ್ರದಲ್ಲಿ ವ್ಯಾವಹಾರಿಕ ದೃಷ್ಟಿಕೋನಕ್ಕೇ ಮಹತ್ವ. ವ್ಯಾವಹಾರಿಕ ದೃಷ್ಟಿಕೋನವೇ ನೀತಿಶಾಸ್ತ್ರದ ಆಧಾರ. ಮಾನದಂಡ. ನೀತಿ–ಅನೀತಿ, ನ್ಯಾಯ–ಅನ್ಯಾಯ. ಒಳಿತು– ಕೆಡುಕು, ಸದ್ಗುಣ–ದುರ್ಗುಣ ಇತ್ಯಾದಿಗಳಿಗೆ ವ್ಯವಹಾರವೇ ಆಧಾರ. ಅದನ್ನು ವ್ಯಾವಹಾರಿಕ ಮಾನದಂಡದಿಂದ ನಿರ್ಧರಿಸಬೇಕು ಎನ್ನುತ್ತಾರೆ ನೀತಿಶಾಸ್ತ್ರಜ್ಞರು. ಮಾನವ ಬದುಕಿಗೆ ಉಪಯುಕ್ತವಾದ ಆಚಾರ–ವಿಚಾರಗಳೆಲ್ಲನೀತಿಸಮ್ಮತವಾದವುಗಳೇ. ಅಹಿಂಸಾವಾದ ವ್ಯವಹಾರ ಯೋಗ್ಯವಲ್ಲ...."

ಯುದ್ಧ ಯಾರ ನಡುವೆಯೇ ನಡೆದಿರಲಿ, ಹಿಂದುಸ್ತಾನದ ಹಿತರಕ್ಷಣೆಗೇ ಆದ್ಯತೆ ನೀಡಬೇಕೆಂಬುದು ಸಾವರ್ಕರ್ ದೃಷ್ಟಿಕೋನವಾಗಿತ್ತು. ವರ್ತಮಾನದ ಅಮೆರಿಕಾ–ಇರಾನ್ ಯುದ್ಧದಲ್ಲೂ ಅಷ್ಟೆ. ಆ ದೇಶಗಳು ಎಷ್ಟಾದರೂ ಬಡಿದಾಡಿಕೊಳ್ಳಲಿ. ಆದರೆ ಅದರಿಂದ ಭಾರತಕ್ಕೆ, ಇಲ್ಲಿನ ಜನಜೀವನಕ್ಕೆ ತೊಂದರೆ ಆಗುತ್ತದೆ ಎಂದಾದರೆ ಭಾರತ ಸರಕಾರವು ಅಮೆರಿಕ, ಇಸ್ರೇಲ್ ಮತ್ತು ಇರಾನ್ – ಈ ಎಲ್ಲ ದೇಶಗಳ ಮೇಲೆ ಒತ್ತಡ ಹೇರಿ ಯುದ್ಧ ಸ್ಥಗಿತಕ್ಕೆ ಆದ್ಯತೆ ನೀಡಬೇಕಾಗಿದೆ. ಅಂತಿಮವಾಗಿ ನಮಗೆ ನಮ್ಮ ದೇಶದ ಹಿತವೇ ಮುಖ್ಯವಾಗಬೇಕಾಗಿದೆ.

(ಆಧಾರ: Hindu Rashtra Darshan by Veer Sarvarkar, ಪ್ರಕಾಶಕರು: ಪ್ರಭಾತ್ ಪ್ರಕಾಶನ, ನವದೆಹಲಿ)

ಹರೆಯದವರ ಒತ್ತಡಗಳು

ಒತ್ತಡಗಳು ಎಲ್ಲರಿಗೂ ಬರುವುದು ಸಹಜ. ಆದರೆ ಒತ್ತಡಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ, ಪರಿಹಾರ ಕಂಡುಕೊಂಡು ಮುಂದೆ ಸಾಗಬೇಕು.


ತಾರುಣ್ಯ ತಲ್ಲಣ

• ಡಾ.ಕೆ,ಆರ್, ಶ್ರೀಧರ್

drkrsridhar208@gmail.com



ರಾಮು ಈಗ ಎರಡನೇ ಪಿಯುಸಿಯಲ್ಲಿ ಓದುತ್ತಿದ್ದಾನೆ. ಒಂಭತ್ತನೇ ತರಗತಿಯಲ್ಲಿ ಒಳ್ಳೆಯ ಅಂಕ ಗಳಿಸಿದ್ದ ರಾಮುವಿಗೆ ಹತ್ತನೇ ತರಗತಿಯ ಅಂತಿಮ ಪರೀಕ್ಷೆಯಲ್ಲಿ ಕಡಿಮೆ ಅಂಕಗಳು ಬಂದವು. ಇದರಿಂದ ಅವನು ಮನೆಯವರಿಂದ ಹಲವಾರು ಟೀಕೆ ಟಿಪ್ಪಣಿಗಳನ್ನು ಎದುರಿಸಬೇಕಾಗಿ ಬಂತು. ನೀನು ಸರಿಯಾಗಿ ಓದಲಿಲ್ಲ, ಆಟ ಆಟ ಅಂತ ಟೈಮು ಕಳೆದೆ. ಅದಕ್ಕಾಗಿ ನಿನಗೆ ಕಡಿಮೆ ಅಂಕಗಳು ಬಂದವು ಎಂದು ಅಪ್ಪ ಹೇಳಿದರೆ, ಅಮ್ಮ ನೋಡು ನಿನ್ನ ಅಕ್ಕ ಚೆನ್ನಾಗಿ ಓದಿ ಹತ್ತನೇ ತರಗತಿಯಲ್ಲಿ ತೊಂಭತ್ತು ಪರ್ಸೆಂಟ್ ತಗೊಂಡಿದ್ಲು. ಈಗ ನೋಡು, ನಿನಗೆ ನಾವು ಏನು ಮಾಡ್ಬೇಕೂ ಅಂತಾ ಗೊತ್ತಾಗ್ತಿಲ್ಲ. ಅದೂ ಅಲ್ದೇ ನೋಡೋರ ಮುಂದೆ ತಲೆ ತಗ್ಗಿಸಬೇಕು ಎಂಬ ಟೀಕೆ. ಅವೆಲ್ಲವನ್ನೂ ಸಹಿಸಿಕೊಂಡ ರಾಮುವಿಗೆ ಮೊದಲನೇ ಪಿಯುಸಿಯಲ್ಲಿ ಒಳ್ಳೆಯ ಅಂಕಗಳು ಬಂದರೂ, ಅಕ್ಕನಿಗಿಂತ ಕಡಿಮೆಯಾಗಿತ್ತು. ಹೇಗಾದರೂ ಮಾಡಿ ಎರಡನೇ ಪಿಯುಸಿಯಲ್ಲಿ ಒಳ್ಳೆಯ ಅಂಕ ಪಡೆದು ಎಲ್ಲರಿಂದಲೂ ಹೊಗಳಿಸಿಕೊಳ್ಳಬೇಕೆಂಬ ಹಂಬಲ ರಾಮುವಿಗೆ. ಅದಕ್ಕಾಗಿ ಆಟವಾಡುವುದನ್ನು ಬಿಟ್ಟ, ಕಾಲೇಜಿನ ಯಾವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸ್ನೇಹಿತರೊಂದಿಗೆ ಬೆರೆಯುತ್ತಿರಲಿಲ್ಲ, ದಿನದ ಇಪ್ಪತ್ನಾಲ್ಕು ಗಂಟೇನೂ ಓದು ಓದು ಓದು. ಆದರೂ ಕೊನೆಗೆ ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳು ಬರಲಿಲ್ಲ.



ಹರೆಯದವರಲ್ಲಿ ಒತ್ತಡ ತರುವ ಮುಖ್ಯವಾದ ಅಂಶವೆಂದರೆ ಪಾಠ ಮತ್ತು ಪರೀಕ್ಷೆ. ಪೋಷಕರು, ಉಪಾಧ್ಯಾಯರು, ಸ್ನೇಹಿತರು ಅಥವಾ ಸಂಬಂಧಿಕರೇ ಆಗಲಿ ಎಲ್ಲರ ಗಮನವೂ ತಮ್ಮ ಮಗ/ಮಗಳು ಎಷ್ಟು ಅಂಕ ಗಳಿಸುತ್ತಾರೆಂಬುದು. ಇದಕ್ಕೆ ಅವರು ಮಾಡುವ ಟೀಕೆ ಟಿಪ್ಪಣಿಗಳು. ಕೆಲವು ವಿದ್ಯಾರ್ಥಿಗಳು ಒತ್ತಡವನ್ನು ತಡೆಯಲಾರದೇ ಖಿನ್ನತೆಗೆ ಒಳಗಾಗುತ್ತಾರೆ. ಕೆಲವರು ರಾಮುವಿನ ಹಾಗೆ, ಪಠ್ಯೇತರ ಚಟುವಟಿಕೆಗಳನ್ನು ಬಿಟ್ಟು, ಬೇರೆ ಪ್ರಪಂಚವೇ ಇಲ್ಲವೆಂಬಂತೆ ಓದುವುದರಲ್ಲಿ ಮಗ್ನರಾಗುತ್ತಾರೆ. ಇದರಿಂದ ಅವರ ಒತ್ತಡ ಇನ್ನಷ್ಟು ಹೆಚ್ಚಾಗುತ್ತದೆಯೇ ವಿನಃ ಕಲಿಕೆಯಲ್ಲಿ ಉತ್ತಮವಾಗಲು ಸಾಧ್ಯವಿಲ್ಲ. ಇಂಗ್ಲೀಷಿನ "All study no play makes jack a dull boy" ಅಂದರೆ, ಜಾಣನೂ ಓದಿನಲ್ಲಿ ಮಗ್ನನಾಗಿ ಮರುಳಾದ ಕೂಟು ವಿದ್ಯಾರ್ಥಿಯಾಗುತ್ತಾನೆ ಎಂಬುದನ್ನು ಪೋಷಕರು ಅರ್ಥ ಮಾಡಿಕೊಳ್ಳಬೇಕು.

ಸಾಮಾಜಿಕವಾಗಿ ಹರೆಯದವರು ಎದುರಿಸಬೇಕಾದ ಒತ್ತಡಗಳು ಹಲವು. ಮುಖ್ಯವಾಗಿ, ಹಿರಿಯರು ಮತ್ತು ಇತರರು ಹೇಳುವ, ನೀನು ಕುಡುಮಿ, ಬುದ್ಧು, ಎಂಬ ಟೀಕೆ ಟಿಪ್ಪಣಿಗಳು. ಉದಾಹರಣೆಗೆ ನೀನು ಕುಳ್ಳ ಕಣೋ, ನೋಡು ಅವನು ಎಷ್ಟು ಎತ್ತರವಾಗಿದ್ದಾನೆ. ನೀನೇನೋ ಇನ್ನೂ ಹೆಣ್ಣು ಆಗಿದೀಯ, ಜೋರು ಇರಬೇಕು ಕಣೋ, ಯಾಕೋ ಒಂಥರಾ ಇದೀಯಾ, ನಮ್ಮ ಜೊತೆಗೆ ಸೇರೋಲ್ಲ ಎಂಬ ಸ್ನೇಹಿತರ ಹೋಲಿಕೆಯ ಮಾತುಗಳು. ನಿನಗೆ ಲವ್ ಮಾಡೋದಕ್ಕೆ ಬರೋಲ್ಲ ಕಣೋ. ನೋಡು ಅವನು ಎಷ್ಟು ಧೈರ್ಯದಿಂದ ಮಾತಾಡ್ತಾನೆ. ಯಾರನ್ನಾದ್ರೂ ಲವ್ ಮಾಡ್ಬೇಕು ಕಣೋ ಅದು ಖುಷಿ ಕೊಡುತ್ತೆ ಎಂಬ ಸ್ನೇಹಿತರ ಉಚಿತ ಸಲಹೆಗಳು ಕೂಡ ಹರೆಯದವರ ಮನಸ್ಸಿನಲ್ಲಿ ತಡೆಯಲಾರದ ಒತ್ತಡವನ್ನುಂಟು ಮಾಡುತ್ತದೆ.

ಕಲುಷಿತ ಕೌಟುಂಬಿಕ ವಾತಾವರಣವೂ ಹರೆಯದವರ ಮನಸ್ಸನ್ನು ಇನ್ನಿಲ್ಲದ ಒತ್ತಡಕ್ಕೀಡು ಮಾಡುತ್ತದೆ. ಪೋಷಕ ದಂಪತಿಗಳ ಮಧ್ಯೆ ಜಗಳ, ವಿವಾಹ ವಿಚ್ಛೇಧನ, ಪೋಷಕರ ಅತಿಯಾದ ನಿರೀಕ್ಷೆ, ನಕಾರಾತ್ಮಕ ಸ್ವಭಾವದ ಪೋಷಕರು, ಆರ್ಥಿಕ ಮುಗ್ಗಟ್ಟು ಮತ್ತು ಸದಾ ಮಕ್ಕಳ ಕುರಿತು ಕೀಳು ನುಡಿಗಳನ್ನಾಡುವ ಕೆಲವು ಪೋಷಕರ ಹೀಗೆ ಇರಬೇಕು, ನಾವು ಹೇಳಿದ ಹಾಗೇ ಕೇಳಬೇಕು ಎಂಬ ಪೋಷಕರ ಕಠಿಣ ನಿರ್ದೇಶನಗಳು ಸಹ ಕುಟುಂಬದ ವಾತಾವರಣವನ್ನು ಕಲುಷಿತ ಗೊಳಿಸುತ್ತದೆ. ಇದು ಹರೆಯದವರ ಒತ್ತಡಕ್ಕೆ ಕಾರಣ.

ಹರೆಯದವರನ್ನು ಒತ್ತಡಕ್ಕೀಡು ಮಾಡುವ ಮತ್ತೊಂದು ಅಂಶ 'ತನ್ನತನ'ವನ್ನು ಕಂಡುಕೊಳ್ಳುವ ತವಕ, ತಾನು ಹೇಗೆ ಬೇರೆಯಾಗಿ ಕಾಣಬೇಕು, ತನ್ನನ್ನು ಯಾರು ಗುರುತಿಸುತ್ತಾರೆ, ಯಾರ ಹಾಗೆ ಕಂಡರೆ ಚೆನ್ನ ಮತ್ತು ಯಾರಂತಾಗಬೇಕು ಎಂಬ ಹಲವಾರು ಪ್ರಶ್ನೆಗಳು. ತಾನು ಯಾರಂತೆ ಆಗಬೇಕು? ಯಾವ ಉಡುಪು ಧರಿಸಿದರೆ, ಎಲ್ಲರಿಗಿಂತ ಸುಂದರವಾಗಿ ಕಾಣುತ್ತೇನೆ? ಯಾವ ಉದ್ಯೋಗ ಆರಿಸಿಕೊಂಡರೆಒಳ್ಳೆಯದು?ಎಂಬಹಲವಾರುಯೋಚನೆಗಳಿಂದ'ತನ್ನತನ'ವನ್ನು ಕಂಡುಕೊಳ್ಳುವುದು ಹರೆಯದವರಿಗೆ ಒತ್ತಡವನ್ನುಂಟು ಮಾಡುತ್ತದೆ.

ಮನೋವಿಕಾಸದಿಂದ, ತನ್ನ ಮುಂದಿನ ನಡೆ ಏನು? ಓದು ಮುಗಿಸಿದ ನಂತರ ಮುಂದೇನು? ತಾನು ಯಾವ ಹುದ್ದೆ ಆರಿಸಿಕೊಳ್ಳಬೇಕು, ಅದರಲ್ಲಿ ಸಾಧನೆ ಮಾಡುವುದು ಸಾಧ್ಯವೇ? ತನ್ನ ಸ್ನೇಹಿತರು ಯಾವ ವೃತ್ತಿಯನ್ನು ಆರಿಸಿಕೊಳ್ಳುತ್ತಾರೆ. ಮುಂದಿರುವ ಆಗು ಹೋಗುಗಳನ್ನು ನಿಭಾಯಿಸುವುದು ಹೇಗೆ? ಅದು ತಂನ್ನಿಂದ ಸಾಧ್ಯವೇ ಎಂಬ ಹಲವು ಪ್ರಶ್ನೆಗಳು ಹರೆಯದವರನ್ನು ಒತ್ತಡಕ್ಕೀಡು ಮಾಡುತ್ತವೆ.

ಸಾಮಾಜಿಕ ಜಾಲತಾಣಗಳಾದ, ಫೇಸ್‌ಬುಕ್, ವಾಟ್ಸ್‌ಅಪ್, ಯೂಟ್ಯೂಬ್, ಟ್ವಿಟರ್, ಟಿ.ವಿ. ಮುಂತಾದ ಸಾಮಾಜಿಕ ಮಾಧ್ಯಮಗಳಲ್ಲಿ ಆಕರ್ಷಕ ಜಾಹೀರಾತುಗಳು, ಕೆಲವು ಅಸಹಜವಾದ ದೃಶ್ಯಗಳನ್ನು ಅತ್ಯಾಕರ್ಷಕವಾಗಿ ತೋರಿಸುತ್ತಾರೆ. ಅಪಕ್ವವಾದಹರೆಯದಮನಸ್ಸಿಗೆಇವುಗಳಲ್ಲಿಯಾವುದುಸಹಜ? ಯಾವುದು ಅಸಹಜ? ಅದರಿಂದ ತನ್ನ ಭವಿಷ್ಯಕ್ಕೆ ಏನು ಉಪಯೋಗವಾಗುತ್ತದೆ ಎಂಬ ಗೊಂದಲ ಉಂಟಾಗುತ್ತದೆ. ಅದರಂತೆ ಸನ್ಮಾರ್ಗ ತೆಗೆದುಕೊಳ್ಳಬೇಕು. ಇವೂ ಸಹ ಹರೆಯದ ಮನಸ್ಸನ್ನು ಒತ್ತಡಕ್ಕೀಡುಮಾಡುತ್ತವೆ.

ಪರಿಣಾಮಗಳು: ಮೇಲಿನ ಒತ್ತಡಗಳ ಪರಿಣಾಮ ಹರೆಯದ ಮನಸ್ಸು ಸದಾ ಗೊಂದಲದಿಂದ ಕೂಡಿರುತ್ತದೆ. ಇದರಿಂದ ಯೋಚನೆಗಳು ಹೊಳೆಯುವುದಿಲ್ಲ, ತನ್ನ ಭವಿಷ್ಯವೇ ಕತ್ತಲಾದಂತೆನಿಸುತ್ತದೆ. ಓದಲು ಆಸಕ್ತಿ ಕಡಿಮೆಯಾಗುತ್ತದೆ. ಆತ್ಮವಿಶ್ವಾಸದಕೊರತೆ ಉಂಟಾಗುತ್ತದೆ.ತನ್ನನ್ನು ಕುರಿತುನಕಾರಾತ್ಮಕ ಭಾವನೆಗಳು ಆಳವಾಗಿ ಬೇರೂರುತ್ತವೆ. ಕೆಲವೊಮ್ಮೆ ನಾನೇಕೆ ಈ ಪ್ರಪಂಚಕ್ಕೆ ಬಂದೆ ಎಂಬ ಯೋಚನೆಯಿಂದ ಪಾಪ ಪ್ರಜ್ಞೆ ಉಂಟಾಗುತ್ತದೆ. ಓದುವುದರಲ್ಲಿ ನಿರಾಸಕ್ತಿ, ಏಕಾಗ್ರತೆಯ ಕೊರತೆ, ಓದಿದ್ದೆಲ್ಲವೂ ಮರೆತಂತೆನಿಸುತ್ತದೆ. ಸದಾ ಒಂದು ವಿಧದ ಭಯ, ಆತಂಕ ಮನಸ್ಸನ್ನು ಕಾಡುತ್ತವೆ. ಒಂಟಿತನವೇ ಮೇಲು ಎಂಬ ಭಾವನೆ ಉಂಟಾಗಿ ಯಾರೊಂದಿಗೂ ಬೆರೆಯುವುದಿಲ್ಲ. ಸದಾ ಯಾವುದೋ ಲೋಕದಲ್ಲಿ ಮಗ್ನನಾಗಿರುವಂತೆವರ್ತಿಸುತ್ತಾನೆ.ಕೆಲವೊಮ್ಮೆಖಿನ್ನತೆಉಂಟಾಗುತ್ತದೆ.ತೀವ್ರವಾದ ಖಿನ್ನತೆಯು ಆತ್ಮಹತ್ಯೆಯಲ್ಲಿ ಕೊನೆಗೊಳ್ಳುತ್ತದೆ. ಅದಿಲ್ಲದಿದ್ದಲ್ಲಿ ಮದ್ಯ, ಮಾದಕ ವಸ್ತುಗಳ ವ್ಯಸನಕ್ಕೊಳಗಾಗಿ ಹರೆಯದವರು ದಾರಿ ತಪ್ಪಿದ ಮಕ್ಕಳಾಗುತ್ತಾರೆ. ಕೆಲವರು ಸಮಾಜಬಾಹಿರ ಕಾರ್ಯಗಳಲ್ಲಿ ಭಾಗಿಯಾಗಬಹುದು.

ಮೇಲಿನ ಒತ್ತಡಗಳು ಎಲ್ಲರಿಗೂ ಬರುವುದು ಸಹಜ. ಆದರೆ ಒತ್ತಡಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ, ಪರಿಹಾರ ಕಂಡುಕೊಂಡು ಮುಂದೆ ಸಾಗುತ್ತಾ ಸಾಧನೆಗೈಯುವುದು ಮುಖ್ಯ. ಇದಕ್ಕೆ ಅವಶ್ಯವಿರುವುದು ಸಹನೆ, ಆತ್ಮವಿಶ್ವಾಸ ಮತ್ತು ಹಿತವಾದ ಕೌಟುಂಬಿಕ ವಾತಾವರಣ. ಅದರೊಂದಿಗೆ ಪೋಷಕರ ಸಕಾರಾತ್ಮಕ ಮಾರ್ಗದರ್ಶನ. ಆತ್ಮೀಯ ಸ್ನೇಹಿತರು, ಉಪಾಧ್ಯಾಯರು ಮತ್ತು ಸಮಾಜಚಿಂತಕರೊಂದಿಗೆ ತಮ್ಮ ಒತ್ತಡಗಳನ್ನು ಹಂಚಿಕೊಂಡು ಪರಿಹಾರವನ್ನು ಕಂಡುಕೊಂಡಾಗ ಹರೆಯದವರ ಬಾಳು ಹಸನಾಗುತ್ತದೆ.

ಕೆಮ್ಮು ಒಂದು; ಅರ್ಥ ಹಲವು

ಕೆಮ್ಮುವುದರ ಪರಿ ಅಪಾರ!

ವಾರದ ವರಸೆ

• ಸಂದೇಶ್ ನಾಯ್ಕ್ ಹಕ್ಲಾಡಿ

naiksh2@gmail.com



ಕೆಮ್ಮಿದರೆ ಆ ಪರಿ ಕಸಿವಿಸಿಗೊಳ್ಳುವ, ಗುಮಾನಿಯ ಕಣ್ಣುಗಳಲ್ಲಿ ಕಾಣುವ ಕಾಲವೊಂದು ಬಂದೀತು ಎಂದು ಖುದ್ದು 'ಕೆಮ್ಮು'ವೂ ಕೂಡಾ ಎಂದೂ ಭಾವಿಸಿರಲಿಕ್ಕಿಲ್ಲ. ಆದರೂ 'ಕೆಮ್ಮು=ಡೇಂಜರ್!' ಏನೋ ಎಂಬಂತೆ ಮಾಡಿದ ಕುಖ್ಯಾತಿ ಕೊರೊನಾಕ್ಕೆ ಸಲ್ಲುತ್ತದೆ. ಹಾಗೆ ನೋಡಿದರೆ ಮನುಷ್ಯರು ವಿವಿಧ ಸಂದರ್ಭಗಳಲ್ಲಿ, ಬೇರೆ ಬೇರೆ ಅರ್ಥ–ದನಿ–ಭಾವಗಳಲ್ಲಿ 'ಯಾರೂ ಕೆಮ್ಮಂಗಿಲ್ಲ' ಎಂದು ಹೇಳಿಕೊಂಡೇ ಬರುತ್ತಿದ್ದರು. ಆದರೆ ಕೊರೊನಾ ಕಾಲಘಟ್ಟದಲ್ಲಿ ಮಾತ್ರ ಆ ಸೂಚನೆಯ ತೀವ್ರತೆ ಬೇರೆಯದೇ ಮಟ್ಟವನ್ನು ತಲುಪಿತ್ತು. 'ರೂಪ ಒಂದೇ, ಭಾವ ಹಲವು' ಎಂಬ ಮಾತಿನಂತೆ ಕೆಮ್ಮು ಒಂದೇ ಆದರೂ ಅದರ ಹಿಂದಿನ ಭಾವ–ಅರ್ಥ ಹತ್ತು ಹಲವು. ಬನ್ನಿ, ಅಂಥ ಹತ್ತು ಬಗೆಯ ಕೆಮ್ಮುಗಳನ್ನು ಅರ್ಥೈಸಿಕೊಳ್ಳೋಣ...

1. 'ನೆಗಡಿ'ಯಾರ ಕೆಮ್ಮು : ಇಲ್ಲಿ 'ನೆಗಡಿ'ಯಾರ ಎಂಬ ಪದ ಬಳಸಿದ್ದು, ಒಂದು ನೆಗಡಿ ಯಾರನ್ನು ಬಿಟ್ಟಿದೆ ಎಂಬರ್ಥದಲ್ಲಾದರೆ, ಇನ್ನೊಂದು ಅನಾರೋಗ್ಯ ಕಾಲಿಡುವ, ಕಾಡುವ ಸಮಯ ಇದಾಗಿದೆ ಎಂಬ ಸೂಚನೆಯನ್ನು ಅದು ಹೊತ್ತು ತರುತ್ತದೆ ಎಂಬರ್ಥದಲ್ಲಿ. ಶೀತ–ನೆಗಡಿಯ ಬಲು ಹತ್ತಿರದ ನೆಂಟ ಈ ಕೆಮ್ಮು. ನೆಗಡಿಯೇ ತನ್ನ ಅಸ್ತಿತ್ವವನ್ನು, ಕೂಗಿ ಕೂಗಿ ಹೇಳುತ್ತಿದೆಯೋ ಎಂಬಂತೆ ನೆಗಡಿಬಾಧಿತರು ಕೆಮ್ಮುತ್ತಲೇ ಇರುತ್ತಾರೆ. ಈ ನೆಗಡಿ ಕೆಮ್ಮು, ಕಾಲಕ್ರಮೇಣ ಒಣ ಕೆಮ್ಮುವಾಗಿ ಮಾರ್ಪಟ್ಟರಂತೂ ಅದರ ಕಷ್ಟ ಹೇಳತೀರದು. ಆಗ, ರಾತ್ರಿ ಹಗಲೆನ್ನದೇ ನೆಗೆ ನೆಗೆದು ಕೆಮ್ಮಿದರೂ ಸಮಾಧಾನವಾಗುವುದಿಲ್ಲ. ನೆಗಡಿಗೆ ಇಂಗ್ಲೀಷ್‌ಲಿ 'ರನ್ನಿಂಗ್ ನೋಸ್, ರನ್ನೀ ನೋಸ್' ಅಂತೆಲ್ಲ ಹೇಳುತ್ತಾರೆ. ಇದರ ಜೊತೆಗೆ ಕೆಮ್ಮುವೂ ಜೊತೆಯಾದರೆ, ನೋಸ್ ಅಲ್ಲಾ ನಾವೇ ಓಡಬೇಕಷ್ಟೇ!

2. ಸಿಕ್‌ಲೀವ್ ಕೆಮ್ಮು: ದಾಸರು, 'ಮಾಡು ಸಿಕ್ಕದಲ್ಲ..' ಎಂದು ಹಾಡಿದರು. ಆದರೆ ಈಗಿನ ನರಮಾನವರಾದ ನಾವೆಲ್ಲರೂ ಸಿಕ್ಕದಲ್ಲ ಎಂದು ಹಲುಬುವ ಹಲವಾರು ವಿಷಯಗಳಲ್ಲಿ 'ರಜೆ'ಯೂ ಕೂಡಾ ಒಂದು. ಅದು ಸುಲಭಕ್ಕೆ ಸಿಕ್ಕುವಂತೆ ಮಾಡುವಲ್ಲಿ 'ಸಿಕ್ ಲೀವ್' ಒಂದು ಮಟ್ಟಿಗೆ ನೆರವಿಗೆ ಬರುವುದು ನಿಜವಷ್ಟೇ! ಇಂತಿಪ್ಪ ಸಿಕ್ ಲೀವ್ ಪಡೆದುಕೊಳ್ಳುವ ಪ್ರಕ್ರಿಯೆ ಸಿಕ್ಕು ಸಿಕ್ಕಾಗಿ ಪರಿಣಮಿಸದೇ ಸರಾಗವಾಗಿ ನೆರವೇರುವಲ್ಲಿ ಕೆಮ್ಮು ನೆರವಿಗೆ ಬರುತ್ತದೆ. ರಜೆ ಕೇಳುವಾಗ, ರಜೆ ಮುಗಿಸಿ ಬಂದ ಮೇಲೆ, ಮಧ್ಯೆ ಯಾರಾದರೂ ಕಾಲ್ ಮಾಡಿದಾಗ ಮಾತಿನ ನಡು ನಡುವೆ ಕಾಣಿಸಿಕೊಳ್ಳುವ ಈ ಕೆಮ್ಮು 'ಸಿಕ್‌ಲೀವ್'ನ ಅಥೆಂಟಿಸಿಟಿಯನ್ನು ಸಾಬೀತುಪಡಿಸುತ್ತದೆ.

3. ಗಮನ ಸೆಳೆಯೋ ಕೆಮ್ಮು: ಮಾತಾಡುವುದಷ್ಟೇ ಮುಖ್ಯವಲ್ಲ, ಅವುಗಳನ್ನು ನಾಲ್ಕು ಜನ ಕೇಳುವಂತೆ ಆಡುವುದು ಬಹಳ ಮುಖ್ಯ. ಅದಕ್ಕೆಂದೇ ಕೆಲವರು – ವೇದಿಕೆಯ ಮೇಲೇ ಇರಲಿ, ಕೆಳಗೇ ಇರಲಿ – ತಮ್ಮ ಮಾತನ್ನು ಆರಂಭಿಸುವ ಮುನ್ನ ಸಣ್ಣಗೆ ಕೆಮ್ಮುತ್ತಾರೆ. ಅದು ಅತ್ತ ಗಂಟಲು ಸರಿಪಡಿಸಿಕೊಂಡಂತೆಯೂ ಆಯಿತು, ಇತ್ತ ಕೇಳುಗರ ಗಮನ ಸೆಳೆದಂತೆಯೂ ಆಯಿತು. ಮಧ್ಯೆ ಮಧ್ಯೆಯೂ ಕೆಲವರು ಈ ಕೆಮ್ಮಸ್ತ್ರವನ್ನು ಬಳಸುತ್ತಾರೆ. ಭಾರೀ ಗಲಾಟೆಯ ಕ್ಲಾಸ್ ರೂಮ್‌ನಲ್ಲಿ ಟೀಚರ್ ಬಂದು ಒಮ್ಮೆ ಜೋರಾಗಿ ಕೆಮ್ಮಿದರೆ, ಇಡೀ ಕ್ಲಾಸ್ ಗಪಚುಪ್ ಆಗುತ್ತದೆಂದರೆ, ಅದು ಕೆಮ್ಮುವಿನ ಪ್ರಭಾವವೋ, ಕೆಮ್ಮುತ್ತಿರುವವರ ಪ್ರಭಾವವೋ ಎಂದು ಯೋಚಿಸಲೇಬೇಕು.

4. ಕಾಯಿಲೆ ಕೆಮ್ಮು : ಕೆಮ್ಮು ಕೆಟ್ಟದ್ದು, ಕೆಮ್ಮುವಿನಿಂದ ತೊಂದರೆಯಾಗುತ್ತಿದೆ. ರೋಗದ ಕಾರಣಕ್ಕೆ ಕೆಮ್ಮುವಂತಾಗಿದೆ – ಹೀಗೆಲ್ಲ ಕೆಮ್ಮುವನ್ನು ದೂಷಿಸುವುದಿದೆ. ಆದರ ಧನಾತ್ಮಕ ಆಯಾಮ ನೋಡುವುದಾದರೆ, ಕೆಮ್ಮುವು ಮುಂದೆ ಬರುವ ಕಾಯಿಲೆ–ಕಸಾಲೆಗಳ ಬಗ್ಗೆ ಒಂದು ಮಟ್ಟಿಗಿನ ಮುನ್ನೆಚ್ಚರಿಕೆಯನ್ನು ನೀಡುತ್ತದೆ. ಒಳಗೇನೋ ಸರಿಯಿಲ್ಲ ಎನ್ನುವುದನ್ನು ದೇಹವು ಕೆಮ್ಮುವಿನ ಮೂಲಕವೇ ದಾಟಿಸಿದಂತಾಗುತ್ತದೆ. ಸಿನಿಮಾಗಳಲ್ಲಿ ತೋರಿಸುವಂತೆ ಒಮ್ಮಿಂದೊಮ್ಮೆಗೆ ಕೆಮ್ಮು ಆರಂಭವಾಗಿ, ಅದು ತೀವ್ರ ಸ್ವರೂಪ ಪಡೆದುಕೊಂಡು, ಬಳ್ ಎಂದು ರಕ್ತ ವಾಂತಿ ಮಾಡಿ, ಆಗಿಂದಾಗ್ಗೆ ಯಾವುದೋ ಗಂಭೀರ ಕಾಯಿಲೆಗೆ ತುತ್ತಾಗಿರುವ ಬಗ್ಗೆ ಗೊತ್ತಾದಂತೆಲ್ಲಾ ನಿಜ ಜೀವನದಲ್ಲಿ ಘಟಿಸದೇ ಹೋದರೂ ಕೆಮ್ಮು ಒಂದು ಮಟ್ಟಿಗೆ ವಾರ್ನ್ ಮಾಡುತ್ತಲೇ ಇರುತ್ತದೆ.

5. ದುಃಖ ಪ್ರಚೋದಿತ ಕೆಮ್ಮು : ದುಃಖವಾದಾಗ ಮೌನವಾಗುವುದು, ಕಣ್ಣಾಲಿಗಳು ತುಂಬುವುದು, ಅಳುವುದು ಸಹಜ. ಕೆಲವೊಮ್ಮೆ ಎಷ್ಟೇ ಅತ್ತರೂ ಯಾರೂ ಕ್ಯಾರೇ ಅನ್ನದಿದ್ದಾಗ ಅತ್ತು ಅತ್ತು ರಚ್ಚೆ ಹಿಡಿದು ಅದರ ಉಚ್ಛ್ರಾಯ ಸ್ಥಿತಿಯೋ ಎಂಬಂತೆ ಒಂದೇ ಸಮನೆ ಕೆಮ್ಮಲಾರಂಭಿಸುತ್ತಾರೆ. ಹಾಗಾದರೂ ಎದುರಿನವರಿಗೆ ಇವರ ದುಃಖ, ಸಂಕಟಗಳು ತಟ್ಟಲಿ ಎನ್ನುವುದೇ ಅದರ ಉದ್ದೇಶ. 'ಅಯ್ಯೋ ಅಷ್ಟು ಕೆಮ್ಮುತ್ತಾರಲ್ಲ, ಏನಾಯ್ತು ನೋಡ್ರಪಾ' ಎಂದು ಎಲ್ಲರೂ ಅತ್ತಲೆಡೆಗೆ ಕೊಂಚ ಅಲರ್ಟ್ ಆಗುತ್ತಾರೆ.

6. ಕಾಳು ಹಾಕೋ ಕೆಮ್ಮು : 'ಒಣಕೆಮ್ಮು' ಎಂದೇ ಇದೆಯೆಂಬ ಕಾರಣಕ್ಕೆ ಕೆಮ್ಮನ್ನು 'ಡ್ರೈ' ವಿಷಯ ಎಂಬಂತಿಲ್ಲ, ಅದರಲ್ಲೂ ರಸವತ್ತಾದ, ಪುಳಕ ಮೂಡಿಸುವ ಸಂಗತಿಗಳು ಘಟಿಸುತ್ತವೆ. ಯಾರೋ ತಮ್ಮೆಡೆಗೆ ನೋಟ ಹರಿಸುವಂತೆ ಮಾಡಿಕೊಳ್ಳಲು ಕೆಲವರು, ನಾಟಕೀಯ ಕೆಮ್ಮಿನ ಮೊರೆ ಹೋಗುತ್ತಾರೆ. ಆ ಕೆಮ್ಮಿನ ರೀತಿ ಮನ–ಮೋಹಕ, ಅತಿ ಮಧುರ. ಇಂಥ ಕೆಮ್ಮು ಕಾಯಿಲೆಯ ಸೂಚಕವಲ್ಲದೇ ಹೋದರೂ, ಅವು 'ಪ್ರೇಮಜ್ವರದ' ಕಾವು ಏರಿಸುವ ಸಾಧ್ಯತೆ ಹೆಚ್ಚಿರುವುದನ್ನು ತಳ್ಳಿ ಹಾಕುವಂತಿಲ್ಲ. ಕೆಲವೊಮ್ಮೆ ಈ ಕೆಮ್ಮಿಗೆ ಪ್ರತಿಯಾಗಿ ಎದುರಿನಿಂದ ಸಿಗುವ ಸಿಗ್ನಲ್ ಯಾವುದೇ ವೈ–ಫೈ ಸಿಗ್ನಲ್‌ನ್ನೂ ಮೀರಿಸುವಂತಿರುತ್ತದೆ. ಈ ಕೆಮ್ಮು ಕಳ್ಳ ನೋಟ, ಕಿರುನಗೆ, ಆತ್ಮೀಯ ಭಾವ ಹೀಗೇ ಮುಂದುವರಿದು ಮೆಸೇಜ್, ಕಾಲ್, ಮೀಟ್ ಹೀಗೆ ಯಾವ್ಯಾವುದೋ ಮಟ್ಟವನ್ನು ತಲುಪುತ್ತದೆ.

7. ಕರೆಗಂಟೆ ಕೆಮ್ಮು : ಒಳಗಿನಿಂದ ಬಾಗಿಲು ಹಾಕಿಕೊಂಡ ಯಾರದೋ ಮನೆಯ ಮುಂದೆ ನಿಂತಿದ್ದೀರಿ. ಒಳಗಿರುವವರನ್ನು ಕರೆಯಬೇಕು. ಅಲ್ಲೆಲ್ಲೂ ಬೆಲ್ ಇಲ್ಲ, ಯಾವುದೋ ಹೆಸರಿನಿಂದ ಕರೆಯಲು ಮುಜುಗರ. ಆಗ ಕೆಮ್ಮು ಕರೆಗಂಟೆಯಂತೆ ನಮ್ಮ ನೆರಗವಿಗೆ ಬರುವುದು. ಒಂದು ನಾಲ್ಕೈದು ಸಲ ಜೋರಾಗಿ ಕೆಮ್ಮುತ್ತಾ ಹೊರಗಡೆ ಅತ್ತಿಂದಿತ್ತ ನಡೆದಾಡಿದರೆ ಸಾಕು, ಒಳಗಿರುವವರಿಗೆ ಯಾರೋ ಬಂದಿದ್ದಾರೆ ಎಂಬ ವಿಷಯ ತಿಳಿದು, ಬಾಗಿಲು ತೆರೆದುಕೊಳ್ಳುತ್ತದೆ. ಅಂದರೆ ವ್ಯಕ್ತಿಯೊಬ್ಬ ಅಲ್ಲಿ ಬಂದಿದ್ದು, ಆ ವ್ಯಕ್ತಿಯ ಇರುವಿಕೆಯನ್ನು ಅಕ್ಕಪಕ್ಕದವರಿಗೆ ತಿಳಿಸಲು ಕೆಮ್ಮು ಸಹಕಾರಿಯಾಗಿದೆ.

8. ಆಕ್ರೋಶಪ್ರಣೀತ ಕೆಮ್ಮು : ಆಕ್ರೋಶ, ಉದ್ವೇಗಗಳು ಜೊತೆಯಾದಾಗ ಗಂಟಲು ಕಟ್ಟಿಕೊಳ್ಳುವುದಿದೆ. ಹಾಗೆ ಗಂಟಲು ಕಟ್ಟಿ ದನಿ ಹೊರ ಹೊಮ್ಮದೇ ಹೋದರೂ, ಆಕ್ರೋಶದ ಕಾರಣಕ್ಕೆ ಕಿರುಚುವ, ಅರಚುವ ಜನರೇ ಹೆಚ್ಚು. ಆ ಸಂದರ್ಭದಲ್ಲಿ ಮಾತು, ಕೂಗಾಟಗಳೆಲ್ಲ ಕೊನೆಗೆ ಹೋಗಿ ತಲುಪುವುದು ಈ ಕೆಮ್ಮುವಸ್ಥಿತಿಯನ್ನೇ. ಅಷ್ಟೇಏಕೆ, 'ಯಾರೂನನ್ನಮುಂದೆಕೆಮ್ಮಂಗಿಲ್ಲ'ಎಂದು ಸೂಚ್ಯವಾಗಿ ಹೇಳುವುದರ ಹಿನ್ನೆಲೆಯಲ್ಲಿ ಇರುವುದು ಇದೇ ಆಕ್ರೋಶ. ಈ ಕೆಮ್ಮಿನರೀತಿನೀತಿಯಲ್ಲೇಅರ್ಥವಾಗುತ್ತದೆಕೆಮ್ಮುವವರಕೋಪ–ತಾಪಗಳು. ಇನ್ನು ಎಲ್ಲೆಂದರಲ್ಲಿ ಬೇಕಾಬಿಟ್ಟಿಯಾಗಿ ಕೆಮ್ಮುವುದೂ ಅನ್ಯರಿಗೆ ಕಿರಿ ಕಿರಿ ಉಂಟಾಗಿ ಆಕ್ರೋಶಕ್ಕೆ ತಿರುಗುವುದೂ ಇದೆ!

9. ಕ್ಯಾತೆ ಕೆಮ್ಮು : 'ನೋಡಿ ನಾನು ಆ ಸಭೆಯನ್ನು ಅದ್ಯಾವ ಪರಿ ಅದ್ದೂರಿಯಾಗಿ ವ್ಯವಸ್ಥಿತವಾಗಿ ಆಯೋಜಿಸುತ್ತೇನೆ ಎಂದರೆ ಯಾರೂ ಕೂಡಾ ಕೆಮ್ಮಂಗಿಲ್ಲ' ಎಂದು ಹೇಳುವುದಿದೆ. ಅಂದರೆ ಕೆಲವರು ಸಣ್ಣಪುಟ್ಟದಕ್ಕೂ ಕೆಮ್ಮುತ್ತಲೇ ಇರುತ್ತಾರೆ ಎಂದರ್ಥವಲ್ಲವೇ? ಕೆಮ್ಮುವುದು ಎಂದರೆ ಕ್ಯಾತೆ ತೆಗೆಯುವುದು ಎಂದೇ ಆಯಿತಲ್ಲವೇ? ಇಲ್ಲಿ ಕೆಮ್ಮು ವಾಚ್ಯವಾಗದೇ, ಸೂಚ್ಯವಾಗಿರುವಂಥದ್ದು. ಅದೊಂದು ಸಂಕೇತ, ಅದೊಂದು ಸೂಚನೆ ಹಾಗೂ ಅದೊಂದು ಅನ್ವರ್ಥ. ಇನ್ನು ಅಸಲಿ ಕೆಮ್ಮುವಿಗಾದರೂ ಸೂಕ್ತ ಔಷಧಿ, ಚಿಕಿತ್ಸೆ ಇದೆ, ಆದರೆ ಈ ಮೇಲೆ ತಿಳಿಸಿದ ಕೆಮ್ಮುವಿನ ಉಪಶಮನ ಕಷ್ಟಸಾಧ್ಯವೇ ಸರಿ.

10. ಕೆಟ್ ಅಡುಗೆ ಕೆಮ್ಮು: ಬಾಯಿಗೆ ರುಚಿಸದ ಅಡುಗೆಯ ಬಗ್ಗೆ ಪ್ರತಿಕ್ರಿಯೆ ನೀಡುವ ಬೇರೆ ಬೇರೆ ಪರಿಗಳಿವೆ. ಮುಖ ಸಿಂಡರಿಸುವುದು, ಊಟಕ್ಕೇ ಕೈ ತೊಳೆದು ಎದ್ದೇಳುವುದು, ತಟ್ಟೆ ದೂರಕ್ಕೆ ತಳ್ಳುವುದು ಇನ್ನೂ ಹಲವು. ಅದೇ ರೀತಿಯಲ್ಲಿ ಕೆಮ್ಮುವುದೂ ಕೂಡಾ ಒಂದು. ಇದಕ್ಕೆ ಸಿನಿಮಾ, ಸೀರಿಯಲ್ ದೃಶ್ಯಗಳೇ ಪ್ರೇರಣೇ ಆದರೂ ಆಗಿದ್ದಿರಬಹುದು. ತುತ್ತೊಂದನ್ನು ಬಾಯಿಗಿಟ್ಟಾಕ್ಷಣ, ವಿಚಿತ್ರ ಪ್ರತಿಕ್ರಿಯೆ ನೀಡುತ್ತಾ ಗಂಟಲು, ಎದೆಯನ್ನೆಲ್ಲಾ ಹಿಡಿದು, ಕೆಮ್ಮುತ್ತಾ ತುತ್ತನ್ನು ಬಾಯಿಯಿಂದ ಹೊರಕ್ಕೆ ಚೆಲ್ಲುವ ಈ ವೈಖರಿಯು, ಅಡುಗೆ ಅದೆಷ್ಟು ಕೆಟ್ಟದಾಗಿದೆ ಎನ್ನುವುದನ್ನು ಸೂಚಿಸುತ್ತದೆ. ಒಟ್ಟಾರೆಯಾಗಿ, ಯಾರು ಕೆಮ್ಮಿದರು ಅಷ್ಟೇ ಅಲ್ಲ, ಹೇಗೆ ಕೆಮ್ಮಿದರು ಎನ್ನುವುದೂ ಮುಖ್ಯವಾಗುತ್ತದೆ. ಅಂದರೆ ಅದನ್ನು 'ಕೇಳಿಸದೆ ಕೆಮ್ಮು ಕೆಮ್ಮಿನಲಿ....' ಎಂದು ಹಾಡಬಹುದು. ಹ್ಞಾಂ.. ಪಕ್ಕದಲ್ಲಿ ಯಾರೋ ಕೆಮ್ಮುತ್ತಿರುವ ದನಿ ಕೇಳಿಸುತ್ತಿದೆಯೇ?!

ಓವರ್‌ಡೋಸ್: ಯಾರಾದರೂ ''ಹೇಗಿದ್ದೀರಿ?'' ಎಂದು ಕೇಳಿ, ನೀವು ಅದಕ್ಕೆ ಪ್ರತಿಯಾಗಿ 'ಚೆನ್ನಾಗಿದೀನಿ' ಎಂದುತ್ತರಿಸಿದ ಮರುಕ್ಷಣವೇ ಜೋರಾಗಿ ಬರುವ ಕೆಮ್ಮು, ನಾವು ನೀಡಿದ ಉತ್ತರವನ್ನೇ ಅನುಮಾನಿಸುವಂತೆ ಮಾಡುತ್ತದೆ!

ಇರಾನ್ ನಗರಗಳ ಮೇಲೆ ಬಿ-52 ಬಾಂಬರ್ಸ್ ದಾಳಿ!



- ಪ್ರಮುಖ ನಗರಗಳ ಮೇಲೆ ಭಾನುವಾರ ಮುಂಜಾನೆ ಅಮೆರಿಕ ಹೊಸ ದಾಳಿ
- ಇರಾನ್‌ನ ಶಿರಾಜ್‌ನಲ್ಲಿ 20 ನಿಮಿಷದೊಳಗೆ 20 ಬಾಂಬ್ ಸ್ಫೋಟ
- ಇಸ್ರೇಲ್ ದಾಳಿಗೆ ಇಸ್ಫಹಾನ್ ನಗರದಲ್ಲಿ ಆವರಿಸಿದ ದಟ್ಟ ಹೊಗೆ
- ಮುಂದುವರಿದ ಆಪರೇಷನ್ ಎಪಿಕ್ ಫ್ಯೂರಿ
- ಬಿ-52 ಸ್ಟ್ರಾಟೋಫೋರ್ಟ್ರೆಸ್ ಯುದ್ಧ ವಿಮಾನಗಳ ಬಳಕೆ

ಟೆಹ್ರಾನ್: ಆಪರೇಷನ್ ಎಪಿಕ್ ಫ್ಯೂರಿ ಮುಂದುವರಿದ ಭಾಗವಾಗಿ ಬಿ-52 ಬಾಂಬರ್ಸ್ ಯುದ್ಧ ವಿಮಾನಗಳನ್ನು ಬಳಸಿಕೊಂಡು ಇರಾನ್ ಪ್ರಮುಖ ನಗರಗಳ ಮೇಲೆ ಅಮೆರಿಕ ಹೊಸ ದಾಳಿ ನಡೆಸಿದೆ. ಶನಿವಾರ ತಡರಾತ್ರಿ ಮತ್ತು ಭಾನುವಾರ ಮುಂಜಾನೆ ಇರಾನ್ ಪ್ರಮುಖ ನಗರಗಳಲ್ಲಿ ಸ್ಫೋಟಗಳು ಸಂಭವಿಸಿವೆ ಎಂದು ಇರಾನ್ ಇಂಟರ್‌ನ್ಯಾಷನಲ್ ವರದಿ ಮಾಡಿದೆ. ಭಾನುವಾರ ಬೆಳಗಿನ ಜಾವ ದಕ್ಷಿಣ ಟೆಹ್ರಾನ್ ಪ್ರದೇಶದಲ್ಲಿ ಭಾರೀ ಸ್ಫೋಟಗಳು ನಡೆದಿವೆಯೆಂದು ವಿಡಿಯೋ ಒಂದನ್ನು ಹಂಚಿಕೊಂಡಿದೆ. ಟೆಹ್ರಾನ್‌ನ ಹಲವು ಪ್ರದೇಶಗಳ ಮೇಲೆ ಬಿ-52 ಬಾಂಬರ್‌ಗಳು ದಾಳಿ ನಡೆಸಿವೆ ಎನ್ನಲಾಗಿದೆ. ಭಾನುವಾರ ಮುಂಜಾನೆ ಶಿರಾಜ್ ಪ್ರದೇಶದಲ್ಲಿ ಕೇವಲ 20 ನಿಮಿಷದೊಳಗೆ 20 ಬಾಂಬ್ ಸ್ಫೋಟಗಳು ನಡೆದಿರುವುದಾಗಿ ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಶಿರಾಜ್ ವಿಮಾನ ನಿಲ್ದಾಣದ ಸಮೀಪ ಬಾಂಬ್ ಸ್ಫೋಟಗಳು ನಡೆದಿರುವುದನ್ನು ಕೆಲವು ಪ್ರತ್ಯಕ್ಷದರ್ಶಿಗಳು ದೃಢೀಕರಿಸಿದ್ದಾರೆ. ಹಾರ್ಮುಜ್ ಜಲಸಂಧಿಯ ಸಮೀಪ ಹಾರ್ಮುಜ್ಗನ್‌ನ ಜಾಸ್ಕ್ ಬಂದರಿನಿಂದ ಹೊಗೆ ಬರುವ ದೃಶ್ಯವನ್ನು ವಿಡಿಯೋದಲ್ಲಿ ಕಾಣಬಹುದು. ಇರಾನ್ ಅಣ್ವಸ್ತ್ರಾಗಾರಗಳಿರುವ ಇಸ್ಪಹಾನ್ ನಗರದಲ್ಲಿ ದಟ್ಟ ಹೊಗೆ ಆವರಿಸಿದ ದೃಶ್ಯಗಳನ್ನು ಇಸ್ರೇಲಿ ಸುದ್ದಿವಾಹಿನಿಗಳು ಪ್ರಸಾರಮಾಡಿವೆ. ಆಪರೇಷನ್ ಎಪಿಕ್ ಫ್ಯೂರಿ ಭಾಗವಾಗಿ ವಾಯುಪಡೆಯ ಬಿ-52 ಸ್ಟ್ರಾಟೋಫೋರ್ಟ್ರೆಸ್ ಯುದ್ಧ ವಿಮಾನಗಳು ತಡರಾತ್ರಿ ಟೇಕ್‌ಆಫ್ ಆಗಿವೆ. ಊಹೆಗೂ ಮೀರಿದ, ಚುರುಕಾದ ಮತ್ತು ನಿರ್ಣಾಯಕ ದಾಳಿಗಳು ಮುಂದುವರಿಯಲಿವೆ ಎಂದು ಯುಎಸ್ ಸೆಂಟ್ರಲ್ ಕಮಾಂಡ್ ಎಕ್ಸ್‌ನಲ್ಲಿ ವಿಡಿಯೋ ಹಂಚಿಕೊಂಡಿದೆ.

ಹಾರ್ಮುಜ್‌ಗೆ ಯುದ್ಧ ನೌಕೆ ಕಳುಹಿಸಿ: ಟ್ರಂಪ್

ಹಾರ್ಮುಜ್ ಜಲಸಂಧಿಯನ್ನು ತೆರೆಯಲು ಮತ್ತು ಅದರ ಮೂಲಕ ತೈಲ ಹಡಗುಗಳ ಸುರಕ್ಷಿತ ಸಂಚಾರ ಖಚಿತಪಡಿಸಲು ಯುದ್ಧನೌಕೆಗಳನ್ನು ಹಾರ್ಮುಜ್‌ಗೆ ಕಳುಹಿಸಿಕೊಡಬೇಕೆಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚೀನಾ, ಫ್ರಾನ್ಸ್, ಜಪಾನ್, ದಕ್ಷಿಣ ಕೊರಿಯಾ, ಬ್ರಿಟನ್ ಸೇರಿ ಹಲವು ರಾಷ್ಟ್ರಗಳಿಗೆ ಕರೆ ನೀಡಿದ್ದಾರೆ. ಈ ರಾಷ್ಟ್ರಗಳು ಅಮೆರಿಕಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಈ ಜಲಸಂಧಿ ದಾಟುವ ತೈಲ ಮತ್ತು ಅನಿಲ ಹಡಗುಗಳ ಮೇಲೆ ಅವಲಂಬಿತವಾಗಿವೆ.



ಯುದ್ಧದ ಹಾನಿ ತೀವ್ರತೆ ಹೆಚ್ಚಳ

ಅಂತಾರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿಯ ಪ್ರಕಾರ, ಇರಾನ್‌ನಲ್ಲಿ ಈಗಾಗಲೇ 1,300ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ. ಇರಾನ್ ಆರೋಗ್ಯ ಸಚಿವಾಲಯದ ನೀಡಿದ ಮಾಹಿತಿ ಪ್ರಕಾರ, ಸಾವಿಗೀಡಾದವರಲ್ಲಿ 223 ಮಹಿಳೆಯರು ಮತ್ತು 202 ಮಕ್ಕಳು ಸೇರಿದ್ದಾರೆ. ಇಸ್ರೇಲ್‌ನಲ್ಲಿ ಇರಾನ್ ದಾಳಿಗೆ 12 ಮಂದಿ ಸಾವನ್ನಪ್ಪಿದ್ದು, ಭಾನುವಾರ ಮೂವರು ಗಾಯಗೊಂಡಿದ್ದಾರೆ. ಯುದ್ಧ ಆರಂಭವಾದ ಬಳಿಕ ಅಮೆರಿಕ ಸೇನೆಯ ಕನಿಷ್ಠ 13 ಯೋಧರು ಮೃತಪಟ್ಟಿದ್ದಾರೆ. ಲೆಬನಾನ್‌ನಲ್ಲಿ ಕನಿಷ್ಠ 820 ಮಂದಿ ಸಾವನ್ನಪ್ಪಿದ್ದು, 8.5 ಲಕ್ಷ ಮಂದಿ ನಿರಾಶ್ರಿತರಾಗಿದ್ದಾರೆ ಎಂದು ಅಲ್ಲಿನ ಆರೋಗ್ಯ ಸಚಿವಾಲಯ ಹೇಳಿದೆ.

ಇರಾನ್‌ಗೆ ರಷ್ಯಾ ಡ್ರೋನ್ ಪೂರೈಕೆ: ಝೆಲೆನ್ಸ್ಕಿ

ಅಮೆರಿಕದ ಸೇನಾ ನೆಲೆಗಳ ಮೇಲೆ ದಾಳಿ ನಡೆಸುವುದಕ್ಕಾಗಿ ರಷ್ಯಾ ನಿರ್ಮಿತ ಶಾಹಿದ್ ಡ್ರೋನ್‌ಗಳನ್ನು ಇರಾನ್ ಬಳಸಿಕೊಂಡಿದೆ. ಇರಾನ್‌ಗೆ ರಷ್ಯಾ ತನ್ನ ಶಾಹಿದ್ ಡ್ರೋನ್‌ಗಳನ್ನು ಪೂರೈಕೆ ಮಾಡುತ್ತಿದೆ. ಇದು ಶೇ.100ರಷ್ಟು ಸತ್ಯ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಆರೋಪಿಸಿದ್ದಾರೆ. ಶಾಹಿದ್-136 ಡ್ರೋನ್‌ಗಳು ಮೂಲತಃ ಇರಾನ್ ನಿರ್ಮಿಸುವ ಅಗ್ಗದ ಡ್ರೋನ್‌ಗಳಾಗಿದ್ದು, ರಷ್ಯಾದೊಂದಿಗೆ ಜಂಟಿ ಉತ್ಪಾದನೆ ಮಾಡಲಾಗುತ್ತಿದೆ. ಅಮೆರಿಕ ಸೇನಾ ನೆಲೆಗಳ ಮೇಲೆ ದಾಳಿ ನಡೆಸಲು ಇರಾನ್‌ಗೆ ಡ್ರೋನ್‌ಗಳನ್ನು ರಷ್ಯಾ ಪೂರೈಕೆ ಮಾಡುತ್ತಿರುವುದಾಗಿ ಝೆಲೆನ್ಸ್ಕಿ ಆರೋಪಿಸಿದ್ದಾರೆ. ರಷ್ಯಾ ಡ್ರೋನ್ ಪೂರೈಕೆ ಮೂಲಕ ಇರಾನ್ ಆಡಳಿತಕ್ಕೆ ತನ್ನ ಬೆಂಬಲ ನೀಡಿದ್ದು, ಮುಂದಿನ ದಿನಗಳಲ್ಲಿ ಕ್ಷಿಪಣಿ ಪೂರೈಕೆ ಮಾಡಬಹುದು ಮತ್ತು ವಾಯು ರಕ್ಷಣಾ ವ್ಯವಸ್ಥೆ ನೀಡಿ ಬೆಂಬಲಿಸಬಹುದು.

ಅಗ್ಗದ ಡ್ರೋನ್: ಶಾಹಿದ್ ಡ್ರೋನ್‌ಗಳ ನಿರ್ಮಾಣ ವೆಚ್ಚ 20,000ದಿಂದ 50,000 ಡಾಲರ್ ವೆಚ್ಚ ತಗಲುತ್ತದೆ. ಇದು ಸಾಂಪ್ರದಾಯಿಕ ಕ್ಷಿಪಣಿ ನಿರ್ಮಾಣದ ಮುಂದೆ ಬಹಳ ಅಗ್ಗವಾಗಿದೆ. ಈ ಅಗ್ಗದ ಡ್ರೋನ್‌ಗಳು ಪರಿಣಾಮಕಾರಿ ದಾಳಿಯನ್ನು ನಡೆಸಬಲ್ಲವು. ಇವುಗಳನ್ನು ಹೊಡೆದುರುಳಿಸಲು ಶತ್ರುಗಳು ದುಬಾರಿ ವಾಯು ರಕ್ಷಣಾ ಕ್ಷಿಪಣಿಗಳನ್ನೇ ಬಳಸಬೇಕಾಗುತ್ತದೆ. ಇದರಿಂದಾಗಿ ಇವುಗಳ ದಾಳಿ ವೇಳೆ ಧ್ವಂಸವಾದರೂ ನಷ್ಟ ಎನಿಸಿಕೊಳ್ಳುವುದಿಲ್ಲ.

ಭಾರತದತ್ತ ಮತ್ತೊಂದು ಕಚ್ಚಾ ತೈಲ ಟ್ಯಾಂಕರ್

ಹೊಸದಿಲ್ಲಿ: ಯುಎಇಯ ಫುಜೈರಾ ತೈಲ ಟರ್ಮಿನಲ್ ಮೇಲೆ ದಾಳಿ ನಡೆದಿದ್ದರೂ ಭಾರತೀಯ ಧ್ವಜದ ಜಾಗ್ ಲಾಡ್ಕಿ ಕಚ್ಚಾ ತೈಲ ಟ್ಯಾಂಕರ್ ಸುರಕ್ಷಿತವಾಗಿ ಫುಜೈರಾದಿಂದ ಭಾರತದತ್ತ ಹೊರಟಿದೆ. ಸುಮಾರು 80,800 ಟನ್ ಮರ್ಬನ್ ಕಚ್ಚಾ ತೈಲವನ್ನು ಹೊತ್ತ ಈ ನೌಕೆ ಭಾನುವಾರ ಬೆಳಗ್ಗೆ 10.30ಕ್ಕೆ ಫುಜೈರಾ ಬಂದರಿನಿಂದ ಹೊರಟಿದ್ದು, ನೌಕೆಯಲ್ಲಿದ್ದ ಎಲ್ಲ ಭಾರತೀಯ ನಾವಿಕರೂ ಸುರಕ್ಷಿತರಾಗಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಪಶ್ಚಿಮ ಏಷ್ಯಾದ ಉದ್ವಿಗ್ನ ಪರಿಸ್ಥಿತಿಯ ನಡುವೆಯೂ ಯುದ್ಧ ವಲಯದಿಂದ ಸುರಕ್ಷಿತವಾಗಿ ಹೊರಬಂದ ನಾಲ್ಕನೇ ಭಾರತೀಯ ಧ್ವಜದ ನೌಕೆ ಇದಾಗಿದೆ. ಹಾರ್ಮುಜ್ ಜಲಸಂಧಿಯಲ್ಲಿ ಸಾಗಣೆ ಅಡಚಣೆ ಉಂಟಾಗಿರುವ ಹಿನ್ನೆಲೆಯಲ್ಲಿ ಈ ಸಾಗಣೆ ಭಾರತಕ್ಕೆ ಮಹತ್ವದ್ದಾಗಿದೆ. ಇದಕ್ಕೂ ಮೊದಲು ಭಾರತೀಯ ಧ್ವಜದ ಶಿವಾಲಿಕ್ ಮತ್ತು ನಂದಾದೇವಿ ಎಂಬ ಎರಡು ಎಲ್‌ಪಿಜಿ ನೌಕೆಗಳು ಒಟ್ಟು 92,712 ಟನ್ ಎಲ್‌ಪಿಜಿ ಹೊತ್ತು ಹಾರ್ಮುಜ್ ಜಲಸಂಧಿಯನ್ನು ದಾಟಿವೆ. ಶಿವಾಲಿಕ್ ಸೋಮವಾರ ಗುಜರಾತ್‌ನ ಮುಂದ್ರಾ ಬಂದರಿಗೆ, ನಂದಾದೇವಿ ಮಂಗಳವಾರ ಕಂಡ್ಲಾ ಬಂದರಿಗೆ ತಲುಪುವ ನಿರೀಕ್ಷೆಯಿದೆ. ಪರ್ಶಿಯನ್ ಕೊಲ್ಲಿಯ ಪಶ್ಚಿಮ ಭಾಗದಲ್ಲಿ ಪ್ರಸ್ತುತ 22 ಭಾರತೀಯ ಧ್ವಜದ ನೌಕೆಗಳು ಹಾಗೂ 611 ಭಾರತೀಯ ನಾವಿಕರು ಕಾರ್ಯನಿರ್ವಹಿಸುತ್ತಿದ್ದು, ಅವರ ಸುರಕ್ಷತೆಯನ್ನು ಸರ್ಕಾರ ನಿಗಾದಲ್ಲಿಟ್ಟಿದೆ. ಇದುವರೆಗೆ ಗಲ್ಫ್ ಪ್ರದೇಶದಿಂದ 276 ಭಾರತೀಯ ನಾವಿಕರನ್ನು ಸುರಕ್ಷಿತವಾಗಿ ವಾಪಸು ಕರೆತರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಾಹಿದ್-136 ವಿಶೇಷತೆಗಳು

- **ಗರಿಷ್ಠ ಟೇಕ್‌ಆಫ್ ಭಾರ:** 200 ಕೆ.ಜಿ.
- **ದೂರವ್ಯಾಪ್ತಿ :** 2,000 ಕಿ.ಮೀ.
- **ಡ್ರೋನ್ ವಿಧ:** ಆತ್ಮಾಹುತಿ ಡ್ರೋನ್
- **ನಿಯೋಜನೆ:** ಯೆಮೆನ್, ಹಿಜ್ಬೊಲ್ಲಾ
- **ಅಭಿವೃದ್ಧಿಪಡಿಸಿದ ವರ್ಷ:** 2021

ಶಾಹಿದ್-131 ವಿಶೇಷತೆಗಳು

- **ಗರಿಷ್ಠಟೇಕ್‌ಆಫ್ ಭಾರ:** 135 ಕೆ.ಜಿ.
- **ದೂರವ್ಯಾಪ್ತಿ:** 900 ಕಿ.ಮೀ.
- **ಡ್ರೋನ್ ವಿಧ:** ಆತ್ಮಾಹುತಿ ಡ್ರೋನ್
- **ನಿಯೋಜನೆ:** ರಷ್ಯಾ, ಇರಾಕ್‌ನ ಕತೈಬ್ ಹಿಜ್ಬೊಲ್ಲಾ
- **ಅಭಿವೃದ್ಧಿಪಡಿಸಿದ ವರ್ಷ:** 2021

ಅಮೆರಿಕ ದಾಳಿ ತೀವ್ರ

ಪೆಂಟಗನ್ ಮಾಹಿತಿ ಪ್ರಕಾರ, ಇರಾನ್‌ನ 15,000 ಕ್ಕೂ ಹೆಚ್ಚು ಗುರಿಗಳ ಮೇಲೆ ದಾಳಿ ಮಾಡಲಾಗಿದ್ದು, ಇದುವರೆಗೆ 2,000 ಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆ. ಈ ನಡುವೆ ಅಮೆರಿಕ, ಯುಎಸ್‌ಎಸ್ ಟ್ರಿಪೋಲಿ ಯುದ್ಧನೌಕೆ ಮತ್ತು 2,500 ನೌಕಾಪಡೆ ಸೈನಿಕರನ್ನು ಈ ಪ್ರದೇಶಕ್ಕೆ ನಿಯೋಜಿಸಿದೆ. ಇರಾನ್ ಭಯೋತ್ಪಾದನೆಯನ್ನು ತೀವ್ರವಾಗಿ ವಿರೋಧಿಸುತ್ತದೆ ಮತ್ತು ಅಮೆರಿಕದ ಸಾಮಾನ್ಯ ಜನರೊಂದಿಗೆ ನಮಗೆ ಯಾವುದೇ ಯುದ್ಧವಿಲ್ಲ ಎಂದು ಲಾರಿಜಾನಿ ಒತ್ತಿ ಹೇಳಿದ್ದಾರೆ.

6,000

ಇರಾನ್ ಸೈನಿಕರ ಸಾವು: ಐಡಿಎಫ್

ಐಡಿಎಫ್ ಗುಪ್ತಚರ ಮಾಹಿತಿಗಳ ಪ್ರಕಾರ, ಇಸ್ರೇಲ್ ಸೇನೆ ಆಪರೇಷನ್ ರಾರಿಂಗ್ ಲಯನ್ ಆರಂಭಿಸಿದಾಗಿನಿಂದ ಸುಮಾರು 6,000ಕ್ಕೂ ಅಧಿಕ ಇರಾನ್ ಸೈನಿಕರನ್ನು ಹೊಡೆದುರುಳಿಸಲಾಗಿದ್ದು, 15,000ಕ್ಕೂ ಅಧಿಕ ಇರಾನ್ ಸೈನಿಕರು ಗಾಯಗೊಂಡಿದ್ದಾರೆ.

20 ಗೂಢಚಾರಿಗಳ ಸೆರೆ ಹಿಡಿದ ಇರಾನ್

ಇರಾನ್‌ನೊಳಗಿದ್ದು ಇಸ್ರೇಲ್‌ಗೆ ರಹಸ್ಯ ಗುಪ್ತಚರ ಮಾಹಿತಿಗಳನ್ನು ನೀಡುತ್ತಿದ್ದ 20 ಗೂಡಚಾರಿಗಳನ್ನು ಇರಾನ್ ಬಂಧಿಸಿದೆ. ಇರಾನ್ ಸೇನೆ ಮತ್ತು ಅದರ ಸೇನಾ ಮೂಲಸೌಕರ್ಯಗಳಿರುವ ಸ್ಥಳಗಳ ನಿಖರ ಮಾಹಿತಿಯನ್ನು ಇಸ್ರೇಲ್ ಸೇನೆಗೆ ಕಳುಹಿಸುತ್ತಿದ್ದರೆಂಬ ಆರೋಪದಲ್ಲಿ 20 ವ್ಯಕ್ತಿಗಳನ್ನು ಇರಾನ್ ಸೆರೆಹಿಡಿದಿದೆ.

ಇರಾನ್ ಮೇಲೆ 9/11 ಮಾದರಿ ದಾಳಿ ಪಿತೂರಿ!

ಟೆಹ್ರಾನ್: ಇರಾನ್ ಮೇಲೆ ಬೃಹತ್ ಭಯೋತ್ಪಾದನಾ ದಾಳಿಯ ಹಣೆಪಟ್ಟಿ ಕಟ್ಟಲು ಎಪ್ಸ್ಟೀನ್ ನೆಟ್‌ವರ್ಕ್‌ನಿಂದ 9/11 ಮಾದರಿಯ ದಾಳಿಯ ಪಿತೂರಿ ನಡೆಯುತ್ತಿದೆ ಎಂದು ಇರಾನ್‌ನ ಭದ್ರತಾ ಕಾರ್ಯದರ್ಶಿ ಅಲಿ ಲಾರಿಜಾನಿ ಗಂಭೀರ ಎಚ್ಚರಿಕೆ ನೀಡಿದ್ದಾರೆ. ಈ ಆರೋಪವನ್ನು ಎಕ್ಸ್ ಮೂಲಕ ಹಂಚಿಕೊಂಡಿರುವ ಲಾರಿಜಾನಿ, ಟೆಹ್ರಾನ್ ಅನ್ನು ಸಿಲುಕಿಸಲು ಯೋಜಿತ ಘಟನೆಯೊಂದನ್ನು ರೂಪಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಕಳೆದ ತಿಂಗಳು ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ದಾಳಿಯಲ್ಲಿ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಬಲಿಯಾದ ನಂತರ ಈ ಪ್ರದೇಶದಲ್ಲಿ ಯುದ್ಧದ ಭೀತಿ ಹೆಚ್ಚಾಗಿರುವಾಗಲೇ ಈ ಆರೋಪಗಳು ಕೇಳಿಬಂದಿವೆ. ಇದಕ್ಕೆ ಪ್ರತಿಯಾಗಿ ಇರಾನ್ ಪಡೆಗಳು ಇಸ್ರೇಲ್ ಮತ್ತು ಗಲ್ಫ್‌ನಲ್ಲಿರುವ ಅಮೆರಿಕದ ನೆಲೆಗಳ ಮೇಲೆ ದಾಳಿ ನಡೆಸಿವೆ.

ಕಿರುಸುದ್ದಿ

ಗಡಿ ನುಸುಳಲು ಯತ್ನ: ಪಾಕಿಸ್ತಾನಿ ಉಗ್ರ ಹತ

ಶ್ರೀನಗರ: ಕಾಶ್ಮೀರ ಕಣಿವೆಯ ಬಾರಾಮುಲ್ಲಾ ಜಿಲ್ಲೆಯ ಉರಿಯ ನಿಯಂತ್ರಣ ರೇಖೆಯಲ್ಲಿ (ಎಲ್‌ಒಸಿ) ಒಳನುಸುಳುತ್ತಿದ್ದ ಪಾಕಿಸ್ತಾನಿ ಭಯೋತ್ಪಾದಕನೊಬ್ಬನನ್ನು ಸದೆಬಡಿಯಲಾಗಿದೆ. ಹತ್ಯೆಗೀಡಾದ ಭಯೋತ್ಪಾದಕನಿಂದ ಎಕೆ 47 ರೈಫಲ್, ಪಿಸ್ತೂಲುಗಳು ಮತ್ತು ದೊಡ್ಡ ಪ್ರಮಾಣದ ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಭಾರತೀಯ ಸೇನೆ ಭಾನುವಾರ ಹೇಳಿದೆ. ಈ ಕುರಿತು ಸೇನೆಯು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, ಗಡಿಯಲ್ಲಿ ಒಳನುಸುಳುವಿಕೆ ಪ್ರಯತ್ನದ ಕುರಿತು ಜಮ್ಮು ಮತ್ತು ಕಾಶ್ಮೀರ ಪೊಲೀಸರು ನೀಡಿದ ನಿರ್ದಿಷ್ಟ ಗುಪ್ತಚರ ಮಾಹಿತಿಯ ಆಧಾರದ ಮೇಲೆ ಜಂಟಿ ಕಾರ್ಯಾಚರಣೆ ಪ್ರಾರಂಭಿಸಲಾಯಿತು. ಈ ವೇಳೆ ಭಯೋತ್ಪಾದಕರು ಮನಬಂದಂತೆ ಗುಂಡು ಹಾರಿಸಿದರು. ಎನ್‌ಕೌಂಟರ್‌ನಲ್ಲಿ ಒಬ್ಬ ಪಾಕ್ ಭಯೋತ್ಪಾದಕನನ್ನು ಕೊಲ್ಲಲಾಗಿದೆ ಎಂದು ತಿಳಿಸಲಾಗಿದೆ.

ಸುಂಟರಗಾಳಿಗೆ ಓರ್ವನ ಸಾವು, 70 ಮನೆ ಧ್ವಂಸ

ಭುವನೇಶ್ವರ: ಒಡಿಶಾದಲ್ಲಿ ಸಂಭವಿಸಿದ ಸುಂಟರಗಾಳಿ ಭಾರಿ ಅನಾಹುತ ಸೃಷ್ಟಿಸಿದ್ದು, ಸುಂಟರಗಾಳಿ ರುದ್ರನರ್ತನಕ್ಕೆ ಓರ್ವ ಮೃತಪಟ್ಟಿದ್ದರೆ, 70 ಮನೆಗಳು ಧ್ವಂಸಗೊಂಡಿವೆ. 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಭಾನುವಾರ ಒಡಿಶಾದ ಮಯೂರ್ಭಂಜ್ ಜಿಲ್ಲೆಯಲ್ಲಿ ಬೀಸಿದ ಪ್ರಬಲವಾದ ನಾರ್ವೆಸ್ಟರ್ ಸುಂಟರಗಾಳಿಯು ವ್ಯಾಪಕ ನಷ್ಟವನ್ನುಂಟುಮಾಡಿದ್ದು, ಸುಮಾರು 70 ಮನೆಗಳಿಗೆ ಹಾನಿಯಾಗಿದೆ. ಅಂತೆಯೇ ಹಲವಾರು ಜನರು ಗಾಯಗೊಂಡಿದ್ದಾರೆ. ಆರಂಭಿಕ ವರದಿಗಳ ಪ್ರಕಾರ, ಕರಂಜಿಯಾದ ಕಿಯಾ ಗ್ರಾಮವು ಹೆಚ್ಚು ಹಾನಿಗೊಳಗಾದ ಪ್ರದೇಶವಾಗಿದ್ದು, ಅಲ್ಲಿ ಬಲವಾದ ಗಾಳಿಯು ನಿವಾಸಿಗಳಲ್ಲಿ ಭೀತಿಯನ್ನುಂಟುಮಾಡಿತು. ಸುಂಟರಗಾಳಿ ರಭಸಕ್ಕೆ ಹಲವಾರು ಮಣ್ಣು ಮತ್ತು ಹುಲ್ಲಿನ ಮನೆಗಳ ಛಾವಣಿಗಳು ಕಿತ್ತುಕೊಂಡು ಹೋಗಿವೆ.

ನಕಲಿ ದರೋಡೆ ಸಂಚು: 11 ಭಾರತೀಯರ ಸೆರೆ

ಬಾಸ್ಟನ್: ಅಮೆರಿಕದ ಯು ವೀಸಾ ಪಡೆಯುವ ಉದ್ದೇಶದಿಂದ ನಕಲಿ ಸಶಸ್ತ್ರ ದರೋಡೆಗಳನ್ನು ನಡೆಸಿದ ಆರೋಪದ ಮೇಲೆ 11 ಭಾರತೀಯ ಪ್ರಜೆಗಳನ್ನು ಅಮೆರಿಕದಲ್ಲಿ ಬಂಧಿಸಲಾಗಿದೆ. ಈ ವಿಶೇಷ ವೀಸಾವನ್ನು ಗಂಭೀರ ಅಪರಾಧಗಳಿಗೆ ಬಲಿಯಾದ ಮತ್ತು ತನಿಖೆಗೆ ಸಹಕರಿಸುವ ಸಂತ್ರಸ್ತರಿಗೆ ಮಾತ್ರ ನೀಡಲಾಗುತ್ತದೆ. ಈ ಗುಂಪು ವಿವಿಧ ರಾಜ್ಯಗಳ ಮದ್ಯದ ಅಂಗಡಿ ಮತ್ತು ಉಪಹಾರ ಗೃಹಗಳಲ್ಲಿ ಕನಿಷ್ಠ ಆರು ನಕಲಿ ದರೋಡೆಗಳನ್ನು ಯೋಜಿಸಿತ್ತು ಎಂದು ಫೆಡರಲ್ ತನಿಖಾಧಿಕಾರಿಗಳು ಬಹಿರಂಗಪಡಿಸಿದ್ದಾರೆ. ಸಿಸಿಟಿವಿ ಕ್ಯಾಮೆರಾಗಳಲ್ಲಿ ಇದು ನೈಜ ದರೋಡೆಯಂತೆ ಕಾಣಲು ನಕಲಿ ಪಿಸ್ತೂಲುಗಳನ್ನು ಬಳಸಲಾಗುತ್ತಿತ್ತು.

ಏಪ್ರಿಲ್‌ನಿಂದ ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್ ದರ ಏರಿಕೆ

ಹೊಸದಿಲ್ಲಿ: ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ(ಎನ್‌ಎಚ್‌ಎಐ) ಇತ್ತೀಚಿನ ಪ್ರಕಟಣೆಯಂತೆ ಏ.1ರಿಂದ ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್ ಬೆಲೆಯಲ್ಲಿ ಅಲ್ಪ ಏರಿಕೆ ಮಾಡಲಾಗುತ್ತದೆ. ಹಣದುಬ್ಬರಕ್ಕೆ ಅನುಗುಣವಾಗಿ ಶುಲ್ಕವನ್ನು 3,000 ರೂ. ನಿಂದ 3,075 ರೂ.ಗೆ (ಶೇ. 2.5 ರಷ್ಟು) ಹೆಚ್ಚಿಸಲು ನಿರ್ಧರಿಸಲಾಗಿದೆ.

ಪರಿಷ್ಕೃತ ಪಾಸ್ ನಿಯಮಗಳು: ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್, ಕಾರುಗಳು, ಜೀಪುಗಳು ಮತ್ತು ವ್ಯಾನ್‌ಗಳಂತಹ ಖಾಸಗಿ ವಾಹನಗಳಿಗೆ ಲಭ್ಯವಿದೆ. ಪ್ರತಿ ಬಾರಿಯೂ ಟೋಲ್ ಶುಲ್ಕ ಪಾವತಿಸುವ ಬದಲು, ಬಳಕೆದಾರರು ವಾರ್ಷಿಕ ಪಾಸ್ ಅನ್ನು ಖರೀದಿಸಬಹುದು. ಪ್ರಸ್ತುತ, ಈ ಪಾಸ್, ವರ್ಷಕ್ಕೆ 200 ಟೋಲ್ ದಾಟಲು ಅಥವಾ ಒಂದು ವರ್ಷದ ಅವಧಿಗೆ ಅವಕಾಶ ನೀಡುತ್ತದೆ. ಪ್ರಸ್ತುತ 50 ಲಕ್ಷಕ್ಕೂ ಹೆಚ್ಚು



ಬಳಕೆದಾರರು ಈ ವ್ಯವಸ್ಥೆಯನ್ನು ಬಳಸುತ್ತಿದ್ದು, ಇದು ಒಟ್ಟು ಕಾರು ಟೋಲ್ ವಹಿವಾಟಿನ ಶೇ.28ರಷ್ಟಿದೆ. ಬೆಲೆ ಏರಿಕೆಯ ಹೊರತಾಗಿಯೂ, ನಿರಂತರ ಪ್ರಯಾಣಿಸುವವರಿಗೆ ಇದು ಉಳಿತಾಯದ ಆಯ್ಕೆಯಾಗಿ ಮುಂದುವರಿಯಲಿದೆ.

ನಗದು ರಹಿತ ಪಾವತಿ ಕಡ್ಡಾಯ: ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ನಗದು ರಹಿತ ಪಾವತಿಯನ್ನು ಕಡ್ಡಾಯಗೊಳಿಸಲಾಗುತ್ತಿದೆ. ಫಾಸ್‌ಟ್ಯಾಗ್ ಇಲ್ಲದ ವಾಹನಗಳಿಗೆ ಯುಪಿಐ ಮೂಲಕ ಶೇ.25ರಷ್ಟು ಹೆಚ್ಚುವರಿ ಶುಲ್ಕ ಅಥವಾ ನಗದು ರೂಪದಲ್ಲಿ ದುಪ್ಪಟ್ಟು ದಂಡ ವಿಧಿಸಲಾಗುತ್ತದೆ. ಅಲ್ಲದೆ, ಹೊಸ ನೋಂದಣಿಗಳನ್ನು ನೇರವಾಗಿ ವಾಹನ್ ಡೇಟಾಬೇಸ್ ಮೂಲಕ ಪರಿಶೀಲಿಸಲಾಗುತ್ತದೆ ಎಂದು ತಿಳಿದುಬಂದಿದೆ.

ಚುನಾವಣೆ ಘೋಷಣೆಗೆ ಮುನ್ನ ಡಿಎ, ಅರ್ಚಕರ ಭತ್ಯೆ ಹೆಚ್ಚಳ

ಕೋಲ್ಕತ್ತಾ: ರಾಜ್ಯದಲ್ಲಿ ವಿಧಾನಸಭಾ ಚುನಾವಣಾ ವೇಳಾಪಟ್ಟಿ ಪ್ರಕಟವಾಗುವ ಕೆಲವೇ ಕ್ಷಣಗಳ ಮೊದಲು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತುಟ್ಟಿಭತ್ಯೆ (ಡಿಎ) ಹೆಚ್ಚಳಕ್ಕೆ ಅಧಿಸೂಚನೆ ಹೊರಡಿಸಿದ್ದಾರೆ. ಮಾರ್ಚ್ 2026ರಿಂದ ರಾಜ್ಯ ಸರ್ಕಾರಿ ನೌಕರರು ರೋಪಾ 2009 ಡಿಎ ಬಾಕಿಯನ್ನು ಪಡೆಯಲಿದ್ದಾರೆ ಎಂದು ಮಮತಾ ಬ್ಯಾನರ್ಜಿ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ. ಈ ಬೆಳವಣಿಗೆ, ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ ಸುದೀರ್ಘ ಕಾನೂನು ಹೋರಾಟದ ನಂತರ ಬಂದಿದೆ. ಮೇ 2022 ರಲ್ಲಿ ಕಲ್ಕತ್ತಾ ಹೈಕೋರ್ಟ್ ಕೇಂದ್ರ ಸರ್ಕಾರಿ ನೌಕರರ ಸಮಾನವಾಗಿ ಡಿಎ ನೀಡುವಂತೆ ಆದೇಶಿಸಿತ್ತು. ಸುಪ್ರೀಂ ಕೋರ್ಟ್ ಬಾಕಿ ಮೊತ್ತದ ಶೇ.25ರಷ್ಟು ಪಾವತಿಸಲು ಸೂಚಿಸಿದ್ದರೂ, ರಾಜ್ಯ ಸರ್ಕಾರವು ಹಣಕಾಸಿನ ಬಿಕ್ಕಟ್ಟನ್ನು ಉಲ್ಲೇಖಿಸಿ ಕಾಲಾವಕಾಶ ಕೋರಿತ್ತು. ವೇಳಾಪಟ್ಟಿಯ ಅಧಿಕೃತ ಘೋಷಣೆಗೆ ಮೊದಲು ರಾಜ್ಯ ಸರ್ಕಾರಗಳು ತೆಗೆದುಕೊಂಡ ನಿರ್ಧಾರಗಳು, ಇತ್ತೀಚಿನ ಗೌರವಧನ ಹೆಚ್ಚಳ ಮತ್ತು ಡಿಎ ಸೌಲಭ್ಯಗಳು ಸೇರಿದಂತೆ ಎಲ್ಲವೂ ಸಿಂಧುವಾದ ಕ್ರಮಗಳೆಂದು ಚುನಾವಣಾ ಆಯೋಗ ಸ್ಪಷ್ಟಪಡಿಸಿದೆ.

ಅರ್ಚಕರು, ಮೌಲ್ವಿಗಳ ಭತ್ಯೆ ಹೆಚ್ಚಳ: ಇದೇ ವೇಳೆ ಪಶ್ಚಿಮ ಬಂಗಾಳ ಸರ್ಕಾರ ಅರ್ಚಕರು ಮತ್ತು ಮೌಲ್ವಿಗಳಿಗೆ ನೀಡಲಾಗುವ ಗೌರವಧನದಲ್ಲಿ 500 ಹೆಚ್ಚಳ ಮಾಡಿದ್ದು ಒಟ್ಟಾರೆ ಮಾಸಿಕ 2,000 ರೂ. ಮಾಡಿದೆ. ನಮ್ಮ ಸಮುದಾಯಗಳ ಆಧ್ಯಾತ್ಮಿಕ ಮತ್ತು ಸಾಮಾಜಿಕ ಜೀವನವನ್ನು ಉಳಿಸಿಕೊಳ್ಳುವ ಸೇವೆ ಸಲ್ಲಿಸುವ ನಮ್ಮ ಪುರೋಹಿತರು ಮತ್ತು ಮೌಲ್ವಿಗಳ ಮಾಸಿಕ ಗೌರವಧನದಲ್ಲಿ 500 ರೂ. ಹೆಚ್ಚಳ ಘೋಷಿಸಲು ಸಂತೋಷವಾಗಿದೆ ಎಂದು ಸಿಎಂ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಕೌಡಿಯಾರ್ ಅರಮನೆ: ಅಪಾರ ಮೌಲ್ಯ ಚಿನ್ನ ಕಳವು

ತಿರುವನಂತಪುರಂ(ಕೇರಳ): ಕೌಡಿಯಾರ್ ಅರಮನೆಯಲ್ಲಿ ಸುಮಾರು 2 ಕೋಟಿ ರೂ. ಮೌಲ್ಯದ ಚಿನ್ನಾಭರಣಗಳು ಹಾಗೂ ಅಮೂಲ್ಯ ಪ್ರಾಚೀನ ವಸ್ತುಗಳು ಕಳ್ಳತನವಾಗಿರುವ ಘಟನೆ ಬೆಳಕಿಗೆ ಬಂದಿದೆ. ಈ ಕುರಿತು ತಿರುವಾಂಕೂರು ರಾಜಮನೆತನದ ಸದಸ್ಯೆ ಅಶ್ವತಿ ತಿರುನಾಳ್ ಗೌರಿ ಲಕ್ಷ್ಮಿ ಬಾಯಿ ಅವರು ಪೆರೂರ್ಕಡ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಎಫ್‌ಐಆರ್ ಪ್ರಕಾರ, ಈ ಕಳ್ಳತನವು 2025ರ ಅಕ್ಟೋಬರ್ ಮತ್ತು ನವೆಂಬರ್ ನಡುವಿನ ಅವಧಿಯಲ್ಲಿ ನಡೆದಿರಬಹುದು ಎಂದು ಶಂಕಿಸಲಾಗಿದೆ. ಅಪರಿಚಿತ ವ್ಯಕ್ತಿಯೊಬ್ಬ ಅರಮನೆಗೆ ನುಗ್ಗಿ, ದೂರುದಾರರ ಮಲಗುವ ಕೋಣೆಯಲ್ಲಿದ್ದ ಕಬ್ಬಿಣದ ಕಪಾಟಿನಲ್ಲಿ ಇರಿಸಿದ್ದ ಚಿನ್ನಾಭರಣಗಳನ್ನು ಕಳವು ಮಾಡಿದ್ದಾನೆ ಎಂದು ತಿಳಿದುಬಂದಿದೆ. ಕಳ್ಳತನವಾದ ವಸ್ತುಗಳಲ್ಲಿ ಅಮೂಲ್ಯ ಹರಳುಗಳಿಂದ ಅಲಂಕರಿಸಲ್ಪಟ್ಟ ಆಭರಣಗಳು, ಶ್ರೀ ಪದ್ಮನಾಭಸ್ವಾಮಿ ದೇವಾಲಯದ ಚಿತ್ರದ ಪೆಂಡೆಂಟ್ ಹಾಗೂ ವಿದೇಶಗಳಿಂದ ತರಿಸಲಾದ ಅಪರೂಪದ ಪ್ರಾಚೀನ ಆಭರಣಗಳು ಸೇರಿವೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಒಟ್ಟಾರೆ ಸುಮಾರು 2 ಕೋಟಿ ರೂ. ಮೌಲ್ಯದ ಆಭರಣಗಳು ಮತ್ತು ಪ್ರಾಚೀನ ವಸ್ತುಗಳು ಕಳುವಾಗಿವೆ ಎಂದು ತಿಳಿದುಬಂದಿದೆ.

ಈ ಪ್ರಕರಣದಲ್ಲಿ ಈಗ ಎಫ್‌ಐಆರ್ ದಾಖಲಾಗಿದ್ದು, ಕಳೆದ ನಾಲ್ಕು ತಿಂಗಳಿನಿಂದ ಪೊಲೀಸರು ಪ್ರಾಥಮಿಕ ತನಿಖೆ ನಡೆಸುತ್ತಿದ್ದರು. ತನಿಖೆಯನ್ನು ಅಧಿಕೃತವಾಗಿ ಮುಂದುವರಿಸಲು ಇದೀಗ ಪ್ರಕರಣ ದಾಖಲಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸಂಜಯ್ ಕುಮಾರ್ ಗುರುದಿನ್ ತಿಳಿಸಿದ್ದಾರೆ.

ಎಲ್‌ಪಿಜಿ ರೀಫಿಲ್ ಬುಕ್ಕಿಂಗ್ ಪ್ರಮಾಣ 77 ಲಕ್ಷಕ್ಕೆ ಕುಸಿತ

ಹೊಸದಿಲ್ಲಿ : ಎಲ್‌ಪಿಜಿ ರೀಫಿಲ್ ಬುಕ್ಕಿಂಗ್ 88.8 ಲಕ್ಷಗಳಿಂದ 77 ಲಕ್ಷಗಳಿಗೆ ಕುಸಿದಿದೆ. ಅಂದರೆ ಜನರು ಹೆದರಿಕೆಯಿಂದಲೇ ಗ್ಯಾಸ್ ಖರೀದಿಗೆ ಮುಗಿಬೀಳುತ್ತಿದ್ದ ಸನ್ನಿವೇಶ ಅಲ್ಪಮಟ್ಟಿಗೆ ಕಡಿಮೆಯಾಗಿದೆ. ಇದೇ ವೇಳೆ ಪೆಟ್ರೋಲ್, ಡೀಸೆಲ್ ಅಥವಾ ಅಡುಗೆ ಅನಿಲಗಳ ಕೊರತೆಯಿಲ್ಲ. ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಹೊರತೂ ದೇಶದಲ್ಲಿ ಇವುಗಳ ಪೂರೈಕೆ ವ್ಯವಸ್ಥೆ ಸ್ಥಿರವಾಗಿದೆ ಎಂದು ಕೇಂದ್ರ ಸರ್ಕಾರ ಭರವಸೆ ನೀಡಿದೆ. ಆದರೆ, ಆನ್‌ಲೈನ್ ಮುಖೇನ ಎಲ್‌ಪಿಜಿ ಬುಕ್ಕಿಂಗ್ ಶೇ.84 ರಿಂದ ಶೇ.87ಕ್ಕೇರಿದೆ. ಗ್ಯಾಸ್ ಸಿಗದಿದ್ದರೆ ಏನು ಮಾಡುವುದೆಂಬ ಹೆದರಿಕೆಯಿಂದ ಎಲ್‌ಪಿಜಿ ಡೀಲರ್‌ಶಿಪ್‌ಗಳ ಬಳಿ ಸರತಿಯಲ್ಲಿ ನಿಲ್ಲುವ ಬದಲು, ಡಿಜಿಟಲ್ ಮುಖೇನ ಬುಕ್ ಮಾಡಿ ಎಂಬ ತೈಲ ಮಾರ್ಕೆಟಿಂಗ್ ಕಂಪನಿಗಳ ಅಭಿಯಾನದ ಪರಿಣಾಮ, ಆನ್‌ಲೈನ್‌ನಲ್ಲಿ ಬುಕ್ಕಿಂಗ್ ಶೇಕಡಾವಾರು ಹೆಚ್ಚತೊಡಗಿದೆ.

ದೇಶೀಯ ತೈಲ ಸಂಸ್ಕರಣಾಗಾರಗಳು ಅತ್ಯುನ್ನತ ಸಾಮರ್ಥ್ಯದಿಂದ ಕಾರ್ಯನಿರ್ವಹಿಸುತ್ತಿದ್ದು, ಸಾಕಷ್ಟು ಕಚ್ಚಾತೈಲ ದಾಸ್ತಾನನ್ನು ಕಾಯ್ದುಕೊಳ್ಳುತ್ತಿವೆ.

ಪಶ್ಚಿಮ ಬಂಗಾಳ, ಕೇರಳದಲ್ಲಿ ನಿಕಟ ಸ್ಪರ್ಧೆ: ಸಮೀಕ್ಷೆ

ಎನ್‌ಡಿಎ ತೆಕ್ಕೆಗೆ ತ.ನಾಡು, ಅಸ್ಸಾಂ?

ಹೊಸದಿಲ್ಲಿ: ಒಂದು ಕೇಂದ್ರಾಡಳಿತ ಪ್ರದೇಶ ಪುದುಚೇರಿ ಸೇರಿದಂತೆ ಒಟ್ಟು ಐದು ರಾಜ್ಯಗಳ ಚುನಾವಣೆಗೆ ವೇಳಾಪಟ್ಟಿ ಪ್ರಕಟವಾಗಿದ್ದು, ನಾಲ್ಕು ಪ್ರಮುಖ ರಾಜ್ಯಗಳ ಚುನಾವಣಾ ಪೂರ್ವ ಸಮೀಕ್ಷೆಯೂ ಬಹಿರಂಗವಾಗಿದೆ.

ಅಸ್ಸಾಂನಲ್ಲಿ ಮತ್ತೆ ಬಿಜೆಪಿ ಅಧಿಕಾರ ಹಿಡಿಯಲಿದೆ ಎಂದಿರುವ ಸಮೀಕ್ಷೆ, ತಮಿಳುನಾಡಿನಲ್ಲಿ ಎಐಎಡಿಎಂಕೆ ಮತ್ತು ಬಿಜೆಪಿ ಮೈತ್ರಿಕೂಟ ಗೆಲುವು ಸಾಧಿಸಲಿದೆ ಎಂದಿದೆ. ಹಾಗೆಯೇ ಕೇರಳದಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್ ನಡುವೆ ಭಾರೀ ಸ್ಪರ್ಧೆ ಏರ್ಪಡಲಿದೆ ಎಂದಿದ್ದರೆ, ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಮತ್ತು ಬಿಜೆಪಿ ನಡುವೆ ನಿಕಟ ಸ್ಪರ್ಧೆ ಏರ್ಪಡುವ ಸಾಧ್ಯತೆ ಇದೆ ಎಂದಿದೆ.

ಅಸ್ಸಾಂನಲ್ಲಿ ಮತ್ತೆ ಕಾಂಗ್ರೆಸ್ ಹಿಂದೆ ಬೀಳಲಿದ್ದು, 126 ಕ್ಷೇತ್ರಗಳ ಈ ವಿಧಾನಸಭೆಯಲ್ಲಿ 26-28ರಲ್ಲಿ ಗೆಲ್ಲಬಹುದು ಎಂದಿದೆ. ಆದರೆ, ಬಿಜೆಪಿ ಇಲ್ಲಿ 96ರಿಂದ 98ರಲ್ಲಿ ಗೆಲುವು ಸಾಧಿಸಲಿದೆ ಎಂದು ಹೇಳಿದೆ. ಇತರೆಯವರು 2-8ರಲ್ಲಿ ಗೆಲ್ಲಬಹುದು ಎಂದಿದೆ.

ತಮಿಳುನಾಡಿನಲ್ಲಿ ಎಐಎಡಿಎಂಕೆ ಮತ್ತು ಬಿಜೆಪಿಯ ಎನ್‌ಡಿಎ ಒಕ್ಕೂಟ 114-127ರಲ್ಲಿ ಗೆಲುವು, ಡಿಎಂಕೆ-ಕಾಂಗ್ರೆಸ್ ಒಕ್ಕೂಟ 104ರಿಂದ 114, ನಟ ವಿಜಯ್ ಅವರ ಟಿವಿಕೆ 6.12 ಮತ್ತು ಇತರೆಯವರು 1-6ರಲ್ಲಿ ಗೆಲ್ಲಬಹುದು ಎಂದಿದೆ.



ಕೇರಳ
- ಎಡರಂಗ- 61-71
- ಕಾಂಗ್ರೆಸ್ - 58-69
- ಎನ್‌ಡಿಎ - 2

ಪಶ್ಚಿಮ ಬಂಗಾಳ
- ಟಿಎಂಸಿ - 155-170
- ಬಿಜೆಪಿ - 100-115
- ಇತರೆ - 5-7

ಆರೋಗ್ಯ ಬಜೆಟ್‌ನಿಂದ ವಾರ್ಷಿಕ 150 ಕೋಟಿ ರೂ. ಕಾಂಗ್ರೆಸ್ ಜೇಬಿಗೆ

ಜನಪರವಾಗಿ ಸ್ವಾಸ್ಥ್ಯ ರಂಗ ಬದಲಿಸಿದ ಬಿಜೆಪಿ

ಗುವಾಹತಿ: ಅಸ್ಸಾಂನಲ್ಲಿ 15 ವರ್ಷಗಳ ಕಾಲ ಆಡಳಿತದಲ್ಲಿದ್ದಾಗ ರಾಜ್ಯ ಆರೋಗ್ಯ ಬಜೆಟ್‌ನಿಂದ ವರ್ಷಕ್ಕೆ 150 ಕೋಟಿ ರೂ.ಗಳನ್ನು ಕಾಂಗ್ರೆಸ್ ಜೇಬಿಗೆ ಹಾಕಿಕೊಳ್ಳುತ್ತಿತ್ತು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆರೋಪಿಸಿದ್ದಾರೆ. ಏಕಕಾಲಕ್ಕೆ ಬಿಜೆಪಿ ತನ್ನ 10 ವರ್ಷಗಳ ಆಳ್ವಿಕೆಯಲ್ಲಿ ಸ್ವಾಸ್ಥ್ಯ ರಂಗವನ್ನು ಜನಪರವಾಗಿ ಪರಿವರ್ತಿಸಿದೆ ಎಂದು ಹೇಳಿದರು. ಮಾತ್ರವಲ್ಲದೇ ಕಳೆದ ಹತ್ತು ವರ್ಷಗಳಲ್ಲಿ ಅಸ್ಸಾಂ ವೈದ್ಯಕೀಯ ಚಿಕಿತ್ಸಾ ರಂಗ ಮತ್ತು ಶಿಕ್ಷಣ ರಂಗಗಳಲ್ಲಿ ಸ್ವಾವಲಂಬನೆ ಸಾಧಿಸಿದೆ ಎಂದರು.

ಕಾಂಗ್ರೆಸ್ ತನ್ನ ನಾಯಕರ ಕುಟುಂಬಗಳ ಹಣಕಾಸು ಆರೋಗ್ಯ ಬಗ್ಗೆ ಮಾತ್ರ ಚಿಂತನೆ ನಡೆಸಿದ್ದರಿಂದ 10 ವರ್ಷಗಳ ಹಿಂದೆ ಅಸ್ಸಾಂನಲ್ಲಿ ಆರೋಗ್ಯ ರಂಗವು ಅಧೋಗತಿಗೆ ಜಾರಿತ್ತು. ಕಾಂಗ್ರೆಸ್ ಆಳ್ವಿಕೆಯ 2016ರವರೆಗೂ ರಾಜ್ಯದ ಸ್ವಾಸ್ಥ್ಯ ರಂಗದಲ್ಲಿ ಭಾರೀ ಭ್ರಷ್ಟಾಚಾರ ತಾಂಡವಿಸಿತ್ತು ಎಂದವರು ಆಪಾದಿಸಿದರು.



ಸುಮಾರು 2,092 ಕೋಟಿ ಮೊತ್ತದ ಸ್ವಾಸ್ಥ್ಯಪರ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿ, ಹಲವನ್ನು ಉದ್ಘಾಟಿಸಿ ಸಚಿವರು ಮಾತನಾಡಿದರು.

ಹುಟ್ಟಿರದ 9 ಲಕ್ಷ ಅಸ್ವಸ್ಥ ಮಕ್ಕಳ ಚಿಕಿತ್ಸೆಯ ನೆಪ: ಆರೋಗ್ಯ ಬಜೆಟ್‌ನಿಂದ ಕಾಂಗ್ರೆಸ್ ಪ್ರತಿ ವರ್ಷವೂ ಸುಲಿಗೆ ಮಾಡುತ್ತಿದ್ದ ಬರೋಬ್ಬರಿ 150 ಕೋಟಿ ರೂಗಳನ್ನು, ಈ ಭೂಮಿಗೇ ಬಂದಿರದ 9 ಲಕ್ಷ ಮಕ್ಕಳ ಚಿಕಿತ್ಸೆಗೆ ಮತ್ತು ಅಸ್ತಿತ್ವದಲ್ಲೇ ಇಲ್ಲದ 390 ಅಂಗನವಾಡಿ ಕೇಂದ್ರಗಳಿಗೆ ವ್ಯಯಿಸುತ್ತಿರುವುದಾಗಿ ದಾಖಲೆಗಳಲ್ಲಿ ತೋರಿಸುತ್ತಿತ್ತು ಎಂದು ಶಾ ಹೇಳಿದರು.

ರಾಹುಲ್‌ಗೆ ಬ್ರೇಕ್‌ಫಾಸ್ಟ್ ಮಾಡೋ ಜಾಗ ಗೊತ್ತಿಲ್ಲ!

ವಿಪಕ್ಷ ನಾಯಕ ರಾಹುಲ್ ಗಾಂಧಿಯನ್ನು ಕಟುವಾಗಿ ತರಾಟೆಗೆತ್ತಿಕೊಂಡು, ಬಿಜೆಪಿ ಮತ್ತು ದೇಶದ ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿರೋಧಿಸುವ ಭರದಲ್ಲಿ ದೇಶವನ್ನು ಅಪಮಾನಿಸುವ ರಾಹುಲ್ ನಡೆಯನ್ನು ಯಾರೇ ಭಾರತೀಯರು ಬೆಂಬಲಿಸುವುದಿಲ್ಲ, ಕಾಂಗ್ರೆಸಿಗರು ಎಐ ಶೃಂಗಸಭೆ ಸಂದರ್ಭ ಶರ್ಟ್‌ರಹಿತವಾಗಿ ಪ್ರತಿಭಟಿಸಿದ್ದು ತೀರಾ ನಾಚಿಕೆಗೇಡು. ನಾವು ಕೂಡ ವಿಪಕ್ಷ ಸ್ಥಾನದಲ್ಲಿದ್ದು ಸರಕಾರದ ವಿರುದ್ಧ ಪ್ರತಿಭಟಿಸಿದ್ದೇವೆ, ಪ್ರತಿಭಟನೆಗೊಂದು ರೀತಿ ನೀತಿ ಇದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಸಚಿವ ಶಾ, ಪ್ರಜಾಸತ್ತೆಯಲ್ಲಿ ಸಂಸತ್ತಿಗೆ ಪವಿತ್ರ ಜಾಗವಿದೆ. ಸಂಸತ್‌ಭವನದ ಮೆಟ್ಟಿಲುಗಳನ್ನು ಧರಣಿಗೂ ಬಳಸುವಂತಿಲ್ಲ, ಆದರೆ ಇದರ ಮಹತ್ತ್ವವನ್ನೇ ಅರಿಯದ ರಾಹುಲ್ ಗಾಂಧಿ ಸಂಸತ್ತಿನ ಮೆಟ್ಟಿಲಲ್ಲೇ ಕುಳಿತು ಚಹಾ-ಪಕೋಡಾ ತಿನ್ನುತ್ತಿದ್ದದ್ದು ಸರಿಯಲ್ಲ ಎಂದರು.

ಕಿರುಸುದ್ದಿ

ಸಾಮಾನ್ಯ ಸಭೆ ಇಂದು

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ 2026-27ನೇ ಸಾಲಿನ ಬಜೆಟ್ ಹಿನ್ನೆಲೆ ಸಾಮಾನ್ಯ ಸಭೆಯನ್ನು ಮಾ.16 ರಂದು ಬೆಳಗ್ಗೆ 11 ಗಂಟೆಗೆ ಮಹಾನಗರ ಪಾಲಿಕೆ ಸಾಮಾನ್ಯ ಸಭೆ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಅಂದು ಮಹಾನಗರ ಪಾಲಿಕೆಯ 2025-26 ನೇ ಸಾಲಿನ ಪರಿಷ್ಕೃತ ಆಯವ್ಯಯ, ಹು-ಧಾ 24/7 ನಿರಂತರ ನೀರು ಸರಬರಾಜು ಯೋಜನೆಯಾದ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ (ಕುಸ್ಸೆಂಪ್)ಯ 2025-26 ನೇ ಸಾಲಿನ ಪರಿಷ್ಕೃತ ಆಯವ್ಯಯ ಹಾಗೂ 2026-27ನೇ ಸಾಲಿನ ಆಯವ್ಯಯ ಅಂದಾಜು ಪತ್ರಿಕೆ ಮಂಜೂರಾತಿ ನಡೆಯಲಿದೆ ಎಂದು ಮಹಾನಗರ ಪಾಲಿಕೆಯ ಪರಿಷತ್ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ವಿವಿಧ ಕಾರ್ಯಕ್ರಮ

ಹುಬ್ಬಳ್ಳಿ: ತಾಲೂಕಿನ ಛಬ್ಬಿ ಗ್ರಾಮದಲ್ಲಿ ದುರ್ಗಾದೇವಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ, ಜಾತ್ರಾ ಮಹೋತ್ಸವದ ಅಂಗವಾಗಿ ಮಾ.16ರಿಂದ 18ರವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಮುಖಂಡ ದೇವೇಂದ್ರಪ್ಪ ಕಾಗೇನವರ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮದಲ್ಲಿ ನೂತನವಾಗಿ ದುರ್ಗಾದೇವಿ ಮೂರ್ತಿ, ಪಾಲಿಕೆಯನ್ನು ತಯಾರಿಸಲಾಗಿದೆ. ಮಾರ್ಚ್ 16ರಂದು ಚೌತ ಮನೆಯಲ್ಲಿ ದೇವಿಯ ಮೂರ್ತಿ ಪ್ರತಿಷ್ಠಾಪನೆ ಮಾಡಿ, ಮಧ್ಯಾಹ್ನ12 ಗಂಟೆಗೆ ಮೂರ್ತಿಯ ಮೆರವಣಿಗೆ ಮಾಡಲಾಗುವುದು. ವರೂತು ಛಬ್ಬಿಯ ಧರ್ಮಸೇನ ಭಟ್ಟಾರಕ ಸ್ವಾಮೀಜಿ ಮೆರವಣಿಗೆಗೆ ಚಾಲನೆ ನೀಡುವರು ಎಂದರು.

ಮಾ.17ರಂದು ಬೆಳಗ್ಗೆ 9 ಗಂಟೆಗೆ ಶಿರಹಟ್ಟಿಯ ಫಕೀರ ಸಿದ್ಧರಾಮ ಸ್ವಾಮೀಜಿ ನೇತೃತ್ವದಲ್ಲಿ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ, ಪ್ರತಿಷ್ಠಾಂಗ ಹೋಮ, ವಿಶೇಷ ಪೂಜೆ, ಕಳಸಾರೋಹಣ, ನಂತರ ಪ್ರವಚನ ಕಾರ್ಯಕ್ರಮಗಳು ನಡೆಯಲಿವೆ. ಸಂಜೆ 6 ಗಂಟೆಗೆ ಕುಂದಗೋಳದ ಬಸವಣ್ಣಜ್ಜನವರು, ಜಡೆಯ ಶಾಂತಲಿಂಗೇಶ್ವರ ಸ್ವಾಮೀಜಿ, ಹಂಪಿಯ ಪೂರ್ಣಾನಂದ ಭಾರತಿ ಸ್ವಾಮೀಜಿ ಅವರಿಂದ ಪ್ರವಚನ ಕಾರ್ಯಕ್ರಮ ಜರುಗಲಿದೆ ಎಂದರು. ಮಾ.18ರಂದು ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಲಿದೆ. ಸಂಜೆ 7 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ, ರಾತ್ರಿ 9 ಗಂಟೆಯಿಂದ ಮರುದಿನ ಬೆಳಗ್ಗೆ 6 ಗಂಟೆಯ ವರೆಗೆ ಬಾಗಲಕೋಟೆಯ ದುರ್ಗಾದೇವಿ ಗಾಯನ ಸಂಘ, ಭರಮದೇವರ ಗಾಯನ ಸಂಘದಿಂದ ಚೌಡಿಕೆಪದಗಳ ಜುಗಲ್‌ಬಂದಿ ಕಾರ್ಯಕ್ರಮ ನಡೆಯಲಿದೆ ಎಂದರು.

ದುರ್ಗಾದೇವಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಕರಿಯಪ್ಪ ಕೋಳಿ, ಕಲ್ಲಪ್ಪ ಮೊರಬದ, ಗುರುನಾಥ ದೊಡ್ಡಮನಿ, ಬಸವರಾಜ ಅಂಬ್ಲಣ್ಣವರ ಇದ್ದರು.

ಇಂದು ಅಹೋರಾತ್ರಿ ಧರಣಿ

ಹುಬ್ಬಳ್ಳಿ: ಎಸ್.ಸಿ. ಮೀಸಲಾತಿಗಾಗಿ ಆಗ್ರಹಿಸಿ ಮಾ.16ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಉತ್ತರ ಕರ್ನಾಟಕ ಮಡಿವಾಳರ ಸಂಘದ ಸಹೋಗದಲ್ಲಿ ಅಹೋರಾತ್ರಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಧಾರವಾಡ ಜಿಲ್ಲಾ ಮಡಿವಾಳರ ಸಂಘ ಪ್ರಧಾನ ಕಾರ್ಯದರ್ಶಿ ನವೀನಕುಮಾರ ಮಡಿವಾಳವರ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ನೂರು ವರ್ಷದಿಂದ ಮಡಿವಾಳ ಸಮಾಜವನ್ನು ಎಸ್‌ಸಿಗೆ ಸೇರಿಸಬೇಕು ಎಂಬ ಬೇಡಿಕೆಯಿದೆ. ಆದರೂ ಸೇರಿಸದಿರುವುದು ಬೇಸರದ ಸಂಗತಿ. ಇತ್ತೀಚೆಗೆ ಸರ್ಕಾರ ಲಾಂಡ್ರಿ ಉದ್ಯಮಕ್ಕೆ ಸೌಲಭ್ಯ ನೀಡುವುದಾಗಿ ಘೋಷಣೆ ಮಾಡಿದೆ. ಇದು ನಮ್ಮ ವೃತ್ತಿಯಾಗಿದ್ದು, ಇದರ ಅವಶ್ಯಕತೆ ನಮಗಿಲ್ಲ. ಸಮಾಜ ಬೆಳೆಯಬೇಕಾದರೆ ಮೀಸಲಾತಿ ಅವಶ್ಯಕವಿದೆ ಎಂದು ಒತ್ತಾಯಿಸಿದರು. 2009 ರಲ್ಲಿ ಆಗಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ನಮ್ಮ ಸಮಾಜದ ಕುಲಶಾಸ್ತ್ರ ಅಧ್ಯಯನ ಹಾಗೂ ಸಂಶೋಧನೆ ಮಾಡಲು ಮೈಸೂರ ವಿವಿ ಪ್ರೊ. ಡಾ. ಅನ್ನಪೂರ್ಣ ಅವರನ್ನು ನೇಮಿಸಿದ್ದರು. ಅವರು 2011ರಲ್ಲಿ ವರದಿ ಸಿದ್ಧಪಡಿಸಿ ಸರ್ಕಾರಕ್ಕೆ ನೀಡಿದ್ದಾರೆ. ಸದ್ಯ ವರದಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೊಳೆಯುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸತೀಶ ಕೌತಾಳ, ರಂಗಸ್ವಾಮಿ ಬಳ್ಳಾರಿ, ಶಿವಲಿಂಗಪ್ಪ ಮಡಿವಾಳವರ, ಅಶೋಕ ಮಡಿವಾಳವರ ಇದ್ದರು.

ಪೂರ್ವಭಾವಿ ಸಭೆ ನಾಳೆ

ಹುಬ್ಬಳ್ಳಿ: ಭಾರತದ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನರಾಂ ಮತ್ತು ಭಾರತದ ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಜಯಂತಿಗಳ ಪೂರ್ವಭಾವಿ ಸಭೆಯನ್ನು ಮಾ.17ರಂದು ಮಧ್ಯಾಹ್ನ 3 ಗಂಟೆಗೆ ತಾಲೂಕು ಆಡಳಿತ ಸೌಧದ ತಾಲೂಕು ಪಂಚಾಯತ್ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಧಾರವಾಡ: ಹೆಬ್ಬಳ್ಳಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ರೂ.15 ಕೋಟಿ ಕಾಮಗಾರಿಗೆ ರಾಜ್ಯ ವನ್ಯಜೀವಿ ಮಂಡಳಿಯ ಸದಸ್ಯೆ ವೈಶಾಲಿ ವಿನಯ ಕುಲಕರ್ಣಿ ಭೂಮಿಪೂಜೆ ನೆರವೇರಿಸಿದರು. ತಾಲೂಕಿನ ಹೆಬ್ಬಳ್ಳಿ ಕ್ಷೇತ್ರದ ಜಿಪಂ ವ್ಯಾಪ್ತಿಗೆ ಮುಂಬರುವ ಕವಲಗೇರಿ, ಶಿವಳ್ಳಿ, ಕನಕೂರು, ವನಹಳ್ಳಿ, ಮಾರಡಗಿ ಹಾಗೂ ಗೋವನಕೊಪ್ಪ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಯಿತು.

ಮಹಿಳಾ ಸಬಲೀಕರಣ, ಲಿಂಗ ಸಮಾನತೆ ಅಗತ್ಯ

ನವಲಗುಂದ: ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ ಅದಕ್ಕಿಂತಲೂ ಹೆಚ್ಚು ಮಹಿಳೆಯರು ಇದ್ದಾರೆ. ಅವರಿಗೆ ಸಂಪೂರ್ಣ ಬೆಂಬಲ, ಸಹಕಾರ ನೀಡುವುದರಿಂದ ಕುಟುಂಬ, ಸಮಾಜ ಅಭಿವೃದ್ಧಿ ಹೊಂದಲು ಸಾಧ್ಯ. ಮಹಿಳಾ ಸಬಲೀಕರಣ ಹಾಗೂ ಲಿಂಗ ಸಮಾನತೆಯ ಆವಶ್ಯಕತೆಯಿದೆ ಎಂದು ಅಲ್ ಇಂಡಿಯಾ ಪ್ರೈಮರಿ ಟೀಚರ್ ಫೆಡರೇಷನ್ ಅಧ್ಯಕ್ಷ ಬಸವರಾಜ ಗುರಿಕಾರ ಹೇಳಿದರು. ಅವರು ತಾಲೂಕಿನ ನೌಕರರ ಸಂಘದ ವತಿಯಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು. ತಹಶೀಲ್ದಾರ್ ಸುಧೀರ ಸಾವುಕಾರ ಮಾತನಾಡಿದರು. ನವಲಗುಂದ ನಗರದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ನವಲಗುಂದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಜರುಗಿತು. ಮಾಡಲ್ ಹೈಸ್ಕೂಲ್‌ನಲ್ಲಿ ಮಹಿಳಾ ನೌಕರರಿಗಾಗಿ ಖೋ. ಖೋ, ಹಾಗೂ ವಾಲಿಬಾಲ ಪಂದ್ಯಾಟ ಹಾಗೂ ಮೋಜಿನ ಆಟಗಳನ್ನು ಹಮ್ಮಿಕೊಳ್ಳಲಾಗಿತ್ತು, ವಿ. ಡಿ. ರಂಗಣ್ಣವರ ಧ್ವಜಾರೋಹಣ ನೆರವೇರಿಸಿದರು. ನೌಕರ ಸಂಘದ ನಿಕಟಪೂರ್ವ ಅಧ್ಯಕ್ಷ ಎ. ಬಿ. ಕೊಪ್ಪದ ಮಾತನಾಡಿದರು. ಸಾಧಕ ಮಹಿಳಾ ನೌಕರರಿಗೆ ಸೇವಾ ಸುಧೆ ಪ್ರಶಸ್ತಿ ನೀಡಲಾಯಿತು. ನ್ಯಾಯಧೀಶರಾಗಿ ಆಯ್ಕೆಗೊಂಡ ನವಲಗುಂದ ತಾಲೂಕು ಬ್ಯಾಲ್ಯಾಳ ಗ್ರಾಮದ ಸುಧಾ ಪಟ್ಟಣಶೆಟ್ಟಿ ಅವರನ್ನು ಗೌರವಿಸಲಾಯಿತು. ವಿ.ಎಫ್. ಚುಳಕಿ, ರಾಜಶೇಖರ ಹೊನ್ನಪ್ಪನವರ, ರಮೇಶ ಲಿಂಗದಾಳ, ಎಸ್.ಎಫ್. ನೀರಲಗಿ, ಪಿ.ಕೆ. ಹಿರೇಗೌಡ್ರ, ರೂಪಾ ಕಿಣಗಿ, ಆರ್. ಎಚ್. ನೇಗಲಿ, ಎಸ್. ಕೆ. ಕುರಹಟ್ಟಿ, ಜಗದೀಶ ಹಡಪದ, ಸುನೀಲ ಬಳ್ಳಾರಿ, ಶರಣು ಕುರಿ, ಗಣೇಶ ಹೊಳೆಯಣ್ಣವರ, ಎನ್. ಎಸ್. ತಾಳಿಕೋಟಿಮಠ, ಎ.ಎಂ. ಮುಲ್ಲಾ, ಸರಸ್ವತಿ ಸುಣಗಾರ, ಎನ್. ವೈ. ಕಳಸಾಪೂರ ಗಾಯತ್ರಿ ಪಾಟೀಲ, ಎಲ್. ವೈ. ರಾಯಪ್ಪನವರ, ಸಹದೇವ ಪೂಜಾರ ಇದ್ದರು.



ನವಲಗುಂದ: ತಾಲೂಕಿನ ನೌಕರರ ಸಂಘದ ವತಿಯಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿದ ಅಲ್ ಇಂಡಿಯಾ ಪ್ರೈಮರಿ ಟೀಚರ್ ಫೆಡರೇಷನ್ ಅಧ್ಯಕ್ಷ ಬಸವರಾಜ ಗುರಿಕಾರ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ನವಲಗುಂದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಜರುಗಿತು.

ಸಿಲಿಂಡರ್ ಏಜೆನ್ಸಿ ಮಾಲೀಕರ ಸಭೆ | ಡಿಸಿ ಸ್ನೇಹಲ್ ಆರ್. ಎಚ್ಚರಿಕೆ

ಕಾಳಸಂತೆಯಲ್ಲಿ ಮಾರಿದರೆ ಕ್ರಮ

ಧಾರವಾಡ: ಕಾಳಸಂತೆಯಲ್ಲಿ ಗೃಹಬಳಕೆ ಸಿಲಿಂಡರ್‌ಗಳು ಅಥವಾ ಸಣ್ಣ ಸಿಲಿಂಡರ್‌ಗಳು ಹೆಚ್ಚಿನ ಬೆಲೆಗೆ ಮಾರಾಟ ಮಾಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವುದಾಗಿ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಎಚ್ಚರಿಕೆ ನೀಡಿದರು.

ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ನೂತನ ಸಭಾಂಗಣದಲ್ಲಿ ಎಲ್‌ಪಿಜಿ ವಿತರಕರ, ಹೊಟೇಲ್ ಮಾಲೀಕರ ಹಾಗೂ ಸಿಲಿಂಡರ್ ಏಜೆನ್ಸಿಗಳ ಪ್ರತಿನಿಧಿಗಳ ಸಭೆ ನಡೆಸಿದ ಅವರು, ಸಿಲಿಂಡರ್ ಮಾರಾಟ ಪತ್ತೆಗಾಗಿ ತಂಡಗಳು ರಚಿಸಿದ್ದಾಗಿ ತಿಳಿಸಿದರು.

ಅಕ್ರಮ ಅನೀಲ ಸಿಲಿಂಡರ್‌ಗಳ ವಿತರಣೆ ಕಂಡುಬಂದಲ್ಲಿ ಅಗತ್ಯ ವಸ್ತುಗಳ ಕಾಯ್ದೆಯಡಿ ಪ್ರಕರಣ ದಾಖಲಿಸಿ, ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು. ಅನಗತ್ಯ ಸಂಗ್ರಹ, ಸಿಲಿಂಡರ್ ವರ್ಗಾವಣೆ ಮಾಡುವುದು ಕೂಡ ನಿಷೇಧಿಸಿದೆ ಎಂದರು.

ಸಭೆಯಲ್ಲಿ ಆಹಾರ ಇಲಾಖೆ ಜಂಟಿ ನಿರ್ದೇಶಕ ವಿನೋದಕುಮಾರ ಹೆಗ್ಗಳಗಿ, ಅಧಿಕಾರಿಗಳು, ಹೊಟೇಲ್ ಮಾಲೀಕರ ಸಂಘದ ಅಧ್ಯಕ್ಷ ಮಹೇಶ ಶೆಟ್ಟಿ, ಪದಾಧಿಕಾರಿಗಳು, ಹೊಟೇಲ್ ಮಾಲೀಕರು ಹಾಗೂ ಗ್ಯಾಸ್ ವಿತರಕರು ಇದ್ದರು.



ಒಟ್ಟು 6.42 ಗ್ಯಾಸ್ ಸಂಪರ್ಕ



ಧಾರವಾಡ ಜಿಲ್ಲೆಯಲ್ಲಿ ಐಓಸಿ 13, ಬಿಪಿಸಿ 18, ಎಚ್‌ಪಿಸಿ 22 ಒಟ್ಟು 55 ಗ್ಯಾಸ್ ಡಿಲರ್‌ಗಳಿದ್ದು, ಐಓಸಿ, ಬಿಪಿಸಿ, ಎಚ್‌ಪಿಸಿ ಕಂಪನಿಗಳು ಸೇರಿ ಸಿಂಗಲ್ ಗ್ಯಾಸ್ 2.83 ಲಕ್ಷ, ಡಬಲ್ ಗ್ಯಾಸ್ 3.47 ಲಕ್ಷ ಸಂಪರ್ಕಗಳಿವೆ. ವಾಣಿಜ್ಯ ಬಳಕೆಗೆ 11,799 ವಾಣಿಜ್ಯ ಸಿಲಿಂಡರ್ ಸಂಪರ್ಕಗಳಿವೆ. ಒಟ್ಟು ಗೃಹಬಳಕೆ ಮತ್ತು ವಾಣಿಜ್ಯ ಬಳಕೆ ಸೇರಿ 6.42 ಗ್ಯಾಸ್ ಸಂಪರ್ಕಗಳಿವೆ. ಕಳೆದ 60 ದಿನಗಳಲ್ಲಿ ಜಿಲ್ಲೆಯಲ್ಲಿ 10,987 ಸಿಲಿಂಡರ್ ವಿತರಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ತಿಳಿಸಿದರು.

> ಕೇಂದ್ರ-ರಾಜ್ಯ ಸರ್ಕಾರ ನಿರ್ದೇಶನದಂತೆ ಪ್ರಕಾರ ಗೃಹಬಳಕೆಗೆ ಸಿಲಿಂಡರ್ ವಿತರಿಸುತ್ತಿದೆ. ಬುಕ್ಕಿಂಗ್‌ಗೆ ನಗರದ ಗ್ರಾಹಕರಿಗೆ 25 ದಿನ ಮತ್ತು ಗ್ರಾಮೀಣ ಗ್ರಾಹಕರಿಗೆ 45 ದಿನ ಕಾಲಾವಕಾಶವಿದ್ದು, ವದಂತಿ ಕಿವಿಕೊಡದಿರಿ.
> ■ ಸ್ನೇಹಲ್ ಆರ್., ಜಿಲ್ಲಾಧಿಕಾರಿ

- ಸಿಲಿಂಡರ್ ವಿತರಣೆಯಲ್ಲಿ ವೈದ್ಯಕೀಯ, ಶಾಲಾ-ಕಾಲೇಜು, ಅಂಗನವಾಡಿ, ಹಾಸ್ಟೇಲ್, ಇಂದಿರಾ ಕ್ಯಾಂಟಿನ್‌ಗಳಿಗೆ ಆದ್ಯತೆ
- ಗೃಹಬಳಕೆಯ ಸಿಲಿಂಡರ್ ಅಕ್ರಮವಾಗಿ ವಾಣಿಜ್ಯ ಬಳಕೆಗೆ ಬಳಸಲು ನಿರ್ಬಂಧ
- ಜಿಲ್ಲೆಯಲ್ಲಿ ಎಲ್‌ಪಿಜಿ ಸಿಲೆಂಡರ್‌ಗಳ ಕೊರತೆ ಇಲ್ಲ
- ಸಾರ್ವಜನಿಕರು, ಎಲ್ಲ ಗ್ರಾಹಕರು ಭಯಪಡುವ ಅಗತ್ಯವಿಲ್ಲ
- ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ಸುಳ್ಳು ವದಂತಿಗಳಿಗೆ ಸಾರ್ವಜನಿಕರು ಕಿವಿಗೊಡದಂತೆ ಡಿಸಿ ಸ್ನೇಹಲ್ ಮನವಿ

ಪಾಲಿಕೆಯ ಸ್ವಚ್ಛತಾ ಕಾರ್ಯಕ್ಕೆ ಕೈಜೋಡಿಸಿ

ಹುಬ್ಬಳ್ಳಿ: ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ ಬಿಜೆಪಿ ಯುವ ಮೋರ್ಚಾ ವತಿಯಿಂದ ಕೇಶವಪುರದ ಹೇಮಂತನಗರ ಗಣಪತಿ ದೇವಸ್ಥಾನದಲ್ಲಿ ಶಾಸಕ ಮಹೇಶ ಟೆಂಗಿನಕಾಯಿ ಉಪಸ್ಥಿತಿಯಲ್ಲಿ ಸ್ವಚ್ಛತಾ ಕಾರ್ಯ ನಡೆಯಿತು.

ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, ಹುಬ್ಬಳ್ಳಿ ನಮ್ಮ ನಗರವನ್ನು ಸ್ವಚ್ಛತೆಯನ್ನು ಕಾಪಾಡುವುದು ಪ್ರತಿಯೊಬ್ಬ ನಾಗರಿಕರ ಕರ್ತವ್ಯ ನಾವು ಕಸವನ್ನು ಎಲ್ಲಿ ಬೇಕಾದರೂ ಅಲ್ಲಿ ಚೆಲ್ಲಬಾರದು ಮಹಾನಗರ ಪಾಲಿಕೆಯ ಕಸವನ್ನು ಸಂಗ್ರಹಿಸುವ ವಾಹನಗಳಲ್ಲಿ ಮಾತ್ರ ಚೆಲ್ಲಬೇಕು. ಎಲ್ಲ ಕಾರ್ಯಗಳಿಗೆ ಪಾಲಿಕೆ ಸ್ವಚ್ಛತಾ ಸಿಬ್ಬಂದಿ ಕೈಜೋಡಿಸಬೇಕು ಎಂದರು. ಪಾಲಿಕೆ ಸದಸ್ಯೆ ಉಮಾ ಮುಕುಂದ್ ಮುತ್ತು ಹೆಬ್ಬಳ್ಳಿ ರಾಮನಗೌಡ ಶಟ್ಟನ ಗೌಡರ್, ಮಂಜುನಾಥ ಊಟವಾಲೆ, ಸುನಿಲ್ ಗುಮಾಸ್ತೇ, ಮಹಾನಗರ ಪಾಲಿಕೆ ಸದಸ್ಯರಾದ ಉಮಾ ಮುಕುಂದ, ವಿನೋದ್ ಪಟುವಾ, ವೈ.ಬಿ. ಪಾಟೀಲ್, ರಾಮನಗೌಡ ಶೆಟ್ಟನಗೌಡರ್, ಸುನಿಲ್ ಗುಮಾಸ್ತೇ, ನಿಖಿಲ್ ವಾಂಗಿ, ಮುತ್ತು ಹೆಬ್ಬಳ್ಳಿ, ಪ್ರವೀಣ ಬಳಗಲಿ, ಮಂಜುನಾಥ್ ಉಟವಲೆ, ಬಸವರಾಜ ಬಳೇಗೇರ್, ಸಾಯಿ ಕಿರಣ್, ರೋಹಿತ್ ಪಟೇಲ್, ರೋಹನ್ ಮಿರಜ್ಕರ್, ಮನೋಜ್ ಹಬ್ಬು, ಮೇಘ ಇದ್ದರು.



- ಕ್ಷೇತ್ರ ಸ್ವಚ್ಛತೆಗೆ ಆದ್ಯತೆ
- ಗ್ರೀನ್ ಸಿಟಿ ನಿರ್ಮಾಣ ಮಾಡಲು ಒತ್ತು ನೀಡುವುದಾಗಿ ಹೇಳಿದ ಶಾಸಕ ಮಹೇಶ ಟೆಂಗಿನಕಾಯಿ

ಎಂ.ಆರ್. ಪಾಟೀಲ ಜನ್ಮದಿನ: ಕಣ್ಣು ಉಚಿತ ತಪಾಸಣೆ

ಕುಂದಗೋಳ: ಕ್ಷೇತ್ರದ ಶಾಸಕ ಎಂ.ಆರ್. ಪಾಟೀಲ ಅವರ 64ನೇ ಹುಟ್ಟುಹಬ್ಬದ ಅಂಗವಾಗಿ ಅಭಿಮಾನಿಗಳು ಹಾಗೂ ಕಾರ್ಯಕರ್ತರು ಹುಬ್ಬಳ್ಳಿಯ ಜಯಪ್ರಿಯಾ ಆಸ್ಪತ್ರೆಯ ಸಹಯೋಗದಲ್ಲಿ ಭಾನುವಾರ ಉಚಿತ ಕಣ್ಣಿನ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಆಯೋಜಿಸಿದರು.

ಪಟ್ಟಣದ ಭೂತೇಶ್ವರ ದೇವಸ್ಥಾನ ಆವರಣದಲ್ಲಿ ನಡೆದ ಶಿಬಿರವನ್ನು ಶಾಸಕರ ಸಹೋದರ ಬಿ.ಆರ್ .ಪಾಟೀಲ ಶಿಬಿರ ಉದ್ಘಾಟಿಸಿ ಚಾಲನೆ ನೀಡಿದರು. ಈ ವೇಳೆ ಬಿಜೆಪಿ ತಾಲೂಕಾಧ್ಯಕ್ಷ ನಾಗನಗೌಡ ಸಾತ್ಮರ ಮಾತನಾಡಿ, ಎಂ.ಆರ್. ಪಾಟೀಲ ಅವರು ಸುಮಾರು 15 ವರ್ಷಗಳಿಂದ ಕ್ಷೇತ್ರದಲ್ಲಿ ಬಿಜೆಪಿ ಸಂಘಟನೆ ಬಲಪಡಿಸಲು ಶ್ರಮಿಸುತ್ತಿದ್ದು, ಎಲ್ಲ ವರ್ಗದ ಜನರ ಸಮಸ್ಯೆಗಳಿಗೆ ಸದಾ ಸ್ಪಂದಿಸುವ ಜನನಾಯಕರು. ಶಿಕ್ಷಣ, ಆರೋಗ್ಯ ಹಾಗೂ ಗ್ರಾಮೀಣಾಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಅವರ ಜನ್ಮದಿನದ ಅಂಗವಾಗಿ ಅಭಿಮಾನಿಗಳು ಹಾಗೂ ಕಾರ್ಯಕರ್ತರು ಇಂತಹ ಸೇವಾ ಕಾರ್ಯಗಳನ್ನು ನಡೆಸುತ್ತಿರುವುದು ಶ್ಲಾಘನೀಯ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಬಿ.ಆರ್. ಪಾಟೀಲ, ಬಸವರಾಜ ಕೊಪ್ಪದ, ಟಿ.ಜಿ. ಬಾಲಣ್ಣವರ, ಪೃಥ್ವಿರಾಜ್ ಕಾಳೆ, ನಾಗರಾಜ ದೇಶಪಾಂಡೆ, ರಾಜಣ್ಣ ಶಿವಳ್ಳಿ, ಶ್ರೀಕಾಂತ್ ಕಲಾಲ್, ಪ್ರಕಾಶಗೌಡ್ರ ಪಾಟೀಲ, ಬಿ.ಟಿ. ಗಂಗಾಯಿ, ಡಿ.ವೈ. ಲಕ್ಕನಗೌಡ, ಪ್ರಕಾಶ ಕುಬಿಹಾಳ, ಗಣೇಶ ಕೊಕಾಟೆ, ವಾಸು ಗಂಗಾಯಿ, ವಾಗೇಶ ಮನಕಟ್ಟಿಮಠ, ಬಸವರಾಜ ನಾವಳ್ಳಿ, ಬಸವರಾಜ ಕೋಳಿವಾಡ, ಗುರುಸಿದ್ದಗೌಡ್ರ ಮೇಲಮಾಳಗಿ, ಶಶಿ ಸಣ್ಣ ಲಿಂಗಣ್ಣವರ್, ಎಲ್ಲಪ್ಪ ಡೊಳ್ಳಿನ, ಮಂಜುನಾಥ ಕಂಬಳಿ, ಮಂಜುನಾಥ ಬಂಡಿವಾಡ, ಬಸವರಾಜ ಚಿಕ್ಕಹರಕುನಿ, ಸತೀಶ ಪಾಟೀಲ, ಫಕೀರಯ್ಯ ಎತ್ತಿನಮಠ,ರಮೇಶ ಗದಗಿನ,ಸಂತೋಷ ಮಲಿಗ್ವಾಡ್, ರಮೇಶ ಮಲ್ಲಿಗ್ವಾಡ, ನಿಖಿಲ್ ಗಂಗಾಯಿ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳಿಂದ ನೂರಾರು ಬಿಜೆಪಿ ಕಾರ್ಯಕರ್ತರು, ಅಭಿಮಾನಿಗಳು ಇದ್ದರು.

ಹಣ್ಣು ಹಂಪಲ ವಿತರಣೆ

ಜಯಪ್ರಿಯ ಮೆಡಿಕಲ್ ಆಸ್ಪತ್ರೆಯ ವೈದ್ಯ ಡಾ.ಕ್ರಾಂತಿ ಕಿರಣ್ ಹಾಗೂ ವ್ಯವಸ್ಥಾಪಕ ಬಸವರಾಜ ಹೂಗಾರ ಅವರ ಶಿಬಿರ ನೇತೃತ್ವ ವಹಿಸಿದ್ದರು. ಶಿಬಿರದಲ್ಲಿ ಒಟ್ಟು 100 ಮಂದಿಗೆ ಕಣ್ಣು ತಪಾಸಣೆ ನಡೆಸಲಾಗಿದ್ದು, ಅವರಲ್ಲಿ 40 ಮಂದಿಯನ್ನು ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಲಾಗಿದೆ. ಇದಕ್ಕೂ ಮುನ್ನ ಪಟ್ಟಣದ ಸರ್ಕಾರಿ ಆಸ್ಪತ್ರೆಯ ಒಳ ರೋಗಿಗಳಿಗೆ ಹಣ್ಣು ಹಂಪಲ ವಿತರಿಸಲಾಯಿತು.



ಎಸ್‌ಡಿಎಂ ಹಳೆಯ ವಿದ್ಯಾರ್ಥಿಗಳ ಸಭೆ

ಧಾರವಾಡ: ವೈದ್ಯಕೀಯ, ದಂತ, ಭೌತಚಿಕಿತ್ಸೆ, ನರ್ಸಿಂಗ್, ಜೈವಿಕ ವಿಜ್ಞಾನಗಳ ಸಂಶೋಧನಾ ಸಂಸ್ಥೆ ಮತ್ತು ಹೆಲ್ತ್ ಸೈನ್ಸ್ ಕಾಲೇಜು ಒಳಗೊಂಡ ಧರ್ಮಸ್ಥಳ ಮಂಜುನಾಥೇಶ್ವರ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಭೆ ಶನಿವಾರ ಜರುಗಿತು.

ಹಳೆಯ ವಿದ್ಯಾರ್ಥಿಗಳ ಸಂಘದ ವೆಬ್‌ಸೈಟ್ ಹಾಗೂ ಸಭೆಗೆ ಎಸ್‌ಡಿಎಂ ವಿವಿಯ ಉಪಕುಲಪತಿ ಡಾ.ನಿರಂಜನಕುಮಾರ್ ಚಾಲನೆ ನೀಡಿದರು. ವಿದ್ಯಾರ್ಥಿ ಬಾಲೇಶ್ ಐನಾಪೂರ ಹಳೇ ವಿದ್ಯಾರ್ಥಿಗಳ ಸಂಘದ ಗುರಿ-ಉದ್ದೇಶಗಳ ಕುರಿತು ಮಾಹಿತಿ ನೀಡಿದರು. ಅಲೈಡ್ ಹೆಲ್ತ್ ಸೈನ್ಸ್ ವಿದ್ಯಾರ್ಥಿಗಳಾದ ತ್ರಿವೇಣಿ ಮಲ್ಲಾಡ ಹಾಗೂ ಮಧುಶ್ರೀ ಕೊಪ್ಪದ ಅವರ ಅಧ್ಯಯನಕ್ಕೆ ಆರ್ಥಿಕ ಸಹಾಯಧನ ನೀಡಲಾಯಿತು. ಎಸ್‌ಡಿಎಂ ವಿವಿ ಉಪಕುಲಪತಿ ಡಾ.ನಿರಂಜನಕುಮಾರ್ ಅವರಿಗೆ ಸನ್ಮಾನಿಸಲಾಯಿತು.

ಹಣಕಾಸು ಅಧಿಕಾರಿ ವಿ.ಜಿ.ಪ್ರಭು, ಎಸ್‌ಡಿಎಂ ಕಾಲೇಜಿನ ಪ್ರಾಚಾರ್ಯ ಡಾ.ವಿಜಯ ಕುಲಕರ್ಣಿ, ಎಸ್‌ಡಿಎಂ ದಂತ ಕಾಲೇಜಿನ ಪ್ರಾಚಾರ್ಯ ಮತ್ತು ಹಳೇ ವಿದ್ಯಾರ್ಥಿ ಡಾ.ಬಲರಾಮ್ ನಾಯ್ಕ್, ವೈದ್ಯಕೀಯ ಅಧೀಕ್ಷಕ ಡಾ.ಕಿರಣ್ ಹೆಗ್ಡೆ ಇದ್ದರು. ಡಾ.ಪ್ರಮೋದ ಛಬ್ಬಿ, ಡಾ.ಲೇಖಾ ಪಳ್ಳೈ, ಡಾ.ಶರ್ಮಿಳಾ ದುಧಾನಿ, ಲಕ್ಷ್ಮೀ ಪಾಟೀಲ, ಸೋಮಶೇಖರ ಸೇರಿ ಅನೇಕರು ಪಾಲ್ಗೊಂಡಿದ್ದರು. ಡಾ.ಆನಂದ ತಾವರಗೇರಿ ಸ್ವಾಗತಿಸಿದರು. ತುಳಸಿ ಕುಲಕರ್ಣಿ ನಿರೂಪಿಸಿದರು. ಡಾ. ಆದಿತ್ಯ ಅಗ್ನಿಹೋತ್ರಿ ವಂದಿಸಿದರು.



ವಿದ್ಯಾರ್ಥಿಗಳಿಗೆ ಪರೀಕ್ಷಾ ಪರಿಕರಗಳ ವಿತರಣೆ



ಕುಂದಗೋಳ: ಕ್ಷೇತ್ರದ ಬಿಜೆಪಿ ಶಾಸಕ ಎಂ.ಆರ್. ಪಾಟೀಲ ಅವರ ಜನ್ಮದಿನದ ಅಂಗವಾಗಿ ತಾಲೂಕಿನ ಚಿಕ್ಕನರ್ತಿ ಗ್ರಾಮದಲ್ಲಿ ಬಿಜೆಪಿ ಕಾರ್ಯಕರ್ತರು ಹಾಗೂ ಅವರ ಅಭಿಮಾನಿಗಳಿಂದ ಭಾನುವಾರ ವಿದ್ಯಾರ್ಥಿಗಳಿಗೆ ಪರೀಕ್ಷಾ ಪರಿಕರಗಳನ್ನು ವಿತರಿಸುವ ಮೂಲಕ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಗ್ರಾಮದ ಶಾಲೆಯ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಅಗತ್ಯವಾದ ನೋಟ್ ಬುಕ್, ಪೆನ್ ಸೇರಿದಂತೆ ವಿವಿಧ ಪರೀಕ್ಷಾ ಸಾಮಗ್ರಿಗಳನ್ನು ವಿತರಿಸಿ ಶುಭಾಶಯ ಕೋರಲಾಯಿತು. ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳು ಶಾಸಕ ಎಂ.ಆರ್. ಪಾಟೀಲ ಅವರಿಗೆ ವಿಡಿಯೋ ಕಾಲ್ ಮೂಲಕ ಜನ್ಮದಿನದ ಶುಭಾಶಯಗಳನ್ನು ತಿಳಿಸಿದರು. ವೇದಮೂರ್ತಿ ಜಗದವಯ್ಯ ಶಾಸ್ತ್ರಿಗಳು, ಮುಖಂಡರಾದ ಅಪ್ಪಣ್ಣ ನದಾಫ, ಗುರುಪಾದ ಸ್ವಾದಿ, ಸಂಜುಕುಮಾರ ಸೋಮರೆಡ್ಡಿ, ಮಂಜುನಾಥ ಸೋಮರೆಡ್ಡಿ, ಬಸವರಾಜ ಅರಳಿಕಟ್ಟಿ, ರವಿ ಬಾರಕೇರ, ಆಂದಪ್ಪ ಶಾನವಾಡ, ಮುತ್ತಪ್ಪ ಕುಸುಗಲ್, ಫಕೀರಪ್ಪ ಚಲವಾದಿ, ಬಸಪ್ಪ ಬಾರಕೇರ ಇತರರಿದ್ದರು.

ಮಕ್ಕಳ ಪ್ರತಿಭೆಗೆ ಪ್ರೋತ್ಸಾಹಿಸಿ: ಜೋಶಿ

ಧಾರವಾಡ: ಪಾಲಕರು ಮಕ್ಕಳಿಂದ ಕೇವಲ ಅಂಕಗಳನ್ನು ನಿರೀಕ್ಷಿಸದೆ ಅವರ ಆಸಕ್ತಿ, ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಿದರೆ ಉತ್ತಮ ಸಾಧನೆ ಮಾಡುತ್ತಾರೆ ಎಂದು ಶಿಶುವಿಹಾರ ಸಂಸ್ಥಾಪಕಿ ಮೃಣಾಲ್ ಜೋಶಿ ಹೇಳಿದರು.

ಸತ್ತೂರಿನ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆದ ಮಾತೃಮಿಲನ ಕಾರ್ಯಕ್ರಮ ಉದ್ಘಾಟಿಸಿದ ಅವರು, ಮಕ್ಕಳ ಬದುಕಿನಲ್ಲಿ ತಾಯಿ ಪಾತ್ರ ಬಹಳ ದೊಡ್ಡದಿದೆ. ಮಕ್ಕಳನ್ನು ಮೊಬೈಲ್ ಹಾಗೂ ಇಂಟರ್ನೆಟ್ ಬಳಕೆಯಿಂದ ದೂರವಿರಿಸಬೇಕು. ಅಲ್ಲದೇ, ಅವರೊಂದಿಗೆ ಹೆಚ್ಚಿನ ಸಮಯ ಕಳೆಯುವ ಮೂಲಕ ಅವರ ಆಸೆಗಳು, ಆಕಾಂಕ್ಷೆಗಳು ತಿಳಿಯುವ ಕೆಲಸ ಮಾಡಬೇಕು ಎಂದರು. ಅಶೋಕ ಸೋನಕರ್ ಮಾತನಾಡಿದರು. ಶಾಲೆಯ ಕರೆಸ್ಪಾಂಡೆಂಟ್ ಗುರುರಾಜ ಅಗಡಿ, ಪ್ರಾಚಾರ್ಯ ರಾಮಕೃಷ್ಣ, ವಿದ್ಯಾಕೇಂದ್ರದ ಸಿಬ್ಬಂದಿ, ಮಕ್ಕಳು, ಪಾಲಕರು ಪಾಲ್ಗೊಂಡಿದ್ದರು. ಮೊಬೈಲ್ ಜಾಗೃತಿ ನಾಟಕ ಜರುಗಿತು.



ಅದಾಲತ್‌ನಲ್ಲಿ 167 ಪ್ರಕರಣಗಳು ಇತ್ಯರ್ಥ



ಕಲಘಟಗಿ: ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಧಾರವಾಡ ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ಕಲಘಟಗಿ ಇವರ ಸಹಯೋಗದಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ಜರುಗಿತು. ಕಲಘಟಗಿ ನ್ಯಾಯಾಲಯದಲ್ಲಿ ಎರಡು ಲೋಕ್ ಅದಾಲತ್ ಪೀಠಗಳನ್ನು ರಚಿಸಲಾಗಿತ್ತು.

ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ನ್ಯಾಯಾಧೀಶ ರವೀಂದ್ರ ಹೊನೊಲೆ ಸಮ್ಮುಖದಲ್ಲಿ ಒಟ್ಟು 41 ಪ್ರಕರಣಗಳು ರಾಜೀ ಸಂಧಾನದ ಮೂಲಕ ಇತ್ಯರ್ಥಗೊಳಿಸಲಾಯಿತು. ಚೆಕ್ ಬೌನ್ಸ್ 4 ಪ್ರಕರಣ, ವಾಟ್ನಿ 29 ಪ್ರಕರಣ, ದರಾಖಾಸ್ತ್ 4 ಪ್ರಕರಣ, ಇತರೆ ಪ್ರಕರಣ 1, ಜೀವನಾಂಶ 3 ಪ್ರಕರಣಗಳು ಸೇರಿದಂತೆ ಒಟ್ಟು 1,06,13,968 ರೂ.ಗಳ ಮೊತ್ತದ ಇತ್ಯರ್ಥಗೊಂಡವು. 3 ಹಿರಿಯ ನಾಗರಿಕರ ಪ್ರಕರಣ ರಾಜೀ ಸಂಧಾನ ಮಾಡಲಾಯಿತು. ಒಂದು ಪತಿ-ಪತ್ನಿ ಜೋಡಿ ರಾಜೀ ಮಾಡಿಸಿ ಒಂದು ಮಾಡಲಾಯಿತು.

ದಿವಾಣಿ ನ್ಯಾಯಾಧೀಶ ಸಂಜೀವ ಕುಮಾರ ಸಮ್ಮುಖದಲ್ಲಿ 20,20,477 ರೂ.ಗಳ ಮೊತ್ತದ 126 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಯಿತು. ಇವುಗಳಲ್ಲಿ 12 ಚೆಕ್ ಬೌನ್ಸ್ ಪ್ರಕರಣಗಳು, 11 ವಾಟ್ನಿ ದಾವೆ, ಆದರ್ ಎಕ್ಸಿಕ್ಯೂಶನ್ 4, ಇತರೆ 12, ಜೀವನಾಂಶ 1, ಜನನ ಮರಣ 10 ಪ್ರಕರಣಗಳು, ದಂಡ ಪ್ರಕರಣ 70, ಇತರೆ ಕ್ರಿಮಿನಲ್ ಪ್ರಕರಣ 6, ಒಟ್ಟು 126 ಪ್ರಕರಣಗಳನ್ನು ರಾಜೀ ಸಂಧಾನ ಮಾಡಲಾಯಿತು.

ಎಲ್ಲಾ ಚಟುವಟಿಕೆಗಳಲ್ಲೂ ಮಕ್ಕಳು ಭಾಗವಹಿಸಲು ಪ್ರೋತ್ಸಾಹಿಸಿ

ಉಪ್ಪಿನಬೆಟಗೇರಿ: ಪಾಲಕರು ಮಕ್ಕಳಿಗೆ ಎಲ್ಲಾ ಚಟುವಟಿಕೆಗಳಿಗೆ ಭಾಗವಹಿಸಲು ಪ್ರೋತ್ಸಾಹ ನೀಡಿದರೆ ಅವರು ಹೆಚ್ಚಿಗೆ ಸಾಧನೆ ಮಾಡಬಹುದು ಎಂದು ಹುಬ್ಬಳ್ಳಿ ಧಾರವಾಡ ಪೊಲೀಸ್ ಆಯುಕ್ತ ಎಸ್. ಶಶಿಕುಮಾರ ಹೇಳಿದರು.

ಅವರು ಶ್ರೀಗುರು ವಿರೂಪಾಕ್ಷೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಭಾನುವಾರ ನಡೆದ ಲವಣಗಿರಿ ಉತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, 12ನೇ ಶತಮಾನದ ಸುಕ್ಷೇತ್ರ ಈ ಗ್ರಾಮವಾಗಿದೆ. ನಾಡಿನ ಸುಕ್ಷೇತ್ರದಲ್ಲಿ ಧಾರ್ಮಿಕ ಕತೆ ಉಳಿದುಕೊಂಡ ಮಠ ಮಂದಿರಗಳಲ್ಲಿ ನಿತ್ಯ ಅನ್ನದಾಸೋಹ ನಡೆಯುತ್ತಿರುವುದು ಶ್ಲಾಘನೀಯ ಎಂದರು.

ನಂದಿಕೇಶ್ವರ ಪಂಡಿತ ವೀರೇಶ್ವರ ಶಾಸ್ತ್ರಿಗಳ ಪ್ರವಚನ ನುಡಿಯಲ್ಲಿ ಶರಣರ ಜೀವನ ದರ್ಶನ, ಮಹಾ ಶಿವಶರಣೆ ಅಕ್ಕಮಹಾದೇವಿ 12ನೇ ಶತಮಾನದಲ್ಲಿ ಕಂಡ ಕನ್ನಡನಾಡಿನ ಸುವರ್ಣಯುಗ, ಕನ್ನಡ ನಾಡು ಆಧ್ಯಾತ್ಮಿಕ ಬೀಡು, ಸಾಮಾಜಿಕ ಬದುಕಿನಲ್ಲಿ ಹಣ್ಣು ಅಂದರೆ ಭೋಗದ ವಸ್ತು ಎಂದು ತಿಳಿದುಕೊಳ್ಳುತ್ತೇವೆ, ಅದು ತಪ್ಪು. ಅಕ್ಕಮಹಾದೇವಿ ಷಟ್‌ವರ್ಗಗಳನ್ನು ಮರೆತು ಮಾಯೇ ಒಪ್ಪಿಕೊಂಡು ವೈರಾಗ್ಯ ನಿಧಿಯಾದಳು. ನಿತ್ಯ ಲಿಂಗಯ್ಯ ಚನ್ನ ಮಲ್ಲಿಕಾರ್ಜುನ ದೇವರ ಜ್ಞಾನದಲ್ಲಿ ಮಗ್ನರಾಗಿ ಲಿಂಗ ಪೂಜೆ ಮತ್ತು ಜಂಗಮರಿಗೆ ಪ್ರಸಾದವೇ ಪ್ರಾಣ. ತಂದೆ ತಾಯಿಯವರು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ ಶರಣರ ಸನ್ಮಾರ್ಗದಲ್ಲಿ ನಡೆಯಬೇಕು ಎಂದರು.

ಚಿಕ್ಕಲಪರ್ವಿ ಶ್ರೀರುದ್ರ ಮುನೇಶ್ವರ ಮಠದ ಸದಾಶಿವ ಸ್ವಾಮೀಜಿ ಆಶೀರ್ವಚನ ನೀಡಿದರು. ನರೇಂದ್ರ ಶ್ರೀ ಮೇಳಪ್ಪಜ್ಜನ ಮಠದ ಸಂಗಮೇಶ್ವರ ಅಜ್ಜನವರು, ಹಾಲವಿ ನಿರೂಪಾದಿ ದೇವರು ಸಾನ್ನಿಧ್ಯ ವಹಿಸಿದ್ದರು. ಶಿವಮೊಗ್ಗ ಕೃಷಿ ವಿಜ್ಞಾನಿ ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತ ನಾಗರಾಜ ಬಡ್ನೂರ, ವಾರ್ತಾ ಇಲಾಖೆಯ ಪ್ರಭಾರ ಸಹಾಯಕ ನಿರ್ದೇಶಕ ಸುರೇಶ ಹಿರೇಮಠ ಕಾರ್ಯಕ್ರಮದಲ್ಲಿ ಮಾತನಾಡಿದರು. ಪಿಕೆಪಿಎಸ್ ನಿರ್ದೇಶಕ ಕಲ್ಲಯ್ಯ ವಿಭೂತಿಮಠ ',ಯಾದವಾಡ, ಲಕಮಾಪುರ, ಮುಳಮುತ್ತಲ, ಗ್ರಾಮದ ಹಿರಿಯರು ಸೇರಿದಂತೆ ಅನೇಕರಿಗೆ ಕುಮಾರ ವಿರೂಪಾಕ್ಷ ಸ್ವಾಮೀಜಿಯವರು ಸನ್ಮಾನಿಸಿದರು. ಸ್ಥಳೀಯ ಗಂಗಯ್ಯ ಸಾಲಿಮಠ ಹಾಗೂ ಮಂಜುನಾಥ ಹಿರೇಮಠ ಪ್ರಸಾದ ಸೇವೆ ಸಲ್ಲಿಸಿದರು. ಶಿಕ್ಷಕ ರಮೇಶ ಮಡಿವಾಳರ ಸ್ವಾಗತಿಸಿದರು. ಸಂಜಯ ಕೊಡಿ ಕಾರ್ಯಕ್ರಮ ನಿರ್ವಹಿಸಿದರು. ಮಾ.16 ರಂದು ಲವಣಗಿರಿ ಉತ್ಸವದ ನಾಲ್ಕನೆಯ ದಿನದಂದು ಸಿದ್ದರಾಮೇಶ್ವರ ಶರಣರ ಜೀವನ ದರ್ಶನ ಪ್ರವಚನ ನಡೆಯಲಿದ್ದು, ಸಾನ್ನಿಧ್ಯ ನರಗುಂದ ಪತ್ರಿ ವನ ಸಂಸ್ಥಾನಮಠದ ಸಿದ್ದವೀರ ಶಿವಾಚಾರ್ಯರು, ಹಿರಿಯ ಮೋಟಾರ ವಾಹನ ನಿರೀಕ್ಷಕ ನಿವೃತ್ತ ಅಧಿಕಾರಿ ಶಿವಾನಂದ ಕೇಸರಿ ಸೇರಿದಂತೆ ಅನೇಕ ಮಠಾಧೀಶರು ಹಾಗೂ ಗಣ್ಯರು ಆಗಮಿಸಿಲಿದ್ದಾರೆ.



ಹಳೆಗನ್ನಡ ಸಾಹಿತ್ಯ ಉಳಿಸಿ: ಡಾ.ಭಜಂತ್ರಿ

ಧಾರವಾಡ: ರತ್ನತ್ರಯ ಕವಿಗಳಾದ ಪಂಪ, ಪೊನ್ನ ಮತ್ತು ರನ್ನ ಕನ್ನಡ ಕಾವ್ಯಕ್ಕೆ ಮೆರಗು ನೀಡಿದ ಮಹಾನ್ ಕವಿಗಳು. ಅದರಲ್ಲೂ ರನ್ನ ಓರ್ವ ದೇಶಿ ಕವಿ ಎಂದು ವಿಶ್ರಾಂತ ಪ್ರಾಧ್ಯಾಪಕ ಡಾ. ವೈ.ಎಂ.ಭಜಂತ್ರಿ ಹೇಳಿದರು.

ಕರ್ನಾಟಕ ವಿಶ್ವವಿದ್ಯಾಲಯದ ಜೈನಶಾಸ್ತ್ರ ಅಧ್ಯಯನ ಪೀಠ ನಗರದ ಜೆಎಸ್ಎಸ್ ಸಂಸ್ಥೆಯಲ್ಲಿ ಹಮ್ಮಿಕೊಂಡ ಸಾಹಿತ್ಯ-ಸಂಸ್ಕೃತಿ ವಿಚಾರ ಸಂಕೀರಣದಲ್ಲಿ ಕನ್ನಡ ಸಾಹಿತ್ಯಕ್ಕೆ ರನ್ನ ಕೊಡುಗೆ ಕುರಿತು ಮಾತನಾಡಿದರು.

ಪ್ರಸ್ತುತ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಲಭಿಸಿದರೂ ನಿರೀಕ್ಷೆಗೆ ತಕ್ಕಂತೆ ಬದಲಾವಣೆ ಆಗಿಲ್ಲ, ಹಳೆಗನ್ನಡ ನಶಿಸಿ ಹೋಗುತ್ತಿರುವಾಗ ಯುವಕರ ಕನ್ನಡ ಸಾಹಿತ್ಯ ಉಳಿಸಬೇಕು ಎಂದರು.

ಸಂಶೋಧಕಿ ಹನುಮಾಕ್ಷಿ ಗೋಗಿ ಮಾತನಾಡಿ, ಕನ್ನಡ ಸಾಹಿತ್ಯ ಶ್ರೀಮಂತಗೊಳಿಸಿದ ಕೀರ್ತಿ ಜೈನ ಕವಿಗಳಿಗೆ ಸಲ್ಲುತ್ತದೆ. ಹಳೆಗನ್ನಡದ ಓದು ಯುವಜನಾಂಗಕ್ಕೆ ಬೇಡವಾಗಿದೆ. ಹೀಗಾಗಿ ಹಳಗನ್ನಡ ಓದಿನ ಆಸಕ್ತಿ ಮೂಡಿಸಲು ಹೇಳಿದರು.

ಹಳಗನ್ನಡ ಸಾಹಿತ್ಯದಲ್ಲಿ ಸಿಗುವಷ್ಟು ಸಮೃದ್ಧ ಸಂಸ್ಕೃತಿ, ಸಂಸ್ಕಾರದ ವಿಷಯಗಳು ಹಾಗೂ ವಿಚಾರಗಳು ಹೊಸಗನ್ನಡದಲ್ಲಿ ಸಿಗುವುದು ತುಂಬಾ ಕಷ್ಟಕರ. ಹೀಗಾಗಿ ಯುವಜನಾಂಗ ಹಳಗನ್ನಡ ಓದುವಿಗೆ ತೆರೆದುಕೊಳ್ಳಲು ತಿಳಿಸಿದರು. ಶಾಂತಿನಾಥ ಹೋತಪೇಟಿ, ಧನಪಾಲ ಮುಳ್ಳೊಳ್ಳಿ ಇದ್ದರು. ಡಾ.ಲಕ್ಷ್ಮೀ ಕೊಟಗುಣಸಿ ನಿರೂಪಿಸಿದರು. ಡಾ.ನವೀನಶಾಸ್ತ್ರಿ ಪುರಾಣಿಕ ವಂದಿಸಿದರು.



ಕಿರುಸುದ್ದಿ

ಮಹಿಳಾ ದಿನಾಚರಣೆ ನಾಳೆ

ಗದಗ: ನಗರದ ಕರಿಯಮ್ಮನಕಲ್ಲ ಬಡಾವಣೆಯ ಮುಕ್ತಣ್ಣೇಶ್ವರ ಸಭಾಭವನದಲ್ಲಿ ಮಾ.17ರಂದು ಬೆಳಿಗ್ಗೆ 10ಕ್ಕೆ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಸಿ.ಮಂಜುಳಾ, ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶಿಲ್ಪಾ ಸುವರ್ಣಾ, ಡಾ.ಶೋಭಾ ನಿಸ್ಸಿಮಗೌಡ ಭಾಗವಹಿಸುತ್ತಾರೆ. ಮಾಜಿ ಸಚಿವ ಕಳಕಪ್ಪ ಬಂಡಿ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಅಧ್ಯಕ್ಷ ರಾಜು ಕುರಡಗಿ ಭಾಗವಹಿಸುವರು. ಮಹಿಳಾ ಸಂರಕ್ಷಣಾ ಕಾನೂನು ಹಾಗೂ ಮಹಿಳಾ ಸಬಲೀಕರಣ ಕುರಿತು ವಿಚಾರ ಸಂಕಿರ್ಣ ನಡೆಯಲಿದೆ. ಮಹಿಳೆಯರಿಗಾಗಿ ಸಿರಿಧಾನ್ಯಗಳ ಆಹಾರ ಸ್ಪರ್ಧೆ, ಸಾಂಸ್ಕೃತಿಕ ಸ್ಪರ್ಧೆ ಮಾಡಲಾಗುತ್ತಿದೆ. ಸೀರೆ, ಆಭರಣ, ಕರಕುಶಲ ವಸ್ತುಗಳ ಹಾಗೂ ಸಾವಯವ ಉತ್ಪನ್ನಗಳ ಮಾರಾಟ ಮಳಿಗೆಗಳ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ನಿರ್ಮಲಾ ಕೊಳ್ಳಿ ತಿಳಿಸಿದ್ದಾರೆ.

ಮಾ.30ಕ್ಕೆ ಭಗವಾನ್ ಮಹಾವೀರ ಜಯಂತಿ

ಗದಗ: ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಭಗವಾನ್ ಮಹಾವೀರ ಜಯಂತಿ ಆಚರಣೆ ಕುರಿತು ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಅಧ್ಯಕ್ಷತೆಯಲ್ಲಿ ಪೂರ್ವಸಿದ್ಧತಾ ಸಭೆ ಜರುಗಿತು.

ಭಗವಾನ್ ಮಹಾವೀರ ಜಯಂತಿಯನ್ನು ಮಾ.30 ರಂದು ಬೆಳಿಗ್ಗೆ 11ಕ್ಕೆ ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಭಗವಾನ್ ಮಹಾವೀರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಆಚರಿಸಲಾಗುವುದು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಬಸವರಾಜ ಬಳ್ಳಾರಿ ಸ್ವಾಗತಿಸಿದರು.

ಬೇಡಿಕೆ ಈಡೇರಿಕೆಗೆ ಮನವಿ

ಗದಗ: ವಿವಿಧ ಬೇಡಿಕೆಗಳ ಈಡೇರಿಸುವಂತೆ ಆಗ್ರಹಿಸಿ ಗುರುವಾರ ನಗರದಲ್ಲಿ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘ, ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ, ರಾಜ್ಯ ಪಪೂ, ಶಿಕ್ಷಣ ಇಲಾಖೆ ಬೋಧಕೇತರ ನೌಕರರ ಸಂಘದ ಸಂಯುಕ್ತಾಶ್ರಯದಲ್ಲಿ ಜಿಲ್ಲಾಧಿಕಾರಿಗಳ ಮುಖಾಂತರ ಸಿಎಂಗೆ ಮನವಿ ಸಲ್ಲಿಸಿದರು.

ಜಿಲ್ಲಾ ಉಪನಿರ್ದೇಶಕರ ಕಚೇರಿಗಳ ಮೇಲಿನ ಆಡಳಿತಾತ್ಮಕ ನಿಯಂತ್ರಣವನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ವಹಿಸುವ ಕ್ರಮವನ್ನು ಕೂಡಲೇ ಹಿಂಪಡೆಯಬೇಕು. ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಪರೀಕ್ಷಾ ವಿಭಾಗ ಹಿಂದಿನಂತೆ ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶನಾಲಯಕ್ಕೆ ಮರಳಿ ವರ್ಗಾಯಿಸಬೇಕು. ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಇರುವ 320:1 ವಿದ್ಯಾರ್ಥಿ-ಉಪನ್ಯಾಸಕರ ಅನುಪಾತ ಎನ್‌ಸಿಇಆರ್‌ಟಿ ಮಾರ್ಗಸೂಚಿಗಳನ್ನು ಮರುಪರಿಗಣಿಸಬೇಕು. ಕಳೆದ ಮೂರು ವರ್ಷಗಳಿಂದ ಪಠ್ಯಪುಸ್ತಕದ ದ್ವಿತೀಯ ಪಿಯುಸಿ ಉತ್ತರ ಪತ್ರಿಕೆ ಮೌಲ್ಯಮಾಪನ ಭತ್ಯೆ ಹಾಗೂ ಪರೀಕ್ಷಾ ಸಂಭಾವನೆ ತಕ್ಷಣ ಪಾವತಿಸಬೇಕು. ಹಿಂದಿನ ವರ್ಷದ ಬಾಕಿ ಸಂಭಾವನೆ ತಕ್ಷಣ ಪಾವತಿಸಬೇಕು. ಪ್ರಥಮ ಅಧ್ಯಕ್ಷತೆಯಾಗಿ ಸಂಭಾವನೆ ಖಾಸಗಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು ಹಾಗೂ ಅತಿಥಿ ಉಪನ್ಯಾಸಕರಿಗೆ ವಿತರಿಸಬೇಕು. ಕಾರ್ಯಭಾರ ಕೊರತೆ ಇರುವ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರನ್ನು ಸೇವೆಯಿಂದ ವಿಮುಕ್ತಗೊಳಿಸುವ ಆದೇಶ ಹಿಂಪಡೆಯಬೇಕು. ಅಂತೆಯೇ ಸಮೀಪದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯಭಾರ ನೀಡುವ ಕುರಿತು ಸಲ್ಲಿಸಲಾದ ಪ್ರಸ್ತಾವನೆಗೆ ಅನುಮೋದನೆ ನೀಡಬೇಕು ಎಂದು ಒತ್ತಾಯಿಸಿದರು. ಎಸ್.ಎಸ್. ಸೋಮಣ್ಣವರ, ಎಸ್. ಎಚ್. ಬೀರಣ್ಣವರ, ಪಿ.ಸಿ. ಹಾದಿಮನಿ, ಕಿರಣ್ ಮುಂಡರಗಿ, ಸಂಗನಬಸಪ್ಪ ಜಮಾದಾರ, ಎಸ್.ಐ. ಮೇಟಿ, ಬಿ.ವಿ. ಪಾಟೀಲ, ಕೆ. ವೆಂಕಟೇಶ, ಕೃಷ್ಣಮೂರ್ತಿ. ಎಸ್.ಎ. ಅವಾರಿ, ಎಸ್.ಎಸ್. ನರಗುಂದ, ಉಗಲವಟ, ಅಕ್ಷತಾ ಎಳ್ಳುರ, ಸುಪ್ರಿಯಾ ಇದ್ದರು.

ರೇಣುಕಾಚಾರ್ಯರ ಜಯಂತಿ



ಮುಂಡರಗಿ: ಎಲ್ಲ ಶರಣರ ಜಯಂತಿಗಳನ್ನು ಒಂದೇ ದಿನ ಒಂದೇ ವೇದಿಕೆಯಲ್ಲಿ ಆಚರಿಸುವ ಹಾಗೆ ಸರ್ಕಾರ ಆದೇಶಿಸಿದರೆ ಒಳ್ಳೆಯದು. ಎಲ್ಲರೂ ಒಂದೇ ವೇದಿಕೆಯ ಮೇಲೆ ಎಲ್ಲರೂ ಸೇರಿ ಆಚರಿಸುವುದರಿಂದ ನಮ್ಮಲ್ಲಿ ಭ್ರಾತೃತ್ವ ಬೆಳೆಯುತ್ತದೆ. ಇದರಿಂದ ಎಲ್ಲರಲ್ಲಿ ಸಮಾನತೆ ಮೂಡುತ್ತದೆ ಎಂದು ಮಾಜಿ ಸಚಿವ ಎಸ್.ಎಸ್.ಪಾಟೀಲ ಹೇಳಿದರು.

ಅವರು ತಾಲೂಕಿನ ಕಲಕೇರಿ ಗ್ರಾಮದಲ್ಲಿ ಜಂಗಮಾಭಿವೃದ್ಧಿ ಟ್ರಸ್ಟ್‌ನಿಂದ ಹಮ್ಮಿಕೊಳ್ಳಲಾಗಿದ್ದ ಜಗದ್ಗುರು ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಕಲಕೇರಿ ಕೆಂಡಗಿ ದುರ್ಗಮ್ಮ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಒಂದು ಲಕ್ಷ ರೂ. ನೀಡುವುದಾಗಿ ಹೇಳಿದರು. ಸಾನ್ನಿಧ್ಯವನ್ನು ಕಲಕೇರಿ-ವಿರಪಾಪೂರದ ಮುದುಕೇಶ್ವರ ಸ್ವಾಮೀಜಿ, ಹಿರೇವಡ್ಡಟ್ಟಿಯ ವೀರೇಶ್ವರ ಶಿವಾಚಾರ್ಯರು, ಅಭಿನವ ಚೆನ್ನಬಸವೇಶ್ವರ ಸ್ವಾಮೀಜಿ ವಹಿಸಿದ್ದರು. ಅಂದಪ್ಪ ಮೇಟಿ, ಸೋಮಣ್ಣ ದೇಸಾಯಿ, ಮಂಜುನಥ ಬನ್ನಿಕೊಪ್ಪ, ಜಯಣ್ಣ ದ್ರಾಕ್ಷಿ, ವಿ.ಜೆ.ಹಿರೇಮಠ, ಕಮಿಟಿಯ ಅಧ್ಯಕ್ಷ ಚೆನ್ನವೀರಯ್ಯ ಸಾಲಿಮಠ ಮುಂತಾದವರಿದ್ದರು.



ಗದಗ: ಇಲ್ಲಿನ ಆನಂದ ಆಶ್ರಮದ ಅಕ್ಕನ ಬಳಗದಿಂದ ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳೆಯರಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ನಿವೃತ್ತ ಪ್ರಾಚಾರ್ಯ ಪ್ರೇಮಾ ಹಂದಿಗೋಳ ನಿರ್ಣಾಯಕರಾಗಿದ್ದರು. ವಿವಿಧ ಸ್ಪರ್ಧೆಗಳಲ್ಲಿ ನೀಲಾ ತೋಟದ, ಮಮತಾ ಸಿಂಧೆ, ದ್ರಾಕ್ಷಾಯಣಿ ಪ್ರಭಣ್ಣವರ, ಅಂಬಿಕಾ ಕರ್ಣೆ, ದೀಪಿಕಾ ತೋಟದ, ಲಕ್ಷ್ಮೀ ಅಬ್ಬಿಗೇರಿ, ಪುಷ್ಪಾ ವಾರದ, ಜ್ಯೋತಿ ಅಂಗಡಿ ಮುಂತಾದವರು ಬಹುಮಾನಗಳನ್ನು ಪಡೆದರು.

ಲಕ್ಷ್ಮೇಶ್ವರ ಸಾರಿಗೆ ಘಟಕಕ್ಕೆ ನಾಲ್ಕು ಹೊಸ ಬಸ್

ಲಕ್ಷ್ಮೇಶ್ವರ: ಪಟ್ಟಣದ ಸಾರಿಗೆ ಘಟಕಕ್ಕೆ ಸಾರಿಗೆ ಇಲಾಖೆಯಿಂದ ಮತ್ತೆ ನಾಲ್ಕು ಹೊಸ ಬಸ್‌ಗಳು ಮಂಜೂರಿಯಾಗಿದ್ದು, ಭಾನುವಾರ ನೂತನ ಬಸ್‌ಗಳಿಗೆ ಶಾಸಕ ಡಾ.ಚಂದ್ರು ಲಮಾಣಿ ಪೂಜೆ ಸಲ್ಲಿಸಿ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಲಕ್ಷ್ಮೇಶ್ವರ ಘಟಕದ ವತಿಯಿಂದ ಭಾನುವಾರದಿಂದ ನೂತನ ಬಸ್‌ಗಳು ಲಕ್ಷ್ಮೇಶ್ವರ- ಶ್ರೀ ಕ್ಷೇತ್ರ ಸಿಗಂದೂರು, ಲಕ್ಷ್ಮೇಶ್ವರ- ದಾವಣಗೆರೆ ನಿತ್ಯ ಬಸ್‌ಗಳು ಚಲಿಸಲಿವೆ. ಈ ನಾಲ್ಕು ಬಸ್‌ಗಳಿಗೆ ಚಾಲನೆ ನೀಡಿದ ಶಾಸಕ ಡಾ.ಚಂದ್ರು ಲಮಾಣಿ ಚೌಡೇಶ್ವರಿ ತಾಯಿ ದರ್ಶನಕ್ಕೆ ಈ ಭಾಗದ ಪ್ರಯಾಣಿಕರಿಗೆ ಅನುಕೂಲವಾಗಲಿದೆ ಎಂದು ಹೇಳಿ ಖುಷಿಹಂಚಿಕೊಂಡರು.

ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಾಗರಾಜ ಮಡಿವಾಳರ ಮತ್ತು ಹಿರಿಯ ವಕೀಲ ಎಸ್.ಪಿ.ಬಳಿಗಾರ ಮಾತನಾಡಿ, ರಾಜ್ಯದಲ್ಲಿನ ಕಾಂಗ್ರೆಸ್ ಸರಕಾರ ಅಸ್ತಿತ್ವಕ್ಕೆ ಬಂದ ಮೇಲೆ ಲಕ್ಷ್ಮೇಶ್ವರ ಸಾರಿಗೆ ಘಟಕಕ್ಕೆ ಇಲ್ಲಿಯವರೆಗೂ ಸುಮಾರು 14 ನೂತನ ಬಸ್‌ಗಳನ್ನು ಒದಗಿಸಲಾಗಿದೆ. ಶಕ್ತಿ ಯೋಜನೆ ಅನುಷ್ಠಾನಗೊಂಡ ನಂತರ ಸಾರಿಗೆ ನಿಗಮ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು, ಮಹಿಳೆಯರಿಗೆ ಇದು ಹೆಚ್ಚು ಅನುಕೂಲವಾಗಿದೆ. ಸರಕಾರದ ಪಂಚಗ್ಯಾರಂಟಿ ಯೋಜನೆಗಳು ಜನರಿಗೆ ಹೆಚ್ಚು ಪ್ರಯೋಜನಕಾರಿಯಾಗಿದ್ದು ಆರ್ಥಿಕವಾಗಿಯೂ ಸಹ ಇವುಗಳು ಹೆಚ್ಚು ಅನುಕೂಲತೆಯನ್ನು ಕಲ್ಪಿಸಿವೆ ಎಂದರು.

ಬಿಜೆಪಿ ಶಿರಹಟ್ಟಿ ಮಂಡಲ ಅಧ್ಯಕ್ಷ ಸುನೀಲ ಮಹಾಂತಶೆಟ್ಟರ, ರಾಮಣ್ಣ ಲಮಾಣಿ (ಶಿಗ್ಲಿ) ನೀಲಪ್ಪ ಹತ್ತಿ, ಎಂ.ಆರ್. ಪಾಟೀಲ, ಡಿ.ವೈ. ಹುನಗುಂದ, ಪ್ರವೀಣ ಬೊಮಲೆ, ನವೀನ ಹಿರೇಮಠ, ವಿಜಯ ಕುಂಬಾರ, ಭೀಮಣ್ಣ ಯಂಗಾಡಿ, ಶಿವರಾಜಗೌಡ ಪಾಟೀಲ ಸೇರಿದಂತೆ ಇತರರಿದ್ದರು.



ಲಕ್ಷ್ಮೇಶ್ವರ: ಪಟ್ಟಣದ ಸಾರಿಗೆ ಘಟಕಕ್ಕೆ ಸಾರಿಗೆ ಇಲಾಖೆಯಿಂದ ಮತ್ತೆ ನಾಲ್ಕು ಹೊಸ ಬಸ್‌ಗಳು ಮಂಜೂರಿಯಾಗಿದ್ದು, ಭಾನುವಾರ ನೂತನ ಬಸ್‌ಗಳಿಗೆ ಶಾಸಕ ಡಾ.ಚಂದ್ರು ಲಮಾಣಿ ಪೂಜೆ ಸಲ್ಲಿಸಿ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ವಿವಿಧ ಯೋಜನೆಗೆ ಚಾಲನೆ | ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಸೂಚನೆ

ವೈಜ್ಞಾನಿಕವಾಗಿ ತ್ಯಾಜ್ಯ ಸಂಸ್ಕರಿಸಿ



ಗದಗ: ಗದಗ-ಬೆಟಗೇರಿ ಅವಳಿ ನಗರದ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ಸಮರ್ಪಕವಾಗಿ ನಿರ್ವಹಿಸುವ ಉದ್ದೇಶದಿಂದ ನಿರ್ಮಿಸಲಾಗುತ್ತಿರುವ ಘನ ತ್ಯಾಜ್ಯ ವಸ್ತು ನಿರ್ವಹಣಾ ಘಟಕದಲ್ಲಿ ವಿನ್ಯಾಸ, ನಿರ್ಮಾಣ, ಹಣಕಾಸು ಕಾರ್ಯನಿರ್ವಹಣೆ ಹಾಗೂ ಹಸ್ತಾಂತರ ಯೋಜನೆಗೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಭಾನುವಾರ ನಗರದ ಬಳಗಾನೂರು ರಸ್ತೆಯಲ್ಲಿರುವ ತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಚಾಲನೆ ನೀಡಿದರು.

ನಗರಾಭಿವೃದ್ಧಿ ಇಲಾಖೆ, ಜಿಲ್ಲಾಡಳಿತ, ನಗರಾಭಿವೃದ್ಧಿ ಕೋಶ ಗದಗ ಹಾಗೂ ಗದಗ-ಬೆಟಗೇರಿ ನಗರಸಭೆ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ನಗರಗಳಲ್ಲಿ ಜನಸಂಖ್ಯೆ ವೇಗವಾಗಿ ಹೆಚ್ಚುತ್ತಿರುವ ಹಿನ್ನೆಲೆ ತ್ಯಾಜ್ಯವನ್ನು ವೈಜ್ಞಾನಿಕವಾಗಿ ನಿರ್ವಹಿಸುವುದು ಅತ್ಯಂತ ಅಗತ್ಯವಾಗಿದೆ ಎಂದರು.

ಈ ಯೋಜನೆಯಡಿ ಸರ್ಕಾರ ಮೂಲಸೌಕರ್ಯ ಒದಗಿಸುವುದರ ಜೊತೆಗೆ ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಘಟಕ ನಿರ್ಮಿಸಿನಿರ್ವಹಿಸುವವ್ಯವಸ್ಥೆಜಾರಿಯಲ್ಲಿದೆ. ನಗರಸಭೆಯ 25 ಎಕರೆ ಪ್ರದೇಶದಲ್ಲಿರುವ ತ್ಯಾಜ್ಯ ವಿಲೇವಾರಿ ಘಟಕದಲ್ಲಿ 5 ಎಕರೆ ಜಾಗವನ್ನು ಡಿಬಿಎಫ್‌ಒಟಿ ಆಧಾರಿತ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಎನ್ವಿರೋಟೆಕ್ ಸೊಲ್ಯೂಷನ್ಸ್ ಸಂಸ್ಥೆಗೆ ಹಸ್ತಾಂತರಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರ್ ಸಾಬ್ ಬಬರ್ಚಿ, ಪ್ರಭು ಬುರಬುರೆ, ಬಸವರಾಜ ಕಡೇಮನಿ, ನಗರಸಭೆ ಸದಸ್ಯರಾದ ಲಕ್ಷ್ಮೀ ಸಿದ್ದಮ್ಮನಹಳ್ಳಿ, ಮುನಿಯಾರ, ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೊಟೂರ, ಉಪವಿಭಾಗಾಧಿಕಾರಿ ಗಂಗಪ್ಪ ಎಂ., ನಗರಸಭೆ ಪೌರಾಯುಕ್ತ ರಾಜಾರಾಮ ಪವಾರ್, ಪರಿಸರ ಅಧಿಕಾರಿ ಆನಂದ ಬದಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮಹತ್ವದ ಹೆಜ್ಜೆ

ತ್ಯಾಜ್ಯವನ್ನು ಸರಿಯಾಗಿ ವಿಲೇವಾರಿ ಮಾಡುವುದರಿಂದ ಪರಿಸರ ಸಂರಕ್ಷಣೆಗೂ ಹಾಗೂ ಸಾರ್ವಜನಿಕರ ಆರೋಗ್ಯ ಕಾಪಾಡುವುದಕ್ಕೂ ಸಹಕಾರಿಯಾಗುತ್ತದೆ . ಗದಗ-ಬೆಟಗೇರಿ ಅವಳಿ ನಗರಕ್ಕೆ ಇದು ಮೊದಲ ಸಮಗ್ರ ಘನ ತ್ಯಾಜ್ಯ ನಿರ್ವಹಣಾ ಯೋಜನೆಯಾಗಿದ್ದು, ಸ್ವಚ್ಛ ಹಾಗೂ ಪರಿಸರ ಸ್ನೇಹಿ ನಗರ ನಿರ್ಮಾಣಕ್ಕೆ ಇದು ಮಹತ್ವದ ಹೆಜ್ಜೆಯಾಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಪ್ರತಿದಿನ 75 ಟನ್ ತ್ಯಾಜ್ಯ ಸಂಗ್ರಹ

ನಗರದಲ್ಲಿ ಪ್ರತಿದಿನ ಸುಮಾರು 75 ಟನ್ ತ್ಯಾಜ್ಯ ಸಂಗ್ರಹವಾಗುತ್ತಿದ್ದು, ಅದರ ಸಮರ್ಪಕ ವಿಲೇವಾರಿ ಕಾರ್ಯ ನಡೆಯುತ್ತಿದೆ. ತ್ಯಾಜ್ಯ ನಿರ್ವಹಣೆಯಲ್ಲಿ ಗದಗ ಜಿಲ್ಲೆ ರಾಜ್ಯದಲ್ಲಿ ಆರನೇ ಸ್ಥಾನದಲ್ಲಿದೆ. ಈ ಯೋಜನೆಯ ಕಾಮಗಾರಿಯನ್ನು ಆ.15ರರೊಳಗೆ ಪೂರ್ಣಗೊಳಿಸಿ ಉದ್ಘಾಟನೆ ಮಾಡುವ ಉದ್ದೇಶವಿದ್ದು, ಕಾಮಗಾರಿ ಗುಣಮಟ್ಟದಿಂದ ಪೂರ್ಣಗೊಳ್ಳಬೇಕು ಎಂದು ಸಚಿವರು ಸೂಚಿಸಿದರು.

- ಸುಮಾರು 8.73 ಕೋಟಿ ರೂ. ವೆಚ್ಚದಲ್ಲಿ ಈ ಘಟಕವನ್ನು ಅಭಿವೃದ್ಧಿ
- ಘಟಕದಲ್ಲಿ ಮಿಶ್ರ ತ್ಯಾಜ್ಯದಿಂದ ಹಸಿ ತ್ಯಾಜ್ಯವನ್ನು ಬೇರ್ಪಡಿಸಿ ಜೈವಿಕ ಗೊಬ್ಬರವಾಗಿ ಪರಿವರ್ತನೆ
- ಒಣ ತ್ಯಾಜ್ಯಗಳ ಪುನರ್ ಬಳಕೆ
- ಪುನರ್ ಬಳಕೆ ಸಾಧ್ಯವಾಗದ ತ್ಯಾಜ್ಯವನ್ನು ಕೈಗಾರಿಕೆಗಳಿಗೆ ಇಂಧನ ರೂಪದಲ್ಲಿ ಶಕ್ತಿ ಉತ್ಪಾದನೆಗಾಗಿ ಕಳುಹಿಸಲಾಗುತ್ತದೆ ಎಂದು ತಿಳಿಸಿದ ಸಚಿವ ಎಚ್.ಕೆ.ಪಾಟೀಲ

ಸಮಾನ ಅವಕಾಶ ದೃಷ್ಟಿಕೋನ ಹೊಂದಿದ್ದ ಪಾಟೀಲರು

ಗದಗ: ಸಮಾಜದಲ್ಲಿರುವ ಪ್ರತಿಯೊಬ್ಬರೂ ಸಮಾನ ಅವಕಾಶಗಳನ್ನು ಪಡೆದುಕೊಂಡು ಬೆಳವಣಿಗೆಯನ್ನು ಹೊಂದುವ ದೃಷ್ಟಿಕೋನವನ್ನು ಹೊಂದಿದ್ದ ಕೆ.ಎಚ್.ಪಾಟೀಲರು ಪೂರಕವಾದ ಅನೇಕ ಸಂಪನ್ಮೂಲಗಳನ್ನು ಸೃಷ್ಟಿಸಿದರು. ರೈತರ ಹಿತ ಮತ್ತು ಗ್ರಾಮಾಭಿವೃದ್ಧಿಗೆ ಬಲ ತುಂಬಿದರು. ಕೃಷಿ, ಸಹಕಾರಿ, ಶಿಕ್ಷಣ, ನೀರಾವರಿ, ಅರಣ್ಯ ಕ್ಷೇತ್ರಗಳನ್ನು ಬಲಪಡಿಸುವ ಕಾರ್ಯಮಾಡಿದರು. ತನ್ಮೂಲಕ ಸಾಮಾಜೋನ್ನತಿಗೆ ವಿಶಿಷ್ಠ ಸೇವೆ ಸಲ್ಲಿಸಿ ತಮ್ಮ ಕಾಯಕದ ಮೂಲಕ ಮಾದರಿಯಾಗಿದ್ದಾರೆ ಎಂದು ಪ್ರಾಚಾರ್ಯ ಡಾ. ರಮೇಶ ಕಲ್ಲನಗೌಡರ ಹೇಳಿದರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಿಂದ ತೋಂಟದ ಸಿದ್ಧಲಿಂಗ ಶ್ರೀಗಳ ಕನ್ನಡ ಭವನದಲ್ಲಿ ಜರುಗಿದ ಸಹಕಾರಿ ರಂಗದ ಭೀಷ್ಮ ಕೆ.ಎಚ್. ಪಾಟೀಲರ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಯುವ ಮುಖಂಡ ಕೃಷ್ಣಗೌಡ ಪಾಟೀಲ ಮಾತನಾಡಿ, ಅಜ್ಜ ಕೆ.ಎಚ್.ಪಾಟೀಲರು ಮಾಡಿದ ಕಾರ್ಯವನ್ನು ಅರಿತು ಆಚರಿಸುವ ಜವಾಬ್ದಾರಿ ನನ್ನ ಮೇಲಿದೆ. ಇಂದಿನ ಯುವಕರು ಸಾಮಾಜಿಕ ಸೇವೆಯಲ್ಲಿ ತೊಡಗಿಕೊಳ್ಳುವ ಮೂಲಕ ಶುದ್ಧಿಕರಣಕ್ಕೆ ಮುಂದಾಗಬೇಕಾಗಿದೆ ಎಂದರು. ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಬಿ.ಬಿ.ಅಸೂಟಿ ಮಾತನಾಡಿ, ರಾಜಕೀಯ ವ್ಯವಸ್ಥೆಯಲ್ಲಿ ರಾಷ್ಟ್ರಮಟ್ಟದಲ್ಲಿಯೇ ಹೆಸರು ಗಳಿಸಿದ್ದ ಕೆ.ಎಚ್.ಪಾಟೀಲರು ಅಂಜದೇ ಅಳುಕದೇ ತಮ್ಮ ಛಾಪನ್ನು ಮೂಡಿಸಿದರು ಎಂದರು.

ಜಿಲ್ಲಾಕಸಾಪಅಧ್ಯಕ್ಷವಿವೇಕಾನಂದಗೌಡ ಪಾಟೀಲ ಮಾತನಾಡಿ, ವ್ಯಕ್ತಿಕಾರ್ಯದಿಂದ ಮಾತ್ರ ಬಹುಕಾಲ ಬದುಕಬಲ್ಲ, ಸಮಾಜ ಉನ್ನತಿಗೆ ಮಾಡುವ ಕಾರ್ಯಗಳು ಇತಿಹಾಸವನ್ನು ಸೃಷ್ಟಿಸುತ್ತವೆ. ಸರ್ವರ ಬದುಕು ಹಸನಾಗಿಸುವ ನಿಟ್ಟಿನಲ್ಲಿ ವಿವಿಧ ಆಯಾಮಗಳಲ್ಲಿ ಕಾರ್ಯನಿರ್ವಹಿಸಿದ ಕೆ.ಎಚ್.ಪಾಟೀಲರ ಬದುಕು ಇಂದಿನ ಪೀಳಿಗೆಗೆ ಆದರ್ಶವಾಗಬೇಕು ಎಂದರು. ವಿದ್ಯಾಧರ ದೊಡ್ಡಮನಿ ಮಾತನಾಡಿದರು. ಸಾಮಾಜಿಕ ಸೇವೆಗಾಗಿ ಬಿ.ಬಿ.ಅಸೂಟಿ ಅವರನ್ನು ಸನ್ಮಾನಿಸಲಾಯಿತು. ಬಸವರಾಜ ನೆಲಜೇರಿ ಹಾಗೂ ಕಸ್ತೂರಿ ಕಡಗದ ಕೆ.ಎಚ್ .ಪಾಟೀಲರ ಕುರಿತು ಕವನ ವಾಚಿಸಿದರು. ಡಾ. ದತ್ತಪ್ರಸನ್ನ ಪಾಟೀಲ ನಿರೂಪಿಸಿದರು. ಕಿಶೋರಬಾಬು ನಾಗರಕಟ್ಟಿ ಸ್ವಾಗತಿಸಿದರು. ಸತೀಶ ಚನ್ನಪ್ಪಗೌಡ್ರ ವಂದಿಸಿದರು. ಚಂದ್ರಶೇಖರ ವಸ್ತ್ರದ, ಕೆ.ಎಚ್. ಬೇಲೂರ, ಜಿ.ಬಿ.ಪಾಟೀಲ, ಅರ್ಜುನ ಗೊಳಸಂಗಿ, ಶಂಕರಪ್ಪ ಗಾಂಜಿ, ರಶ್ಮಿ ಅಂಗಡಿ, ಡಿ.ಎಸ್ .ಬಾಪುರಿ, ರಾಹುಲ ಗಿಡ್ನಂದಿ, ಅಮರೇಶ ರಾಂಪೂರ, ಸುರೇಶ ಕುಂಬಾರ, ರತ್ನಕ್ಕ ಪಾಟೀಲ, ಮಂಜುಳಾ ವೆಂಕಟೇಶಯ್ಯ ಇತರರಿದ್ದರು.



ಲಿಂಗ ಸಮಾನತೆಯ ಬಗ್ಗೆ ಜಾಗೃತಿ ಮೂಡಿಸಿ

ಮುಂಡರಗಿ: ಮಹಿಳಾ ದಿನವು ಕೇವಲ ಆಚರಣೆಯ ದಿನವಲ್ಲ, ಮಹಿಳೆಯರ ಸಮಾನತೆ ಮತ್ತು ಗೌರವಕ್ಕೆ ಸಮಾಜ ಒಟ್ಟಾಗಿ ಕೆಲಸಮಾಡುವ ಸಂಕಲ್ಪದ ದಿನವಾಗಿದೆ. ಮಹಿಳೆಯರ ಸಾಧನೆಯನ್ನು ಗೌರವಿಸುವುದರ ಜೊತೆಗೆ ಲಿಂಗ ಸಮಾನತೆಯ ಬಗ್ಗೆ ಜಾಗೃತಿ ಮೂಡಿಸುವ ಮಹತ್ವದ ದಿನವಾಗಿದೆ. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಮಾಡಿರುವ ಕೊಡುಗೆಯನ್ನು ಈ ದಿನದಲ್ಲಿ ವಿಶೇಷವಾಗಿ ನೆನಪಿಸಲಾಗುತ್ತಿದೆ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎ.ಬಳಿಗೇರ ಹೇಳಿದರು.

ಅವರು ಇಲ್ಲಿಯ ಅಂಭಾಭವಾನಿ ಕಲ್ಯಾಣ ಮಂಟಪದಲ್ಲಿ ತಾಲೂಕಿನ ಶರಣ ಸಾಹಿತ್ಯ ಪರಿಷತ್ತು,ಕದಳಿ ಮಹಿಳಾ ವೇದಿಕೆ ಇವುಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಕದಳಿಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ ಉದ್ಘಾಟಿಸಿ ಮಾತನಾಡಿ, ಮುಂಡರಗಿ ಕದಳಿ ಮಹಿಳಾ ವೇದಿಕೆ ರಾಜ್ಯದಲ್ಲಿಯೇ ವಿಶಿಷ್ಟ ರೀತಿಯ ಕಾರ್ಯಕ್ರಮಗಳನ್ನು ಮಾಡುವುದರೊಂದಿಗೆ ಮಾದರಿಯಾಗಿದೆ. ಪ್ರತಿವರ್ಷ ಸಾಧಕರನ್ನು ಗುರುತಿಸಿ ಕದಳಿಶ್ರೀ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ರಾಜ್ಯದಲ್ಲಿಯೇ ಪ್ರಥಮವಾಗಿದೆ ಎಂದರು.

ಜಿಲ್ಲಾ ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ಸುಧಾ ಹುಚ್ಚಣ್ಣವರ ಅವರು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕುರಿತು ಉಪನ್ಯಾಸ ನೀಡಿ, ಮಹಿಳೆಯರು ಈಗ ಎಲ್ಲ ರಂಗದಲ್ಲಿ ವಿಶೇಷ ಸಾಧನೆಯನ್ನು ಮಾಡುತ್ತಿದ್ದಾರೆ. ಪುರುಷರಷ್ಟೇ ಸರಿಸಮಾನರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು. ಈ ಕಾರ್ಯಕ್ರಮದಲ್ಲಿ ಮುಂಡರಗಿಯ ಚೈತನ್ಯ ಶಿಕ್ಷಣ ಹಾಗೂ ಗ್ರಾಮಾಭಿವೃದ್ಧಿ ಸಂಸ್ಥೆಯ ನಿರ್ದೇಶಕಿ ವೀಣಾ ಹೇಮಂತಗೌಡ ಪಾಟೀಲ ಅವರಿಗೆ ಪ್ರಸ್ತುತ ಸಾಲಿನ ಕದಳಿಶ್ರೀ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಕಾನಿಪಸಂ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಮಹಾಲಿಂಗಯ್ಯ ಹಿರೇಮಠ, ತಾಲೂಕು ಅಧ್ಯಕ್ಷ ಶಿವಮೂರ್ತಿ ಹೊಂಬಳಗಟ್ಟಿ,ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನಗೌಡ ಪಾಟೀಲ ಹಾಗೂ ಮಹಿಳಾ ಪೌರಕಾರ್ಮಿಕರನ್ನು ಮತ್ತು ವಿಶೇಷ ಸಾಧನೆ ಮಾಡಿದ ಮಹಿಳೆಯರನ್ನು ಸನ್ಮಾನಿಸಿದರು. ಶರಣ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷೆ ಶೋಭಾ ಮೇಟಿ ಉಪಸ್ಥಿತರಿದ್ದರು. ಕದಳಿ ಮಹಿಳಾ ವೇದಿಕೆಯ ತಾಲೂಕು ಘಟಕದ ಅಧ್ಯಕ್ಷೆ ಸೀತಾ ಬಸಾಪೂರ ಪ್ರಾಸ್ತಾವಿಸಿದರು. ಶಶಿಕಲಾ ಕುಕನೂರ, ಎಸ್.ಆರ್. ಬಸಾಪುರ, ವೀರಣ್ಣ ಮಡಿವಾಳರ, ಎಸ್.ಬಿ.ಕೆ. ಗೌಡರ, ಶರಣಪ್ಪ ಕುಬಸದ ಮುಂತಾದವರಿದ್ದರು. ಪ್ರತಿಭಾ ಹೊಸಮನಿ ಸ್ವಾಗತಿಸಿದರು. ಶ್ರೀಮತಿ ಕಡ್ಡಿ ಕಾರ್ಯಕ್ರಮ ನಿರೂಪಿಸಿದರು.



ಡಾ.ಅಂಬೇಡ್ಕರ್, ಬಾಪೂಜಿ ಜಗಜೀವನರಾವ್ ಮೂರ್ತಿ ಪ್ರತಿಷ್ಠಾಪನೆಗೆ ನಿರ್ಧಾರ

ನರಗುಂದ: ಪಟ್ಟಣದ ಸರ್ಕ್ಯೂಟ್ ಹೌಸನಲ್ಲಿ ಸರ್ವ ಜನಾಂಗದ ಸಂಘ ಸಂಸ್ಥೆಗಳ ಆಶ್ರಯದಲ್ಲಿ ಭಾನುವಾರ ನಡೆದ ಸಭೆಯಲ್ಲಿ ಭಾರತದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಸಮಾಜ ಸೇವಕ ಬಾಪೂಜಿ ಜಗಜೀವನರಾವ್ ಅವರ ಮೂರ್ತಿಯನ್ನು ಪ್ರತಿಷ್ಠಾಪಿಸುವ ನಿರ್ಧಾರ ಕೈಗೊಳ್ಳಲಾಯಿತು.

ಈ ಮಹತ್ವದ ಕಾರ್ಯಕ್ಕಾಗಿ ಸಾರ್ವಜನಿಕರಿಂದ ಸಹಕಾರ ಪಡೆಯುವ ಉದ್ದೇಶದಿಂದ ಗ್ರಾಮಗಳಲ್ಲಿ ದೇಣಿಗೆ ಸಂಗ್ರಹಿಸಲು ದೇಣಿಗೆ ಪುಸ್ತಕಗಳನ್ನು (ರಶೀದಿ ಬುಕ್) ರವಿಕುಮಾರ ಚಿಂತಾಲ ಬಿಡುಗಡೆ ಮಾಡಿ ಮಾತನಾಡಿ, ಈ ಕಾರ್ಯವು ಸಮಾಜದ ಏಕತೆ, ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಮೌಲ್ಯಗಳನ್ನು ಉತ್ತೇಜಿಸುವ ಉದ್ದೇಶವನ್ನು ಹೊಂದಿದ್ದು, ಎಲ್ಲಾ ಗ್ರಾಮಸ್ಥರು ಹಾಗೂ ಸಾರ್ವಜನಿಕರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ದೇಣಿಗೆ ನೀಡುವ ಮೂಲಕ ಈ ಪುಣ್ಯ ಕಾರ್ಯಕ್ಕೆಕೈಜೋಡಿಸುವಂತೆಸರ್ವಜನಾಂಗದಸಂಘಸಂಸ್ಥೆಗಳವತಿಯಿಂದಮನವಿ ಮಾಡಲಾಗುತ್ತದೆ ಎಂದರು. ದೇಣಿಗೆ ಸಂಗ್ರಹ ಕಾರ್ಯವನ್ನು ಪಾರದರ್ಶಕವಾಗಿ ನಡೆಸಲಾಗುತ್ತಿದ್ದು, ಸಂಗ್ರಹಿಸಲಾದ ಮೊತ್ತವನ್ನು ಮೂರ್ತಿ ನಿರ್ಮಾಣ ಮತ್ತು



ಪ್ರತಿಷ್ಠಾಪನೆ ಕಾರ್ಯಕ್ರಮಕ್ಕಾಗಿ ಬಳಸಲಾಗುತ್ತದೆ. ಸಾರ್ವಜನಿಕರು ಈ ಮಹತ್ವದ ಸಾಮಾಜಿಕ ಕಾರ್ಯಕ್ಕೆ ಸಹಕಾರ ನೀಡಬೇಕೆಂದು ಮೋದಿನಸಾಬ ಮುಳಗುಂದ ಹೇಳಿದ್ದಾರೆ. ಮೈಲಾರಪ್ಪ ಹಳೇಮನಿ, ಲಕ್ಷ್ಮಪ್ಪ ಮ್ಯಾಗೇರಿ, ಈರಪ್ಪ ಮ್ಯಾಗೇರಿ, ಡಾ.ಮುತ್ತು ಸುರಕೋಡ, ವೆಂಕಟೇಶ ಖಾನಪೇಠ, ಫಾರೂಕ್ ಮಜ್ಜಿದ್ದನಿ, ಮಂಜುನಾಥ ಕಟ್ಟಿಮನಿ ಇವರುಗಳಿಗೆ ದೇಣಿಗೆ ಬುಕ್ ನೀಡಲಾಯಿತು.

ಈ ಸಂದರ್ಭದಲ್ಲಿ ದತ್ತು ಜೋಗಣ್ಣವರ, ಕಿರಣ ಜೋಗಣ್ಣವರ, ಗುರುನಾಥ ಕೆಂಗಾರ್ಕರ, ಇಬ್ರಾಹಿಂ ಸವಟಗಿ, ಪ್ರಶಾಂತ ತಡಸಿ, ಅಣ್ಣಪ್ಪ ಅರಕೇರಿ ಇನ್ನಿತರರಿದ್ದರು.

ಉನ್ನತಿಗಾಗಿ ಮಹಿಳೆಯರು ಶಿಕ್ಷಣ, ಕೌಶಲಾಭಿವೃದ್ಧಿ ಬೆಳೆಸಿಕೊಳ್ಳಲಿ

ಲಕ್ಷ್ಮೇಶ್ವರ: ಮಹಿಳೆಯರು ಕುಟುಂಬ ವ್ಯವಸ್ಥೆಯಲ್ಲಷ್ಟೇ ಅಲ್ಲದೆ ಶಿಕ್ಷಣ, ಕೃಷಿ, ಆಡಳಿತ, ಉದ್ಯಮ, ವಿಜ್ಞಾನ ಮತ್ತು ಸಾಮಾಜಿಕ ಸೇವೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸಮಾಜದ ಪ್ರಗತಿಗೆ ಮಹತ್ತರ ಕೊಡುಗೆ ನೀಡುತ್ತಿದ್ದಾರೆ ಎಂದು ಶ್ರೀ ತಾಯಿ ಪಾರ್ವತಿ ಮಕ್ಕಳ ಬಳಗ ಸಂಸ್ಥೆಯ ಉಪಾಧ್ಯಕ್ಷೆ ಜಯಲಕ್ಷ್ಮೀ ಗಡ್ಡದೇವರಮಠ ಹಾಗೂ ಕಾರ್ಯದರ್ಶಿ ಜಯಲಕ್ಷ್ಮೀ ಮಹಾಂತಶೆಟ್ಟರ ಹೇಳಿದರು.

ಅವರು ಶ್ರೀ ತಾಯಿ ಪಾರ್ವತಿ ಮಕ್ಕಳ ಬಳಗದ ವತಿಯಿಂದ ಮಹಿಳಾ ದಿನಾಚರಣೆಯ ಅಂಗವಾಗಿ ಮಾತನಾಡಿ, ಸಮಾಜದ ಸಮಗ್ರ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಮಹಿಳೆಯರು ಶಿಕ್ಷಣ ಮತ್ತು ಕೌಶಲಾಭಿವೃದ್ಧಿಯ ಮೂಲಕ ಸಮಾಜದಲ್ಲಿ ಮುನ್ನಡೆಯಬೇಕು ಎಂದರು.

ವಿಶೇಷ ಆಮಂತ್ರಿತರಾಗಿ ಆಗಮಿಸಿ ಮಾತನಾಡಿದ ರಾಜ್ಯ ಪ್ರಶಸ್ತಿ ಪುರಸ್ಕೃತೆ ಲಲಿತಕ್ಕ ಕೆರಿಮನಿ, ಹೆಣ್ಣು ಸಮಾಜದ ಕಣ್ಣು. ಬದುಕಿನ ಎಲ್ಲಾ ಸವಾಲಗಳನ್ನು ಎದುರಿಸಿ ನಿಲ್ಲುವ ಗಟ್ಟಿಗಿತ್ತಿ. ಎಲ್ಲಾ ಕಷ್ಟದ ದಿನಗಳನ್ನು ಎದುರಿಸಿ ಇಂದು ಎಲ್ಲಾ ಕ್ಷೇತ್ರಗಳಲ್ಲೂ ತನ್ನ ಛಾಪು ಮೂಡಿಸಿದ್ದಾಳೆ ಹೆಣ್ಮಕ್ಕಳ ಸಶಸ್ತ್ರೀಕರಣ, ಶೋಷಣೆಮುಕ್ತ ಸಮಾಜ ನಿರ್ಮಾಣವಾಗಬೇಕಾದರೆ ಮಹಿಳೆಯರು ಶಿಕ್ಷಿತರಾಗಬೇಕು. ಅಕ್ಷರ ಜ್ಞಾನ ಮಹಿಳೆಗೆ ಸ್ವಾಭಿಮಾನದ ಬದುಕು ನೀಡಲಿದೆ ಎಂದರು.



ರೋಹಿಣಿಬಾಯಿ ಬಹಾದ್ದೂರ ದೇಸಾಯಿ, ಶಾರಕ್ಕ ಮಹಾಂತಶೆಟ್ಟರ, ಸಾವಿತ್ರಮ್ಮ ಹೂವಿನ, ಎಸ್.ಎಂ. ಹಾದಿಮನಿ, ಜೆ.ಡಿ. ಲಮಾಣಿ, ವಿಜಯ ಬಿಳೆಎಲಿ, ಸ್ವಾತಿ ಪೈ, ರೂಪಾ ನವಲೆ, ಪ್ರಭುಗೌಡ ಯಕ್ಕಿಕೊಪ್ಪ, ಸರಸ್ವತಿ ಹುಲ್ಲಣ್ಣವರ, ಹನುಮಂತಪ್ಪ ಭಜಂತ್ರಿ ಇದ್ದರು. ಸಂತೋಷ ಮುಳಗುಂದ, ಮಲ್ಲಿಕಾರ್ಜುನ ಶಿವಣ್ಣವರ, ಎಸ್.ಎಂ. ಹಾದಿಮನಿ, ಎಂ.ಸಿ. ಹಿರೇಮಠ, ಆರ್.ಎಂ. ಕದಡಿ ಕಾರ್ಯಕ್ರಮ ನಿರ್ವಹಿಸಿದರು.

ಲಿಂಗ ತಾರತಮ್ಯದಿಂದ ದೇಶದ ಅಭಿವೃದ್ಧಿ ಕುಂಠಿತ

ಗದಗ: ಮಹಿಳೆಯರ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಮಾನತೆ ಕುರಿತು ಪುರುಷ ಪ್ರಧಾನ ವ್ಯವಸ್ಥೆ ಸಕಾರಾತ್ಮಕವಾಗಿ ಚಿಂತಿಸಬೇಕು. ಜನಸಂಖ್ಯೆ ಅರ್ಧದಷ್ಟಿರುವ ಮಹಿಳೆಯರ ಸಬಲೀಕರಣವಾದರೆ ಕುಟುಂಬ, ಸಮಾಜ ಮತ್ತು ದೇಶದ ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ. ಸಮಾನ ಅವಕಾಶ, ಹಕ್ಕು ಮತ್ತು ಗೌರವವನ್ನು ನೀಡುವ ಮೂಲಕ ಸಬಲೀಕರಣ ಸಾಧ್ಯ. ಲಿಂಗ ಆಧಾರಿತ ತಾರತಮ್ಯದಿಂದ ದೇಶದ ಅಭಿವೃದ್ಧಿ ಕುಂಠಿತ ಎಂದು ಲೇಖಕಿ ವೀಣಾ ಪಾಟೀಲ ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಡಾ.ತೋಂಟದ ಸಿದ್ಧಲಿಂಗಶ್ರೀ ಕನ್ನಡ ಭವನದಲ್ಲಿ ಜರುಗಿದ ಶಶಿಕಲಾ ಶಂಕರಗೌಡ ಪಾಟೀಲ ಸ್ಮರಣಾರ್ಥ ದತ್ತಿ ಪ್ರಶಸ್ತಿ ಹಾಗೂ ಪಾರ್ವತಿ ಚಂದ್ರಶೇಖರ ಹನುಮಸಾಗ ದತ್ತಿ ಉಪನ್ಯಾಸದಲ್ಲಿ ಮಾತನಾಡಿದರು. ದತ್ತಿ ಪ್ರಶಸ್ತಿ ಸ್ವೀಕರಿಸಿದ ಕಸ್ತೂರೆಮ್ಮ ಹಿರೇಮಠ ಮಾತನಾಡಿ, ಭಾರತೀಯ ಸಂಸ್ಕೃತಿ ಬೇರುಗಳನ್ನು



ಬಲಪಡಿಸುವ ಜವಾಬ್ದಾರಿ ಹೆಣ್ಣುಮಕ್ಕಳ ಮೇಲಿದೆ. ಮಹಿಳೆಯರು ಚೌಕಟ್ಟನ್ನು ಮೀರದೆ ಏಳ್ಗೆಯ ಗುರಿಯನ್ನು ಹೊಂದಿ ಸಾಗಬೇಕೆಂದು ತಿಳಿಸಿದರು. ಸರೋಜಾ ಬನ್ನೂರ ಮಾತನಾಡಿ, ಮಹಿಳೆಯರು ಕೇವಲ ಅಡುಗೆ ಮನೆಗೆ ಸೀಮಿತಗೊಳ್ಳದೇ ಸಾಮಾಜಿಕ ಸೇವೆಯಲ್ಲಿ ತೊಡಗಿ ಕೊಳ್ಳುವ ಮೂಲಕ ತಮ್ಮ ಪ್ರಪಂಚವನ್ನು ವಿಸ್ತರಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ದತ್ತಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, ಮಹಿಳೆಯರ ಬುದ್ಧಿಶಕ್ತಿ, ಕೌಶಲ್ಯ ಮತ್ತು ಸಮಯ ಪಾಲನೆಯಂತಹ ಸಂಗತಿಗಳನ್ನು ಆರ್ಥಿಕ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಬಳಸಿಕೊಂಡಾಗ ದೇಶ ಪ್ರಗತಿ ಹೊಂದಲು ಸಾಧ್ಯವಾಗುತ್ತದೆ ಎಂದರು. ರತ್ನಕ್ಕ ಪಾಟೀಲ ಮಾತನಾಡಿದರು. ಲಲಿತಾ ಬಾಳಿಹಳ್ಳಿಮಠ, ಸುಜಾತಾ ಗುಡಿಮನಿ, ನೀಲಮ್ಮ ಅಂಗಡಿ ಅನಸೂಯಾ ಮಿಟ್ಟಿ, ಮಂಜುಳಾ ವೆಂಕಟೇಶಯ್ಯ, ಡಾ.ರಶ್ಮಿ ಅಂಗಡಿ, ರಕ್ಷಿತಾ ಗಿಡ್ನಂದಿ, ಸರ್ವಮಂಗಳಾ ಗುಜಮಾಗಡಿ, ಎಸ್.ಬಿ.ಕಣವಿ, ಶಿವಪುತ್ರವ್ವ ಕಣವಿ, ಉಮಾದೇವಿ ಪಾಟೀಲ, ಕೆ.ಎಚ್.ಬೇಲೂರ, ಅಂದಾನೆಪ್ಪ ವಿಭೂತಿ, ಜಿ.ಬಿ.ಪಾಟೀಲ, ಡಾ. ನಿಂಗು ಸೊಲಗಿ, ಎಂ.ಜಿ.ಗಚ್ಚಣ್ಣವರ ವಿದ್ಯಾಧರ ದೊಡ್ಡಮನಿ, ರತ್ನಾ ಪುರಂತರ, ಸುರೇಶ ಕುಂಬಾರ, ಬಿ.ಬಿ.ಹೊಳಗುಂದಿ ಇತರರಿದ್ದರು.

ಇಂದಿನಿಂದಲೇ ಸಿದ್ಧತೆ ಕೈಗೊಳ್ಳಿ

ಮುಂಡರಗಿ: ಮಕ್ಕಳು ಭವಿಷ್ಯದಲ್ಲಿ ಉತ್ತಮ ಜೀವನ ಸಾಗಿಸಲು, ಇಂದೇ ಸಿದ್ಧತೆ ಮಾಡಿಕೊಳ್ಳಬೇಕು. ಪ್ರತಿನಿತ್ಯಮಾಡುವ ಸಣ್ಣ ಕೆಲಸಗಳು ಭವಿಷ್ಯದಲ್ಲಿ ದೊಡ್ಡ ಪ್ರತಿಫಲ ತಂದುಕೊಡುತ್ತವೆ. ಸಮಯ ತುಂಬಾ ಅಮೂಲ್ಯವಾದುದು. ಅದನ್ನು ಇಂದು ಸರಿಯಾಗಿ ಬಳಕೆ ಮಾಡಿಕೊಂಡವರು ಮುಂದೆ ಉತ್ತಮ ಜೀವನ ಸಾಗಿಸಬಲ್ಲರು ಎಂದು ಮುಖ್ಯೋಪಾಧ್ಯಾಯ ಮಲ್ಲಪ್ಪ ನಾಟಿಕಾರ ಹೇಳಿದರು.

ಅವರು ಸರ್ಕಾರಿ ಪ್ರೌಢಶಾಲೆ ಹೆಸರೂರಿನಲ್ಲಿ ಜರುಗಿದ ಶಿಕ್ಷಕರ ಪಾಲಕರ, ಪೋಷಕರ ಹಾಗೂ ಮಕ್ಕಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶಿಕ್ಷಕ ರವಿ ದೇವರಡ್ಡಿ ಮಾತನಾಡಿ, ಸ್ಪರ್ಧಾತ್ಮಕ ಯುಗದಲ್ಲಿ ಪ್ರತಿಕ್ಷಣವನ್ನು ಸೂಕ್ತ ಯೋಜನೆಯೊಂದಿಗೆ ಬಳಸಿಕೊಂಡಾಗ ಮಾತ್ರ ಯಶಸ್ಸು ಸಾಧ್ಯ. ನೀವು ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬೆಳೆಯಬೇಕೆಂದರೆ ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಹವ್ಯಾಸಗಳು ನಮ್ಮಬದುಕಿಗೆ ಭದ್ರ ಬುನಾದಿ ಹಾಕಬಲ್ಲವು. ಪಠ್ಯಪುಸ್ತಕದಾಚೆ ನಿಮ್ಮ ಅಧ್ಯಯನಗಳಿದ್ದರೆ ಉತ್ತಮ ಎಂದು ತಿಳಿಸಿದರು. ಸಮಾರಂಭದ ಉದ್ಘಾಟನೆಯನ್ನು ಶರಣಪ್ಪ ಜುಟ್ಲಣ್ಣವರ ಮಾಡಿದರು. ಗೋವಿಣದಪ್ಪ ಪೂಜಾರ, ಶಾಂತಯ್ಯ ಶಾಸ್ತ್ರಿಮಠ, ಚಂದ್ರಮ್ಮ ಕುರ್ತಕೋಟಿ, ಈರಮ್ಮ ಶಾಸ್ತ್ರಿಮಠ, ರೇಖಾ ಕಕ್ಕೂರ, ಸುಮಂಗಲಾ ಹರಿಜನ ಪಾಲ್ಗೊಂಡಿದ್ದರು. ಎಚ್.ಎನ್.ಹಿರೇಮಠ ನಿರ್ವಹಿಸಿದರು. ಪಾರ್ವತಿ ಹಿರೇಮಠ ವಂದಿಸಿದರು.



ಸಮಗ್ರ ಅಭಿವೃದ್ಧಿಗೆ ಅಗತ್ಯ ಅನುದಾನಕ್ಕೆ ಪ್ರಯತ್ನ: ಎಚ್‌ಕೆಪಾ

ಲಕ್ಷ್ಮೇಶ್ವರ: ದೇವಸ್ಥಾನಗಳು ನಮ್ಮ ನೆಲದ ಶ್ರೀಮಂತ ಪರಂಪರೆ, ಇತಿಹಾಸ, ಸಂಸ್ಕೃತಿಯ ಪ್ರತೀಕವಾಗಿದ್ದು ಇಲ್ಲಿ ಪಾವಿತ್ರ್ಯತೆ, ಸ್ವಚ್ಛತೆ ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಪ್ರವಾಸೋದ್ಯಮ ಸಚಿವ ಎಚ್. ಕೆ ಪಾಟೀಲ ಹೇಳಿದರು.

ಅವರು ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಗದಗ, ಪ್ರವಾಸೋದ್ಯಮ ಇಲಾಖೆ ಬೆಂಗಳೂರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮೈಸೂರು ಇವರ ಸಹಯೋಗದಲ್ಲಿ ಸೋಮೇಶ್ವರ ದೇವಸ್ಥಾನದ ಉತ್ತರ ಮಹಾದ್ವಾರದ ಸಂರಕ್ಷಣಾ ಕಾಮಗಾರಿಯ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಗೊಳಪಟ್ಟ ಸೋಮೇಶ್ವರ ದೇವಸ್ಥಾನದ ಸಂರಕ್ಷಣೆಗಾಗಿ 2.40 ಕೋಟಿ ರೂ. ಅನುದಾನ ಕಲ್ಪಿಸಲಾಗಿದ್ದು, ಉಳಿದಂತೆ ಸಮಗ್ರ ಅಭಿವೃದ್ಧಿಗಾಗಿ ಅಗತ್ಯ ಅನುದಾನ ಕಲ್ಪಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಆದರೆ ದೇವಸ್ಥಾನದ ಅಭಿವೃದ್ಧಿಗೆ ಅಗತ್ಯವಾದ ಸುತ್ತಲಿನ ಜಾಗ ದೊರಕಿಸಬೇಕು ಮತ್ತು ಈ ಭಾಗದ ಎಲ್ಲರ ಸಹಕಾರ ಅಗತ್ಯ ಎಂದರು. ಮೇಲ್ನೋಟಕ್ಕೆ ದೇವಸ್ಥಾನಕ್ಕೆ ಹೊಂದಿಕೊಂಡು ದನಗಳ ಕೊಟ್ಟಿಗೆ, ತಿಪ್ಪೆಗುಡ್ಡೆ, ಬಣವಿ, ಶೌಚಗೃಹಗಳು ಇದ್ದು ಇವು ಇಲ್ಲಿನ ವಾತಾವರಣ ಕೆಡಿಸುತ್ತವೆ. ದೇವಸ್ಥಾನದ ಅಭಿವೃದ್ಧಿಗೆ ನೀಡುವ ಜಾಗದ ಬದಲಾಗಿ ಅವರಿಗೆ ಸರ್ಕಾರದಿಂದ ಬದಲಿ ಜಾಗ, ಅಗತ್ಯ ಸೌಲತ್ತು ಕಲ್ಪಿಸಲಾಗುವುದು. ದೇವಾಲಯದ ಮೇಲ್ಛಾವಣಿ ದುರಸ್ತಿ ಸೇರಿದಂತೆ ಒಟ್ಟು 12 ಕಾಮಗಾರಿ ಮಾಡಬೇಕಾಗಿದೆ. ಇದಕ್ಕಾಗಿ 2.40 ಕೋಟಿ ರೂ. ಅನುದಾನ ಸರ್ಕಾರ ಮಂಜೂರು



ಮಾಡಿದೆ ಎಂದರು.

ಮುಕ್ತಿಮಂದಿರದ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು.ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ, ಉಪವಿಭಾಗಾಧಿಕಾರಿ ಎಂ.ಗಂಗಪ್ಪ, ಮಾಜಿ ಶಾಸಕರುಗಳಾದ ಜಿ.ಎಸ್.ಗಡ್ಡದೇವರಮಠ , ರಾಮಣ್ಣ ಲಮಾಣಿ, ರಾಮಕೃಷ್ಣ ದೊಡ್ಡಮನಿ, ಕೆಪಿಸಿಸಿ ಕಾರ್ಯದರ್ಶಿ ಸುಜಾತಾ ದೊಡ್ಡಮನಿ, ಗ್ಯಾರಂಟಿ ಸಮಿತಿ ಅಧ್ಯಕ್ಷ ನಾಗರಾಜ ಮಡಿವಾಳರ, ಯುವ ಮುಖಂಡ ಆನಂದ ಗಡ್ಡದೇವರಮಠ, ಶ್ರೀ ಸೋಮೇಶ್ವರ ಭಕ್ತರ ಟ್ರಸ್ಟ್ ಕಮಿಟಿ ಅಧ್ಯಕ್ಷ ಗುರುರಾಜ ಪಾಟೀಲಕುಲಕರ್ಣಿ, ಅರ್ಚಕರ ಸಮಿತಿ ಅಧ್ಯಕ್ಷ ದಿಗಂಬರ ಪೂಜಾರ, ಜಾತ್ರಾ ಕಮಿಟಿ ಅಧ್ಯಕ್ಷ ಕುಬೇರಪ್ಪ ಮಹಾಂತಶೆಟ್ಟರ, ಗುರುನಾಥ ದಾನಪ್ಪನವರ, ಸುನೀಲ ಮಹಾಂತಶೆಟ್ಟರ, ಡಾ.ಬಸವರಾಜ ಬೊಮ್ಮನಳ್ಳಿ, ಎಸ್.ಪಿ.ಬಳಿಗಾರ, ಸಿದ್ದಲಿಂಗೇಶ ಪಾಟೀಲ, ವೀರಯ್ಯ ಮಠಪತಿ, ರಾಮಣ್ಣ ಲಮಾಣಿ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ವಿಭೂತಿ ಇತರರಿದ್ದರು. ಚನ್ನಪ್ಪ ಜಗಲಿ ಪ್ರಾಸ್ತಾವಿಸಿದರು. ಗಂಗಾಧರ ಗುಡಗೇರಿ, ಸೋಮಣ್ಣ ಕೆರಿಮನಿ ನಿರೂಪಿಸಿದರು.

ಕಿರುಸುದ್ದಿ

ಯುದ್ಧದ ಬಿಸಿ: ಎಫ್-1 ರೇಸ್ ಮುಂದೂಡಿಕೆ

ದುಬೈ: ಸೌದಿ ಅರೇಬಿಯಾ ಮತ್ತು ಬಹ್ರೇನ್‌ನಲ್ಲಿ ನಡೆಯಬೇಕಿದ್ದ ಫಾರ್ಮುಲಾ 1 ರೇಸ್ ಮಧ್ಯಪ್ರಾಚ್ಯದಲ್ಲಿ ಹೆಚ್ಚಾಗುತ್ತಿರುವ ಯುದ್ಧ ತೀವ್ರತೆಯಿಂದ ಮುಂದೂಡಲಾಗಿದೆ. ಗಲ್ಫ್ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಲಾದ ಪರಿಣಾಮ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಂತಾರಾಷ್ಟ್ರೀಯ ಮೋಟಾರ್ ಸ್ಪೋರ್ಟ್ಸ್ ಸಂಸ್ಥೆ ಶನಿವಾರದಂದು ಅಧಿಕೃತ ಹೇಳಿಕೆ ಬಿಡುಗಡೆ ಮಾಡಿದೆ. ವಿಶ್ವಾದ್ಯಂತ ಹೆಚ್ಚಾದ ಯುದ್ಧ ಉದ್ವೇಗದಿಂದಾಗಿ ಈ ಬಾರಿಯ ಗ್ರ್ಯಾಂಡ್ ಪ್ರಿಕ್ಸ್ ಕೂಟ ಮುಂದೂಡಲಾಗಿದೆ ಎಂದು ಹೇಳಿದೆ. ಮುಂದೂಡಿಕೆ ಅನಿರ್ದಿಷ್ಟಾವಧಿಗೆ ಸಿಮೀತವಾಗಿರಲಿದೆ. ಮುಂದಿನ ದಿನಾಂಕ ಚರ್ಚಿಸಿ ಪರಿಸ್ಥಿತಿಗೆ ತಕ್ಕಂತೆ ತೀರ್ಮಾನ ಮಾಡಲಾಗುವುದು ಎಂದು ಸಂಸ್ಥೆ ತಿಳಿಸಿದೆ. ಏಪ್ರಿಲ್ 10-12ರವರೆಗೆ ಕೂಟ ನಡೆಯಬೇಕಿತ್ತು.

ಓಪನ್ ಜಂಪ್ಸ್: ಸರ್ವೇಶ್ ಚಾಂಪಿಯನ್

ಬೆಂಗಳೂರು: ಇಲ್ಲಿ ನಡೆಯುತ್ತಿರುವ 5ನೇ ಓಪನ್ ಜಂಪ್ಸ್ ಕ್ರೀಡಾಕೂಟದಲ್ಲಿ ಮಹಾರಾಷ್ಟ್ರದ ಸರ್ವೇಶ್ ಕುಶಾರೆ ಚಾಂಪಿಯನ್ ಆನಿಸಿಕೊಂಡರು. ಬೆಂಗಳೂರಿನ ಅಂಜು ಬೊಬ್ಬಿ ಹೈ ಪರ್ಫಾಮನ್ಸ್ ಸೆಂಟರ್‌ನಲ್ಲಿ ನಡೆದ ಈ ಕೂಟದಲ್ಲಿ ಮಿಂಚಿದ ಅವರು ಪದಕ ಗಿಟ್ಟಿಸಿಕೊಂಡರೂ ದಾಖಲೆ ಬರೆಯಲಾಗಲಿಲ್ಲ. 2.16 ಮೀ. ದೂರದ ಜಿಗಿತದೊಂದಿಗೆ ಸರ್ವೇಶ್ ಈ ಸಾಧನೆ ಮಾಡಿದರು. 2020ರ ಟೋಕಿಯೊ, 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಪ್ಯಾರಾ ಅಥ್ಲೀಟ್ ನಿಶಾದ್ ಕುಮಾರ್ ಅವರು 2.10 ಮೀ. ದೂರ ಜಿಗಿದರೂ ಐದನೇ ಸ್ಥಾನಕ್ಕೆ ತೃಪ್ತರಾದರು. ಅಬ್ದುಲ್ಲಾ 16.83ಮೀ.ದೊಂದಿಗೆ ರಾಷ್ಟ್ರೀಯ ದಾಖಲೆ ಹೊಂದಿರುವ ಪ್ರವೀಣ್ 16.78ಮೀ.ದೊಂದಿಗೆ ಹೊರನಡೆದರು.

ದ್ರಾವಿಡ್, ಬಿನ್ನಿ, ಮಿಥಾಲಿಗೆ ಜೀವಮಾನ ಸಾಧನೆ ಪ್ರಶಸ್ತಿ | ದಿಲ್ಲಿಯಲ್ಲಿ ಸಂಪನ್ನಗೊಂಡ ನಮನ್ ಕಾರ್ಯಕ್ರಮ

ಅಪ್ರತಿಮ ಕ್ರಿಕೆಟಿಗರಿಗೆ ಅತ್ಯುನ್ನತ ಗರಿ






ಹೊಸದಿಲ್ಲಿ: ಕ್ರಿಕೆಟ್ ದಿಗ್ಗಜಗರಾದ ರಾಹುಲ್ ದ್ರಾವಿಡ್, ರೋಜರ್ ಬಿನ್ನಿ ಮತ್ತು ಮಹಿಳಾ ಕ್ರಿಕೆಟ್ ಆಟಗಾರ್ತಿ ಮಿಥಾಲಿ ರಾಜ್ ಅವರಿಗೆ ಬಿಸಿಸಿಐ ದಿಲ್ಲಿಯಲ್ಲಿ ಭಾನುವಾರ ನಡೆದ ನಮನ್ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಸನ್ಮಾನಿಸಿತು.

ಹಿರಿಯ ಕ್ರಿಕೆಟಿಗರು, ಹಾಲಿ-ಮಾಜಿ ಚಾಂಪಿಯನ್‌ಗಳು ಮತ್ತು ಕ್ರೀಡಾಳಿತ ಅಧಿಕಾರಿಗಳ ಸಮ್ಮುಖದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸಾವಿರಾರು ಕ್ರಿಕೆಟಿಗರಿಗೆ ಗೌರವ ಸಲ್ಲಿಸಲಾಗಿದೆ. ಭಾರತೀಯ ಕ್ರಿಕೆಟಿಗೆ ಆಟಗಾರರಾಗಿ ಮಾರ್ಗದರ್ಶಕರಾಗಿ, ನಾಯಕರಾಗಿ ಮುಂದೆ ಕೋಚ್ ಆಗಿ ದೊಡ್ಡ ಕೊಡುಗೆಗಳನ್ನು ನೀಡಿರುವ ರಾಹುಲ್ ದ್ರಾವಿಡ್ ಅವರನ್ನು ದಿಗ್ಗಜ ಎಂದು ಬಣ್ಣಿಸಲಾದರೆ, ಇತ್ತ ರೋಜರ್ ಬಿನ್ನಿ ಅವರನ್ನು ಅಪ್ರತಿಮ ಕ್ರಿಕೆಟಿಗ, ಅತ್ಯುತ್ತಮ ಆಡಳಿತಗಾರ ಎನ್ನಲಾಗಿದೆ. ಇಬ್ಬರಿಗೂ ಕರ್ನಲ್ ಸಿ.ಕೆ. ನಾಯ್ಡು ಪ್ರಶಸ್ತಿ ನೀಡಲಾಗಿದೆ. ಇನ್ನು ಮಹಿಳಾ ಕ್ರಿಕೆಟ್‌ನಲ್ಲಿ ಅಚ್ಚಳಿಯದ ದಾಖಲೆಗಳನ್ನು ಮಾಡಿರುವ ಮಿಥಾಲಿ ರಾಜ್ ಅವರನ್ನು ಮಹಿಳಾ ಕ್ರಿಕೆಟ್‌ನ ಐಕಾನ್ ಎಂದು ಬಣ್ಣಿಸಲಾಗಿದ್ದು, ಜೀವಮಾನ ಸಾಧನೆಯ ಪ್ರಶಸ್ತಿ ನೀಡಲಾಗಿದೆ.

ಇದರ ಜೊತೆಗೆ ಶುಭಮನ್ ಗಿಲ್ ಅವರಿಗೆ ವಾರ್ಷಿಕ ಅತ್ಯುತ್ತಮ ಆಟಗಾರ ಎಂಬ ಪಾಲಿ ಪ್ರಶಸ್ತಿ ನೀಡಲಾಗಿದೆ. ಮಂಧಾನ ಅವರಿಗೆ ಅತ್ಯುತ್ತಮ ಮಹಿಳಾ ಕ್ರಿಕೆಟರ್ ಪ್ರಶಸ್ತಿ ನೀಡಲಾಗಿದೆ. ದೇಶಿ ಕ್ರಿಕೆಟ್‌ನಲ್ಲಿ ಮಿಂಚಿದ ಆಟಗಾರರಿಗೆ ಇನ್ನಷ್ಟು ಉತ್ಸಾಹ ನೀಡುವುದಕ್ಕೆ ವಿವಿಧ ಪ್ರಶಸ್ತಿಗಳನ್ನೂ ನೀಡಲಾಗಿದೆ.

ರಾಹುಲ್ ಕೊಡುಗೆಗೆ ತಕ್ಕ ಗರಿ: ರಾಹುಲ್ ದ್ರಾವಿಡ್ ಅವರಿಗೆ ಸಿ.ಕೆ. ನಾಯ್ಡು ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗುವುದು. ಟೀಂ ಇಂಡಿಯಾದ ಬಿಗ್ ಫೋರ್' ಬ್ಯಾಟಿಂಗ್ ಲೈನ್ ಅಪ್‌ನ ಭಾಗವಾಗಿದ್ದ ರಾಹುಲ್ ದ್ರಾವಿಡ್, ಸಚಿನ್ ತೆಂಡೂಲ್ಕರ್, ಸೌರವ್ ಗಂಗೂಲಿ ಮತ್ತು ವಿವಿಎಸ್ ಲಕ್ಷ್ಮಣ್ ಅಂತಹ ದಿಗ್ಗಜರ ಪಟ್ಟಿಯಲ್ಲಿ ಒಬ್ಬರಾಗಿದ್ದರು. ಏಕದಿನ ಹಾಗೂ ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ತಂಡಕ್ಕೆ ದ್ರಾವಿಡ್ ನೀಡಿರುವ ಕೊಡುಗೆ ಅಪಾರ. ಏಕದಿನ ಮಾದರಿಯಲ್ಲಿ 10,000 ಕ್ಕೂ ಹೆಚ್ಚು ರನ್ ಗಳಿಸಿರುವ ದ್ರಾವಿಡ್, ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ಪರ ಅತಿ ಹೆಚ್ಚು ರನ್ (13,288) ಗಳಿಸಿದ ಎರಡನೇ ಆಟಗಾರ ಎನಿಸಿಕೊಂಡಿದ್ದಾರೆ. 2012 ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ನಿಂದ ನಿವೃತ್ತರಾದ ದ್ರಾವಿಡ್, ಆ ಬಳಿಕ ವೀಕ್ಷಕ ವಿವರಣೆಗಾರನಾಗಿ ಕಾಣಿಸಿಕೊಂಡರು. ನಂತರ ತರಬೇತುದಾರರಾಗಿ ಭಾರತ 19 ವರ್ಷದೊಳಗಿನವರ ತಂಡವನ್ನು 2018 ರ ವಿಶ್ವಕಪ್‌ನಲ್ಲಿ ಚಾಂಪಿಯನ್ ಮಾಡಿದರು. ಮುಂದೆ ಹಿರಿಯರ ತಂಡಕ್ಕೆ ಪ್ರಧಾನ ಕೋಚ್ ಆಗಿ ನೇಮಕಗೊಂಡಿದ್ದ ದ್ರಾವಿಡ್, ತಮ್ಮ ಅವಧಿಯಲ್ಲಿ ತಂಡವನ್ನು 2023ರ ಏಕದಿನ ವಿಶ್ವಕಪ್ ಫೈನಲ್‌ಗೇರಿಸಿದ್ದರು. ಬಳಿಕ 2024 ರಲ್ಲಿ ನಡೆದ ಟಿ20 ವಿಶ್ವಕಪ್‌ನಲ್ಲಿ ತಂಡವನ್ನು ಚಾಂಪಿಯನ್ ಕೂಡ ಮಾಡಿದ್ದರು.

ರೋಜರ್ ಬಿನ್ನಿಗೆ ಅತ್ಯುತ್ತಮ ಸಾಧನೆಗೆ ಪ್ರಶಸ್ತಿ

1983ರಲ್ಲಿ ಭಾರತ ಮೊದಲ ಬಾರಿಗೆ ವಿಶ್ವಕಪ್ ಗೆದ್ದಾಗ ತಂಡದ ಭಾಗವಾಗಿದ್ದ ರೋಜರ್ ಬಿನ್ನಿ ಕೂಡ ಕನ್ನಡಿಗರು. ವಿಶ್ವಕಪ್ ಗೆದ್ದ ತಂಡದ ಪ್ರಮುಖ ಆಟಗಾರ ಅನ್ನಿಸಿಕೊಂಡಿದ್ದ ಅವರು, ಭಾರತವೆಂದೂ ಮರೆಯಲಾಗದ ಕೊಡುಗೆಗಳನ್ನು ನೀಡಿದ್ದಾರೆ. ವಿಶ್ವಕಪ್‌ನಲ್ಲಿ ನೆನಪಿಗೆ ಬರುವಂಥ ಇನ್ನಿಂಗ್ಸ್‌ಗಳನ್ನು ಕಟ್ಟಿದ್ದಾರೆ. ಅಷ್ಟಕ್ಕೇ ಸಿಮೀತವಾಗದೆ ಕೋಚ್ ಹುದ್ದೆಯಲ್ಲೂ ಪ್ರಮುಖ ಕೊಡುಗೆಗಳನ್ನು ನೀಡಿದ್ದಾರೆ. ಬಿಸಿಸಿಐ ಆಡಳಿತಾಧಿಕಾರಿ ಕೂಡ ಆಗಿದ್ದ ಅವರು, ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ ವಿಭಿನ್ನ ಯೋಜನೆಗಳೊಂದಿಗೆ ಕೊಡುಗೆ ನೀಡಿದ್ದಾರೆ.

ಮಿಥಾಲಿ ರಾಜ್ ಆಟಕ್ಕೆ ಸಂದ ಪ್ರಶಸ್ತಿ

ಭಾರತ ಮಹಿಳೆಯರ ಕ್ರಿಕೆಟ್ ಎಂದ ತಕ್ಷಣಕ್ಕೆ ನೆನಪಾಗಲೇ ಬೇಕಾದ ಹೆಸರಿದು. ವಿಶ್ವದ ಯಾವುದೇ ಮಹಿಳೆ ಮಾಡಲಾಗದ ದಾಖಲೆಗಳನ್ನು ಮಾಡಿದ್ದಾರೆ. ಇಲ್ಲಿಯವರೆಗೂ ಅತಿ ಹೆಚ್ಚು ರನ್ ಗಳಿಸಿದ ದಾಖಲೆಗಳನ್ನು ಮಾಡಿದ್ದಾರೆ. ಸಾಧನೆಗೆ ಯಾವುದೇ ಸರಿಸಾಟಿ ಇಲ್ಲದಂತೆ ಮುಂದೆ ನಾಯಕಿಯಾದ ಅವರು, ತಂಡ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮಹಿಳಾ ಕ್ರಿಕೆಟ್‌ನಲ್ಲಿ ಭಾರತ ಎತ್ತರಕ್ಕೆ ಬೆಳೆಯಬೇಕಾದರೆ ಅವರ ಪಾತ್ರ ದೊಡ್ಡದು. ಈ ಎಲ್ಲಾ ಸಾಧನೆಗಳನ್ನು ಗಮನಿಸಿ ಅವರಿಗೆ ಪ್ರಶಸ್ತಿ ನೀಡಲಾಗಿದೆ.

ಪ್ರಮುಖ ಪ್ರಶಸ್ತಿ ಪಟ್ಟಿ

ಆಟಗಾರ/ ಆಟಗಾರ್ತಿ	ಪ್ರಶಸ್ತಿ
ರೋಜರ್ ಬಿನ್ನಿ	ಸಿ.ಕೆ. ನಾಯ್ಡು ಜೀವಮಾನ ಸಾಧನೆ
ರಾಹುಲ್ ದ್ರಾವಿಡ್	ಸಿ.ಕೆ. ನಾಯ್ಡು ಜೀವಮಾನ ಸಾಧನೆ
ಮಿಥಾಲಿ ರಾಜ್	ಜೀವಮಾನ ಸಾಧನೆ
ಶುಭಮನ್ ಗಿಲ್	ಪಾಲಿ ಉಮ್ರಿಗರ್
ಸ್ಮೃತಿ ಮಂಧಾನ	ವರ್ಷದ ಅತ್ಯುತ್ತಮ ಅಂತಾರಾಷ್ಟ್ರೀಯ ಆಟಗಾರ್ತಿ
ಶ್ರೇಷ್ಠ ಪದಾರ್ಪಣೆ ಮಾಡಿದ ಆಟಗಾರ್ತಿ	ಎನ್ ಶ್ರೀ ಚರಣಿ
ಶ್ರೇಷ್ಠ ಪದಾರ್ಪಣೆ ಮಾಡಿದ ಆಟಗಾರ	ಹರ್ಷಿತ್ ರಾಣಾ

ವಿವಿಧ ಆಟಗಾರರಿಗೆ ಪ್ರಶಸ್ತಿ

ಕಾರ್ಯಕ್ರಮದಲ್ಲಿ ವಿವಿಧ ಆಟಗಾರರಿಗೆ ಪ್ರಶಸ್ತಿ ನೀಡಲಾಗಿದೆ. ದೇಶಿ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ, ವಿಕೆಟ್ ಪಡೆದ ಆಟಗಾರರಿಗೂ ಪ್ರಶಸ್ತಿ ನೀಡಲಾಗಿದೆ. ಹರ್ಷಿತ್ ರಾಣ ಅವರಿಗೆ ವರ್ಷದಲ್ಲಿ ಶ್ರೇಷ್ಠ ಪದಾರ್ಪಣೆ ಮಾಡಿದ ಆಟಗಾರ ಎಂಬ ಪ್ರಶಸ್ತಿ ನೀಡಿದರೆ, ಸ್ನೇಹ ರಾಣಾ ಅವರಿಗೆ ಶ್ರೇಷ್ಠ ಪದಾರ್ಪಣೆ ಮಾಡಿದ ಆಟಗಾರ್ತಿ ಎಂಬ ಪ್ರಶಸ್ತಿ ನೀಡಲಾಗಿದೆ.

ವಿಶ್ವಕಪ್ ಗೆದ್ದ ತಂಡಗಳಿಗೆ ಬಿಸಿಸಿಐ ಸನ್ಮಾನ


ಪುರುಷರ ಟಿ20 ವಿಶ್ವಕಪ್ ಚಾಂಪಿಯನ್ಸ್


ಚಾಂಪಿಯನ್ಸ್ ಟ್ರೋಫಿ ಚಾಂಪಿಯನ್ಸ್


ಮಹಿಳಾ ಏಕದಿನ ವಿಶ್ವಕಪ್ ಚಾಂಪಿಯನ್ಸ್


ಅಂಡರ್-19 ಏಕದಿನ ವಿಶ್ವಕಪ್ ಚಾಂಪಿಯನ್ಸ್


ಕಪ್ ವಿಜೇತ ನಾಯಕರು

ಹೊಸದಿಲ್ಲಿ: ದಿಲ್ಲಿಯಲ್ಲಿ ನಡೆದ ಬಿಸಿಸಿಐ ನಮನ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ವಿಶ್ವಕಪ್ ಗೆದ್ದ ಭಾರತೀಯ ತಂಡಗಳಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಸನ್ಮಾನಿಸಿದೆ.

ಕ್ರಿಕೆಟ್‌ನಲ್ಲಿ ಭಾರತ 2025-26ರಲ್ಲಿ ಹೆಚ್ಚು ಸಾಧನೆಗಳನ್ನು ಮಾಡಿದ್ದು, ಈ ಬಗ್ಗೆ ಶ್ಲಾಘಿಸಿದ ಬಿಸಿಸಿಐ ಅಂಡರ್-19 ತಂಡ, ಏಕದಿನ ವಿಶ್ವಕಪ್ ಗೆದ್ದ ಮಹಿಳೆಯರ ಕ್ರಿಕೆಟ್ ತಂಡ ಹಾಗೂ ಟಿ20 ವಿಶ್ವಕಪ್ ಗೆದ್ದ ತಂಡಗಳನ್ನು ಸನ್ಮಾನಿಸಿತು.

ಕಳೆದ ವರ್ಷ ಭಾರತದಲ್ಲೇ ನಡೆದಿದ್ದ ಮಹಿಳೆಯರ ಏಕದಿನ ವಿಶ್ವಕಪ್ ಪಂದ್ಯಾವಳಿಯಲ್ಲಿ ಗೆದ್ದ ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಭಾರತ ಮಹಿಳಾ ತಂಡ ಇತಿಹಾಸ ಬರೆದಿತ್ತು. ವರ್ಷಾಂತ್ಯದಲ್ಲಿ ನಡೆದಿದ್ದ ಅಂಡರ್-19 ವಿಶ್ವಕಪ್ ಪಂದ್ಯಾವಳಿಯಲ್ಲಿ ಆಯುಷ್ ಮಾತ್ರೆ ನೇತೃತ್ವದ ಭಾರತ ತಂಡ ವಿಶ್ವಕಪ್ ಗೆದ್ದು ಬೀಗಿತ್ತು. ಕಳೆದ ವಾರವಷ್ಟೇ ಮುಕ್ತಾಯಗೊಂಡಿರುವ ಪುರುಷರ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಸೂರ್ಯಕುಮಾರ್ ಯಾದವ್ ನೇತೃತ್ವದ ಭಾರತ ಕಪ್ ಗೆದ್ದಿತ್ತು. ಈ ಮೂರೂ ತಂಡಗಳಿಗೆ ಬಿಸಿಸಿಐ ಸನ್ಮಾನಿಸಿದೆ.

ಸ್ವದೇಶಕ್ಕೆ ಇರಾನಿ ಆಟಗಾರ್ತಿಯರು

ಪರ್ತ್: ಇರಾನಿ ಬೆಂಬಲಿಗರು ದಾಳಿ ಮಾಡಲೆತ್ನಿಸಿದ ನಂತರ ಆಸ್ಟ್ರೇಲಿಯಾದಲ್ಲೇ ಆಶ್ರಯ ಪಡೆದಿದ್ದ ಮೂವರು ಇರಾನಿ ಫುಟ್‌ಬಾಲ್ ಆಟಗಾರ್ತಿಯರು ತಮ್ಮ ದೇಶಕ್ಕೆ ಮರಳಿದರು. ಏಷ್ಯಾಕಪ್ ಫುಟ್‌ಬಾಲ್ ಪಂದ್ಯಾವಳಿ ಆಸ್ಟ್ರೇಲಿಯಾದಲ್ಲಿ ನಡೆದಿತ್ತು. ಈ ಕೂಟದಲ್ಲಿ ಇರಾನ್ ಕೂಡ ಭಾಗವಹಿಸಿ ಸೋತು ಹೊರಬಂದಿತ್ತು. ಆದರೆ ಮೊದಲನೇ ಪಂದ್ಯದಲ್ಲಿ ಇರಾನಿ ಪಡೆಯ ಮೂವರು ಆಟಗಾರ್ತಿಯರು ಪ್ರತಿಭಟನೆ ರೂಪವಾಗಿ ಇರಾನ್‌ನ ರಾಷ್ಟ್ರಗೀತೆ ಹಾಡಲು ನಿರಾಕರಿಸಿದ್ದರು. ಅಲ್ಲಿನ ಮಹಿಳೆಯರ ಸ್ವಾತಂತ್ರ್ಯದ ಬಗ್ಗೆ ಪ್ರತಿಭಟನೆ ನಡೆಸಲೆತ್ನಿಸಿದ್ದರು ಎಂಬ ವರದಿಗಳಿವೆ. ಹೀಗೆ ಮಾಡಿರುವುದಕ್ಕೆ ಹತಾಶಗೊಂಡಿದ್ದ ಆಸ್ಟ್ರೇಲಿಯಾದಲ್ಲಿನ ಇರಾನಿ ಬೆಂಬಲಿಗರು, ಆಟಗಾರರ ಹೋಟೆಲಿಗೆ ಮುತ್ತಿಗೆ ಹಾಕಲು ಯತ್ನಿಸಿದ್ದರು. ಸುರಕ್ಷತಾ ಕ್ರಮವಾಗಿ ಆಸ್ಟ್ರೇಲಿಯಾ ಆ ಆಟಗಾರ್ತಿಯರನ್ನು ತನ್ನಲ್ಲೇ ಉಳಿಸಿಕೊಂಡಿತ್ತು. ಸೇಫ್ ಹೌಸ್‌ಗೆ ಕಳುಹಿಸಿತ್ತು. ಆದರೆ ಪರಿಸ್ಥಿತಿ ಸುಧಾರಿಸಿಕೊಂಡಿರುವ ನಂತರ ಮೂವರೂ ಆಟಗಾರ್ತಿಯರನ್ನು ಬಿಡುಗಡೆ ಮಾಡಿದೆ. ಇರಾನ್ ಫುಟ್‌ಬಾಲ್ ಸಂಸ್ಥೆ ಮೂವರೂ ಆಟಗಾರ್ತಿಯರ ಹೆಸರನ್ನು ಬಹಿರಂಗ ಪಡಿಸಿದ್ದು, ಮೊನಾ ಹಮೌದಿ, ಜಹ್ರಾ ಸಬಾರ್ಲಿ ಮತ್ತು ಜಹ್ರಾ ಮೇಷ್ಟೆಕರ್ ಎಂದು ಗುರುತಿಸಿದೆ. ಆಟಗಾರ್ತಿಯರು ಮಲೇಷ್ಯಾಗೆ ಅಲ್ಲಿಂದ ಪೂರ್ತಿ ತಂಡ ತೆಹ್ರಾನ್ ಮೂಲಕ ಸ್ವದೇಶಕ್ಕೆ ತಲುಪಲಿದೆ ಎಂದು ಹೇಳಲಾಗಿದೆ.



- ಸೇಫ್ ಹೌಸ್‌ನಲ್ಲಿದ್ದ ಮೂವರು
- ರಾಷ್ಟ್ರಗೀತೆ ಹಾಡಲು ನಿರಾಕರಿಸಿದ್ದ ವಿವಾದ

ಕೊಚ್ಚಿಯಲ್ಲಿ ಫುಟ್ಬಾಲ್ ಏಷ್ಯಾಕಪ್ ಅರ್ಹತಾ ಸುತ್ತು


ಕೊಚ್ಚಿ: ಭಾರತದ ಹಿರಿಯ ಪುರುಷರ ಫುಟ್ಬಾಲ್ ತಂಡ ಏಷ್ಯಾಕಪ್ 2027 ಅರ್ಹತಾ ಸುತ್ತಿನ ಕೊನೆಯ ಪಂದ್ಯವನ್ನು ಮಾರ್ಚ್ 31ರಂದು ಕೊಚ್ಚಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಹಾಂಗ್ ಕಾಂಗ್ ವಿರುದ್ಧ ಆಡಲಿದೆ.



ಈ ಪಂದ್ಯ ಕೊಚ್ಚಿ ಮೈದಾನದಲ್ಲಿ ಭಾರತೀಯ ತಂಡಕ್ಕೆ ವಿಶೇಷವಾಗಿದ್ದು, ಸುಮಾರು 10 ವರ್ಷಗಳ ನಂತರ ಇಲ್ಲಿ ಹಿರಿಯ ಪುರುಷರ ತಂಡದ ಪಂದ್ಯ ನಡೆಯಲಿದೆ. 2016 ಮಾರ್ಚ್‌ನಲ್ಲಿ ಇದೇ ಮೈದಾನದಲ್ಲಿ ಭಾರತ ತುರ್ಕೆನಿಸ್ತಾನ್ ವಿರುದ್ಧ ವಿಶ್ವಕಪ್ ಅರ್ಹತಾ ಪಂದ್ಯ ಆಡಿತ್ತು. ಅದು ಕೇರಳದಲ್ಲಿ ಭಾರತೀಯ ತಂಡ ಆಡಿದ ಕೊನೆಯ ಪಂದ್ಯವಾಗಿತ್ತು. ಈ ಬಾರಿ ಏಷ್ಯಾ ಕಪ್ 2027 ಅರ್ಹತಾ ಸುತ್ತಿನಲ್ಲಿ ಭಾರತ ಈಗಾಗಲೇ ಮುಂದಿನ ಹಂತಕ್ಕೆ ಹೋಗುವ ಅವಕಾಶ ಕಳೆದುಕೊಂಡಿದೆ. ಆದರೂ ಅಂತಿಮ ಪಂದ್ಯದಲ್ಲಿ ಗೆಲುವಿನೊಂದಿಗೆ ಅಭಿಯಾನವನ್ನು ಮುಕ್ತಾಯಗೊಳಿಸುವುದು ತಂಡದ ಗುರಿಯಾಗಿದೆ. ಈ ಪಂದ್ಯದಲ್ಲಿ ಎರಡೂ ತಂಡಗಳು ಟೂರ್ನಿಯಿಂದ ಹೊರಬಿದ್ದಿರುವುದರಿಂದ ಫಲಿತಾಂಶ ಅರ್ಹತೆಯ ದೃಷ್ಟಿಯಿಂದ ಮಹತ್ವ ಹೊಂದಿಲ್ಲ. ಆದರೆ ಅಂತರರಾಷ್ಟ್ರೀಯ ಶ್ರೇಯಾಂಕ ಅಂಕಗಳು ಲಭ್ಯವಿರುವುದರಿಂದ ಪಂದ್ಯ ಇನ್ನೂ ಮಹತ್ವ ಪಡೆದುಕೊಂಡಿದೆ. ಉತ್ತಮ ಪ್ರದರ್ಶನ ನೀಡುವುದರಿಂದ ವಿಶ್ವ ಶ್ರೇಯಾಂಕದಲ್ಲಿ ಸುಧಾರಣೆ ಸಾಧಿಸಲು ಭಾರತ ಪ್ರಯತ್ನಿಸಲಿದೆ. ಈ ಅರ್ಹತಾ ಸುತ್ತಿನ ಅಂತಿಮ ಹಂತದಲ್ಲಿ ಭಾರತ ಮೂರು ವಿಭಿನ್ನ ತವರು ಮೈದಾನಗಳಲ್ಲಿ ಪಂದ್ಯಗಳನ್ನು ಆಡುತ್ತಿದೆ. ಕಳೆದ ವರ್ಷ ಮಾರ್ಚ್‌ನಲ್ಲಿ ಬಾಂಗ್ಲಾದೇಶ ವಿರುದ್ಧದ ಪಂದ್ಯವನ್ನು ಶಿಲ್ಲಾಂಗ್ ಆತಿಥ್ಯ ವಹಿಸಿತ್ತು. ಅದೇ ವರ್ಷ ಅಕ್ಟೋಬರ್‌ನಲ್ಲಿ ಸಿಂಗಾಪುರ್ ವಿರುದ್ಧದ ಪಂದ್ಯವನ್ನು ಮಾರ್ಗಾವ್‌ನಲ್ಲಿ ನಡೆಸಲಾಗಿತ್ತು. ಈಗ ಕೊಚ್ಚಿ ಮೂರನೇ ತವರು ಮೈದಾನವಾಗಿ ಆತಿಥ್ಯ ವಹಿಸುತ್ತಿದೆ.

ಪದಬಂಧ 5925

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ

2. ಹಿತವಾಗಿ ನಡೆದುಕೊಳ್ಳುವವನು (5)
5. ತೀಕ್ಷ್ಣ-ಭಯಂಕರವಾದುದು ತಿರುಗಿದೆ (2)
6. ಹೊಸದಾಗಿ ಕರು ಹಾಕಿದ ಹಸು (2)
7. ಜಗಳ-ಹೊಡೆದಾಟ(3)
9. ಅವನು ನಿಂತದ್ದು ಈ ಭೂಮಿಯ ಮೇಲೆ (3)
11. ಕಾದಿರುವಂತೆ ಮಾಡುವುದು ತಿರುಗಿದೆ (3)
13. ಮಂದಿಗೆ ಮೊದಲು ಕಂಡ ತಾಯಿ (3)
15. ಬಲವನ್ನು ಉಪಯೋಗಿಸಿದ ರಾಮಮಿತ್ರ (2)
16. ಉಗ್ರ, ದೇವತೆಯಲ್ಲಿ ತಿರುಗಿದ್ದಾಳೆ (2)
17. ಕರಾರುವಾಕ್ಕಾಗಿ ನಡೆಯುವಂತೆ ಸರಿಹೊಂದಿಸು (5)

ಮೇಲಿನಿಂದ ಕೆಳಕ್ಕೆ

1. ಆಕೆಯ ಕರ್ಕಶ ದನಿಯಲ್ಲಿಯೂ ಸೆಳೆತವಿದೆ (4)
2. ಸಿಕ್ಕ ಕೃಪೆ-ಆಶೀರ್ವಾದವಿದು (4)
3. ಅಗದ ನಡುವಿನ ಪ್ರೇಮ ತಲೆಕೆಳಗಾಗಿದೆ (4)
4. ಮಾಂಸಮಿಶ್ರಿತವಾದ ಕಲಸನ್ನ (4)
8. ಹಿಂದಿ ಭಾಷೆಯಲ್ಲಿ ಜಗಳ (3)
10. ಅಂದು ಬಂದವನ ಮುಖ (3)
11. ಒಳ್ಳೆಯ ಇತಿಹಾಸ ಹೊಂದಿರುವ ವ್ಯಕ್ತಿ (4)
12. ಗತಿಶೀಲವಾದ ಸಮಯ (4)
13. ಮಾಯಿ ನಡುವೆ ಇರುವ ಸಂಗ್ರಹಿಸು (4)
14. ನೋವು ಕಡೆಯಲ್ಲಿರುವ ಅರಿಕೆ (4)

5924 ಉತ್ತರ

ಎಡದಿಂದ ಬಲಕ್ಕೆ: 2.ನಮನ 5.ವಿಧ 7.ಅಕ್ಷ 8.ತಂಬೂರಿ 9.ಹಸನು 10.ವಾಮನ 12.ಬೇಸರ 13.ಖೇದ 14.ಹಣ 16.ಹರಳು

ಮೇಲಿನಿಂದ ಕೆಳಕ್ಕೆ: 1.ಕ್ರೋದಾಂಧ 2.ನರಹರಿ 3.ನವಗ್ರಹ 4.ಸಮಕ್ಷ 6.ವಿತಂಡವಾದ 7.ಅನುಕರಣ 11.ಹನುಮಾನ 12.ಬೇನೆಬೀಳು 13.ಖೇಚರ 15.ಹಲಗೆ

ಉತ್ಪಾದನೆ, ಪರಿವರ್ತನೆ ಮತ್ತು ವೈವಿಧ್ಯೀಕರಣ: ಭಾರತದ ಇಂಧನ ವ್ಯವಸ್ಥೆಯ ಭದ್ರ ಬುನಾದಿ

ಇಂಧನ ಕ್ಷೇತ್ರದಲ್ಲಿನ ರಚನಾತ್ಮಕ ಬದಲಾವಣೆಗಳು ಸುಗಮವಾದ ಕಾಲಘಟ್ಟದಲ್ಲಿ ಸಂಭವಿಸುವುದು ವಿರಳ. ಯಾವುದಾದರೂ ಬಿಕ್ಕಟ್ಟು ಎದುರಾಗಿ, ಕ್ರಮ ಕೈಗೊಳ್ಳದಿದ್ದರೆ ಆಗುವ ನಷ್ಟವು ಅತಿಯಾದಾಗ ಮಾತ್ರ ಇಂತಹ ಬದಲಾವಣೆಗಳು ಅನಿವಾರ್ಯವಾಗುತ್ತವೆ. ಆದರೆ, ಕಳೆದ 11 ವರ್ಷಗಳಲ್ಲಿ ಮೋದಿ ಸರ್ಕಾರವು ಇದಕ್ಕೆ ಭಿನ್ನವಾದ ಹಾದಿ ಆರಿಸಿಕೊಂಡಿದೆ. ಯಾವುದೇ ತುರ್ತು ಪರಿಸ್ಥಿತಿ ಇಲ್ಲದಿದ್ದಾಗಲೂ ಇಂಧನ ವಲಯದಲ್ಲಿ ದೀರ್ಘಕಾಲಿಕ ಸುಧಾರಣೆಗಳನ್ನು ಜಾರಿಗೆ ತಂದಿತು. ಈ ಮುನ್ನೆಚ್ಚರಿಕೆಯ ಕ್ರಮಗಳು ಜಾಗತಿಕ ಪೂರೈಕೆ ಸರಪಳಿಯಲ್ಲಿ ಉಂಟಾಗುವ ಏರಿಳಿತಗಳನ್ನು ತಡೆದುಕೊಳ್ಳುವ ಬಲಿಷ್ಠ ಸಾಮರ್ಥ್ಯವನ್ನು ಭಾರತಕ್ಕೆ ಒದಗಿಸಿವೆ. ದೇಶೀಯ ಉತ್ಪಾದನೆಯ ವಿಸ್ತರಣೆ, ಹೊಸ ಇಂಧನ ಮೂಲಗಳಿಗೆ ವ್ಯವಸ್ಥಿತ ಪರಿವರ್ತನೆ ಮತ್ತು ಪೂರೈಕೆಯ ಮೂಲಗಳ ವೈವಿಧ್ಯೀಕರಣದ ಮೂಲಕ ಮೋದಿ ಸರ್ಕಾರವು ಇಂಧನ ಭದ್ರತೆಯನ್ನು ಖಾತರಿಪಡಿಸಿದೆ ಮತ್ತು ಬಾಹ್ಯ ಆಘಾತಗಳಿಂದ ದೇಶದ ಮೇಲಿನ ಪರಿಣಾಮವನ್ನು ಯಶಸ್ವಿಯಾಗಿ ತಗ್ಗಿಸಿದೆ.

ಭಾರತವು ಸಾಗಬೇಕಾದ ಹಾದಿ ಎಂದಿಗೂ ಅಸ್ಪಷ್ಟವಾಗಿರಲಿಲ್ಲ; ಅದಕ್ಕೆ ಬೇಕಿದ್ದುದು ಆ ಹಾದಿಯಲ್ಲಿ ಸ್ಥಿರವಾಗಿ ಸಾಗುವ 'ರಾಜಕೀಯ ಇಚ್ಛಾಶಕ್ತಿ' ಮಾತ್ರ. ಕಳೆದ ಒಂದು ದಶಕದಲ್ಲಿ ಮೋದಿ ಸರ್ಕಾರವು ಅಂತಹ ಬದ್ಧತೆಯನ್ನೇ ತೋರಿದೆ. ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ಮತ್ತು ಅವರಿಗೆ ಉತ್ತರದಾಯಿಯಾಗಿರುವ ಆಡಳಿತವನ್ನೇ ಸರ್ಕಾರವು ತನ್ನ ಆದ್ಯತೆಯನ್ನಾಗಿಸಿಕೊಂಡಿತು. ಈ ಇಡೀ ಕಾರ್ಯತಂತ್ರವು ಮೂರು ಮುಖ್ಯ ಸ್ತಂಭಗಳ ಮೇಲೆ ನಿಂತಿದ್ದು, ಪ್ರತಿಯೊಂದು ಸ್ತಂಭವೂ ಸರ್ಕಾರದ ಕಡೆಯಿಂದ ಭಿನ್ನವಾದ ಮತ್ತು ಗಟ್ಟಿಯಾದ ಬದ್ಧತೆಯನ್ನು ನಿರೀಕ್ಷಿಸಿದ್ದವು.

ಎಥೆನಾಲ್ ಮಿಶ್ರಣದ ಪ್ರಭಾವ: ಮೊದಲನೆಯ ಸ್ತಂಭ 'ದೇಶೀಯ ಉತ್ಪಾದನೆ'. ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣ ಮಾಡುವ ಪ್ರಕ್ರಿಯೆ 2001ರಲ್ಲೇ ಪ್ರಾಯೋಗಿಕ ಯೋಜನೆಯಾಗಿ ಆರಂಭವಾಗಿತ್ತು. ಆದರೆ ದಶಕಗಳ ಕಾಲ ಭಾರತವು ಈ ನಿಟ್ಟಿನಲ್ಲಿ ಯಾವುದೇ ಗಣನೀಯ ಪ್ರಗತಿ ಕಾಣದೆ, ಎಥೆನಾಲ್ ಉತ್ಪಾದನೆಯು ಕುಂಠಿತವಾಗಿತ್ತು. 2014ರ ನಂತರವಷ್ಟೇ, ಸರಣಿ ಸಮಗ್ರ ಸುಧಾರಣೆಗಳ ಮೂಲಕ ಈ ಉಪಕ್ರಮದ ನೈಜ ಸಾಮರ್ಥ್ಯವನ್ನು ಅನಾವರಣಗೊಳಿಸಲು ಭಾರತಕ್ಕೆ ಸಾಧ್ಯವಾಯಿತು. ಇಂಧನ ಭದ್ರತೆಯನ್ನು ಬಲಪಡಿಸಲು, ಹವಾಮಾನ ಬದಲಾವಣೆಯನ್ನು ಎದುರಿಸಲು ಮತ್ತು ಗ್ರಾಮೀಣ ಆರ್ಥಿಕತೆಗೆ ಚೈತನ್ಯ ನೀಡಲು ಮೋದಿ ಸರ್ಕಾರವು ಬೃಹತ್ ಸುಧಾರಣಾ ಕ್ರಮಗಳನ್ನು ಕೈಗೊಂಡಿತು. 'ಎಥೆನಾಲ್ ಮಿಶ್ರಣ ಕಾರ್ಯಕ್ರಮ'ದ (ಇಬಿಪಿ) ಅಡಿಯಲ್ಲಿ ಪೆಟ್ರೋಲ್‌ನಲ್ಲಿ ಶೇ. 20 ರಷ್ಟು ಎಥೆನಾಲ್ ಬೆರೆಸುವ ಗುರಿಯನ್ನು ಆರಂಭದಲ್ಲಿ 2030ಕ್ಕೆ ನಿಗದಿಪಡಿಸಲಾಗಿತ್ತು.

ಆದರೆ, 2020ರಲ್ಲಿ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು (ಸಿಸಿಇಎ) ಈ ಗುರಿಯನ್ನು ಐದು ವರ್ಷ ಮುಂಚಿತವಾಗಿ ಅಂದರೆ 2025ಕ್ಕೇ ಅಂತಿಮಗೊಳಿಸಿತು. ಈ ನೀತಿಬದ್ಧ ನಿರ್ಧಾರಗಳ ಫಲವಾಗಿ, 2014ರಲ್ಲಿ ಕೇವಲ ಶೇ. 1.5ರಷ್ಟಿದ್ದ ಎಥೆನಾಲ್ ಮಿಶ್ರಣದ ಪ್ರಮಾಣವು 2025ರ ವೇಳೆಗೆ ಶೇ. 20ಕ್ಕೆ ಏರಿಕೆಯಾಗಿದೆ. ಇದು ಕಳೆದ 11 ವರ್ಷಗಳಲ್ಲಿ ಕಂಡ 13 ಪಟ್ಟು ಭಾರಿ ಹೆಚ್ಚಳವಾಗಿದೆ. ಅಷ್ಟೇ ಅಲ್ಲದೆ, ಎಥೆನಾಲ್ ಉತ್ಪಾದನೆಯು 2014ರಲ್ಲಿದ್ದ 38 ಕೋಟಿ ಲೀಟರ್ ಗಳಿಂದ ಜೂನ್ 2025ರ ವೇಳೆಗೆ 661.1 ಕೋಟಿ ಲೀಟರ್ ಗಳಿಗೆ ಜಿಗಿದಿದೆ. ಈ ಶೇ. 20 ಎಥೆನಾಲ್ ಮಿಶ್ರಣ ಕಾರ್ಯಕ್ರಮವು ಈಗ ವಾರ್ಷಿಕವಾಗಿ ಸುಮಾರು 44 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲದ ಬಳಕೆಯನ್ನು ಉಳಿಸುತ್ತಿದೆ.



ಇವಿ ಬಳಕೆ ಹೆಚ್ಚಳ: ಇಂಧನ ಭದ್ರತೆಯ ಎರಡನೆಯ ಸ್ತಂಭ 'ಇಂಧನ ಪರಿವರ್ತನೆಯನ್ನು ಸಮರ್ಪಕವಾಗಿ ಜಾರಿಗೆ ತರುವುದು'. ದೇಶದ ಎಲೆಕ್ಟ್ರಿಕ್ ವಾಹನ (ಇವಿ) ಉದ್ಯಮದ ಅಭಿವೃದ್ಧಿಗೆ ಮೋದಿ ಸರ್ಕಾರವು ಎಲ್ಲಾ ಹಂತಗಳಲ್ಲೂ ಬೆಂಬಲ ನೀಡಿದೆ. ಆಟೋಮೊಬೈಲ್ ವಲಯದಲ್ಲಿ ಶೇ. 100ರಷ್ಟು ವಿದೇಶಿ ನೇರ ಹೂಡಿಕೆಗೆ ಅವಕಾಶ ನೀಡಿದ್ದರಿಂದ, 4 ವರ್ಷಗಳಲ್ಲಿ ಈ ಕ್ಷೇತ್ರವು ಸುಮಾರು 36 ಬಿಲಿಯನ್ ಡಾಲರ್ ಹೂಡಿಕೆ ಆಕರ್ಷಿಸಿದೆ. ತಾಂತ್ರಿಕ ಆವಿಷ್ಕಾರಗಳನ್ನು ಉತ್ತೇಜಿಸಲು ಮತ್ತು ವಾಹನ ಉತ್ಪಾದನಾ ವಲಯದಲ್ಲಿ ಪೂರೈಕೆ ಸರಪಳಿಯನ್ನು ಬಲಪಡಿಸಲು ವಿವಿಧ ಯೋಜನೆಗಳನ್ನು ಜಾರಿಗೆ ತರಲಾಯಿತು. ಎಲೆಕ್ಟ್ರಿಕ್ ಮತ್ತು ಹೈಬ್ರಿಡ್ ವಾಹನಗಳ ಬಳಕೆಯನ್ನು ಹೆಚ್ಚಿಸಲು 2015 ರಲ್ಲಿ 'ಫೇಮ್-1' ಯೋಜನೆಯನ್ನು ಅಧಿಕೃತವಾಗಿ ಆರಂಭಿಸಲಾಯಿತು.

ಮೊದಲ ಹಂತದಲ್ಲಿ, 2.78 ಲಕ್ಷ ಎಲೆಕ್ಟ್ರಿಕ್ ವಾಹನಗಳು ರಸ್ತೆಗಿಳಿದವು, ಇದರಿಂದ ಸರಿಸುಮಾರು 59 ಮಿಲಿಯನ್ ಲೀಟರ್ ಇಂಧನ ಉಳಿತಾಯವಾಯಿತು. 'ಫೇಮ್-1' ಯೋಜನೆಯ ಯಶಸ್ಸು ಮತ್ತು ಅನುಭವದ ಆಧಾರದ ಮೇಲೆ, 2019 ರಲ್ಲಿ ಇದರ ಎರಡನೇ ಹಂತವನ್ನು (ಫೇಮ್-ಐಐ) ಆರಂಭಿಸಲಾಯಿತು. ಹೈಬ್ರಿಡ್ ಮತ್ತು ಎಲೆಕ್ಟ್ರಿಕ್ ವಾಹನಗಳ ಬೆಲೆಯನ್ನು ನೇರವಾಗಿ ಕಡಿತಗೊಳಿಸುವ ಮೂಲಕ ಗ್ರಾಹಕರಿಗೆ ಆಕರ್ಷಕ ರಿಯಾಯಿತಿ ಮತ್ತು ಉತ್ತೇಜಕಗಳನ್ನು ನೀಡಲಾಯಿತು. ಇದರೊಂದಿಗೆ 16 ಲಕ್ಷ ಎಲೆಕ್ಟ್ರಿಕ್ ವಾಹನಗಳ ಖರೀದಿ ಮತ್ತು ಅಗತ್ಯ ಚಾರ್ಜಿಂಗ್ ಮೂಲಸೌಕರ್ಯಗಳ ನಿರ್ಮಾಣಕ್ಕೆ ಸಬ್ಸಿಡಿ ನೀಡಲಾಯಿತು. ಇದು ಒಟ್ಟಾರೆಯಾಗಿ 42.9 ಮಿಲಿಯನ್ ಲೀಟರ್ ಇಂಧನವನ್ನು ಉಳಿಸಲು ಸಹಕಾರಿಯಾಯಿತು. ಇದಲ್ಲದೆ, ಸರ್ಕಾರದ ಈ ಸತತ ಪ್ರಯತ್ನಗಳ ಫಲವಾಗಿ, 2019-20ಕ್ಕೆ ಹೋಲಿಸಿದರೆ 2023-24ನೇ ಸಾಲಿನಲ್ಲಿ ಭಾರತದಲ್ಲಿ ನೋಂದಾಯಿಸಲಾದ ಎಲೆಕ್ಟ್ರಿಕ್ ವಾಹನಗಳ ಸಂಖ್ಯೆಯಲ್ಲಿ 9.7 ಪಟ್ಟು ಭಾರಿ ಹೆಚ್ಚಳ ಕಂಡುಬಂದಿದೆ. ಎಲೆಕ್ಟ್ರಿಕ್ ವಾಹನಗಳು ಮತ್ತು ನವೀಕರಿಸಬಹುದಾದ ಇಂಧನ ಮೂಲಗಳು ಸರಿಯಾದ ದಿಕ್ಕಿನಲ್ಲಿಯೇ ಸಾಗುತ್ತಿವೆಯಾದರೂ, ಈ ಇಂಧನ ಪರಿವರ್ತನೆಯು 'ನಿರ್ಣಾಯಕ ಖನಿಜಗಳ' ಮೇಲಿನ ಅವಲಂಬನೆಯ ಸವಾಲನ್ನು ಹೊತ್ತುತಂದಿದೆ. ಈ ಅಪಾಯವನ್ನು ಮೊದಲೇ ಅರಿತ ಮೋದಿ ಸರ್ಕಾರ, ಇಂಧನ ಭದ್ರತೆಯಲ್ಲಿನ ಈ ದುರ್ಬಲತೆಯನ್ನು ಹೋಗಲಾಡಿಸಲು 'ರಾಷ್ಟ್ರೀಯ ನಿರ್ಣಾಯಕ ಖನಿಜ ಮಿಷನ್' ಅನ್ನು ಪ್ರಾರಂಭಿಸಿದೆ. ನಿರ್ಣಾಯಕ ಖನಿಜಗಳ ನಿರಂತರ ಪೂರೈಕೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಭಾರತದ ಖನಿಜ ಮೌಲ್ಯ ಸರಪಳಿಯನ್ನು ಬಲಪಡಿಸುವುದು ಸರ್ಕಾರದ ಮುಖ್ಯ ಗುರಿಯಾಗಿದೆ.

ಪೂರೈಕೆ ಪಾಲುದಾರರ ವೈವಿಧ್ಯೀಕರಣ: ಇಂಧನ ಭದ್ರತೆಯ ಮೂರನೆಯ ಸ್ತಂಭ 'ಇಂಧನ ಮೂಲಗಳು ಮತ್ತು ಪೂರೈಕೆ ಪಾಲುದಾರರ ವೈವಿಧ್ಯೀಕರಣ'. ಪ್ರಧಾನಿ ನರೇಂದ್ರ ಮೋದಿ 'ಬಹು-ಪಕ್ಷೀಯ ಹಿತಾಸಕ್ತಿ' ಎಂಬ ರಾಜತಾಂತ್ರಿಕ ನೀತಿಯನ್ನು ಅನುಸರಿಸಿದರು. ಇದು ಭಾರತಕ್ಕೆ ಹಲವಾರು ರಾಷ್ಟ್ರಗಳೊಂದಿಗೆ ಏಕಕಾಲದಲ್ಲಿ ಆಳವಾದ ಮತ್ತು ಸಮಾನಾಂತರವಾದ ಸಂಬಂಧಗಳನ್ನು ಬೆಳೆಸಲು ಹಾಗೂ ದೇಶದ ಹಿತಾಸಕ್ತಿಗಳನ್ನು ರಕ್ಷಿಸಲು ನೆರವಾಗಿದೆ. ರಾಜತಾಂತ್ರಿಕ ಸಂಪರ್ಕದ ಫಲವಾಗಿ, ಕಚ್ಚಾ ತೈಲಕ್ಕಾಗಿ ಭಾರತವು ಅವಲಂಬಿಸಿರುವ ದೇಶಗಳ ಸಂಖ್ಯೆ ದಶಕದ ಹಿಂದಿನ 27 ರಿಂದ ಇಂದು 40ಕ್ಕೂ ಹೆಚ್ಚು ದೇಶಗಳಿಗೆ ವಿಸ್ತರಿಸಿದೆ.

ಈ ಎಲ್ಲಾ ಕ್ರಮಗಳ ಮಹತ್ವವನ್ನು ಅರ್ಥಮಾಡಿಕೊಳ್ಳಲು ಒಂದು ಉತ್ತಮ ಮಾರ್ಗವೆಂದರೆ, ಒಂದು ವೇಳೆ ಈ ಕ್ರಮಗಳನ್ನು ಕೈಗೊಳ್ಳದಿದ್ದರೆ ಪರಿಸ್ಥಿತಿ ಇಂದು ಹೇಗಿರುತ್ತಿತ್ತು ಎಂದು ಊಹಿಸುವುದು. ರಷ್ಯಾ-ಉಕ್ರೇನ್ ಯುದ್ಧ ಮತ್ತು ಹಾರ್ಮುಜ್ ಜಲಸಂಧಿಯ ಸುತ್ತಲಿನ ಉದ್ವಿಗ್ನತೆಗಳಂತಹ ಘಟನೆಗಳು, ಜಾಗತಿಕ ಪೂರೈಕೆ ಸರಪಳಿಗಳು ಎಷ್ಟು ವೇಗವಾಗಿ ಅಸ್ತವ್ಯಸ್ತಗೊಳ್ಳಬಲ್ಲವು ಎಂಬುದನ್ನು ಪದೇ ಪದೇ ಸಾಬೀತುಪಡಿಸಿವೆ. ಉದಾಹರಣೆಗೆ, ಎಥೆನಾಲ್ ಮಿಶ್ರಣದಂತಹ ದೇಶೀಯ ಪರ್ಯಾಯಗಳ ವಿಸ್ತರಣೆಯನ್ನೇ ತೆಗೆದುಕೊಳ್ಳಿ; 2014 ರಿಂದ ಈವರೆಗೆ ಇದು 190 ಮಿಲಿಯನ್ ಮೆಟ್ರಿಕ್ ಟನ್ ಗೂ ಹೆಚ್ಚು ಕಚ್ಚಾ ತೈಲ ಆಮದನ್ನು ಮಿತಗೊಳಿಸಿದೆ ಮತ್ತು ಅಂದಾಜು 1.55 ಲಕ್ಷ ಕೋಟಿ ರೂಪಾಯಿಗಳಿಗೂ ಅಧಿಕ ವಿದೇಶಿ ವಿನಿಮಯವನ್ನು ಉಳಿಸಿದೆ. ಒಂದು ವೇಳೆ ಎಥೆನಾಲ್ ಮಿಶ್ರಣಕ್ಕೆ ಆದ್ಯತೆ ನೀಡದಿದ್ದಲ್ಲಿ, ಇಂತಹ ಜಾಗತಿಕ ಬಿಕ್ಕಟ್ಟುಗಳಿಗೆ ಭಾರತವು ಅತಿ ಹೆಚ್ಚಿನ ಬೆಲೆ ತೆರಬೇಕಾಗುತ್ತಿತ್ತು. ಆ ಸನ್ನಿವೇಶದಲ್ಲಿ, ಜಾಗತಿಕ ಪೂರೈಕೆಯಲ್ಲಾಗುವ ಸಣ್ಣ ವ್ಯತ್ಯಯವೂ ಭಾರತದ ದೇಶೀಯ ಆರ್ಥಿಕತೆಯ ಮೇಲೆ ತೀವ್ರವಾದ ಒತ್ತಡವನ್ನು ಉಂಟುಮಾಡುತ್ತಿತ್ತು. ನೀತಿಗಳನ್ನು ಅನುಸರಿಸದಿದ್ದರೆ, ಜಾಗತಿಕ ಪೂರೈಕೆಯಲ್ಲಿನ ಅಡೆತಡೆಗಳು ಭಾರತದ ಇಂಧನ ವ್ಯವಸ್ಥೆಯಲ್ಲಿ ತೀವ್ರ ಅಸ್ಥಿರತೆಯನ್ನು ಉಂಟುಮಾಡುತ್ತಿದ್ದವು. ಭಾರತದಂತಹ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗೆ ಇದರ ಪರಿಣಾಮಗಳು ಅಕ್ಷರಶಃ 'ಹಾಹಾಕಾರ' ಅಥವಾ ತಲ್ಲಣಕ್ಕೆ ಕಾರಣವಾಗುವ ಸಾಧ್ಯತೆಯಿತ್ತು. ಆದರೆ, ಕಳೆದ ದಶಕದಲ್ಲಿ ಕೈಗೊಂಡ ಸುಧಾರಣೆಗಳು, ಭೌಗೋಳಿಕ ರಾಜಕೀಯ ಅನಿಶ್ಚಿತತೆಯ ನಡುವೆಯೂ ಭಾರತಕ್ಕೆ ತನ್ನ ಇಂಧನ ಅಗತ್ಯಗಳನ್ನು ನಿರ್ವಹಿಸುವಲ್ಲಿ ಹೆಚ್ಚಿನ ನಮ್ಯತೆಯನ್ನು ಒದಗಿಸಿವೆ. ಭಾರತದ ಇಂಧನ ಭದ್ರತೆಯು ಕೇವಲ ಒಂದು ಸಮುದ್ರ ಮಾರ್ಗದ ಪರಿಸ್ಥಿತಿಯನ್ನು ಅವಲಂಬಿಸಿ ಏರಿಳಿತ ಕಾಣುತ್ತಿದ್ದ ಕಾಲ ಈಗ ಮುಗಿದಿದೆ. ಯಾವುದೇ ಮಾರ್ಗದಲ್ಲಿ ಅಡೆತಡೆ ಉಂಟಾದರೂ, ಅದು ಕೇವಲ 'ಪೂರೈಕೆಯ ಹೊಂದಾಣಿಕೆ'ಗೆ ಕಾರಣವಾಗುತ್ತದೆಯೇ ಹೊರತು, ತುರ್ತು ಪರಿಸ್ಥಿತಿಯನ್ನಲ್ಲ. ಭಾರತೀಯ ತೈಲ ಸಂಸ್ಕರಣಾಗಾರಗಳು ಈಗ ಕೇವಲ ನಿಶ್ಚಿತ ದೇಶ ಅಥವಾ ನಿಶ್ಚಿತ ಮೂಲದ ಮೇಲೆ ಅವಲಂಬಿತವಾಗಿಲ್ಲ; ಈ ನಮ್ಯತೆಯೇ ದೇಶದ ಇಂಧನ ಭದ್ರತೆಯ ಪ್ರಮುಖ ಆಸ್ತಿಯಾಗಿದೆ. ಹಾರ್ಮುಜ್ ಜಲಸಂಧಿಯು ಇಂದಿಗೂ ಒಂದು ಪ್ರಮುಖ ಮಾರ್ಗವಾಗಿದ್ದರೂ, ಅಗತ್ಯಬಿದ್ದಲ್ಲಿ ಭಾರತವು ತನ್ನ ಹಡಗುಗಳನ್ನು ಮರುಮಾರ್ಗಗೊಳಿಸಿ ಇತರ ರಫ್ತುದಾರ ರಾಷ್ಟ್ರಗಳ ಕಡೆಗೆ ತನ್ನ ಕಾರ್ಯತಂತ್ರವನ್ನು ಬದಲಿಸುವ ಸಾಮರ್ಥ್ಯ ಹೊಂದಿದೆ. ಒಂದು ದಶಕದ ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ, ಭಾರತವು ಜಾಗತಿಕ ಮಾರುಕಟ್ಟೆಯ ಅನಿಶ್ಚಿತತೆಗಳನ್ನು ನಿಭಾಯಿಸಲು ಅತ್ಯಂತ ಸದೃಢವಾದ ಸ್ಥಿತಿಯಲ್ಲಿದೆ. ಪೂರೈಕೆ ಸರಪಳಿಗಳು ಅನಿಶ್ಚಿತವಾಗಿರುವ ಇಂದಿನ ಜಗತ್ತಿನಲ್ಲಿ, ಇಂಧನ ಮೂಲಗಳು ಮತ್ತು ಪಾಲುದಾರಿಕೆಗಳ ಈ ವೈವಿಧ್ಯಮಯ ನೆಲೆಯು ಭಾರತದ ಇಂಧನ ಪೂರೈಕೆಯ ಸುಸ್ಥಿರತೆಗೆ ಪ್ರಬಲ ರಕ್ಷಣಾ ಕವಚವಾಗಿ ಮಾರ್ಪಟ್ಟಿದೆ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಮಾಹಿತಿ

ಕಿರು ಸುದ್ದಿ

ಜು.31ರವರೆಗೆ ಏರ್‌ಬಾರ್ನ್ ಜಿಯೋಫಿಸಿಕಲ್ ಸರ್ವೆ

ಹಾವೇರಿ: ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಜೀಯೋಲಾಜಿಕಲ್ ಸರ್ವೇ ಆಫ್ ಇಂಡಿಯಾ ವತಿಯಿಂದ 2026 ಜು.31ರವರೆಗೆ ಏರ್‌ಕ್ರಾಫ್ಟ್ ಮೂಲಕ ಏರ್‌ಬಾರ್ನ್ ಜಿಯೋಫಿಸಿಕಲ್ ಸರ್ವೆ ಕಾರ್ಯ ನಡೆಯುತ್ತಿದ್ದು, ಸಾರ್ವಜನಿಕರು ಆತಂಕ ಪಡಬಾರದೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಕೆಲವು ದಿನಗಳಿಂದ ಹಾವೇರಿ ಜಿಲ್ಲೆಯ ಹಿರೇಕೆರೂರು, ಬ್ಯಾಡಗಿ, ರಾಣೇಬೆನ್ನೂರು ಹಾಗೂ ಹಾವೇರಿ ತಾಲೂಕಿನಲ್ಲಿ ಭೂ ಮೇಲ್ಮೈಯಿಂದ ಕಡಿಮೆ ಅಂತರದಲ್ಲಿ ಏರ್‌ಕ್ರಾಫ್ಟ್ ಹಾರಾಟ ಕಂಡು ಬರುತ್ತಿದ್ದು, ಇದು ಕೇವಲ ಜಿಯೋಫಿಸಿಕಲ್ ಸರ್ವೆ ಕಾರ್ಯಕ್ಕೆ ಸೀಮಿತವಾಗಿದೆ. ಹಾಗಾಗಿ ಸಾರ್ವಜನಿಕರು ಆತಂಕ ಪಡಬಾರದೆಂದು ಹಾವೇರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ತಿಳಿಸಿದ್ದಾರೆ.

ವಿಜೃಂಭಣೆ ತಿಪ್ಪೇರುದ್ರಸ್ವಾಮಿ ಭಾವಚಿತ್ರ ಮೆರವಣಿಗೆ



ರಾಣೇಬೆನ್ನೂರ: ತಾಲೂಕಿನ ಚಿಕ್ಕಮಾಗನೂರು ಗ್ರಾಮದಲ್ಲಿ ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ಭಾವಚಿತ್ರ ಮೆರವಣಿಗೆ ಗ್ರಾಮದಲ್ಲಿ ವಿಜೃಂಭಣೆಯಿಂದ ನಡೆಯಿತು. ಬೆಳಗ್ಗೆ ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿಗೆ ವಿಶೇಷ ಅಭಿಷೇಕ ಬಿಲ್ವಾರ್ಚನೆ ಕುಂಕುಮ ಪೂಜೆ, ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಭಾವಚಿತ್ರದ ಮೆರವಣಿಗೆಯು ಸಮಾಳ, ಡೊಳ್ಳು ಅನೇಕ ಕಲಾ ತಂಡಗಳೊಂದಿಗೆ ದೇವಸ್ಥಾನದಿಂದ ಹೊರಟು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ದೇವಸ್ಥಾನಕ್ಕೆ ಬಂದು ತಲುಪಿತು. ನಂತರ ಭಕ್ತರಿಗೆ ಅನ್ನ ಸಂತರ್ಪಣೆ ನಡೆಯಿತು. ಮೆರವಣಿಗೆಯಲ್ಲಿ ಕರಬಸಪ್ಪ ಗುಂಡಗಟ್ಟಿ, ಪರಮೇಶಪ್ಪ ಜ್ಯೋತಿ, ಶಂಕ್ರಪ್ಪ ಕಿರಿಗೇರಿ, ನಾಗರಾಜ ಕಾಳೇರ, ಪರಶುರಾಮ ಕಾಳೇರ, ರುದ್ರಯ್ಯ ಅರೆಮಲ್ಲಾಪುರ, ಪ್ರಭು ಕುಂದಗೋಳಮಠ, ರೇವಣಪ್ಪ ಚಲವಾದಿ, ರಾಮಪ್ಪ ಕೊಮ್ಮೆ, ಚಂದ್ರಶೇಖರ ನೂಲಗೇರಿ, ರವಿ ಮೆಣಸಿನಹಾಳ, ಮಂಜನಗೌಡ ಲಕ್ಕನಗೌಡ್ರ, ಕುಮಾರ ಹೆಡಿಯಾಲ, ಹನುಮಂತಪ್ಪ ಸೊರಟೂರ, ಎಸ್.ಎಂ. ಮೆಣಸಿನಹಾಳ, ಗದಿಗೆಪ್ಪ ಓಲೇಕಾರ, ಶಂಕ್ರಪ್ಪ ಕಿರಗೇರಿ ಸೇರಿದಂತೆ ಮತ್ತಿತರರು ಇದ್ದರು.

ಜಿಲ್ಲೆಯ ವಿವಿಧೆಡೆ ಆಲಿಕಲ್ಲು ಮಳೆ

ಹಾವೇರಿ: ಜಿಲ್ಲೆಯ ವಿವಿಧಡೆ ರವಿವಾರ ಸಂಜೆ ಆಲಿಕಲ್ಲು ಸಹಿತ ಮಳೆಯಾಗಿದ್ದು, ವಾತಾವರಣ ತಂಪಾಯಿತು. ಜಿಲ್ಲೆಯ ರಾಣೆಬೆನ್ನೂರ, ಹಿರೇಕೆರೂರು, ರಟ್ಟಿಹಳ್ಳಿ ಹಾಗೂ ಬ್ಯಾಡಗಿ ತಾಲೂಕಿನಲ್ಲಿ ಆಲಿಕಲ್ಲು ಸಹಿತ ಮಳೆಯಾಗಿದೆ. ದಿನವಿಡಿ ಬಿಸಿಲಿನ ಬೇಗೆಯಿಂದ ಬಸವಳಿದಿದ್ದ ಜನತೆಗೆ ಸಂಜೆ ಸುರಿದ ಮಳೆ ತಂಪಿನ ಅನುಭವ ನೀಡಿತು. ಅಕಾಲಿಕ ಮಳೆಯಿಂದ ಮೆಕ್ಕೆಜೋಳ ಸೇರಿದಂತೆ ವಿವಿಧ ಬೆಳೆಗಳ ಒಕ್ಕಲುತನ ಮಾಡುತ್ತಿದ್ದ ರೈತರು ಸಮಸ್ಯೆ ಎದುರಿಸುವಂತಾಯಿತು.

ನಾಳೆ ಮಹಿಳಾ ನೌಕರರಿಗೆ ಸನ್ಮಾನ

ಹಾವೇರಿ : ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಮಹಿಳಾ ದಿನಾಚರಣೆ ಮತ್ತು ಕಾರ್ಯಾಗಾರ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳಾ ನೌಕರರಿಗೆ ಸನ್ಮಾನ ಕಾರ್ಯಕ್ರಮವನ್ನು ಮಾ.17ರಂದು ಜಿಲ್ಲಾ ಗುರುಭವನದಲ್ಲಿ ಬೆಳಿಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ. ಹಾವೇರಿ ತಾಲೂಕಿನ ಎಲ್ಲಾ ಮಹಿಳಾ ನೌಕರರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘದ ಅಧ್ಯಕ್ಷರಾದ ಅಕ್ಕಮಹಾದೇವಿ ಕಾಕೋಳ ಪತ್ರಿಕಾ ಪ್ರಕಟಣೆಯಲ್ಲಿ ಕೋರಿದ್ದಾರೆ.

ನಿಧನ ಸುದ್ದಿ

ಯಚರಪ್ಪ ಪತ್ತಾರ



ಹಾವೇರಿ: ಬನಶಂಕರಿ ಬಡಾವಣೆಯ ನಿವಾಸಿ ಕೆ.ವಿ.ಜಿ. ಬ್ಯಾಂಕಿನ ನಿವೃತ್ತ ಉದ್ಯೋಗಿ ಯಚರಪ್ಪ ಎಂ.ಪತ್ತಾರ (64) ಭಾನುವಾರ ಬೆಳಗ್ಗೆ ವಿನಾಯಕ ನಗರದ ಬಳಿ ನಡೆದ ರಸ್ತೆ ಅಪಘಾತದಲ್ಲಿ ನಿಧನರಾದರು. ಮೃತರಿಗೆ ಪತ್ನಿ, ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವಿದೆ.

ಸಾವಂತ್ರಮ್ಮ ದಪ್ಪೇರ



ಹಾವೇರಿ: ತಾಲೂಕಿನ ಕೆರಿಕೊಪ್ಪ ಗ್ರಾಮದ ಶತಾಯುಷಿ ಮಹಿಳೆ ಸಾವಂತ್ರಮ್ಮ ದೊಡ್ಡಕೆಂಚಪ್ಪ ದಪ್ಪೇರ (120) ನಿಧನರಾದರು. ಮೃತರಿಗೆ ನಾಲ್ಕು ಪುತ್ರರು ಸೇರಿದಂತೆ ಅಪಾರ ಬಂಧುಗಳಿವೆ.



ಶಿಗ್ಗಾಂವಿ: ಪಟ್ಟಣದ ಸವಣೂರ ರಸ್ತೆಯ ತಮ್ಮ ನಿವಾಸದ ಸಭಾಭವನದಲ್ಲಿ ಬಿಜೆಪಿ ಶಿಗ್ಗಾಂವ-ಸವಣೂರ ವಿಧಾನಸಭಾ ಮತಕ್ಷೇತ್ರದ ಬಿ.ಎಲ್.ಎ-2 ಕಾರ್ಯಾಗಾರವನ್ನು ಸಂಸದ ಬಸವರಾಜ ಬೊಮ್ಮಾಯಿ ಉದ್ಘಾಟಿಸಿ, ಮಾತನಾಡಿದರು.

ಅಧಿವಕ್ತಾ ಪರಿಷತ್‌ಗೆ ವಕೀಲರ ಸಹಕಾರ ಅಗತ್ಯ

ಹಾವೇರಿ: ದೇಶದಲ್ಲಿ ಕಾನೂನು ಅರಿವು, ಜಾಗೃತಿ ಹಾಗೂ ಸಂಘಟನೆಯ ಮೂಲಕ ರಾಷ್ಟ್ರೀಯ ಸಂಘಟನೆಯಾಗಿ ಅಧಿವಕ್ತಾ ಪರಿಷತ್ ಬೆಳೆಯುತ್ತಿದ್ದು, ಜಿಲ್ಲೆಯಲ್ಲಿ ಸಂಘಟನೆಗೆ ಎಲ್ಲಾ ವಕೀಲರು ಸಹಕಾರ ನೀಡುವಂತಾಗಲಿ ಎಂದು ಅಧಿವಕ್ತಾ ಪರಿಷತ್ ರಾಜ್ಯ ಉಪಾಧ್ಯಕ್ಷ ಗಂಗಾಧರ ಪಾಟೀಲ ಹೇಳಿದರು. ಇಲ್ಲಿನ ದಾನೇಶ್ವರಿ ನಗರದಲ್ಲಿರುವ ಭಂಟರ ಭವನದಲ್ಲಿ ಅಧಿವಕ್ತಾ ಪರಿಷತ್ ವತಿಯಿಂದ ಆಯೋಜಿಸಿದ್ದ ಅಭ್ಯಾಸ ವರ್ಗ ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾ-ತಾಲೂಕ ಘಟಕಗಳ ಪದಾಧಿಕಾರಿಗಳನ್ನು ಘೋಷಣೆ ಮಾಡಿ ಮಾತನಾಡಿದರು. ಅಧಿವಕ್ತಾ ಪರಿಷತ್ ಜಿಲ್ಲಾಧ್ಯಕ್ಷ ಪಿ.ಆರ್. ಮುಂಜೋಜಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಧಿವಕ್ತಾ ಪರಿಷತ್ ರಾಷ್ಟ್ರ- ರಾಜ್ಯದಲ್ಲಿನ ವಿಶಾಲ ವ್ಯಾಪ್ತಿಯ ಸಂಘಟನೆಯಾಗಿದೆ. ಅಧಿವಕ್ತಾ ಎಂದರೆ ಕಾನೂನು ಬಲ್ಲವರು- ಕಾನೂನು ತಿಳುವಳಿಕೆಯಳ್ಳವರು ಎಂಬುದಾಗಿದೆ. ಎರಡು ವರ್ಷದಿಂದ ಜಿಲ್ಲೆಯಲ್ಲಿ ಸಂಘಟನೆ ಮಾಡುತ್ತಿದ್ದೇವೆ. ಎಲ್ಲಾ ತಾಲೂಕಿನಲ್ಲಿ ಸಂಘಟನೆ ಮಾಡಲು ವಕೀಲರ ಸಹಕಾರ ನೀಡಬೇಕೆಂದು ಕೇಳಿದರು. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಶಿದ್ದನಗೌಡ ಪಾಟೀಲ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ನಿವೃತ್ತ ಸರ್ಕಾರಿ ವಕೀಲರಾದ ಆರ್.ಎಂ. ಗಂಜಿಗಟ್ಟಿ ಅವರು ಕಾನೂನಿನ ಬಿಎನ್‌ಎಸ್‌ಎಸ್ ಮತ್ತು ಸಿಆರ್‌ಪಿಸಿ ವಿಷಯದ ಕುರಿತು ಉಪನ್ಯಾಸ ನೀಡಿದರು. ನಿವೃತ್ತ ಸರ್ಕಾರಿ ವಕೀಲರಾದ ವಿ.ಜಿ. ಯಳಗೇರಿ ಅವರು ಕಾನೂನಿನ ಬಿಎನ್‌ಎಸ್ ಮತ್ತು ಐಪಿಸಿ ವಿಷಯಗಳ ಕುರಿತು ಉಪನ್ಯಾಸ ನೀಡಿದರು. ಅಧಿವಕ್ತಾ ಪರಿಷತ್ ವತಿಯಿಂದ ಮಹಿಳಾ ದಿನಾಚರಣೆ ನಿಮಿತ್ತವಾಗಿ ಸನ್ಮಾನ ಸ್ವೀಕರಿಸಿದ ಡಾ.ಉಮಾ ಬಳಿಗಾರ ಮಾತನಾಡಿದರು.



ಹಾವೇರಿ : ಇಲ್ಲಿಯ ದಾನೇಶ್ವರಿ ನಗರದಲ್ಲಿರುವ ಭಂಟರ ಭವನದಲ್ಲಿ ಅಧಿವಕ್ತಾ ಪರಿಷತ್ ವತಿಯಿಂದ ಅಭ್ಯಾಸ ವರ್ಗ ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಡೆಯಿತು.ಈ ವೇಳೆ ಪ್ರಧಾನ ಕಾರ್ಯದರ್ಶಿಗಳಾದ ನಾಗರಾಜ ಬಡಿಗೇರ, ಪಿ.ಎಂ. ಬೆನ್ನೂರ, ಎಂ.ಬಿ. ನೀರಲಗಿಮಠ, ಸಿ.ಪಿ. ಜಾವಗಲ್, ನಾರಾಯಣ ಸಾಳಂಕಿ, ಪಿ.ಜಿ. ಪಾಟೀಲ, ಎಂ.ವಿ. ಕುಂಟೆ, ಮೋಹನಸಿಂಗ್ ರಜಪೂರ, ಅಧಿವಕ್ತಾ ಪರಿಷತ್ ಸವಣೂರ ತಾಲೂಕಾಧ್ಯಕ್ಷ ಜಿ.ಎಂ. ಮರಿಗೌಡ್ರ, ಹಾನಗಲ್ ತಾಲೂಕಾಧ್ಯಕ್ಷ ಸತೀಶ ತಿಳವಳ್ಳಿ, ಅಶ್ವಿನಿ ಬೆಳಕರ, ವಿನಾಯಕ ಕುರುಬರ ಇತರರು ಇದ್ದರು.

ಸಂಸದ ಬಸವರಾಜ ಬೊಮ್ಮಾಯಿ ಹೇಳಿಕೆ

ಅಕ್ರಮ ಮತದಾರರ ಪಟ್ಟಿ ಪರಿಶೀಲಿಸಿ

ಶಿಗ್ಗಾಂವಿ: ನಿಮ್ ಕೆಲಸ ಏನಿದೆ ಅಂತ ಬಿ.ಎಲ್.ಎ-2 ಗಳು ತಿಳಿದುಕೊಂಡು, ಮತದಾರರ ಪಟ್ಟಿಯನ್ನು ಹಿಡಿದುಕೊಂಡು ಪರಿಶೀಲಿಸಬೇಕು. ಯಾರು ಅನಧಿಕೃತವಾಗಿದ್ದಾರೆ, ಯಾವ ರೀತಿ ಸುಳ್ಳು ಹೇಳಿ ಹೆಸರು ಸೇರಿಸಿದ್ದಾರೆ. ಅದನ್ನು ಪತ್ತೆ ಹಚ್ಚಬೇಕು. ಎಸ್‌ಐಆರ್ ಸರ್ಕಾರಿ ಕೆಲಸ ಅಲ್ಲ, ಸರ್ಕಾರಿ ಅಧಿಕಾರಿಗಳ ಮುಖಾಂತರ ಮಾಡುವ ಕೆಲಸ ಅಷ್ಟೇ. ಆದರೆ ನ್ಯಾಯ ಸಮ್ಮತವಾಗಿ ಸತ್ಯದ ಪರವಾಗಿ ಕಾನೂನು ಪರವಾಗಿ ಇರಬೇಕು ಎಂದು ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಪಟ್ಟಣದ ಸವಣೂರ ರಸ್ತೆಯ ತಮ್ಮ ನಿವಾಸದ ಸಭಾಭವನದಲ್ಲಿ ಬಿಜೆಪಿ ಶಿಗ್ಗಾಂವ-ಸವಣೂರ ವಿಧಾನಸಭಾ ಮತಕ್ಷೇತ್ರದ ಬಿ.ಎಲ್.ಎ-2 ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಗಡಿಯಲ್ಲಿ ಸೈನಿಕರು ಇರುವಂತೆ ಕಷ್ಟ ಕಾಲದಲ್ಲಿ ನೀವು ನನ್ನನ್ನು ಸುರಕ್ಷೆ ಮಾಡುವ ಸೈನಿಕರ ಥರ ಕಾಣುತ್ತಿದ್ದಿರಿ. ಬಿಎಲ್‌ಎ 2ಗಳು ಸರಿಯಾಗಿ ಕೆಲಸ ಮಾಡಿದರೆ ಪಾಕಿಸ್ತಾನ ಭಾರತ ಮ್ಯಾಚ್ ಆದ ಹಾಗೆ ಆಗುತ್ತದೆ. ಭಾರತ ಗೆದ್ದೆ ಗೆಲ್ಲುತ್ತದೆ ಎನ್ನುವ ವಿಶ್ವಾಸದಲ್ಲಿ ಇದ್ದಂತೆ. ಶಿಗ್ಗಾವಿ ಸವಣೂರು ಕ್ಷೇತ್ರದ ಅಭಿವೃದ್ಧಿಗೆ ಸಂಕಲ್ಪ ಮಾಡಿ. ದೇಶದ ಭದ್ರತೆಯಲ್ಲಿ ಸೈನಿಕರು ಎಷ್ಟು ಪ್ರಮುಖರೋ, ಪ್ರಜಾಪ್ರಭುತ್ವದ ಅಡಿಯಲ್ಲಿ ದೇಶವನ್ನು ಉಳಿಸಿಕೊಳ್ಳುವ ಜವಾಬ್ದಾರಿ ಬಿಎಲ್‌ಒಗಳ ಮೇಲಿದೆ. ಎಸ್‌ಐಆರ್‌ನಲ್ಲಿ ಹೆಚ್ಚಿನ ಜವಾಬ್ದಾರಿಯಿಂದ ಶಿಗ್ಗಾವಿ ಸವಣೂರ ಕ್ಷೇತ್ರವನ್ನು ಮೊದಲಿನ ರೀತಿಯಲ್ಲಿ ಉಳಿಸಿಕೊಳ್ಳಬೇಕು ಎಂದರು.

ಹದಿನೈದು ಸಾವಿರ ಮನೆಗಳನ್ನು ಕೊಟ್ಟಿದ್ದೇವೆ. ಸುಳ್ಳು ಹೇಳಿ ರಾಜಕಾರಣ ಮಾಡುವ ಅವಶ್ಯಕತೆ ಇಲ್ಲ, ಕ್ಷೇತ್ರದ ಜನರ ಮನದಲ್ಲಿ ನಾನು ನೆಲೆ ಊರಿದ್ದೇನೆ. ಇವತ್ತು ಈ ಜನ ಪ್ರೀತಿ ವಿಶ್ವಾಸ ಯಾಕೆ ತೋರಿಸುತ್ತಾರೆ ಎಂದರೆ ನಾವು ಏನು ಮಾತನಾಡುತ್ತೇವೆ ಅದನ್ನು ಮಾಡುತ್ತೇವೆ. ನಮಗಿಂತ ಒಳ್ಳೆಯ ಕೆಲಸ ಮಾಡಿದರೆ ನಾನೇ ಶಹಬ್ಬಾಶಗಿರಿ ಕೊಡುತ್ತೇನೆ. ಆದರೆ ಜನರನ್ನು ದಾರಿ ತಪ್ಪಿಸಿ ನಾನೊಬ್ಬನಿಂದ ಕೆಲಸ ಆಗಿದೆ. ನಾನೇ ಸೂರ್ಯನ ಹುಟ್ಟಿಸಿದೆ ಅಂದರೆ ದೇವರು ನೋಡಿಕೊಳ್ಳುತ್ತಾನೆ ಎಂದರು.

ಕ್ಷೇತ್ರದ ಯುವಕರು ಹಾಳಾಗುತ್ತಿದ್ದಾರೆ. ಎಸ್ಪಿ ಸೇರಿದಂತೆ ಯಾವುದೇ ಅಧಿಕಾರಿಗಳ ಭಯ ಇಲ್ಲವಾಗಿದೆ. ಕ್ಷೇತ್ರದಲ್ಲಿ ಗಾಂಜಾ, ಮಟ್ಕಾ ಸೇರಿದಂತೆ ಅಕ್ರಮ ಚಟುವಟಿಕೆಗಳು ವ್ಯಾಪಕವಾಗಿ ನಡೆಯುತ್ತಿವೆ. ನಾವು ತಂದ ಯೋಜನೆಗಳನ್ನೇ ಉದ್ಘಾಟನೆ ಮಾಡುತ್ತಿದ್ದಾರೆ. ಶಿಗ್ಗಾವಿ ಬಂಕಾಪುರ ಸವಣೂರು ಮೂರು ಪಟ್ಟಣಗಳಿಗೆ ನಾನು ಕುಡಿಯುವ ನೀರಿನ ಯೋಜನೆ ತಂದಿದ್ದೇನೆ. ಆದರೆ, ಈಗಿನವರು ಈ ಯೋಜನೆಗೆ ಅನುಮೋದನೆ ಪಡೆದು ನಾನೇ ತಂದಿದ್ದೇನೆ ಎಂದು ಹೇಳಿಕೊಳ್ಳುತ್ತಿದ್ದಾರೆ ಎಂದು ಚಾಟಿ ಬೀಸಿದರು.ವಿಧಾನ ಪರಿಷತ್ ಸದಸ್ಯರಾದ ಎಸ್.ವಿ. ಸಂಕನೂರ, ಯುವ ಮುಖಂಡ ಭರತ ಬೊಮ್ಮಾಯಿ, ಶಿಗ್ಗಾಂವ ಮಂಡಳದ ಅಧ್ಯಕ್ಷ ವಿಶ್ವನಾಥ ಹರವಿ, ಸವಣೂರ ಮಂಡಳದ ಅಧ್ಯಕ್ಷ ಶಿವಪುತ್ರಪ್ಪ ಕಲಕೋಟಿ, ಮುಖಂಡರಾದ ಮಹಾಂತೇಶ ಬಿಜ್ಜೂರ, ಡಿ.ಎಸ್. ಮಾಳಗಿ, ಎಂ.ಎನ್ ಹೊನಕೇರಿ, ಶಿವಾನಂದ ಮ್ಯಾಗೇರಿ, ಕರೆಪ್ಪ ಕಟ್ಟಿಮನಿ, ಶಿವಪ್ರಸಾದ ಸುರಗೀಮಠ, ಮಹಿಳಾ ಮೋರ್ಚಾ ಅಧ್ಯಕ್ಷೆ ಯಶೋಧಾ ಪಾಟೀಲ, ಬಿ.ಎಲ್.ಎ 1 ನವೀನ ಸವಣೂರು ಮತ್ತಿತರರಿದ್ದರು.



> **ನೀವು ಎಷ್ಟು ಸಕ್ರೀಯರಾಗಿ ಕೆಲಸ ಮಾಡುತ್ತೀರಿ ಅಷ್ಟು ಅನುಕೂಲ ಆಗುತ್ತದೆ. ಎಲ್ಲಿ ಅನ್ಯಾಯ ಆಗಿದೆ ಅದನ್ನು ಸರಿಪಡಿಸಿ, ಶುದ್ಧವಾದ ಮತದಾರರ ಪಟ್ಟಿ ಸಿದ್ಧವಾಗಲಿ, ಇದೊಂದು ಅವಕಾಶ ಸಿಕ್ಕಿದೆ. ಇನ್ನೊಬ್ಬರನ್ನು ನೋಡಬೇಡಿ ನ್ಯಾಯ ಸಮ್ಮತವಾಗಿ ಮತದಾರರಪಟ್ಟಿ ಸಿದ್ಧಪಡಿಸಿ ನಿಮ್ಮ ಕೆಲಸ ಮಾಡಿ, ನಾನೂ ಕೂಡ ಕೆಲವು ಗ್ರಾಪಂ ಭೇಟಿ ನೀಡುತ್ತೇನೆ, ಮುಂಬರುವ ಜಿಪಂ, ತಾಪಂ., ಚುನಾವಣೆಗಳಿಗೆ ಸನ್ನದ್ಧರಾಗಿ.**
> ■ ಬಸವರಾಜ ಬೊಮ್ಮಾಯಿ, ಸಂಸದ

ವಿವೇಕಾನಂದರು ಯುವಜನತೆಗೆ ಆದರ್ಶ: ಶ್ರೀಗಳು

ಹಾವೇರಿ: ಮನುಷ್ಯನ ಮೆದುಳು ಅಗಾಧ ಶಕ್ತಿಯ ಮೂಲ. ಸ್ವಾಮಿ ವಿವೇಕಾನಂದರ ತತ್ವಗಳನ್ನು ಅಳವಡಿಸಿಕೊಂಡು ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಸಾಮರ್ಥ್ಯವನ್ನು ಗುರುತಿಸಿದರೆ ಎಂತಹ ಸಾಧನೆಯನ್ನು ಬೇಕಾದರೂ ಮಾಡಬಹುದು ಎಂದು ಗದಗ-ವಿಜಯಪುರದ ರಾಮಕೃಷ್ಣಾಶ್ರಮದ ಸ್ವಾಮಿ ನಿರ್ಭಯಾನಂದ ಸರಸ್ವತಿ ಹೇಳಿದರು.

ಹಾವೇರಿ ವಿಶ್ವವಿದ್ಯಾಲಯದದಲ್ಲಿ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ ಹಾಗೂ ಸ್ವಾಮಿ ವಿವೇಕಾನಂದರ ಸಂದೇಶ ಕುರಿತು ಅವರು ಮಾತನಾಡಿ, ಯಶಸ್ಸು ಪಡೆಯಲು ಗುರಿ ಸ್ಪಷ್ಟವಾಗಿರಬೇಕು. ಕೇವಲ ಪದವಿ ಪಡೆಯುವುದು ಅಥವಾ ನೌಕರಿ ಹಿಡಿಯುವುದು ಗುರಿಯಾಗದೇ, ಬದಲಿಗೆ ಜ್ಞಾನವಂತನಾಗುವುದು ಪ್ರಾಥಮಿಕ ಗುರಿಯಾಗಬೇಕು.ಕುರಿಗಳಮಂದೆಯಲ್ಲಿಬೆಳೆದ ಸಿಂಹದ ಮರಿಯ ಕಥೆಯನ್ನು ಉಲ್ಲೇಖಿಸಿ, ನಾವು ನಮ್ಮನ್ನು ಕೀಳಾಗಿ ಕಾಣಬಾರದು. ನಮ್ಮಲ್ಲಿರುವ ಶಕ್ತಿಯನ್ನು ಅರಿತಾಗ ಮಾತ್ರ ಸಾಧನೆ ಸಾಧ್ಯ ಎಂದರು. ತುಮಕೂರಿನ ಸ್ವಾಮಿ ವೀರೇಶಾನಂದ ಸರಸ್ವತಿ ಮಾತನಾಡಿ, ಕೇವಲ ಪದವಿ ಪಡೆಯುವುದು ಶಿಕ್ಷಣವಲ್ಲ, ಬದಲಿಗೆ ಸದ್ಗುಣಗಳನ್ನು ಮೈಗೂಡಿಸಿಕೊಂಡು ಸಮಾಜಕ್ಕೆ ಒಳಿತನ್ನು ಮಾಡುವುದು ನಿಜವಾದ ವಿದ್ಯೆ. ಸ್ವಪ್ರಯತ್ನದಿಂದ ಏನನ್ನಾದರೂ ಸಾಧಿಸಬಹುದು. ವಿದ್ಯಾರ್ಥಿ ಯುವ ಸಮುದಾಯವು ತಮ್ಮ ಸಾಮರ್ಥ್ಯದಲ್ಲಿ ನಂಬಿಕೆ ಇರಿಸಿಕೊಳ್ಳಬೇಕು. ಸ್ವಶಕ್ತಿಯಲ್ಲಿ ನಂಬಿಕೆ ಇರಿಸಿಕೊಳ್ಳದವರನ್ನು ದೇವರೂ ಮೆಚ್ಚುವುದಿಲ್ಲ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕುಲಪತಿ ಡಾ.ಸುರೇಶ ಜಂಗಮಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳು ಶಿಸ್ತು, ಸಂಯಮ ಬೆಳೆಸಿಕೊಳ್ಳಬೇಕು. ಸ್ಪಷ್ಟವಾದ ಗುರಿಯನ್ನು ಹೊಂದುವ ಮೂಲಕ ಯಶಸ್ಸನ್ನು ಸಾಧಿಸಬೇಕು. ರಾಮಕೃಷ್ಣ ಪರಮಹಂಸರು ಯಾವುದೇ ಗ್ರಂಥಗಳನ್ನು ಬರೆಯದಿದ್ದರೂ, ತಮ್ಮ ಬದುಕನ್ನೇ ಒಂದು ಸಂದೇಶವಾಗಿ ರೂಪಿಸಿದ್ದರು. ಅವರ 'ತ್ರಿಕರಣ ಶುದ್ಧಿ' (ಆಲೋಚನೆ, ಮಾತು ಮತ್ತು ಕೃತಿಯಲ್ಲಿ ಏಕರೂಪತೆ) ಇಂದಿನ ಸಮಾಜಕ್ಕೆ ಅತ್ಯಗತ್ಯವಾಗಿದೆ ಎಂದು ಸ್ಮರಿಸಲಾಯಿತು. ವಿವೇಕಾನಂದರ ಜಾಗತಿಕ ಕೊಡುಗೆ ಭಾರತೀಯ ಸಂಸ್ಕೃತಿ ಮತ್ತು ಸನಾತನ ಧರ್ಮದ ಹಿರಿಮೆಯನ್ನು ಇಂಗ್ಲಿಷ್ ಭಾಷೆಯ ಮೂಲಕ ಜಗತ್ತಿಗೆ ಪರಿಚಯಿಸಿದ ವಿವೇಕಾನಂದರು, ಯುವಶಕ್ತಿಯನ್ನು ಜಾಗೃತಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದರು.

ರಾಣೇಬೆನ್ನೂರು ರಾಮಕೃಷ್ಣ ಆಶ್ರಮದ ಸ್ವಾಮಿ ಪ್ರಕಾಶಾನಂದಜಿ ಮಹಾರಾಜ, ಹಾವೇರಿ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವೆ ಡಾ.ರೇಣುಕಾ ಮೇಟಿ, ಕಾರ್ಯಕ್ರಮದ ಸಂಯೋಜಕ ಡಾ.ಸಂತೋಷ ಆಲದಕಟ್ಟಿ, ವಿಶ್ವವಿದ್ಯಾಲಯದ ಸಿಬ್ಬಂದಿ, ಉಪನ್ಯಾಸಕರು ಇದ್ದರು. ಹಜ್ಜುಮಾ ನದಾಫ್ ನಿರೂಪಿಸಿದರು. ವಿಜಯಕುಮಾರ ಕೇಲೂರ ವಂದಿಸಿದರು.



ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಿ: ಶಂಕರ್

ಹಾವೇರಿ : ಪ್ರಮಾಣದ ಶಿಕ್ಷಣಕ್ಕಿಂತ ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿ. ಇಂದು ಮೌಲ್ಯಯುತ ಶಿಕ್ಷಣದ ಅವಶ್ಯಕತೆ ಇದ್ದು, ಗಣಿತ ಕಲಿಕಾ ಆಂದೋಲನದ ಸಮಗ್ರ ಚಿತ್ರಣವನ್ನು ನೀಡಿ 5 ಭಾಗೀದಾರರ ಪಾತ್ರ ಬಹುಮುಖ್ಯ ಎಂದು ಅಕ್ಷರ ಫೌಂಡೇಶನ್‌ನ ಮುಖ್ಯ ಕಾರ್ಯಾಚರಣೆ ಅಧಿಕಾರಿ ಶಂಕರ್ ನಾರಾಯಣ ಹೇಳಿದರು.

ಕರ್ಜಗಿಯ ಡಯಟ್ ಸಭಾಂಗಣದಲ್ಲಿ ಶಿಕ್ಷಣ ಇಲಾಖೆ ಹಾಗೂ ಅಕ್ಷರ ಫೌಂಡೇಶನ್ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಗಣಿತ ವಿಚಾರ ಸಂಕಿರಣ, ಶಾಲಾಮಟ್ಟದ ಗಣಿತ ಸ್ಪರ್ಧೆಗಳ ಜಿಲ್ಲಾಮಟ್ಟದ ವರದಿ ಬಿಡುಗಡೆ ಹಾಗೂ ಸ್ಪರ್ಧೆಗಳಲ್ಲಿ ಉತ್ತಮ ಫಲಿತಾಂಶ ಸಾಧಿಸಿದ ಸಿ.ಆರ್.ಪಿಗಳ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, ಕಲಿಕಾ ಆಂದೋಲನ ಯೋಜನೆಯು ಸುಮಾರು ವರ್ಷಗಳಿಂದ ಸರ್ಕಾರಿ ಪ್ರಾಥಮಿಕ ಶಾಲಾಮಕ್ಕಳ ಗುಣಾತ್ಮಕ ಕಲಿಕೆಗಾಗಿ ಹಾಗೂ ಮಕ್ಕಳು ಗಣಿತ ವಿಷಯವನ್ನು ಸರಳವಾಗಿ, ಅನುಭವಾತ್ಮಕವಾಗಿ ಕಲಿಯಲು ಜಿಲ್ಲೆಯ ಪ್ರತಿ ಶಾಲೆಗಳಿಗೆ ಗಣಿತ ಕಿಟ್ ನೀಡುವುದರ ಮೂಲಕ ಅನುಷ್ಠಾನಗೊಂಡಿದೆ ಎಂದರು.

ಡಿಡಿಪಿಐ ಮೋಹನ ದಂಡಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಕ್ಕಳ ಸರ್ವಾಂಗೀಣ ಪ್ರಗತಿಗೆ ಎಲ್ಲರ ಜವಾಬ್ದಾರಿ ಮುಖ್ಯವಾಗಿದೆ. ಗಣಿತ ಕಲಿಕಾ ಆಂದೋಲನದ ಯೋಜನೆಗಳು ಉತ್ತಮವಾಗಿದೆ. ಒದಗಿಸಿದ ಗಣಿತ ಕಿಟ್‌ಗಳನ್ನು ತರಗತಿಗಳಲ್ಲಿ ಬಳಸಿಕೊಂಡು ಪಾಠ ಬೋಧನೆ ಮಾಡುವುದರಿಂದ ಮಕ್ಕಳಿಗೆ ಸಂತಸ ಕಲಿಕೆಗೆ ಸುಲಭವಾಗುತ್ತದೆ ಎಂದರು. ಶಿಕ್ಷಣ ಪ್ರೇಮಿ ನಿಜಲಿಂಗಪ್ಪ ಬಸೇಗಣ್ಣಿ,ಡಯಟ್ ಪ್ರಾಚಾರ್ಯ ಝುಡ್.ಎಂ. ಖಾಜಿ ಮಾತನಾಡಿದರು.

ಈ ವೇಳೆ ಅಕ್ಷರ ಫೌಂಡೇಶನ್ ಜಿಲ್ಲಾ ಸಂಯೋಜಕ ಹನಮಂತ ಮಸಾಲಿ, ಶಾಲಾಮಟ್ಟದ ಗಣಿತ ಸ್ಪರ್ಧೆಗಳ ಜಿಲ್ಲಾಮಟ್ಟದ ವರದಿ ವಿಶ್ಲೇಷಿಸಿದರು. ಹಾವೇರಿ ತಾಲೂಕಿನ ನೋಡಲ್ ಅಧಿಕಾರಿ ವಿಜಯಕುಮಾರ ಮತ್ತೂರ ಹಾಗೂ ಶಿಗ್ಗಾವಿ ನೋಡಲ್ ಅಧಿಕಾರಿ ಶ್ರೀನಿವಾಸ ತಲಾ 25 ಸಿಆರ್‌ಪಿಗಳಿಗೆ ಅಭಿನಂದಿಸಿದರು.

ಐ.ಎನ್. ತಿಮ್ಮನಗೌಡರ ಸ್ವಾಗತಿಸಿದರು. ಸವಿತಾ ಹಾದಿಮನಿ ನಿರೂಪಿಸಿದರು. ಚಂದ್ರಶೇಖರ ಕಾಗಿನೆಲೆ ವಂದಿಸಿದರು. ಈ ವೇಳೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಶಿಡೇನೂರ, ನಿರಂಜನ ಮೂರ್ತಿ, ಗಣಿತ ವಿಷಯ ಪರಿವೀಕ್ಷಕ ಬಿ.ಎಸ್. ಪಾಟೀಲ, ಡಯಟ್‌ನ ಲೋಕಪ್ಪ ಎಚ್. ಹಾಜರಿದ್ದರು.



ತಹಶೀಲ್ದಾರ್ ಎಸ್.ರೇಣುಕಾ ಅವರಿಗೆ ಸನ್ಮಾನ

ಹಾನಗಲ್ಲ: ಸಾರ್ವಜನಿಕ ಸೇವೆಯಲ್ಲಿ ಒತ್ತಡಗಳ ನಡುವೆ ಅಧಿಕಾರಿಗಳು ವೈಯಕ್ತಿಕ ಹಿತಾಸಕ್ತಿಗಳನ್ನು ಬದಿಗಿಟ್ಟು ಸೇವೆ ಸಲ್ಲಿಸುವುದು ಅನಿವಾರ್ಯವಾದರೂ, ಹಾನಗಲ್ಲ ತಾಲೂಕಿನಲ್ಲಿ ತಹಶೀಲ್ದಾರರಾಗಿ ಸೇವೆ ಸಲ್ಲಿಸುತ್ತಿರುವ ಅವಧಿ ನನಗೆ ಸಂಪೂರ್ಣ ಸಂತೃಪ್ತಿದಾಯಕವಾಗಿದೆ ಎಂದು ತಹಶೀಲ್ದಾರ್ ಎಸ್.ರೇಣುಕಾ ತಿಳಿಸಿದರು.

ಹಾನಗಲ್ಲಿನ ಗುರುಭವನದಲ್ಲಿ ತಾಲೂಕಿನ ಪ್ರಗತಿಪರ ಸಂಘಟನೆ, ಉತ್ತರ ಕರ್ನಾಟಕ ಹೋರಾಟ ಸಮಿತಿ, ರೋಶನಿ ಸೇವಾ ಸಂಸ್ಥೆ, ಕರ್ನಾಟಕ ರಕ್ಷಣಾ ವೇದಿಕೆ, ಕರ್ನಾಟಕ ರಾಜ್ಯ ರೈತ ಸಂಘ, ರಾಷ್ಟ್ರೀಯ ಅಹಿಂದ ಸಂಘಟನೆ, ಕನ್ನಡ ಜಾಗೃತಿ ವೇದಿಕೆ, ಕದಳಿ ಮಹಿಳಾ ವೇದಿಕೆ, ಲೋಯಲಾ ವಿಕಾಸ ಕೇಂದ್ರ, ರೋಶನಿ ಸಮಾಜ ಸೇವಾ ಸಂಸ್ಥೆ, ಭಾರತೀಯ ಕೃಷಿ ಕಾರ್ಮಿಕರ ಸಂಘ, ಅಖಂಡ ಕರ್ನಾಟಕ ರೈತ ಸಂಘ ಸೇರಿದಂತೆ ವಿವಿಧ ಸಂಘಟನೆಗಳು ಹಕ್ಕುಪತ್ರ ವಿತರಣೆಯಲ್ಲಿ ದಾಖಲೆಯ ಸೇವೆ ಹಾಗೂ 49 ಲಕ್ಷ ಕಂದಾಯ ದಾಖಲೆಗಳನ್ನು ಡಿಜಟಲೀಕರಗೊಳಿಸಿ ಸಾಧನೆಗೈದ ಪ್ರಯುಕ್ತ ಅಭಿನಂದನಾ ಸಮಾರಂಭದಲ್ಲಿ ಗೌರವ ಸನ್ಮಾನ ಸ್ವೀಕರಿಸಿ ಮಾತನಾಡಿದರು. ರೋಶನಿ ಸಮಾಜ ಸೇವಾ ಸಂಸ್ಥೆ ನಿರ್ದೇಶಕಿ ಅನಿತಾ ಡಿಸೋಜಾ,ಸಾಹಿತಿ ಪ್ರೊ.ಮಾರುತಿ ಶಿಡ್ಲಾಪೂರ ಮಾತನಾಡಿದರು.

ವರದಾ ಬೇಡ್ತಿ ಹೋರಾಟ ಸಮಿತಿ ಅಧ್ಯಕ್ಷ ಎಸ್.ಎಂ.ಕೋತಂಬರಿ ಪ್ರಾಸ್ತಾವಿಕವಾಗಿ ಮಾತನಾಡಿದರು.



ಫೈರೋಜ ಶಿರಬಡಗಿ ಸನ್ಮಾನ ಪತ್ರ ಓದಿದರು. ಎಸ್.ಎಂ.ಕೋತಂಬರಿ ಆಶಯ ನುಡಿ ನುಡಿದರು. ಶಿರಬಡಗಿ, ಪುರಸಭೆ ಮುಖ್ಯಾಧಿಕಾರಿ ವಾಯ್.ಕೆ.ಜಗದೀಶ, ಗ್ರೇಡ್-2 ತಹಶೀಲ್ದಾರ ವಿಠಲ್ ಚೌಗುಲಾ, ಮಹೇಶ ಪವಾಡ, ರೈತ ಸಂಘದ ಜಿಲ್ಲಾಧ್ಯಕ್ಷ ಭುವನೇಶ್ವರ ಶಿಡ್ಲಾಪುರ, ತಾಲೂಕು ಅಧ್ಯಕ್ಷ ಮಲ್ಲನಗೌಡ ಪಾಟೀಲ, ಪ್ರೇಮಾ ಮುದಿಗೌಡರ, ಅಡಿವೆಪ್ಪ ಆಲದಕಟ್ಟಿ, ಉಮೇಶ ಮುದಿಗೌಡರ್, ಶಿವಗಂಗಕ್ಕ ಪಟ್ಟಣದ, ರೇಖಾ ಶೆಟ್ಟರ, ವಿಜಯಲಕ್ಷ್ಮೀ ಕೋತಂಬರಿ, ಲಿಂಗರಾಜ ಬಣಕಾರ, ರವಿ ಪುರೋಹಿತ, ಸಿದ್ದು ಗೌರಣ್ಣನವರ ಇದ್ದರು.

ಗುರುಶಾಂತಪ್ಪ ಜಾಬಿನ್‌ರ ಜನ್ಮಶತಮಾನೋತ್ಸವ

ಹಾವೇರಿ: ಸ್ವಾತಂತ್ರ್ಯ ಹೋರಾಟಗಾರರ ಕುರಿತ ಅಧ್ಯಯನ ಪೀಠ ಆರಂಭಿಸಲು ಅವಕಾಶವಿದ್ದು, ಆಸಕ್ತ ದಾನಿಗಳು ನಮ್ಮನ್ನು ಸಂಪರ್ಕಿಸಬಹುದು ಎಂದು ಹಾವೇರಿ ವಿಶ್ವವಿದ್ಯಾಲಯದ ಕುಲಪತಿ ಡಾ.ಸುರೇಶ ಜಂಗಮಶೆಟ್ಟಿ ಹೇಳಿದರು.

ನಗರದ ಗಂಗಾಧರ ನಂದಿ ಸಾಹಿತ್ಯ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಹಾಗೂ ತಾಲೂಕು ಘಟಕ ಮತ್ತು ಅರಳಿಕಟ್ಟಿ ಪ್ರಕಾಶನ ಆಶ್ರಯದಲ್ಲಿ ಜರುಗಿದ ಸ್ವಾತಂತ್ರ್ಯ ಹೋರಾಟಗಾರ ಗುರುಶಾಂತಪ್ಪ ಜಾಬಿನ್ ಅವರ ಜನ್ಮಶತಮಾನೋತ್ಸವ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ದಾರ್ಶನಿಕರ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದವರ ಕುರಿತು ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಪೀಠ ಆರಂಭಿಸಲು ಅವಕಾಶವಿದೆ. ಮೂಲಸೌಕರ್ಯಗಳು, ಸಿಬ್ಬಂದಿ ವೇತನ ಸೇರಿದಂತೆ ಇನ್ನಿತರ ಖರ್ಚುಗಳಿಗೆ ಸರ್ಕಾರದ ಅನುದಾನ ಬಳಸಬಹುದು. ಜೊತೆಗೆ ದಾನಿಗಳು ಆರ್ಥಿಕವಾಗಿ ಸಹಕಾರ ನೀಡಿದರೆ ಅಧ್ಯಯನ ಪೀಠವನ್ನು ತುರ್ತಾಗಿ ಶುರು ಮಾಡಲು ಅವಕಾಶವಿದೆ ಎಂದರು.

ದತ್ತಿ ಉಪನ್ಯಾಸ ನೀಡಿದ ಪ್ರೊ.ಪಿ.ಸಿ. ಹಿರೇಮಠ, ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಲಿಂಗಯ್ಯ ಹಿರೇಮಠ ಮಾತನಾಡಿದರು.



ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ, ಹೊಸಮಠ ಹಾವೇರಿ ಬಸವ ಶಾಂತಲಿಂಗ ಸ್ವಾಮೀಜಿ, ಎಸ್.ಎನ್. ದೊಡ್ಡಗೌಡ್ರ, ಮಲ್ಲಿಕಾರ್ಜುನ ಸಾತೇನಹಳ್ಳಿ, ಶಿವಬಸಪ್ಪ ಜಾಬಿನ, ಜಗದೀಶ ಮಹಾರಾಜಪೇಟ, ವಿವೇಕಾನಂದ ಅಂಗಡಿ, ರುದ್ರಮುನಿ ಹುಲ್ಲನಿ, ಪರಮೇಶಪ್ಪ ಮೈಲಾರ, ಅನಸೂಯಾ ಮೆಳ್ಳಳ್ಳಿ, ಈರಣ್ಣ ಬೆಳವಡಿ, ಎಸ್.ಎಂ. ಬಡಿಗೇರ, ಎಸ್.ಆರ್. ಹಿರೇಮಠ ಉಪಸ್ಥಿತರಿದ್ದರು. ಪೃಥ್ವಿರಾಜ್ ಬೆಟಗೇರಿ ನಿರೂಪಿಸಿದರು. ಗೂಳಪ್ಪ ಅರಳಿಕಟ್ಟಿ ಸ್ವಾಗತಿಸಿದರು. ಸಿದ್ದೇಶ್ವರ ಹುಣಸಿಕಟ್ಟಿಮಠ ವಂದಿಸಿದರು.

ಸಂಘಟನೆ ಬಲಿಷ್ಠವಾದರೆ ಮಾತ್ರ ರೈತರು ಸದೃಢ: ಕಾಡನಗೌಡ್ರ

ಬ್ಯಾಡಗಿ: ರೈತರು ಸಾಕಷ್ಟು ಸಮಸ್ಯೆಗಳ ಸರಮಾಲೆಯಲ್ಲಿದ್ದಾರೆ ಸರ್ಕಾರಗಳು ಆಶ್ವಾಸನೆ ಮಾತ್ರ ನೀಡುತ್ತಿವೆ. ಹೀಗಾಗಿ ಕೃಷಿಕರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡಲು ರೈತರು ಗ್ರಾಮ ಘಟಕದ ಅಗತ್ಯವಿದೆ ಎಂದು ತಾಲೂಕು ಅಧ್ಯಕ್ಷ ರುದ್ರಗೌಡ ಕಾಡನಗೌಡ್ರ ಹೇಳಿದರು.

ತಾಲೂಕಿನ ಕಲ್ಲೇದೇವರು ಸೇವಾಲಾಲ್ ತಾಂಡಾದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆಯ ನಂಜುಂಡಸ್ವಾಮಿ ಬಣದ ನೂತನ ಗ್ರಾಮ ಘಟಕ ಉದ್ಘಾಟನೆ ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, 80ರ ದಶಕದ ರೈತರ ಕಣ್ಮಣಿ ರೈತರ ಸಂಘಟನೆಗೆ ಕಾರಣವಾದ ಪ್ರೊ.ನಂಜುಂಡಸ್ವಾಮಿ ಅವರನ್ನು ನಾವು ಈ ದಿನ ಸ್ಮರಿಸಲೇಬೇಕು. ಸಂಘಟನೆ ಇಲ್ಲದಿದ್ದ ರೈತರಿಗೆ ಬಲ ಬರುವುದಿಲ್ಲ. ಸಂಘಟನೆ ಬಲಿಷ್ಠವಾದರೆ ರೈತರು ಸದೃಢರಾಗುತ್ತಾರೆ. ನಾವು ನಂಜುಂಡಸ್ವಾಮಿ ಮಾರ್ಗದರ್ಶನದಲ್ಲಿ ಮುನ್ನಡೆಯಬೇಕು. ರೈತರು ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳಲು ಸರ್ಕಾರಿ ಕಛೇರಿಗಳಿಗೆ ಅಲೆದಾಡುವುದಕ್ಕಿಂತ ತಮ್ಮ ಸಂಘಟನೆ ಮೂಲಕ ಕೆಲಸಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಿಕೊಳ್ಳಬಹುದು ಎಂದು ಹೇಳಿದರು.

ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಮಲ್ಲಿಕಾರ್ಜುನ್ ಬಳ್ಳಾರಿ ಮಾತನಾಡಿ ಭಾರತದಲ್ಲಿ ಅತ್ಯಂತ ಗಂಭೀರ ಪರಿಸ್ಥಿತಿ ಎದುರಿಸುತ್ತಿರುವವರು ರೈತರು ಪ್ರತಿ ರೈತನ ತಲೆ ಮೇಲೆ ಲಕ್ಷಾಂತರ ರೂಪಾಯಿ ಸಾಲ ಇದೆ. ರೈತ ಬೆಳೆದ ಬೆಳೆ ಪ್ರಕೃತಿಯ ಮುನಿಸಿಗೆ ನಾಶವಾಗಿ ಆ ಸಾಲ ತೀರಸಲಾಗದೇ ಆತ್ಮಹತ್ಯ ಮಾಡಿಕೊಳ್ಳುತ್ತಾನೆ ಎಂದರು.

ಸೇವಾನಗರ ಗ್ರಾಮ ಘಟಕದ ಅಧ್ಯಕ್ಷ ಕಲ್ಲಪ್ಪ ಲಮಾಣಿ ಕಾರ್ಯಕ್ರಮದ ಮುಖ್ಯ ಅತಿಥಿ ಗಂಗಣ್ಣ ಎಲಿ, ಚಿಕ್ಕಪ್ಪ ಚತ್ರದ, ಮೌನೇಶ್ ಕಮ್ಮಾರ, ಕೆ.ವಿ.ದೊಡ್ಡಗೌಡ್, ಜಾನ್ ಪುನೀತ್ ಶಂಕರ್ ಮರಗಾಲ, ಹನುಮಂತಪ್ಪ ಕೆಂಗೊಂಡ, ಮಲ್ಲಪ್ಪ ಲಮಾಣಿ. ಪರಮೇಶ್ ನಾಯಕ್. ಹಾಗೂ ಸೇವಾನಗರ ಗ್ರಾಮ ಘಟಕದ ನೂತನ ಪದಾಧಿಕಾರಿಗಳಾಗಿ ಗೌರವಾಧ್ಯಕ್ಷರು ಶಂಕ್ರಪ್ಪ ಲಮಾಣಿ ಖಜಾಂಚಿ ಪರಮೇಶ್ ಪಿ ನಾಯಕ್ ಕಾರ್ಯಾಧ್ಯಕ್ಷರು ಪ್ರಕಾಶ್ ಲಮಾಣಿ ಕಾರ್ಯದರ್ಶಿ ಈಶ್ವರ್ ನಾ ಲಮಾಣಿ ಹಾಗೂ ಮತ್ತು ಸೇವಾ ನಗರ ರೈತ ಸಂಘದ ಸದಸ್ಯರು ಹಾಗೂ ಪ್ರಗತಿಪರ ರೈತರು ಉಪಸ್ಥಿತರಿದ್ದರು.



> **ಕೇಂದ್ರ ಸರ್ಕಾರ ರೈತರು ಬೆಳೆದ ಬೆಳೆ ಬಂದಾಗ ಬೆಂಬಲ ಬೆಲೆ ಘೋಷಿಸುವುದಿಲ್ಲ, ಅದರ ಅವಧಿ ಮುಗಿದ ಮೇಲೆ ಬೆಂಬಲ ಬೆಲೆ ಘೋಷಿಸುತ್ತದೆ. ಅಷ್ಟರಲ್ಲಿ ಮಧ್ಯವರ್ತಿಗಳು ತಾವೇ ನಿಗದಿಗೊಳಿಸಿದ ಬೆಲೆಗೆ ರೈತರ ಮಾಲು ಖರೀದಿ ಮಾಡುತ್ತಾರೆ. ಅನಿವಾರ್ಯವಾಗಿ ರೈತ ಕೊಟ್ಟು ಮತ್ತೆ ಸಾಲದ ಸುಳಿಯಲ್ಲಿ ಸಿಲುಕುತ್ತಾನೆ.**
> ■ ಮಲ್ಲಿಕಾರ್ಜುನ್ ಬಳ್ಳಾರಿ, ರೈತ ಸಂಘದ ಜಿಲ್ಲಾ ಕಾರ್ಯದರ್ಶಿ

ಶಿವಾನಂದ ಶಿವಾಚಾರ್ಯ ಶ್ರೀಗಳ ಜಯಂತ್ಯುತ್ಸವ

ಗುತ್ತಲ: ನೆಗಳೂರ ಸಂಸ್ಥಾನ ಹಿರೇಮಠದ ಪೂರ್ವದ 36 ಪಟ್ಟಾಧ್ಯಕ್ಷರ ಸ್ಮರಣೆಯಲ್ಲಿ 36 ಅಡಿ ಎತ್ತರದ ನೂತನ ರಥದ ಲೋಕಾರ್ಪಣೆ, ಶಿವಾನಂದ ಶಿವಾಚಾರ್ಯ ಶ್ರೀಗಳ 87ನೇ ಜಯಂತ್ಯೋತ್ಸವ ಹಾಗೂ ಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವಕ್ಕೆ ನಡೆಯಲಿದೆ ಎಂದು ನೆಗಳೂರ ಸಂಸ್ಥಾನ ಹಿರೇಮಠದ ಪೀಠಾಧಿಪತಿ ಶ್ರೀ ಗುರುಶಾಂತೇಶ್ವರ ಶಿವಾಚಾರ್ಯ ಶ್ರೀಗಳು ಹೇಳಿದರು.



ಗುತ್ತಲ ಸಮೀಪದ ನೆಗಳೂರ ಸಂಸ್ಥಾನ ಹಿರೇಮಠದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.16ರ ಸಂಜೆ 7ಕ್ಕೆ ಪ್ರೇರಣಾ ಕಾರ್ಯಕ್ರಮ ಜರುಗಲಿದೆ. ಮಾ.17ರ ಸಂಜೆ 7ಕ್ಕೆ ಶ್ರೀಮಠದ ಶ್ರೀಗಳಿಂದ ಲಿಂಗದೀಕ್ಷೆ ಪಡೆದವರ ಲಿಂಗ ದೀಕ್ಷಾರ್ಥಿಗಳ ಸಂಗಮ ಕಾರ್ಯಕ್ರಮ ಜರಗುವುದು. ಮಾ.18ರ ಸಂಜೆ 7ಕ್ಕೆ ಹರಕೆ ಪಲ್ಲಕ್ಕಿ ಉತ್ಸವ ಜರಗುವುದು. ಮಾ.19 ರಂದು ಸಾಂಸ್ಕೃತಿಕೋತ್ಸವ-ಹೊಸ ವರ್ಷಾಚರಣೆ ಕಾರ್ಯಕ್ರಮ ಜರುಗಲಿದೆ. ಮಾ.20ರ ಸಂಜೆ 7ಕ್ಕೆ ಯುವಜನೋತ್ಸವ ಅಂಕಣಕಾರ ಹಾಗೂ ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ವಿಶೇಷ ಭಾಷಣ ಮಾಡಲಿದ್ದಾರೆ.

ಮಾ.21ರ ಸಂಜೆ 4ಕ್ಕೆ ಚಿಕ್ಕ ರಥೋತ್ಸವ ನೆಗಳೂರ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿವಿಧ ವಾದ್ಯಗಳೊಂದಿಗೆ ಸಾಗುವುದು. ನಂತರ ಸಂಜೆ 7ಕ್ಕೆ ಧರ್ಮ ಸಮಾರಂಭ ಜರುಗಲಿದೆ. ಸಂಸದ ಹಾಗೂ ಮಾಜಿ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಬಿ.ಸಿ ಪಾಟೀಲ, ಜಿಲ್ಲಾಧಿಕಾರಿ ವಿಜಯಮಹಾಂತಶ ದಾನಮ್ಮನವರ ಸೇರಿದಂತೆ ಇತರರು ಉಪಸ್ಥಿತರಿರುವರು.

ಮಾ. 22ರ ಮಧ್ಯಾಹ್ನ 2ಕ್ಕೆ ಶ್ರೀಜಗದ್ಗುರ ಪಂಚಾಚಾರ್ಯರ ಪುರಪ್ರವೇಶ ಹಾಗೂ ಅಡ್ಡಪಲ್ಲಕ್ಕೆ ಮಹೋತ್ಸವ ಸಂಜೆ 4ಕ್ಕೆ ಸಾಂಕೇತಿಕ ಧರ್ಮ ಸಂದೇಶ ನಂತರ ಸಂಜೆ 5ಕ್ಕೆ ಶ್ರೀಮಠ ಶ್ರೀಗುರುಶಾಂತೇಶ್ವರ ಶಿವಯೋಗಿಗಳವರ ನೂತನ ಮಹಾ ರಥೋತ್ಸವದ ಲೋಕಾರ್ಪಣೆ ಜರುಗುವುದು.

ಮಾರ್ಚ 23ರ ಬೆಳಿಗ್ಗೆ 11ಕ್ಕೆ ಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವ ಹಾಗೂ ವೀರಶೈವ ಪಂಚಸೂತ್ರ ಪ್ರವಚನ ಗ್ರಂಥದ ಲೋಕಾರ್ಪಣೆ ಜರುಗುವುದು.

ಕಾರ್ಯಕ್ರಮವನ್ನು ವಿಧಾನ ಸಭೆಯ ಉಪಾಧ್ಯಕ್ಷರಾದ ರುದ್ರಪ್ಪ ಲಮಾಣಿ ಉದ್ಘಾಟಿಸುವರು.

ಮುಖ್ಯ ಅಥಿತಿಗಳಾಗಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ್, ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಶಾಸಕರಾದ ಬಸವರಾಜ ಶಿವಣ್ಣನವರ, ಶ್ರೀನಿವಾಸ ಮಾನೆ, ಯು.ಬಿ ಬಣಕಾರ, ಪ್ರಕಾಶ ಕೋಳಿವಾಡ, ಮಾಜಿ ಶಾಸಕ ನೆಹರೂ ಓಲೇಕಾರ, ಹೆಸ್ಕಾಂನ ಅಧ್ಯಕ್ಷ ಸೈಯದ ಅಜ್ಜಂಫೀರ್ ಖಾದ್ರಿ, ಕಾಂಗ್ರೆಸ್ ಮುಖಂಡ ಆನಂದ ಗಡ್ಡದೇವರಮಠ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನೀರಲಗಿ ಉಪಸ್ಥಿತರಿರುವರು.

ಕಿರುಸುದ್ದಿ

ದೇವಗಿರಿ ಯಾದವ ರಾಜರ ಪಟ್ಟದ ಆನೆ ಉಬ್ಬು ಶಿಲ್ಪ ಪತ್ತೆ

ವಿಜಯಪುರ: ವಿಜಯಾಪುರದ ರಾಜ್ಯಧಾನಿ ಕೋಟೆಯಲ್ಲಿ ದೇವಗಿರಿ ಯಾದವ ರಾಜ್ಯ ಮನೆತನದ ಪಟ್ಟದ ಆನೆಯ ಉಬ್ಬು ಶಿಲ್ಪ ಪತ್ತೆಯಾಗಿದ್ದು, ರಾಷ್ಟ್ರೀಯ ಸಂಶೋಧನಾ ವೇದಿಕೆ ಹಮ್ಮಿಕೊಂಡ ಕ್ಷೇತ್ರ ಕಾರ್ಯದಲ್ಲಿ ಉಬ್ಬು ಶಿಲ್ಪವನ್ನು ಸಂಶೋಧಿಸಲಾಗಿದೆ.



ಇದೇ ಮೊದಲ ಬಾರಿಗೆ ಇಂತಹ ಅಪರೂಪದ ಶಿಲ್ಪ ಪತ್ತೆಯಾಗಿದ್ದು, ಇದನ್ನು ಇತಿಹಾಸ ಸಂಶೋಧಕ ಹಾಗೂ ರಾಷ್ಟ್ರೀಯ ಸಂಶೋಧನಾ ವೇದಿಕೆಯ ಅಧ್ಯಕ್ಷ ಲಾಯಪ್ಪ ಇಂಗಳೆ ಗುರುತಿಸಿದ್ದಾರೆ.ಪಟ್ಟದ ಆನೆಗೆ ರಾಜ್ಯ ಪರಂಪರೆಯಲ್ಲಿ ವಿಶೇಷ ಸ್ಥಾನ ಇದ್ದು, ದೇವಗಿರಿ ಯಾದವರ ಕಾಲಕ್ಕೆ ಸೇರಿದ ಕೋಟೆಯಲ್ಲಿ ಕೆತ್ತಲಾದ ಆನೆಯ ಉಬ್ಬು ಶಿಲ್ಪದ ಬೆನ್ನಿನ ಮೇಲೆ ರಾಜರು ಕೂರಲು ಅಂಬಾರಿ ಇಡುವ ಮೊದಲು ಹೊದಿಸುವ ಥಡಿ ಇರುವುದಕ್ಕೆ ಪಟ್ಟದ ಆನೆ ಎಂದು ಗುರುತಿಸಲಾಗಿದೆ. ವಿಜಯಪುರದಲ್ಲಿ ದೊರೆತ ಚಾಲುಕ್ಯರ ಮತ್ತು ದೇವಗಿರಿ ಯಾದವರ ಶಾಸನಗಳಲ್ಲಿ ರಾಯರಾಜ್ಯಧಾನಿ ವಿಜಯಾಪುರ ಎಂದು ಕರೆದಿರುವುದಕ್ಕೆ ಆನೆಯ ಉಬ್ಬು ಶಿಲ್ಪವು ಸಾಕ್ಷಿಯಾಗಿದೆ ಎಂದು ಇತಿಹಾಸಕಾರ ಇಂಗಳೆ ತಿಳಿಸಿದ್ದಾರೆ. ಕ್ಷೇತ್ರಕಾರ್ಯದಲ್ಲಿ ರಾಷ್ಟ್ರೀಯ ಸಂಶೋಧನಾ ವೇದಿಕೆಯ ಪ್ರಮುಖರಾದ ಸುಪ್ರೀತ ಅಲದಿದೇಸಾಯಿ, ವಿಶ್ವನಾಥ ಅಗಸರ ಇದ್ದರು.

ಮಲಪ್ರಭಾ ಕಾಮಗಾರಿಯಲ್ಲಿ ಭ್ರಷ್ಟಾಚಾರ: ಸೊಬರದಮಠ

ಧಾರವಾಡ: ಮಲಪ್ರಭಾ ಬಲದಂಡೆ ಹಾಗೂ ಎಡದಂಡೆ ಪುನರ್ ಅಭಿವೃದ್ಧಿ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿದ್ದು, ತನಿಖೆಗೆ ಆಗ್ರಹಿಸಿ ಉಚ್ಚ ನ್ಯಾಯಾಲಯಕ್ಕೆ ರಿಟ್ ಪಿಟಿಷನ್ ಸಲ್ಲಿಸುವುದಾಗಿ ರೈತ ಸೇನಾ ಕರ್ನಾಟಕ ಅಧ್ಯಕ್ಷ ವೀರೇಶ ಸೊಬರದಮಠ ಸ್ವಾಮೀಜಿ ತಿಳಿಸಿದರು.ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಮಗಾರಿಯ ಉದ್ದೇಶ ಕಟ್ಟ ಕಡೆಯ ರೈತರ ಜಮೀನಿಗೂ ನೀರು ಒದಗಿಸುವುದಾಗಿತ್ತು. ಆದರೆ, ರೈತರಿಗೆ ಸಮರ್ಪಕವಾಗಿ ನೀರು ಲಭಿಸುತ್ತಿಲ್ಲ, ಗುತ್ತಿಗೆದಾರ ಸರಿಯಾಗಿ ಕಾಮಗಾರಿ ಮಾಡಿಲ್ಲ ಎಂದು ಆರೋಪಿಸಿದರು.ಕಾಮಗಾರಿ ಅವೈಜ್ಞಾನಿಕ ಮತ್ತು ಕಳಪೆಯಾಗಿದ್ದು, ಭ್ರಷ್ಟಾಚಾರ ಸ್ಪಷ್ಟವಾಗಿ ಗೋಚರಿಸುತ್ತಿದೆ. ರೈತರ ಜಮೀನುಗಳಿಗೆ ಹೋಗಲು ಸರಿಯಾದ ಸರ್ವೀಸ್ ರಸ್ತೆಗಳಿಲ್ಲ. ಈ ಕುರಿತು ಹಲವು ಬಾರಿ ಮನವಿ ನೀಡಿದರೂ ಅಧಿಕಾರಿಗಳಿಂದ ಸಕಾರಾತ್ಮಕ ಸ್ಪಂದಿಸಿಲ್ಲ. ಅವ್ಯವಹಾರ ಕುರಿತು ನ್ಯಾಯಾಲಯಕ್ಕೆ ರಿಟ್ ಪಿಟಿಷನ್ ಸಲ್ಲಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಮಲ್ಲಣ್ಣ ಆಲೇಕಾರ, ಶಿವು ಬಡಿಗೇರ, ಜಿ.ಟಿ. ಬಡಿಗೇರ, ಮುತ್ತು ಪಾಟೀಲ ಇದ್ದರು.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿಯರಿಬ್ಬರು ನಾಪತ್ತೆ

ಕಲಬುರಗಿ: ನಗರದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಹಿನ್ನೆಲೆ ಇಬ್ಬರು ವಿದ್ಯಾರ್ಥಿನಿಯರು ಪ್ರತ್ಯೇಕ ಘಟನೆಗಳಲ್ಲಿ ನಾಪತ್ತೆಯಾಗಿರುವುದು ಪೋಷಕರಲ್ಲಿ ಆತಂಕ ಮೂಡಿಸಿದೆ. ಈ ಸಂಬಂಧ ನಗರದ ಎರಡು ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ.

ನಗರದ ಸಂತೋಷ ಕಾಲೋನಿ ನಿವಾಸಿಯಾದ ವಿದ್ಯಾರ್ಥಿನಿ ಹಾಲ್ ಟಿಕೆಟ್ ಪಡೆದುಕೊಳ್ಳಲು ಹೋಗುವುದಾಗಿ ಮನೆಯಿಂದ ಹೊರಟಿದ್ದಳು. ಆದರೆ, ಬಳಿಕ ಮನೆಗೆ ಮರಳದೇ ಇರುವುದರಿಂದ ಕುಟುಂಬಸ್ಥರು ಹುಡುಕಾಟ ನಡೆಸಿದರೂ ಸುಳಿವು ಸಿಗಲಿಲ್ಲ. ಈ ಹಿನ್ನೆಲೆಯಲ್ಲಿ ರಾಘವೇಂದ್ರ ನಗರ ಪೊಲೀಸ್ ಠಾಣೆಯಲ್ಲಿ ಅಪಹರಣ ಶಂಕೆ ವ್ಯಕ್ತಪಡಿಸಿ ದೂರು ದಾಖಲಿಸಲಾಗಿದೆ.

ಇನ್ನೊಂದು ಪ್ರಕರಣದಲ್ಲಿ ಸ್ಟೇಷನ್ ಬಝಾರ್ ಪ್ರದೇಶದ ವಿದ್ಯಾರ್ಥಿನಿ ರಾತ್ರಿ ವೇಳೆ ಮನೆಯಿಂದ ಕಾಣೆಯಾಗಿರುವುದಾಗಿ ಪೋಷಕರು ತಿಳಿಸಿದ್ದಾರೆ. ಬೆಳಗ್ಗೆ ಹುಡುಕಾಟ ನಡೆಸಿದರೂ ಮಾಹಿತಿ ಸಿಗದ ಕಾರಣ ಸ್ಟೇಷನ್ ಬಝಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಎರಡೂ ಪ್ರಕರಣಗಳಲ್ಲಿ ಪೊಲೀಸರು ತನಿಖೆ ಆರಂಭಿಸಿದ್ದು, ನಾಪತ್ತೆಯಾದ ವಿದ್ಯಾರ್ಥಿನಿಯರ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ಹಿಂದು ಸಮಾಜೋತ್ಸವ | ಆರೆಸ್ಸೆಸ್ ಜೇಷ್ಠ ಪ್ರಚಾರಕ ಸು.ರಾಮಣ್ಣ ಸಲಹೆ

ಸಶಕ್ತ ಭಾರತ ನಿರ್ಮಾಣಕ್ಕೆ ಕೈಜೋಡಿಸಿ

ಧಾರವಾಡ: ಹಿಂದೂ ಸಮಾಜವು ಭೇದಭಾವ ಮರೆತು ಒಗ್ಗೂಡುವುದರ ಮೂಲಕ ಸಶಕ್ತ ಭಾರತ ನಿರ್ಮಾಣಕ್ಕೆ ಕೈಜೋಡಿಸಲು ರಾಷ್ಟ್ರೀಯ ಸ್ವಯಂಸೇವಕ ಸಂಘದ ಜೇಷ್ಠ ಪ್ರಚಾರಕ ಸು.ರಾಮಣ್ಣ ಹಿಂದು ಸಮಾಜಕ್ಕೆ ಸಲಹೆ ನೀಡಿದರು.

ವಿದ್ಯಾಗಿರಿ ಉಪನಗರ ಹಿಂದು ಸಮಿತಿ ಸ್ಥಳೀಯ ಗಾಂಧಿನಗರದ ಮೈದಾನದಲ್ಲಿ ಭಾನುವಾರ ಹಮ್ಮಿಕೊಂಡ ಹಿಂದು ಶಕ್ತಿ ಸಮಾಜೋತ್ಸವದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ಹಿಂದು ಸಮಾಜ ಒಗ್ಗೂಡಿದರೆ ಮಾತ್ರ ದೇಶ ಸುಭದ್ರ ಎಂದು ಎಚ್ಚರಿಸಿದರು.

ಜಾತಿ-ಉಪಜಾತಿಗಳ ಹೆಸರಿನಲ್ಲಿ ಸಮಾಜ ವಿಭಜಿಸುವ ಶಕ್ತಿಗಳ ಬಗ್ಗೆ ಜಾಗೃತಿ ವಹಿಸಬೇಕು. ಸಮಾಜದ ಪರಿವರ್ತನೆ ನಮ್ಮ ಮನೆಯಿಂದ ಆರಂಭವಾಗಬೇಕು. ಮಕ್ಕಳಿಗೆ ಬಾಲ್ಯದಲ್ಲಿ ದೇಶಭಕ್ತಿ, ಧರ್ಮದ ಶ್ರೇಷ್ಠತೆ ಬಗ್ಗೆ ತಿಳುವಳಿಕೆ ನೀಡುವಂತೆ ಹೇಳಿದರು.

ದೇಶದಲ್ಲಿ ಭಾರತ ಮಾತಾಕಿ ಜೈ, ವಂದೇ ಮಾತರಂ ಹೇಳದ ಮಾತಂಥರಿದ್ದು, ಹಿಂದುತ್ವ ಪ್ರಕಾಶಮಾನವಾಗಿ ಬೆಳಗಲು, ದೇಶದ ಭವಿಷ್ಯ ಉಜ್ವಲಗೊಳ್ಳಲು ಮುಸ್ಲಿಂರು, ಕ್ರೈಸ್ತರು, ಕಮ್ಯುನಿಷ್ಟರು ನಮ್ಮೊಂದಿಗೆ ಹೊಂದಿಕೊಳ್ಳಬೇಕು ಎಂದು ಹೇಳಿದರು.

ಭಾರತವು ಕೇವಲ ಒಂದು ಭೂ ಭಾಗವಲ್ಲ, ಅದೊಂದು ಜೀವಂತ ಸಂಸ್ಕೃತಿ. ಈ ಸಂಸ್ಕೃತಿ ಉಳಿಸಿ, ಬೆಳೆಸುವುದು ಪ್ರತಿಯೊಬ್ಬ ಹಿಂದುವಿನ ಪರಮ ಧರ್ಮವಾಗಿದೆ. ನಮ್ಮ ಸಂಸ್ಕೃತಿಯ ಮೇಲೆ ನಡೆಯುವ ಆಕ್ರಮಣದ ಕುರಿತು ಎಚ್ಚರಿಕೆ ವಹಿಸಲು ತಿಳಿಸಿದರು. ನಮಗೆ ದೇಶವೇ ಮೊದಲ ಆದ್ಯತೆಯಾಗಬೇಕು. ವ್ಯಕ್ತಿಗಿಂತ ಹಿಂದು ಸಮಾಜ ಸಂಘಟನೆ ದೊಡ್ಡದು. ಸಂಘಟನೆಗಿಂತ ದೇಶ ದೊಡ್ಡದು. ಭಾರತವನ್ನು ಮತ್ತೆ ಜಗದ್ಗುರುವಿನ ಸ್ಥಾನದಲ್ಲಿ ಕುರಿಸುವ ಜವಾಬ್ದಾರಿ ಇಂದಿನ ಯುವಶಕ್ತಿ ಮೇಲಿದೆ ಎಂದರು.

ಪ್ರಾಸ್ತಾವಿಕ ಮಾತನಾಡಿದ ಸಮಿತಿ ಅಧ್ಯಕ್ಷ ನಾರಾಯಣ ಕೋಪರ್ಡೆ, ಆರೆಸ್ಸೆಸ್ ನೂರು ವರ್ಷ ಪೂರೈಸಿದ ಹಿನ್ನೆಲೆ ಸಮಾಜ ಸಂಘಟನೆ, ದೇಶದ ಪರಂಪರೆ, ಸಂಸ್ಕೃತಿ ಉಳಿಸಿ, ಬೆಳೆಸುವ ಉದ್ದೇಶದಿಂದ ಸಮಾಜೋತ್ಸವ ಹಮ್ಮಿಕೊಂಡಿದೆ ಎಂದರು.



ದೇಶದ ರಾಜಕೀಯ ಸೆಕ್ಯುಲರಿಸಂ ಅಂತ್ಯ

ಧಾರವಾಡ: ದೇಶದಲ್ಲಿ ಅಬ್ಬರಿಸಿದ ಪೊಳ್ಳು ರಾಜಕೀಯ ಸೆಕ್ಯುಲರಿಸಂ ಪತನದ ಹಾದಿಯಲ್ಲಿದೆ. ದೇಶದ ಬಾಹ್ಯ-ಆಂತರಿಕ ಶಕ್ತಿಗಳ ಪರಾಭಾವಕ್ಕೆ ಹಿಂದು ಸಮಾಜ ಕಠಿಣ ಸಂಕಲ್ಪ ಮಾಡುವಂತೆ ಆರೆಸ್ಸೆಸ್ ಜೇಷ್ಠ ಪ್ರಚಾರಕ ಸು. ರಾಮಣ್ಣ ಮನವಿ ಮಾಡಿದರು.ಇಸ್ಲಾಮಿಕ್ ತುಷ್ಟೀಕರಣ ಹಿಂದು ಸಮಾಜ ಒಪ್ಪುವುದಿಲ್ಲ. 1925ರಲ್ಲಿ ಸಂಘ ಉದಯಿಸಿದಾಗಲೇ ಕಮ್ಯುನಿಷ್ಟ ಪಕ್ಷವೂ ಜನ್ಮ ತಳೆದಿತ್ತು. ದೇಶದೆಲ್ಲಡೆ ಅದರ ಪ್ರಭಾವ ಇತ್ತು. ಮತ್ತೊಂದೆಡೆ ಕಾಂಗ್ರೆಸ್ ಹಿಂದು-ಮುಸ್ಲಿಂ ಅಣ್ಣತಮ್ಮಂದಿರೆಂದು ತುಷ್ಟೀಕರಣ ಪ್ರಾರಂಭಿಸಿ, ದೇಶದ್ರೋಹ ಕೆಲಸ ಮಾಡಿದ್ದರು ಎಂದರು. ದೇಶದಲ್ಲಿ ಹಿಂದುತ್ವ ಜಾಗೃತಿ ಕಂಡ ಕೆಲವು ಶಕ್ತಿಗಳಿಗೆ ನಡುಕ ಶುರುವಾಗಿದೆ. ಸಿದ್ಧಾಂತಗಳಲ್ಲಿ ಪರಸ್ಪರ ವಿರೋಧವಿದ್ದರೂ, ಕೇವಲ ಹಿಂದುತ್ವ ಎದುರಿಸಲು ಕ್ರೈಸ್ತರು, ಮುಸ್ಲಿಂ ಮೂಲಭೂತವಾದಿಗಳು, ಕಮ್ಯುನಿಷ್ಟರು ಒಗ್ಗೂಡಿದ್ದಾಗಿಯೂ ಹೇಳಿದರು. 2014ರ ನಂತರ ಸದ್ಯ ಒಂದೆರಡು ರಾಜ್ಯದಲ್ಲಿ ಬಿಟ್ಟರೆ, ದೇಶದಲ್ಲಿ ರಾಜಕೀಯ ಸೆಕ್ಯುಲರಿಸಂ ಸತ್ತು ಹೋಗುತ್ತಿದೆ. ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಷ್ಟರ ಮಾತೇ ಇಲ್ಲ. ಕೆಲವರ ಬೆಂಬಲದಿಂದಾಗಿ ಕೇರಳ ರಾಜ್ಯದಲ್ಲಿ ಮಾತ್ರವೇ ಉಸಿರಾಡುತ್ತಿದೆ ಎಂದರು. ಇಷ್ಟು ದಿನ ಸೆಕ್ಯುಲರಿಸಂ ಹೆಸರಲ್ಲಿ ಹಿಂದೂ ಭಾವನೆಗಳನ್ನು ತುಳಿಯುವ ಕೆಲಸ ನಡೆಯುತ್ತಿತ್ತು. ಈಗ ಕಾಲ ಬದಲಾಗಿದೆ. ಜನರು ಸತ್ಯ ಅರಿತಿದ್ದಾರೆ. ರಾಜಕೀಯ ಸೆಕ್ಯುಲರಿಸಂ ಅವನತಿಯತ್ತ ಸಾಗುತ್ತಿದೆ ಮತ್ತು ಹಿಂದುತ್ವ ಪ್ರಜ್ವಲಿಸುತ್ತಿದೆ ಎಂದು ಹೇಳಿದರು.

ದೇವರಹುಬ್ಬಳ್ಳಿಯ ನಾಗಭೂಷಣ ಸಿದ್ಧಶಿವಯೋಗ ಸ್ವಾಮೀಜಿ, ಗರಗ ಕಲ್ಮಠದ ಆತ್ಮಾರಾಮ್ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ವೇದಿಕೆಯಲ್ಲಿ ಸಮಿತಿ ಗೌರವ ಅಧ್ಯಕ್ಷ ಎಸ್.ಎಸ್.ರೋಣದ ಇದ್ದರು. ಕಾರ್ಯಕ್ರಮ ಯಶಸ್ವಿಗೆ ಶ್ರಮಿಸಿದವರಿಗೆ ಗೌರವಿಸಲಾಯಿತು.

ಸಂಸ್ಕೃತ ಪಾಠ ಶಾಲೆಯ ಶಿರೀಶ್ ಜೋಶಿ ಮತ್ತು ತಂಡದಿಂದ ವೇದಘೋಷ ಮೊಳಗಿತು. ಸಿದ್ಧಿವಿನಾಯಕ ಮಹಿಳಾ ಮಂಡಳ ಗಣೇಶ ಸ್ತುತಿ ಪ್ರಸ್ತುಪಡಿಸಿದರು. ರತಿಕಾ ನೃತ್ಯ ನಿಕೇತನದ ಮಕ್ಕಳು ಏಕದಂತಯಾ, ವಕ್ರ ತುಂಡಾಯ ನೃತ್ಯ ಪ್ರದರ್ಶಿಸಿದರು.

ಎರಡು ಭವ್ಯ ಶೋಭಾಯಾತ್ರೆ

ಸಕಲ ವಾದ್ಯಮೇಳದೊಂದಿಗೆ ಕೆಐಬಿ ಗಣಪತಿ ಗುಡಿಯಿಂದ ಆರಂಭವಾದ ಶೋಭಾಯಾತ್ರೆ ಗಾಂಧಿನಗರ ಕ್ರಾಸ್, ಈಶ್ವರ ದೇವಸ್ಥಾನ, ರುಡ್‌ಸೆಟ್ ರಸ್ತೆ ಮಾರ್ಗವಾಗಿ ಒಂದು, ರಜತಗಿರಿ ವರಸಿದ್ಧಿ ವಿನಾಯಕ ದೇವಸ್ಥಾನ, ಯಲ್ಲಮ್ಮದೇವಿ ಸೊಸೈಟಿ, ಬಂಡೆಮ್ಮದೇವಿ ಗುಡಿ ಮಾರ್ಗವಾಗಿ ಮತ್ತೊಂದು ಶೋಭಾಯಾತ್ರೆ ಜರುಗಿತು. ಪುಟಾಣಿ ಮಕ್ಕಳು ವಿವಿಧ ಮಹಾಪುರುಷರ ಛದ್ಮವೇಷ ಧರಿಸಿ ಗಮನ ಸೆಳೆದರು.

ಸಿಲಿಂಡರ್ ವಿಷಯದಲ್ಲಿ ಗೊಂದಲ ಬೇಡ: ಕಡಾಡಿ

ಮೂಡಲಗಿ: ಇರಾನ್ ಮತ್ತು ಅಮೆರಿಕಾ, ಇಸ್ರೇಲ್ ಸಂಘರ್ಷ ಮತ್ತು ಹಾರ್ಮುಜ್ ಜಲಸಂಧಿಯ ಅಡಚಣೆಯಿಂದಾಗಿ ಇಡೀ ಜಗತ್ತು ಇಂಧನದ ಬಿಕ್ಕಟ್ಟು ಎದುರಿಸುತ್ತಿದ್ದರೆ, ದೇಶದಲ್ಲಿ ಕಾಂಗ್ರೆಸ್ ಗ್ಯಾಸ್ ಸಿಲಿಂಡರ್ ಸಂಬಂಧ ಜನರನ್ನು ಗೊಂದಲಕ್ಕೀಡು ಮಾಡುವ ಪ್ರಯತ್ನ ಮಾಡುತ್ತಿರುವುದು ಅತ್ಯಂತ ದುರದೃಷ್ಟಕರ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ತೀವ್ರವಾಗಿ ಖಂಡಿಸಿದ್ದಾರೆ.



ಭಾನುವಾರ ಪತ್ರಿಕಾ ಹೇಳಿಕೆ ನೀಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ಫಲವಾಗಿ ಭಾರತವು ಇಂದು ಕೇವಲ ಒಂದು ಮಾರ್ಗವನ್ನು ಅವಲಂಬಿಸದೆ, ರಷ್ಯಾ, ಕೆನಡಾ ಮತ್ತು ಅಮೆರಿಕದಂತಹ ಪರ್ಯಾಯ ಮೂಲಗಳಿಂದ ಇಂಧನ ಆಮದು ಮಾಡಿಕೊಳ್ಳುತ್ತಿದೆ. ಹಾರ್ಮುಜ್ ಜಲಸಂಧಿಯ ಮೂಲಕ ಬರುತ್ತಿದ್ದ ಶೇ.40-50ರಷ್ಟು ಪೂರೈಕೆಗೆ ಧಕ್ಕೆಯಾಗದಂತೆ ಈಗಾಗಲೇ ಶೇ.70ರಷ್ಟು ಕಚ್ಚಾ ತೈಲವನ್ನು ಪರ್ಯಾಯ ಮಾರ್ಗಗಳ ಮೂಲಕ ಸುರಕ್ಷಿತಗೊಳಿಸಲಾಗಿದೆ.

ದೇಶದ 33 ಕೋಟಿ ಕುಟುಂಬಗಳ ಅಡುಗೆ ಮನೆಗೆ ಮೊದಲ ಆದ್ಯತೆ ನೀಡಿರುವ ಕೇಂದ್ರ ಸರ್ಕಾರ, ಅಗತ್ಯ ವಸ್ತುಗಳ ಕಾಯ್ದೆ ಅಡಿಯಲ್ಲಿ ಗೃಹಬಳಕೆಯ ಎಲ್‌ಪಿಜಿ ಪೂರೈಕೆಯನ್ನು ಶೇ.100ರಷ್ಟು ಖಚಿತಪಡಿಸಿದೆ ಎಂದು ಹೇಳಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಬ್ಯಾರೇಲ್‌ಗೆ 120 ಡಾಲರ್ ದಾಟಿದ್ದರೂ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಸಬ್ಸಿಡಿ ಮತ್ತು ತೆರಿಗೆ ಹೊಂದಾಣಿಕೆಯ ಮೂಲಕ ಸಾಮಾನ್ಯ ಜನರ ಮೇಲೆ ಹೊರೆ ಬೀಳದಂತೆ ದೇಶದಲ್ಲಿ ಬೆಲೆಗಳು ಸ್ಥಿರವಾಗಿರುವಂತೆ ನೋಡಿಕೊಳ್ಳಲಾಗಿದೆ. ಎಲ್‌ಪಿಜಿ ಪೂರೈಕೆ ಕೊರತೆ ಆಗಲಿದೆ ಎಂಬ ಭಯದಿಂದ ಅಗತ್ಯವಿಲ್ಲದಿದ್ದರೂ ಹೆಚ್ಚು ಹೆಚ್ಚು ಬುಕಿಂಗ್ ಮಾಡಬೇಡಿ ಎಂದು ಈಗಾಗಲೇ ಕೇಂದ್ರ ಸಚಿವರಾದ ಹರ್ದೀಪ್ ಪುರಿ ಅವರು ಹೇಳಿದ್ದಾರೆ. ದೇಶದಲ್ಲಿ 5 ದಿನದಲ್ಲಿ ಶೇ.28ರಷ್ಟು ಎಲ್‌ಪಿಜಿ ಉತ್ಪಾದನೆ ಹೆಚ್ಚಳ ಮಾಡಿದ್ದೇವೆ. ಇನ್ನೂ ಅಗತ್ಯ ಬಿದ್ದರೆ ಹೆಚ್ಚು ಮಾಡ್ತೇವೆ. ಆ ಸಾಮರ್ಥ್ಯ ಭಾರತಕ್ಕೆ ಇದೆ ಎಂದು ವಿವರಿಸಿದರು. ಬಿತ್ತನೆ ಹಂಗಾಮು ಹತ್ತಿರವಿರುವ ಈ ಸಮಯದಲ್ಲಿ ರೈತರಿಗೆ ಬೇಕಾದ ಗೊಬ್ಬರ ಕಾರ್ಖಾನೆಗಳಿಗೆ ಶೇ.70ರಷ್ಟು ಗ್ಯಾಸ್ ಪೂರೈಕೆಯನ್ನು ಸರ್ಕಾರ ಖಚಿತಪಡಿಸಿದೆ. ಇಂತಹ ಸೂಕ್ಷ್ಮ, ಜಾಗತಿಕ ಬಿಕ್ಕಟ್ಟಿನ ಸಮಯದಲ್ಲಿ ದೇಶದ ಏಕತೆ ಕಾಯ್ದುಕೊಂಡು, ಕೇಂದ್ರ ಸರ್ಕಾರಕ್ಕೆ ಸಾಥ್ ನೀಡುವ ಬದಲು, ಕಾಂಗ್ರೆಸ್ ಪಕ್ಷ ಸುಳ್ಳು ಸುದ್ದಿಗಳನ್ನು ಹಬ್ಬಿಸಿ ಅನಗತ್ಯ ಹೇಳಿಕೆ ನೀಡಿ, ಜನರನ್ನು ಅನಗತ್ಯವಾಗಿ ಆತಂಕಗೊಳಿಸುವಂತೆ ಪ್ರತಿಭಟನೆಗಳನ್ನು ನಡೆಸಿ, ಕೀಳು ರಾಜಕೀಯ ನಡೆಸುತ್ತಿದೆ ಎಂದು ಸಂಸದ ಈರಣ್ಣ ಕಡಾಡಿ ತೀವ್ರವಾಗಿ ಹರಿಹಾಯ್ದಿದ್ದಾರೆ.

ಕಳೆನಾಶಕ ಸಿಂಪಡಣೆ: ಭತ್ತದ ಬೆಳೆಗೆ ಹಾನಿ



ಕಾರಟಗಿ: ತಾಲೂಕಿನ ಸೋಮನಾಳ ಗ್ರಾಮದಲ್ಲಿ ಭತ್ತದ ಬೆಳೆಗೆ ದುಷ್ಕರ್ಮಿಗಳು ಕಳೆನಾಶಕ ಸಿಂಪಡಿಸಿದ್ದು, ಸುಮಾರು 1 ಎಕರೆ ಭತ್ತದ ಬೆಳೆ ಬಹುತೇಕ ಹಾನಿಗೆ ಒಳಗಾಗಿದೆ. ಈ ಬಗ್ಗೆ ಕಾರಟಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಭಾನುವಾರ ಸ್ಥಳಕ್ಕೆ ತೆರಳಿ ಪರಿಶೀಲನೆ ಮಾಡಿದ್ದಾರೆ.

ಸೋಮನಾಳ ಗ್ರಾಮದ ಸರ್ವೇ ನಂ.132ರಲ್ಲಿ ವೆಂಕನಗೌಡ ಬಸಾಪುರ ಎಂಬುವವರಿಗೆ ಸೇರಿದ ಹೊಲದಲ್ಲಿ ಬೆಳೆದ ಬೆಳೆ ಹಾಳಾಗಿದೆ. ಭತ್ತದ ಬೆಳೆ ಕಾಳು ಕಟ್ಟುವ ಹಂತದಲ್ಲಿ ಅಪರಿಚಿತ ದುಷ್ಕರ್ಮಿಗಳು ರಾತ್ರಿ ವೇಳೆ ಹೊಲಕ್ಕೆ ನುಗ್ಗಿ "ರೌಂಡ್‌ಅಪ್" ಎಂಬ ಕಳೆ ನಾಶಕ ಎಣ್ಣೆ ಸಿಂಪಡಿಸಿರುವುದಾಗಿ ತಿಳಿದು ಬಂದಿದೆ. ಇದರಿಂದ ಭತ್ತದ ಬೆಳೆ ನಿಧಾನವಾಗಿ ಒಣಗುತ್ತಿದೆ. ಇದರಿಂದ ರೈತನಿಗೆ ಲಕ್ಷಾಂತರ ರೂ. ನಷ್ಟ ಉಂಟಾಗಲಿದೆ.ಬೆಳಗ್ಗೆ ಹೊಲಕ್ಕೆ ಬಂದಿದ್ದ ರೈತ ವೆಂಕನಗೌಡ ಬಸಾಪುರ ಏಕಾಏಕಿ ಬೆಳೆ ಒಣಗಿದ್ದನ್ನು ಗಮನಿಸಿದ್ದಾರೆ. ನಂತರ ಈ ಕುರಿತು ಸಂಬಂಧಿಸಿದ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ದೂರಿನ ಹಿನ್ನೆಲೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ದುಷ್ಕೃತ್ಯ ಎಸಗಿದವರ ಪತ್ತೆಗೆ ತನಿಖೆ ಶುರು ಮಾಡಿದ್ದಾರೆ.

ವಿಕೃತಿಯ ಪರಮಾವಧಿ

ಭತ್ತದ ಬೆಳೆಗೆ ಕಳೆ ನಾಶಕ ಸಿಂಪಡಿಸಿ, ಬೆಳೆ ನಾಶ ಮಾಡಿರುವುದು ಮನುಷ್ಯನ ವಿಕೃತಿಗೆ ಕೈಗನ್ನಡಿ ಹಿಡಿದಂತಿದೆ. ವೈಯಕ್ತಿಕ ದ್ವೇಷದ ಹಿನ್ನೆಲೆ ಒಬ್ಬ ರೈತನಿಗೆ ಆರ್ಥಿಕ ನಷ್ಟ ಉಂಟು ಮಾಡಲು ಹೀಗೆ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಇದರಿಂದ ಇಂಥ ಕೃತ್ಯಗಳು ದೇಶದ ಆಹಾರ ಭದ್ರತೆ ಮೇಲೆ ದೊಡ್ಡ ಪೆಟ್ಟು ಕೊಡಲಿದ್ದು, ಪೊಲೀಸ್ ಅಧಿಕಾರಿಗಳು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ಆತಂಕ: ರೈತನಿಗೆ ಆರ್ಥಿಕ ಹಾನಿ ಉಂಟು ಮಾಡುವ ಉದ್ದೇಶದಿಂದಲೇ ಈ ಕೃತ್ಯ ಎಸಗಿರುವುದು ಸ್ಪಷ್ಟವಾಗುತ್ತಿದೆ. ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಘಟನೆ ಹಿನ್ನೆಲೆ ಗ್ರಾಮದಲ್ಲಿ ಆತಂಕ ಹಾಗೂ ಆಕ್ರೋಶಕ್ಕೆ ಮನೆ ಮಾಡಿದೆ. ಗ್ರಾಮದ ಇತರೇ ರೈತರು ಬೆಳೆಗೆ ಸುರಕ್ಷತೆ ಒದಗಿಸುವಂತೆ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ಮುಂಡಗೋಡದಲಿ ಆಲಿಕಲ್ಲು ಸಹಿತ ಮಳೆ

ಮುಂಡಗೋಡ: ಬಿಸಿಲಿನ ಬೇಗೆಯಿಂದ ಬೇಸತ್ತ ಜನತೆಗೆ ತಾಲೂಕಿನಲ್ಲಿ ಭಾನುವಾರ ಬಿದ್ದ ಮಳೆ ತುಸು ಸಮಾಧಾನ ತಂದಿತಲ್ಲದೆ, ಭೂಮಿಗೆ ಕೊಂಚ ಮಟ್ಟಿಗೆ ತಂಪೆರೆಯಿತು.

ಭಾನುವಾರ ಸಂಜೆ ಆಲಿಕಲ್ಲು ಸಹಿತ ಅರ್ಧ ಗಂಟೆಗಳ ಕಾಲ ಮಳೆ ಸುರಿಯಿತು. ಕಳೆದ ಕೆಲವು ದಿನಗಳಿಂದ ಬಿಸಿಲಿನ ತಾಪಮಾನ ವಾಡಿಕೆಗಿಂತ ಹೆಚ್ಚಾಗಿತ್ತು. ಯಾವಾಗ ಮಳೆ ಬಿದ್ದು ವಾತಾವರಣ ತಂಪಾಗುವುದೋ ಎಂದು ಮಳೆಯ ಹಾದಿಯನ್ನು ಜನರು ಕಾಯುತ್ತಿದ್ದರು. ಭಾನುವಾರ ಸಂಜೆ ಭಾರೀ ಗಾಳಿಯ ಜತೆ ಆಲಿಕಲ್ಲು ಸಹಿತ ತುಸು ಹೊತ್ತಿನಲ್ಲಿಯೇ ಮಳೆಯ ದೊಡ್ಡ ದೊಡ್ಡ ಹನಿಗಳು ಉದುರುವ ಮೂಲಕ ಸುಮಾರು ಮುಕ್ಕಾಲು ಗಂಟೆ ಸುರಿದ ಮಳೆಯಿಂದ ರಸ್ತೆ ಚರಂಡಿಗಳು ತುಂಬಿ ಹರಿದವು. ಮಳೆಯೊಂದಿಗೆ ಬೀಸಿದ ಭಾರೀ ಗಾಳಿಯ ಅರ್ಭಟಕ್ಕೆ ಅಲ್ಲಲ್ಲಿ ಮರಗಳಿ ಬಿದ್ದಿವೆ. ಮುಂಡಗೋಡ ಪಾಳಾದಿಂದ ಹಾನಗಲ್ ಕಡೆಗೆ ಹೋಗುವ ಮುಖ್ಯ ರಸ್ತೆಯಲ್ಲಿ ಬೃಹತ್ ಮಾವಿನ ಮರವೊಂದು ರಸ್ತೆಯ ಮಧ್ಯಭಾಗದಲ್ಲೇ ಮರ ಬಿದ್ದ ಪರಿಣಾಮ ಈ ಮಾರ್ಗದಲ್ಲಿ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ವಾಹನ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು. ದಾರಿಯುದ್ದಕ್ಕೂ ವಾಹನಗಳು ಸಾಲುಗಟ್ಟಿ ನಿಂತಿದ್ದರಿಂದ ಪ್ರಯಾಣಿಕರು ಪರದಾಡುವಂತಾಯಿತು.

ಇತ್ತೀಚಿನ ದಿನಗಳಲ್ಲಿ ಅಡುಗೆ ಅನಿಲ (ಸಿಲಿಂಡರ್) ಕೊರತೆ ಎದುರಿಸುತ್ತಿರುವ ಸ್ಥಳೀಯ ಸಾರ್ವಜನಿಕರು, ರಸ್ತೆಗೆ ಬಿದ್ದ ಮಾವಿನ ಮರದ ಕೊಂಬೆಗಳನ್ನು ಸೌದೆಗಾಗಿ ಕೊಂಡೊಯ್ಯಲು ಮುಗಿಬಿದ್ದ ದೃಶ್ಯ ಕಂಡುಬಂತು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಅರಣ್ಯ ಇಲಾಖೆಯ ಸಿಬ್ಬಂದಿಗಳು, ರಸ್ತೆಗೆ ಅಡ್ಡಲಾಗಿ ಬಿದ್ದಿದ್ದ ಬೃಹತ್ ಮರವನ್ನು ಯಂತ್ರಗಳ ಸಹಾಯದಿಂದ ಕತ್ತರಿಸಿ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಬಿಸಿಲಿನ ಶಾಖದಿಂದ ಒಣಗುತ್ತಿದ್ದ ಗಿಡ-ಮರಗಳಿಗೆ ಮಳೆ ನೀರಿನ ಆಸರೆ ಸ್ವಲ್ಪ ದೊರೆತಂತಾಯಿತು. ರಸ್ತೆಗಳ ಮೇಲೆ ಅಲ್ಲಲ್ಲಿ ಮಳೆ ನೀರು ನಿಂತಿರುವುದು ಕಂಡು ಬಂತು. ಒಟ್ಟಿನಲ್ಲಿ ಬೇಸಿಗೆಯ ಧಗೆಯಿಂದ ಸಂಕಟಪಡುತ್ತಿದ್ದ ಜನರಿಗೆ ಮಳೆ ಸುರಿದು ತಂಪಾಗಿಸಿರುವುದು ಸಂತಸ ತಂದಿತು.



ಕೃಷಿ ಉತ್ಸವದಲ್ಲಿ ಗಮನ ಸೆಳೆದ ಶ್ವಾನಗಳ ಪ್ರದರ್ಶನ



ಚಿಕ್ಕೋಡಿ: ನಿಪ್ಪಾಣಿ ನಗರದ ಹೊರವಲಯದ ಶ್ರೀ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಹಾಗೂ ಜೊಲ್ಲೆ ಗ್ರೂಪ್ ಸಹಯೋಗದಲ್ಲಿ ಆಯೋಜಿಸಲಾದ ಭವ್ಯ ಕೃಷಿ ಉತ್ಸವದಲ್ಲಿ ವಿವಿಧ ಜಾತಿಯ ಶ್ವಾನಗಳ ಪ್ರದರ್ಶನ ವಿಶೇಷ ಆಕರ್ಷಣೆಯಾಗಿ ಗಮನ ಸೆಳೆಯಿತು. ಕೃಷಿ ಉತ್ಸವಕ್ಕೆ ಆಗಮಿಸಿದ್ದ ರೈತರು ಮತ್ತು ಸಾರ್ವಜನಿಕರು ಶ್ವಾನಗಳ ಪ್ರದರ್ಶನವನ್ನು ಕಣ್ತುಂಬಿಕೊಂಡು ಮೆಚ್ಚುಗೆ ವ್ಯಕ್ತಪಡಿಸಿದರು.

ಉತ್ತರ ಕರ್ನಾಟಕ ಹಾಗೂ ದಕ್ಷಿಣ ಮಹಾರಾಷ್ಟ್ರದ ವಿವಿಧ ಭಾಗಗಳಿಂದ ಶ್ವಾನ ಪ್ರೇಮಿಗಳು ತಮ್ಮ ಶ್ವಾನಗಳನ್ನು ಕರೆದುಕೊಂಡು ಬಂದಿದ್ದರು. ವಿವಿಧ ತಳಿಗಳ ಶ್ವಾನಗಳು ವೇದಿಕೆಯಲ್ಲಿ ಪ್ರದರ್ಶನ ನೀಡಿದಾಗ ಪ್ರೇಕ್ಷಕರು ಕೇಕೆ ಹಾಕಿ ಹರ್ಷ ವ್ಯಕ್ತಪಡಿಸಿದರು.

ಶ್ವಾನಗಳ ಶಿಸ್ತು, ಚುರುಕುತನ ಹಾಗೂ ತರಬೇತಿ ಪ್ರದರ್ಶನಗಳು ವಿಶೇಷವಾಗಿ ಎಲ್ಲರ ಗಮನ ಸೆಳೆಯುವಂತಾಗಿತ್ತು.

ಶ್ವಾನ ಸ್ಪರ್ಧೆಯಲ್ಲಿ ಬೆಳಗಾವಿಯ ಅಕ್ಷಯ ಮುರಡಕರ ಅವರ ಗೋಲ್ಡನ್ ರೋಟ್ವೈಲರ್ ಜಾತಿಯ ಶ್ವಾನ ಪ್ರಥಮ ಸ್ಥಾನ ಪಡೆದುಕೊಂಡಿತು. ಮಹಾರಾಷ್ಟ್ರದ ಜೈಸಿಂಗಪೂರದ ಮಹೇಶ ಹಿತಾರೆ ಅವರ ಬೆಂಗಾಲ್ ತಳಿಯ ಶ್ವಾನ ದ್ವಿತೀಯ ಸ್ಥಾನ ಪಡೆಯಿತು. ಸಾಂಗ್ಲಿಯ ಸತೀಶ ಜಾಧವ ಅವರ ಅಬ್ರಾಡಮ್ ತಳಿಯ ಶ್ವಾನ ತೃತೀಯ ಸ್ಥಾನ ಪಡೆಯಿತು. ಇನ್ನು, ಜೈಸಿಂಗಪೂರದ ಸುಶಾಂತ ಪಾಟೀಲ ಅವರ ಪಗ್ ಜಾತಿಯ ಶ್ವಾನ ನಾಲ್ಕನೇ ಸ್ಥಾನ ಪಡೆದುಕೊಂಡಿದ್ದು, ಶಿರೋಳದ ನಿಲೇಶ ಮೋರೆ ಅವರ ಡಾಬರ್ ಮ್ಯಾನ್ ಜಾತಿಯ ಶ್ವಾನ ಐದನೇ ಸ್ಥಾನ ಪಡೆದುಕೊಂಡಿತು.

ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಎಲ್ಲಾ ಶ್ವಾನಗಳು ತಮ್ಮ ಶಿಸ್ತು ಮತ್ತು ತರಬೇತಿಯ ಮೂಲಕ ಪ್ರೇಕ್ಷಕರನ್ನು ಆಕರ್ಷಿಸಿತು. ವಿಜೇತ ಶ್ವಾನಗಳ ಮಾಲೀಕರಿಗೆ ಸಂಪಾದನ ಸ್ವಾಮೀಜಿ, ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ, ಶಾಸಕಿ ಶಶಿಕಲಾ ಜೊಲ್ಲೆ ಹಾಗೂ ಬಸವಪ್ರಸಾದ ಜೊಲ್ಲೆ ಅವರು ಬಹುಮಾನ ವಿತರಿಸಿ ಅಭಿನಂದಿಸಿದರು.

ಚಿರತೆ ಪ್ರತ್ಯಕ್ಷ

ಕಲಬುರಗಿ: ಜಿಲ್ಲೆಯ ಜೇವರ್ಗಿ ತಾಲೂಕಿನ ಸೊನ್ನ ಗ್ರಾಮದಲ್ಲಿ ಚಿರತೆ ಕಾಣಿಸಿಕೊಂಡಿರುವ ಘಟನೆ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ. ತಡರಾತ್ರಿ ಗ್ರಾಮಕ್ಕೆ ನುಗ್ಗಿದ ಚಿರತೆ ಒಂದು ನಾಯಿಯ ಮೇಲೆ ದಾಳಿ ನಡೆಸಿದ ಪರಿಣಾಮ ಸ್ಥಳೀಯರು ಭಯಭೀತರಾಗಿದ್ದಾರೆ.

ಘಟನೆಯ ನಂತರ ಗ್ರಾಮಸ್ಥರು ತಕ್ಷಣವೇ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಬಂದ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಪರಿಶೀಲನೆ ವೇಳೆ ಚಿರತೆಯ ಹೆಜ್ಜೆ ಗುರುತುಗಳು ಪತ್ತೆಯಾಗಿದ್ದು, ನಾಯಿಯ ಮೇಲೆ ದಾಳಿ ನಡೆಸಿದ್ದು ಚಿರತೆಯೇ ಎಂಬುದನ್ನು ಅಧಿಕಾರಿಗಳು ದೃಢಪಡಿಸಿದ್ದಾರೆ.

ಈ ಘಟನೆ ಹಿನ್ನೆಲೆಯಲ್ಲಿ ಗ್ರಾಮಸ್ಥರಲ್ಲಿ ಮತ್ತಷ್ಟು ಆತಂಕ ಉಂಟಾಗಿದ್ದು, ಕೂಡಲೇ ಚಿರತೆಯನ್ನು ಸೆರೆ ಹಿಡಿದು ಗ್ರಾಮಸ್ಥರ ಭದ್ರತೆ ಕಲ್ಪಿಸಬೇಕೆಂದು ಅರಣ್ಯ ಇಲಾಖೆಗೆ ಒತ್ತಾಯಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಜ್ಞಾನಯಜ್ಞ ಸಪ್ತಾಹ ಸಮಾರೋಪ



◆**ಕಕಮರಿ** : ಶ್ರೀ ಸದ್ಗುರು ರಾಯಲಿಂಗೇಶ್ವರ ಮಠವು ಆಧ್ಯಾತ್ಮದ ಕೇಂದ್ರವಾಗಿ ಬೆಳೆದು ನಾಡಿಗೆ ಮಾದರಿಗಿದೆ ಎಂದು ಅಣ್ಣಪ್ಪ ಮಹಾರಾಜರು ಹೇಳಿದರು.

ಭಾನುವಾರ ಶ್ರೀ ಸದ್ಗುರು ರಾಯಲಿಂಗೇಶ್ವರ ಮಹಾಪ್ರಭುಗಳ ಪುಣ್ಯಾರಾಧನೆ 23ನೇ ಜ್ಞಾನಯಜ್ಞ ಸಪ್ತಾಹ ಸಮಾರೋಪ ಸಮಾರಂಭದ ಸರ್ವಧರ್ಮ ಸಭೆಯಲ್ಲಿ ಮಾತನಾಡಿ, ಧಾರ್ಮಿಕ, ಶಿಕ್ಷಣ, ಸಾಮಾಜಿಕ ಕ್ಷೇತ್ರಗಳಲ್ಲಿ ಅವಿರತವಾಗಿ ಸೇವೆ ಸಲ್ಲಿಸುತ್ತೀರುವ ಅಭಿನವ ಗುರುಲಿಂಗಜಂಗಮ ಶ್ರೀಗಳ ಕಾರ್ಯವು ಶ್ಲಾಘನೀಯವಾಗಿದೆ. ಧರ್ಮದ ಹಾದಿಯಲ್ಲಿ ಸಾಗಿ ಸಂಪಾದನೆ ಮೂಲಕ ಸೇವೆ ಮಾಡುವುದು ಜೀವನದ ಉದ್ದೇಶ ಎಂದರು. ಸಾತಾರಾ ಅಶೋಕ ಮಹಾರಾಜರು ಮಾತನಾಡಿ, ಸಂತ, ಶರಣರ ನುಡಿ ಕೇಳುವುದರಿಂದ ಮನುಷ್ಯನಿಗೆ ಭಕ್ತಿ ದೊರೆಯುತ್ತದೆ. ಎಲ್ಲರೂ ಪ್ರವಚನ ಆಲಿಸುವ ಮೂಲಕ ಜೀವನ ಪಾವನಗೊಳಿಸಿಕೊಳ್ಳಬೇಕು. ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿಯಲ್ಲಿ ಜಾತ್ಯಾತೀತಮಠ, ಅನಾಥ ಮಕ್ಕಳಿಗೆ ಉಚಿತವಾಗಿ ಶಿಕ್ಷಣ ಕೊಡುವಲ್ಲಿ ಶೈಕ್ಷಣಿಕ ಕ್ರಾಂತಿಮಠ ಸಂಸ್ಥೆಯಾಗಿ ಹೊರಹೊಮ್ಮಿದೆ ಎಂದರು.

ದಿವ್ಯಸಾನಿಧ್ಯ ಪ.ಪೂ.ಅಭಿನವ ಗುರುಲಿಂಗಜಂಗಮ ಸ್ವಾಮೀಜಿ ವಹಿಸಿ ಆಶೀರ್ವದಿಸಿದರು. ಅವರಾದಿ ಮಲ್ಲಿಕಾರ್ಜುನ ಮಹಾರಾಜರು, ಹಲಸಂಗಿ ಮುತ್ತಣ್ಣ ಮಹಾರಾಜರು, ಶಂಕರ ಮಹಾರಾಜರು, ಸುರೇಶ ಗೌಡರ, ಸಂಸ್ಥೆಯ ಕಾರ್ಯಾಧ್ಯಕ್ಷ ಗಿರೀಶ ಬಸರಗಿ, ಶೇಗುಣಸಿ ಭೀಮಣ್ಣ ಶಾಸ್ತ್ರೀ ಇತರರಿದ್ದರು. ಪ್ರಾಶುಂಪಾಲ ಶಿವಗುರು ಬಸರಗಿ ಸ್ವಾಗತಿಸಿದರು, ಪ್ರಾಚಾರ್ಯ ಸಂಗಮೇಶ ಬಸರಗಿ ನಿರೂಪಿಸಿ ವಂದಿಸಿದರು.

ಮಾರುತಿ ಲೋಕೂರ್ ಸೇರಿ ಹಲವರು ಕಾಂಗ್ರೆಸ್ ಸೇರ್ಪಡೆ



◆**ಬೆಳಗಾವಿ:** ನಂದಿಹಳ್ಳಿಯ ಬಿಜೆಪಿ ಮುಖಂಡ ಮಾರುತಿ ಲೋಕೂರ್ ಸೇರಿ ಹಲವರು ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಿದ್ದಾರೆ.

ಬೆಳಗಾವಿ ಗ್ರಾಮೀಣ ಕ್ಷೇತ್ರದ ಶಾಸಕರೂ ಆಗಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಗೃಹ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾರುತಿ ಲೋಕೂರ್ ಅವರು ಕಾಂಗ್ರೆಸ್ ಸೇರ್ಪಡೆಯಾಗಿದ್ದು, ಸಚಿವರು ಕಾಂಗ್ರೆಸ್ ಶಾಲು ಹಾಕಿ ಸ್ವಾಗತಿಸಿದರು.ಗ್ರಾಮೀಣ ವಿಧಾನ ಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ನೋಡಿ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಕೈ ಬಲಪಡಿಸಬೇಕೆನ್ನುವ ಉದ್ದೇಶದಿಂದ ಕಾಂಗ್ರೆಸ್ ಸೇರಿದ್ದಾಗಿ ಅವರು ತಿಳಿಸಿದರು.

ಗ್ರಾಮೀಣ ಕ್ಷೇತ್ರದಲ್ಲಿ ನಿರಂತರವಾಗಿ ಅಭಿವೃದ್ಧಿ ಕೆಲಸಗಳು ನಡೆಯುತ್ತಿರುವುದರಿಂದ ಇನ್ನೂ ಹಲವರು ಪಕ್ಷಕ್ಕೆ ಸೇರಲು ಉತ್ಸುಕರಾಗಿದ್ದಾರೆ. ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಗಳನ್ನು ಒಪ್ಪಿ ಯಾರೇ ಪಕ್ಷಕ್ಕೆ ಬಂದರೂ ಸ್ವಾಗತಿಸುತ್ತೇನೆ ಎಂದು ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಯುವ ಕಾಂಗ್ರೆಸ್ ಮುಖಂಡ ಮೃಣಾಲ ಹೆಬ್ಬಾಳ್ಕರ್ ಕಾಡಾ ಅಧ್ಯಕ್ಷ ಯುವರಾಜ ಕದಂ, ಉಚಗಾಂವ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಾಳು ದೇಸೂರಕರ್, ಶಂಕರಗೌಡ ಪಾಟೀಲ, ಮನೋಹರ ಬೆಳಗಾಂವಕರ್, ಗಾಯತ್ರಿ ಪಾಟೀಲ ಸೇರಿದಂತೆ ಹಲವಾರು ಮುಖಂಡರು ಇದ್ದರು.

ಮಾ.18 ರಂದು ಪೂರ್ವಭಾವಿ ಸಭೆ

◆**ಬೆಳಗಾವಿ :** ಏ.5 ರಂದು ಡಾ. ಬಾಬು ಜಗಜೀವನರಾಂ ರವರ 119ನೇ ಜಯಂತಿ ದಿನಾಚರಣೆಯ ಕುರಿತು ಪೂರ್ವಭಾವಿ ಸಭೆಯನ್ನು ಮಾ.18 ರಂದು ಬೆಳಿಗ್ಗೆ 11 ಗಂಟೆಗೆ ಹಾಗೂ ಏ.14ರಂದು ಡಾ. ಬಾಬಾಸಾಹೇಬ ಅಂಬೇಡ್ಕರ ರವರ 135ನೇ ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆಯನ್ನು ಮಾ.18 ರಂದು ಮಧ್ಯಾಹ್ನ 12ಗಂಟೆಗೆ ಎರಡು ಸಭೆಗಳನ್ನು ಖಾನಾಪೂರ ತಾಲೂಕು ಪಂಚಾಯತಿ ಸಭಾ ಭವನದಲ್ಲಿ ನಡೆಸಲಾಗುವುದು ಎಂದು ಖಾನಾಪೂರ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಖಾನಾಪುರ: ಪಟ್ಟಣದ ಕೆಎಲ್ಇ ಬಿ.ಸಿ.ಎ ಕಾಲೇಜಿನಲ್ಲಿ ಬುಧವಾರ ಕೆಎಲ್ಇ ಸಂಸ್ಥೆಯ ರೋಟರ್ಯಾಕ್ಟ್ ಕ್ಲಬ್ ಮತ್ತು ಬಿಸಿಎ ಕಾಲೇಜು ಸಹಯೋಗದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಇನ್ನರವ್ಹೀಲ್ ಕ್ಲಬ್ ಅಧ್ಯಕ್ಷೆ ವರ್ಷಾ ಪಾಟೀಲ, ಕಾರ್ಯದರ್ಶಿ ಸವಿತಾ ಕಲ್ಯಾಣಿ, ಖಜಾಂಚಿ ರೂಪಾ ಕುಲಕರ್ಣಿ, ಕಾಲೇಜಿನ ಪ್ರಾಂಶುಪಾಲ ಆನಂದ ತಂವಶಿ ಸೇರಿದಂತೆ ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಿತಿಮೀರಿದ ಧ್ವನಿ ವರ್ಧಕಗಳ ನಿಷೇಧ: ಜಿಲ್ಲಾಧಿಕಾರಿ

◆**ಬೆಳಗಾವಿ:** ಜಿಲ್ಲಾದ್ಯಂತ ಇನ್ನು ಮುಂದೆ ಡಿಜೆ ಮತ್ತು ಮಿತಿಮೀರಿದ ಲೌಡ್ ಸ್ಪೀಕರ್ ಸೇರಿದಂತೆ ಶಬ್ದದ ಸಾಧನಗಳನ್ನು ಬಳಸುವಂತಿಲ್ಲ. ಸಾರ್ವಜನಿಕ ಶಾಂತಿ, ಆರೋಗ್ಯ ಹಾಗೂ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮಹತ್ವದ ಆದೇಶ ಹೊರಡಿಸಿದ್ದಾರೆ. ಬೆಳಗಾವಿ ಜಿಲ್ಲೆಯಾದ್ಯಂತ ಹಬ್ಬ, ಮೆರವಣಿಗೆ ಮತ್ತು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅತಿಯಾದ ಶಬ್ದವನ್ನು ಹೊರಸೂಸುವ ಡಿಜೆ ವ್ಯವಸ್ಥೆಗಳು ಮತ್ತು ಶಬ್ದ ವೃದ್ಧಿ ಸಾಧನಗಳ ಬಳಕೆಯನ್ನು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಕ್ಷಣದಿಂದ ಜಾರಿಗೆ ಬರುವಂತೆ ನಿಷೇಧಿಸಿದ್ದಾರೆ. ಪೊಲೀಸ್ ಆಯುಕ್ತರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ವರದಿ ಮೇರೆಗೆ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಮುಂದಿನ ಆದೇಶದವರೆಗೆ ಯಾವುದೇ ರೀತಿಯ ಡಿಜೆ, ಬೇಸ್ ಬೂಸ್ಟರ್ಗಳು, ಮೊಬೈಲ್ ಡಿಜೆ ವಾಹನಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ವಿಶೇಷವಾಗಿ ವಸತಿ ಪ್ರದೇಶಗಳು, ಆಸ್ಪತ್ರೆ, ಶಾಲೆ ನ್ಯಾಯಾಲಯ, ಧಾರ್ಮಿಕ ಸ್ಥಳಗಳ ಸುತ್ತಮುತ್ತ 100 ಮೀಟರ್ ವ್ಯಾಪ್ತಿಯಲ್ಲಿ ಶಬ್ದ ಮಾಲಿನ್ಯ ನಿಯಂತ್ರಿಸಲು ಕಠಿಣ ಕ್ರಮ ಕೈಗೊಳ್ಳಲಾಗಿದೆ. ಒಂದು ವೇಳೆ ಯಾರಾದರೂ ಈ ಆದೇಶವನ್ನು ಉಲ್ಲಂಘಿಸಿದರೆ, ಕಾರ್ಯಕ್ರಮವನ್ನು ತಕ್ಷಣ ಸ್ಥಗಿತಗೊಳಿಸುವುದು, ಡಿಜೆ ಉಪಕರಣಗಳನ್ನು ವಶಪಡಿಸಿಕೊಳ್ಳುವುದು, ವಿದ್ಯುತ್ ಸಂಪರ್ಕ ಕಡಿತಗೊಳಿಸುವುದು ಮತ್ತು ಸಂಬಂಧಪಟ್ಟವರ ಮೇಲೆ ಕಾನೂನು ಕ್ರಮ ಜರುಗಿಸಲು ಪೊಲೀಸರಿಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ. ಅನಿವಾರ್ಯ ಸಂದರ್ಭಗಳಲ್ಲಿ ಮಿತ ಶಬ್ದದ ಸಾಧನ ಬಳಸಲು ಪೊಲೀಸ್ ಇಲಾಖೆಯಿಂದ ಪೂರ್ವಾನುಮತಿ ಪಡೆಯುವುದು ಕಡ್ಡಾಯ ಎಂದು ಆದೇಶದಲ್ಲಿ ಸ್ಪಷ್ಟಪಡಿಸಿದ್ದಾರೆ.



ರಾಯಬಾಗ: ಮಾಸ್ ಮಹಿಳಾ ಅಭಿವೃದ್ಧಿ ಮತ್ತು ಸಂರಕ್ಷಣಾ ಸಂಸ್ಥೆ ಘಟಪ್ರಭಾದಿಂದ ಪಟ್ಟಣದ ಸರಕಾರಿ ನೌಕರ ಭವನದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು. ಮಾಸ್ ಸೊಸೈಟಿ ಅಧ್ಯಕ್ಷೆ ಹೂವಕ್ಕ ಮಾನೆ, ಸೊಸೈಟಿ ನಿರ್ದೇಶಕರಾದ ಯಲ್ಲವ್ವ ಪಖಾಂಡೆ, ಮಾಸ್ ಸಂಯೋಜಕರು ಐರಾವತಿ ಮಾಂಗ, ಶಾರದಾ ಶಿರಗಾಂವೆ, ಕೆಎಚ್‌ಪಿಎಸ್ ಮೊರಬ ಶಾಲೆಯ ಮುಖ್ಯ ಶಿಕ್ಷಕರು, ಮಾಸ ಸಂಸ್ಥೆಯ ಸಿಇಒ ಡಾ. ಸೀತವ್ವ ಜೋಡಟ್ಟಿ, ಪದ್ಮಶ್ರೀಪ್ರಶಸ್ತಿ ಪುರಸ್ಕೃತರು, ಮಾಸ್ ಸಿಬ್ಬಂದಿ, ಪ್ರೇರಕರು ಇದ್ದರು. ಮಸರಗುಪ್ಪಿ ಕಲಿಕಾ ಕೇಂದ್ರದ ಪ್ರೇರಕಿ ಕವಿತಾ ಮಹದೇವ ಮಾದರಗೆ ಸನ್ಮಾನಿಸಲಾಯಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿಕೆ

ಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವ

ಬಾಳೇಕುಂದ್ರಿ ಕೆ.ಎಚ್ ಗ್ರಾಮದ ಶ್ರೀ ಮಹಾಲಕ್ಷ್ಮೀ ದೇವಿ ಮಂದಿರ ಉದ್ಘಾಟನೆ

◆**ಬೆಳಗಾವಿ:** ಗ್ರಾಮೀಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ದೇವಸ್ಥಾನಗಳ ಜೀರ್ಣೋದ್ಧಾರ ಮಾಡುವ ಮೂಲಕ ಏಳೂವರೆ ವರ್ಷಗಳ ಹಿಂದೆ ಕೊಟ್ಟ ಮಾತನ್ನು ನಾನು ಉಳಿಸಿಕೊಂಡಿರುವೆ. ನಾನು ಕೇವಲ ಬೆಳಗಾವಿ ಗ್ರಾಮೀಣ ಕ್ಷೇತ್ರವನ್ನು ಅಭಿವೃದ್ಧಿ ಮಾಡುತ್ತಿಲ್ಲ. ಇಡೀ ಕರ್ನಾಟಕದ ಮನೆ ಮನೆಗೂ ಗೃಹಲಕ್ಷ್ಮೀ ಯೋಜನೆಯನ್ನು ತಲುಪಿಸುವ ಕೆಲಸ ಮಾಡುತ್ತಿರುವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.



ಬೆಳಗಾವಿ ತಾಲೂಕಿನ ಬಾಳೇಕುಂದ್ರಿ ಕೆ.ಎಚ್ ಗ್ರಾಮದಲ್ಲಿ ಸುಮಾರು 50 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀ ಮಹಾಲಕ್ಷ್ಮೀ ದೇವಿ ಮಂದಿರದ ವಾಸ್ತುಶಾಂತಿ, ಕಳಸಾರೋಹಣ ಹಾಗೂ ಲೋಕಾರ್ಪಣೆಯ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಸಚಿವರು, ನಾವು ಭಾರತೀಯರು, ದೇವರ ಮೇಲೆ ನಂಬಿಕೆ ಇಟ್ಟಿದ್ದೇವೆ. ಧರ್ಮವನ್ನು ರಕ್ಷಿಸಿದರೆ ಧರ್ಮ ನಮ್ಮನ್ನು ಕಾಪಾಡುತ್ತದೆ. ಅಧರ್ಮದಿಂದ ನಡೆಯುವುದು ನಮ್ಮ ಸಂಸ್ಕೃತಿ ಅಲ್ಲ. ಕಲ್ಲು, ಗಾಳಿ, ಅಗ್ನಿ, ಸೂರ್ಯ, ಸಕಲ ಪ್ರಾಣಿಗಳನ್ನು ನಾವು ಹಿಂದೂ ಧರ್ಮದಲ್ಲಿ ಪೂಜೆ ಮಾಡುತ್ತೇವೆ. ಮತ್ತೊಬ್ಬರಿಗೆ ಕಾಲು ತಾಗಿಸಿದರೂ ನಮಸ್ಕಾರ ಮಾಡುತ್ತೇವೆ. ಸಕಲ ಜೀವ ರಾಶಿಗಳನ್ನು ಪ್ರೀತಿಸುವುದೇ ಹಿಂದು ಧರ್ಮದ ಸಂಸ್ಕೃತಿ ಎಂದು ಸಚಿವರು ಹೇಳಿದರು. ಬೆಳಗಾವಿ ಗ್ರಾಮೀಣ ಕ್ಷೇತ್ರದಲ್ಲಿ ಇದುವರೆಗೂ 154 ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಿರುವೆ. ಬಾಳೇಕುಂದ್ರಿ ಕೆ.ಎಚ್ ಗ್ರಾಮದ ಲಕ್ಷ್ಮೀ ದೇವಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ 50 ಲಕ್ಷ ರೂಪಾಯಿಯನ್ನು ಸರ್ಕಾರದಿಂದ ನೀಡಲಾಗಿದ್ದು, ಇದುವರೆಗೂ ಎರಡು ಕಂತಿನ ಹಣ ಬಿಡುಗಡೆ ಆಗಿದ್ದು, ಮೂರನೇ ಕಂತಿನ ಹಣ ಕೂಡ ಶೀಘ್ರ ಬಿಡುಗಡೆ ಆಗಲಿದೆ. ನಿಸ್ವಾರ್ಥತೆಯಿಂದ ಊರಿನ ಜನರ ಸೇವೆ ಮಾಡುತ್ತಿರುವೆ. ಜೈನ ಬಸದಿ, ಕಲ್ಮೇಶ್ವರ ದೇವಸ್ಥಾನಕ್ಕೆ ಎರಡು ಕೋಟಿ ರೂಪಾಯಿ ಹಾಗೂ ಬಸವೇಶ್ವರ ದೇವಸ್ಥಾನಕ್ಕೆ 35 ಲಕ್ಷ ರೂಪಾಯಿ ಅನುದಾನವನ್ನು ನೀಡಿರುವೆ ಎಂದು ತಿಳಿಸಿದರು.

ಕ್ಷೇತ್ರದ ಗ್ರಾಮಗಳ ಪ್ರತಿಯೊಂದು ಗಲ್ಲಿಯನ್ನು ಅಭಿವೃದ್ಧಿ ಮಾಡಿರುವೆ. ಕ್ಷೇತ್ರಕ್ಕೆ ಎಷ್ಟು ಅನುದಾನ ತರುತ್ತಿರುವೆ ಎಂದರೆ ಪೂಜೆ ಮಾಡಿ ಕೆಲಸ ಆರಂಭಿಸಲು ನನಗೆ ಸಮಯ ಸಾಕಾಗುತ್ತಿಲ್ಲ. ಹಾಗಾಗಿ ನನ್ನ ಮಗ, ನನ್ನ ತಮ್ಮನನ್ನು ಗುದ್ದಲಿ ಪೂಜೆಗೆ ಕಳುಹಿಸುತ್ತಿರುವೆ ಎಂದು ಹೇಳಿದರು.

ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಶ್ರೀ ಮಹಾಲಕ್ಷ್ಮೀ ದೇವಿ ಮಂದಿರದ ವಾಸ್ತುಶಾಂತಿ, ಕಳಸಾರೋಹಣ ಹಾಗೂ ಲೋಕಾರ್ಪಣೆಯ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ವಸಂತರಾವ ಜಾಧವ, ದಶರಥ ಚೌಬಾರಿ, ಬಾಬು ಧರೆನ್ನವರ, ಗಣಪತಿ ಬಾಳುನ್ನವರ, ನಾಗೇಶ ದೇಸಾಯಿ, ಶಂಕರಗೌಡ ಪಾಟೀಲ, ಮಹಾದೇವಿ ರಾಮಚನ್ನವರ, ಕಲ್ಲಪ್ಪ ರಾಮಚನ್ನವರ, ನಿಲೇಶ ಚಂದಗಡ್ಕರ್, ವಿಠ್ಠಲ ಕುರುಬರ, ರವಿ ಬಾಳುನ್ನವರ, ಮಾರುತಿ ಸುಳಗೇಕರ, ಗ್ರಾಮದ ಹಿರಿಯರು ಗುವಜರು ಇತರರು ಇದ್ದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅಕ್ರಮ ಚಟುವಟಿಕೆಗೆ ಕಡಿವಾಣ: ಬಿಇಒ

◆**ರಾಯಬಾಗ:** 2025-26ನೇ ಸಾಲಿನ ಎಸ್ಎಸ್ಎಲ್‌ಸಿ ಪರೀಕ್ಷೆಗಳು ಮಾ.18ರಿಂದ ಏ. 2ರವರೆಗೆ ನಡೆಯಲಿದ್ದು, ರಾಯಬಾಗ ತಾಲೂಕಿನಲ್ಲಿ ಪರೀಕ್ಷೆ ನಡೆಸಲು ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಬಿಇಒ ಬಸವರಾಜಪ್ಪ ಆರ್. ಹೇಳಿದರು.

ಪಟ್ಟಣದ ಬಿಇಒ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಲೂಕಿನಲ್ಲಿ ಒಟ್ಟು 115 ಪರೀಕ್ಷಾ ಕೊಠಡಿಗಳು ಸಿದ್ಧಪಡಿಸಲಾಗಿದ್ದು, 7 ಕ್ಲಸ್ಟರ್‌ಗಳಿಗೆ ಸೇರಿರುವ 14 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಈ ಬಾರಿ 7784 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ವ್ಯವಸ್ಥೆ ಕಲ್ಪಿಸಲಾಗಿದ್ದು, ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಶಿಸ್ತಿನ ಬಗ್ಗೆ ವಿಶೇಷ ಗಮನ ಹರಿಸಲಾಗಿದೆ ಎಂದರು.

ಪರೀಕ್ಷೆ ಸುಗಮವಾಗಿ ನಡೆಯುವಂತೆ 21 ಜನ ಸ್ಥಿರ ಜಾಗ್ರತ ದಳದ ಅಧಿಕಾರಿಗಳು, 21 ಮೊಬೈಲ್ ಸ್ಕ್ವಾಡ್ ಅಧಿಕಾರಿಗಳು ಹಾಗೂ 9 ಜನ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ವಿದ್ಯಾರ್ಥಿಗಳಿಗೆ ಪರೀಕ್ಷಾ ಕೊಠಡಿಗೆ ಹೋಗಿದ್ದಾಗ ಉತ್ತರ ಪತ್ರಿಕೆ ನೀಡಲಾಗುತ್ತಿತ್ತು, ಆದರೆ ಈ ಸಲ ಪ್ರಶ್ನೆ ಪತ್ರಿಕೆ ಮೊದಲು ನೀಡಲಾಗುವುದು. ನಕಲುಗಳಿಗೆ ಅವಕಾಶ ಇಲ್ಲ, ನಕಲು ಮಾಡಲು ಮುಂದಾದವರಿಗೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ಅಲ್ಲದೇ ಯಾವುದೇ ಭಯಭೀತರಾಗದೇ ಪರೀಕ್ಷೆಯನ್ನು ಎದುರಿಸಬೇಕು.ಪ್ರಶ್ನೆಪತ್ರಿಕೆಯಲ್ಲಿಗೊಂದಲ ಇದ್ದರೆ ಕೊಠಡಿಯ ಮೇಲ್ವಿಚಾರಕರಿಗೆ ತಿಳಿಸಿ ಪರಿಹರಿಸಿಕೊಳ್ಳಬೇಕು. ಪ್ರತಿ ಪರೀಕ್ಷಾ ಕೇಂದ್ರಗಳಲ್ಲಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ಎಂದು ಸಲಹೆ ನೀಡಿದರು.

ತಹಶೀಲ್ದಾರ ಮಹಾದೇವ ಸನ್ಮೂರಿ ಮಾತನಾಡಿ, ಪರೀಕ್ಷಾ ಕೇಂದ್ರಗಳಲ್ಲಿ ಶಾಂತಿ ಹಾಗೂ ಭದ್ರತೆ ಕಾಪಾಡಲು ಪೊಲೀಸ್ ಇಲಾಖೆ ಸಹಕರಿಸಲಿದ್ದು, ಸಾರಿಗೆ ಸೌಲಭ್ಯಕ್ಕಾಗಿ ಕೆಎಸ್‌ಆರ್‌ಟಿಸಿ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಅಗತ್ಯವಿದ್ದಲ್ಲಿ ಹೆಸ್ಕಾಂ ವತಿಯಿಂದ ವಿದ್ಯುತ್ ಸರಬರಾಜು ವ್ಯವಸ್ಥೆಯೂ ಕಲ್ಪಿಸಲಾಗಿದೆ ಎಂದು ತಿಳಿಸಲಾಗಿದೆ. ಈ ವೇಳೆ ಎಸ್ಐ ಆನಂದ ತೇರದಾಳ, ಬಿ.ಎಂ ಮಾಳಿ, ಬಸವರಾಜ್ ಕಾಂಬಳೆ, ಲಕ್ಕಪ್ಪ ಬಿದರಿ, ಮನೋಹರ್ ಪೂಜೇರಿ, ವಿಠ್ಠಲ್ ತೇರದಾಳ, ಜಿನೇಂದ್ರ ನೀಲಜಗಿ, ವಿ.ಬಿ ಬನಶಂಕರಿ, ಗುರುಪಾದ್ ಮೇಲಗಡೆ ಸೇರಿದಂತೆ ಹೆಸ್ಕಾಂ ಇಲಾಖೆ, ಬಿಇಒ ಕಚೇರಿ ಸಿಬ್ಬಂದಿ ಹಾಗೂ ತಾಲೂಕಿನ ಎಲ್ಲ ಮುಖ್ಯ ಶಿಕ್ಷಕರು ಉಪಸ್ಥಿತರಿದ್ದರು.



ಮಹಿಳೆಗೆ ಅನುಕಂಪ ಬೇಡ, ಸಮಾನ ಅವಕಾಶ ನೀಡಿ: ಶ್ವೇತಾ

◆**ತೆಲಸಂಗ** : ಮಹಿಳೆಯನ್ನು ನಾಲ್ಕು ಗೋಡೆಗಳ ಮಧ್ಯೆ ದೇವತೆ ಎಂದು ಬಣ್ಣಿಸಿ, ಕಟ್ಟುಪಾಡುಗಳ ಚೌಕಟ್ಟಿನಲ್ಲಿ ಬಂಧಿಸುವುದನ್ನು ನಿಲ್ಲಿಸಬೇಕು. ಅವಳಿಗೆ ಬೇಕಿರುವುದು ಅನುಕಂಪವಲ್ಲ, ಸಾಧಿಸಲು ಮುಕ್ತ ಅವಕಾಶಗಳು ಎಂದು ಉಪನ್ಯಾಸಕಿ ಶ್ವೇತಾ ಜುಗಳೆ ಹೇಳಿದರು.

ಗ್ರಾಮದ ಎಸ್ಎಂವೈಕೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಇಂದಿನ ಆಧುನಿಕ ಯುಗದಲ್ಲೂ ಗ್ರಾಮೀಣ ಭಾಗದ ಪ್ರತಿಭಾವಂತ ಮಹಿಳೆಯರಿಗೆ ಪೂರ್ಣ ಸ್ವಾತಂತ್ರ್ಯ ಸಿಗುತ್ತಿಲ್ಲ ಎಂಬುದು ವಿಷಾದನೀಯ. ಆಚಾರ-ವಿಚಾರ ಮತ್ತು ಸಂಪ್ರದಾಯದ ನೆಪದಲ್ಲಿ ಹೆಣ್ಣುಮಕ್ಕಳಿಗೆ ಅನಗತ್ಯ ಕಟ್ಟುಪಾಡುಗಳನ್ನು ವಿಧಿಸಿ, ಅವರ ಆಸೆ-ಆಕಾಂಕ್ಷೆಗಳನ್ನು ಚಿವುಟಿ ಹಾಕಲಾಗುತ್ತಿದೆ.ಈವ್ಯವಸ್ಥೆ ಬದಲಾಗಬೇಕು. ಸಮಾಜದಲ್ಲಿ ಲಿಂಗ ಸಮಾನತೆಗೆ ನಾವೆಲ್ಲರೂ ಮುನ್ನಡಿ ಬರೆಯಬೇಕಿದೆ ಎಂದರು.

ಇಂದು ಮಹಿಳೆ ಕೇವಲ ಮನೆಯ ನಾಲ್ಕು ಗೋಡೆಗಳಿಗೆ ಸೀಮಿತವಾಗಿಲ್ಲ, ಆಕಾಶದಲ್ಲಿ ವಿಮಾನ ಹಾರಿಸುವುದರಿಂದ ಹಿಡಿದು, ದೇಶದ ಗಡಿ ಕಾಯುವವರೆಗೆ, ಬಾಹ್ಯಾಕಾಶ ಸಂಶೋಧನೆಯಿಂದ ಹಿಡಿದು ಒಲಿಂಪಿಕ್ಸ್ ಪದಕ ಗೆಲ್ಲುವವರೆಗೆ ಮಹಿಳೆ ತನ್ನ ಹೆಜ್ಜೆಯನ್ನು ಗುರುತಿಸಿದ್ದಾಳೆ ಎಂದರು. ಪ್ರಾಚಾರ್ಯ ಶಿವಕುಮಾರ್ ಕೆ. ಮಾತನಾಡಿ, ಮಹಿಳೆಯು ತಾಯಿ, ತಂಗಿ, ಮಡದಿ ಮತ್ತು ಮಗಳಾಗಿ ಪ್ರೀತಿಯನ್ನು ಹಂಚುತ್ತಾಳೆ. ಅವಳ ಕನಸುಗಳಿಗೆ ರೆಕ್ಕೆ ನೀಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಪ್ರತಿ ಮನೆಯಲ್ಲೂ ಹೆಣ್ಣುಮಕ್ಕಳಿಗೆ ಶಿಕ್ಷಣ ಮತ್ತು ಸ್ವಾತಂತ್ರ್ಯ ನೀಡಿದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಪ್ರಕೃತಿಯ ಸೃಷ್ಟಿಯ ಶಕ್ತಿ ಅವಳು ಎಂದರು.

ಡಾ. ಪೂರ್ಣಿಮಾ ಅಂಕಲಗಿ, ಪ್ರಾಧ್ಯಾಪಕರ ಡಾ. ಬಿ.ಐ. ಮಠಪತಿ, ಪ್ರೀತಿ ಆರ್.ವಿ, ಜ್ಯೋತಿ ಎಸ್.ಎನ್., ರಮ್ಯಾ ಜೆ., ಹೇಮಾ ತುಂಬರಮಟ್ಟಿ, ಡಾ. ರಾಜೇಶ್ವರಿ ಅವಟಿ, ಡಾ. ರಾಜೇಶ್ವರಿ ಕೊಣ್ಣೂರ್, ಮಂಜುಳಾ ಹಾಲೊಳ್ಳಿ, ಸರೋಜಿನಿ ಮುಳುಗುಂದ, ಡಾ.ಮಂಜು ಸನದಿ, ಅನಿತಾ, ಸುವರ್ಣ ಇಂಗಳೇಶ್ವರ, ಜಾನಾಬಾಯಿ ಕಾಳೆ ಇದ್ದರು.



ನಮ್ಮೂರು ನಮ್ಮ ಕೆರೆ ಕಾರ್ಯಕ್ರಮದಡಿ ಕೆರೆ ಹಸ್ತಾಂತರ

◆**ಸವದತ್ತಿ:** ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಸವದತ್ತಿ ತಾಲೂಕು ವತಿಯಿಂದ ಬಸಿಡೋಣಿ ಗ್ರಾಮದಲ್ಲಿ ನಮ್ಮೂರು ನಮ್ಮ ಕೆರೆ ಕಾರ್ಯಕ್ರಮದಡಿ ಪುನಶ್ಚೇತನ ಗೊಳಿಸಲಾದ 913ನೇ ಕೆರೆಯ ನಾಮಫಲಕ ಅನಾವರಣ ಮತ್ತು ಹಸ್ತಾಂತರ ಕಾರ್ಯಕ್ರಮ ನಡೆಯಿತು.

ಈ ವೇಳೆ ಸವದತ್ತಿ ಬ್ರಹ್ಮಾನಂದ ಆಶ್ರಮದ ಶಿವಾನಂದ ಶ್ರೀಗಳು ನಾಮಫಲಕ ಅನಾವರಣಗೊಳಿಸಿ ಆಶೀರ್ವಚನ ನೀಡಿ, ಕೆರೆಯ ನೀರು ಅಮೃತಕ್ಕೆ ಸಮಾನ ಕೆರೆಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದರಿಂದ ಗ್ರಾಮದ ಜನರಿಗೆ ಕುಡಿಯಲು ಮತ್ತು ಜಾನುವಾರುಗಳಿಗೆ ಪ್ರಾಣಿ ಪಕ್ಷಿಗಳಿಗೆ ಅನುಕೂಲವಾಗುತ್ತದೆ. ಗ್ರಾಮಾಭಿವೃದ್ಧಿ ಯೋಜನೆಯಿಂದ ಕೆರೆ ಪುನ:ಚೇತನ ಗೊಳಿಸಿರುವುದು ಪೂಜ್ಯರ ದೂರದೃಷ್ಟಿಯ ಸಂಕೇತವಾಗಿದ್ದು, ಇದನ್ನು ಸ್ವಚ್ಛವಾಗಿಟ್ಟುಕೊಂಡು ಮುಂದಿನ ಪೀಳಿಗೆಗೆ ಕಾಯ್ದುಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.



ಕೆರೆಯ ಜವಾಬ್ದಾರಿ ಹಸ್ತಾಂತರ ಮಾಡಿದ ಜಿಲ್ಲಾ ನಿರ್ದೇಶಕ ಎಚ್.ಆರ್. ಲವಕುಮಾರ್ ಮಾತನಾಡಿ, ಗ್ರಾಮಾಭಿವೃದ್ಧಿ ಯೋಜನೆ ಮುಖಾಂತರ ಪರಿಸರ ಸಂರಕ್ಷಣೆಗಾಗಿ ಜೀವ ಸಂಕುಲದ ಉಳಿವಿಗಾಗಿ ಪೂಜ್ಯರು ಕೆರೆ ಹೊಳೆತುವ ಕಾರ್ಯವನ್ನ ಕೈಗೊಂಡಿದ್ದು, ಈಗಾಗಲೇ ರಾಜ್ಯಾದ್ಯಂತ ಸುಮಾರು 950 ಕೆರೆಗಳನ್ನ ಜೀರ್ಣೋದ್ಧಾರಗೊಳಿಸಿದ್ದು ಈ ತಿಂಗಳ ಅಂತ್ಯಕ್ಕೆ 1000 ಕೆರೆಗಳ ಜೀರ್ಣೋದ್ಧಾರ ಮಾಡಿ ಲೋಕಾರ್ಪಣೆ ಮಾಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ತಾಲೂಕಿನ ಯೋಜನಾಧಿಕಾರಿ ಸುಬ್ರಾಯ ನಾಯ್ಕ್, ಪ್ರಾದೇಶಿಕ ಕೆರೆ ಅಭಿಯಂತರ ನಿಂಗರಾಜ ಮಾಳವಾಡ, ಗ್ರಾಮದ ಮುಖಂಡರಾದ ಎಂ.ಎಸ್. ಜಾವೂರ್, ಮುತ್ತಪ್ಪ ಫಕೀರಪ್ಪ ಬಾರಿಗಿಡದ, ಪತ್ರೆಪ್ಪ ಚಿಕ್ಕುಂಬಿ, ಮಹಾಂತೇಶ್ ಜಾವೂರ್, ಕೃಷಿಮೇಲ್ವಿಚಾರಕ ಅಣ್ಣಪ್ಪ ಎಸ್., ವಲಯ ಮೇಲ್ವಿಚಾರಕಿ ಸುನಿತಾ ಹಿರೇಮಠ್, ಲೆಕ್ಕ ಪರಿಶೋಧಕ ಲಕ್ಕಪ್ಪ ಮತ್ತು ಗ್ರಾಮದ ಸುಮಾರು 100ಕ್ಕೂ ಹೆಚ್ಚಿನ ರೈತರು, ರೈತ ಮಹಿಳೆಯರು ಭಾಗವಹಿಸಿದ್ದರು.

ಕಾಂಗ್ರೆಸ್ ಸೇರಿದ ಹಲವು ಬಿಜೆಪಿ ಮುಖಂಡರು

◆**ಬೆಳಗಾವಿ:** ಗ್ರಾಮೀಣ ವಿಧಾನ ಸಭಾ ಕ್ಷೇತ್ರದಲ್ಲಿ ರಾಜಕೀಯ ಧೃವೀಕರಣ ಆರಂಭಗೊಂಡಿದ್ದು, ಹಲವಾರು ಬಿಜೆಪಿ ನಾಯಕರು ಕಾಂಗ್ರೆಸ್ ಸೇರುತ್ತಿದ್ದಾರೆ.

ರಾಜಹಂಸಗಡದ ಅನೇಕ ಹಿರಿಯ ಬಿಜೆಪಿ ಮುಖಂಡರು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಸೇರಿದರು. ಸಿದ್ಧಪ್ಪ ಗಣಪತ ಪವಾರ್, ಲಕ್ಷ್ಮಣ ಸಿದ್ಧಪ್ಪ ತೋರ್ವತ್, ರುಕ್ಮಣ್ಣ ಸಿದ್ಧಪ್ಪ ಹವಳ ಮೊದಲಾದವರು ಕಾಂಗ್ರೆಸ್ ಪಕ್ಷ ಸೇರಿದರು.

ಬೆಳಗಾವಿ ಗ್ರಾಮೀಣ ಕ್ಷೇತ್ರದ ಶಾಸಕರೂ ಆಗಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಗೃಹ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಶಾಲು ಹಾಕಿ ಸ್ವಾಗತಿಸಿದರು. ಕಳೆದ 15 - 20 ವರ್ಷಗಳಿಂದ ತಾವು ಬಿಜೆಪಿಯಲ್ಲಿ ಕೆಲಸ ಮಾಡಿದ್ದು, ಗ್ರಾಮೀಣ ವಿಧಾನ ಸಭಾ ಕ್ಷೇತ್ರದಲ್ಲಿ ಈಗ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ನೋಡಿ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಕೈ ಬಲಪಡಿಸಬೇಕೆನ್ನುವ ಉದ್ದೇಶದಿಂದ ಕಾಂಗ್ರೆಸ್ ಸೇರಿದ್ದಾಗಿ ಅವರು ತಿಳಿಸಿದರು.



ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಗಳನ್ನು ಒಪ್ಪಿ ಮುಖಂಡರು ಕಾಂಗ್ರೆಸ್ ಸೇರಿದ್ದಾರೆ. ಅವರನ್ನು ಗೌರವದಿಂದ ನಡೆಸಿಕೊಳ್ಳಲಾಗುವುದು ಎಂದು ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದರು. ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಯುವ ಕಾಂಗ್ರೆಸ್ ಮುಖಂಡ ಮೃಣಾಲ ಹೆಬ್ಬಾಳ್ಕರ್ , ಕಾಡಾ ಅಧ್ಯಕ್ಷ ಯುವರಾಜ ಕದಂ, ಉಚಗಾಂವ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಾಳು ದೇಸೂರಕರ್, ಶಂಕರಗೌಡ ಪಾಟೀಲ, ಮನೋಹರ ಬೆಳಗಾಂವಕರ್, ಗಾಯತ್ರಿ ಪಾಟೀಲ ಸೇರಿದಂತೆ ಹಲವಾರು ಮುಖಂಡರು ಇದ್ದರು.

ಗೌರವ ಡಾಕ್ಟರೇಟ್ ಪಡೆದ ಸಿಂಧಿಯಾರಿಗೆ ಸನ್ಮಾನ

◆**ಸವದತ್ತಿ:** ಸವದತ್ತಿಯ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನದಲ್ಲಿ ನಡೆದ ಜಿಲ್ಲಾ ಮಟ್ಟದ ರೋವರ್ಸ್ ಮತ್ತು ರೇಂಜರ್ಸ್ ಶಿಬಿರ ಮತ್ತು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರವ ುದಲ್ಲಿ ಕಲಬುರ್ಗಿ ಕೇಂದ್ರ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದ ಸ್ಕೌಟ್ಸ್-ಗೈಡ್ಸ್ ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್.ಸಿಂಧಿಯಾ ಹಾಗೂ ಜಿಲ್ಲಾ ಮುಖ್ಯ ಆಯುಕ್ತ ಗಜಾನನ ಮನ್ನಿಕೇರಿ ಅವರನ್ನು ಸವದತ್ತಿಯ ಬಿಇಒ ಕಚೇರಿ ಹಾಗೂ ತಾಲೂಕಾ ಸಂಸ್ಥೆಯಿಂದ ಗೌರವಿಸಿ ಸನ್ಮಾನಿಸಲಾಯಿತು.



ಸ್ಕೌಟ್ಸ್-ಗೈಡ್ಸ್ ನ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯ, ಸ್ಕೌಟ್-ಗೈಡ್ಸ್ ಜಿಲ್ಲಾ ಮುಖ್ಯ ಆಯುಕ್ತ ಗಜಾನನ ಮನ್ನಿಕೇರಿ, ಸವದತ್ತಿ ಬಿಇಒ ಎ.ಎ.ಖಾಜಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಎರಡೂ ಶೈಕ್ಷಣಿಕ ಜಿಲ್ಲೆಯ ಮಹಿಳಾ ಅಧಿಕಾರಿಗಳಾದ ಲೀಲಾವತಿ ಹಿರೇಮಠ DDPI, ಮಹದೇವಿ ನಾಯಕ BEO ನಿಪ್ಪಾಣಿ, ಪಿ.ಬಿ. ಪಾಟೀಲ BEO ಹುಕ್ಕೇರಿ, ಉಮಾದೇವಿ ಹಿರೇಮಠ DYPಐಬೆಳಗಾವಿ, ಸುರೇಖಾ ಮಿರ್ಜಿ ಖಾನಾಪುರ PEO, ಸಾಧನಾ ಎಂ ಭದ್ರಿ PEO ಬೆಳಗಾವಿ ಗ್ರಾಮೀಣ, ಜಾಹಿರಾ ಪಟೇಲ್ PEO ಬೆಳಗಾವಿ ನಗರ ಹಾಗೂ ಶ್ರೀ ರೇಣುಕಾ ಎಲ್ಲಮ್ಮ ಟ್ರಸ್ಟ್ ಉಪ ಕಾರ್ಯದರ್ಶಿಗಳಾದ ನಾಗರತ್ನ ಚೋಳನ, ಪಲ್ಲವಿ ನಾಡಕರ್ಣಿ ಜೈನ ಶಿಕ್ಷಣ ಸಂಸ್ಥೆ ಬೆಳಗಾವಿ, ಅಪರ್ಣ ದೇಶಪಾಂಡೆ ಫೀನಿಕ್ಸ್ ಇಂಗ್ಲಿಷ್ ಮಾಧ್ಯಮ ಶಾಲೆ ಹೊಣಗ, ಚೇತನ ಪಾಟೀಲ್ ಕೆಎಲ್ಇ ಇಂಗ್ಲಿಷ್ ಮಾಧ್ಯಮ ಶಾಲೆ ಗೋಕಾಕ್, ಭಾರತಿ ತೂಗಶೆಟ್ಟಿ ಅಡುಗೆ ಸಹಾಯಕರು ಇವರುಗಳನ್ನು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ನಿಮಿತ್ಯವಾಗಿ ''ಶ್ರೇಷ್ಠ ಸೇವಾ ಪ್ರಶಸ್ತಿ'' ನೀಡಿ, ಗೌರವಿಸಿ ಸತ್ಕರಿಸಲಾಯಿತು.

ಶಿಬಿರದಲ್ಲಿ ಬೆಳಗಾವಿ ಜಿಲ್ಲೆಯ ಬೇರೆ ಬೇರೆ ಪದವಿ ಮಹಾ ವಿದ್ಯಾಲಯಗಳ 300 ರೋವರ್ಸ್ ಮತ್ತು ರೇಂಜರ್ಸ್ ಮಕ್ಕಳು, ನಾಲ್ಕು ದಿನದವರೆಗೆ ಯಲ್ಲಮ್ಮ ದೇವಸ್ಥಾನದ ಪ್ರಾಂಗಣದ ಸ್ವಚ್ಛತೆ, ಜಾತ್ರಾ ನಿಮಿತ್ಯ ಎಲ್ಲಮ್ಮ ದೇವಸ್ಥಾನದ ಹುಂಡಿಯ ಹಣ ಎಣಿಕೆ ಮಾಡಿದರು. ಬೆಳಗಾವಿ, ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಎಲ್ಲಾ ತಾಲೂಕುಗಳ ಸ್ಕೌಟ್ ಕಾರ್ಯದರ್ಶಿಗಳು ಹಿರಿಯ ದಳ ನಾಯಕರುಗಳು, ಜಿಲ್ಲೆಯ ರೋವರ್ಸ್ ರೇಂಜರ್ಸ್ ವಿದ್ಯಾರ್ಥಿಗಳು ರೋವರ್ ರೇಂಜರ್ ನಾಯಕರು, ಸಿಆರ್‌ಪಿಗಳು ಉಪಸ್ಥಿತರಿದ್ದರು.

ಲೋಕ ಅದಾಲತ್: 2,112 ಪ್ರಕರಣಗಳು ಇತ್ಯರ್ಥ

◆**ಗೋಕಾಕ:** ಬೃಹತ್ ಲೋಕ ಅದಾಲತ್ ಆಯೋಜನೆ ಹಿನ್ನಲೆಯಲ್ಲಿ ಶನಿವಾರ ಇಲ್ಲಿನ ತಾಲೂಕು ಕಾನೂನು ಸೇವೆಗಳ ಸಮಿತಿ ನ್ಯಾಯಾಲಯಗಳ ಸಂಕೀರ್ಣದಲ್ಲಿ ಕಕ್ಷಿಗಾರರ ಮಧ್ಯೆ ನಡೆಸಿದ ರಾಜಿಸಂಧಾನ ಯತ್ನಗಳ ಫಲವಾಗಿ ಗೋಕಾಕ ನ್ಯಾಯಾಲಯಗಳ 1,749 ಮತ್ತು ಮೂಡಲಗಿ ಜೆ.ಎಂ.ಎಫ್.ಸಿ. ನ್ಯಾಯಾಲಯದ 373 ಪ್ರಕರಣಗಳು ಸೇರಿಕೊಂಡು ಒಟ್ಟು 2,112 ಪ್ರಕರಣಗಳು ಇತ್ಯರ್ಥಗೊಂಡು, ಕಕ್ಷಿಗಾರರಿಗೆ ರೂ. 4,93,05,611 ಮೊತ್ತ ಪರಿಹಾರಕ್ಕೆ ಆದೇಶಿಸಲಾಯಿತು.



ಇವುಗಳಲ್ಲಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದ 21, ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದ 17 ಹಾಗೂ ಪ್ರಧಾನ ಜೆ.ಎಂ.ಎಫ್.ಸಿ. ನ್ಯಾಯಾಲಯದ 461, 1ನೇ ಹೆಚ್ಚುವರಿ ಜೆ.ಎಂ.ಎಫ್.ಸಿ. ನ್ಯಾಯಾಲಯದ 710 ಮತ್ತು 2ನೇ ಹೆಚ್ಚುವರಿ ಜೆ.ಎಂ.ಎಫ್.ಸಿ. ನ್ಯಾಯಾಲಯದ 540 ಪ್ರಕರಣಗಳು ಇತ್ಯರ್ಥಗೊಂಡಿವೆ. ಇವುಗಳಲ್ಲಿ ಗೋಕಾಕ ನ್ಯಾಯಲಯಗಳಲ್ಲಿ ಹಿರಿಯ ನಾಗರಿಕರಿಗೆ ಸೇರಿದ ಒಟ್ಟು ಪ್ರಕರಣಗಳು 17 ಇತ್ಯರ್ಥಗೊಂಡಿವೆ.

ಇವುಗಳಲ್ಲಿ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣಾ ಹಂತದಲ್ಲಿದ್ದ ಪ್ರಕರಣಗಳಲ್ಲದೇ, ಬ್ಯಾಂಕ್, ಇತರೆ ಹಣಕಾಸು ಸಂಸ್ಥೆಗಳು, ಚೌನ್ನಡ ಚೆಕ್ ಪ್ರಕರಣಗಳು, ಜನನ-ಮರಣಗಳ ನೋಂದಣಿ, ವೈವಾಹಿಕ ಜೀವನಕ್ಕೆ ಸಂಬಂಧಿಸಿದ, ವಿವಾಹ ವಿಚ್ಛೇದನ, ಸ್ಥಿರಾಸ್ಥಿಗಳಲ್ಲಿ ಪಾಲು-ಪಟ್ಟಿ ಹೀಗೆ ಇನ್ನೂ ಅನೇಕ ನಮೂನೆಯ ಬೇಡಿಕೆಗಳನ್ನು ಇಟ್ಟುಕೊಂಡು ನ್ಯಾಯಾಲಯಗಳ ಕದ ತಟ್ಟುತ್ತಿದ್ದ ಕಕ್ಷಿಗಾರರು ಪರಸ್ಪರ ಸಹೋದರತ್ವ ಭಾವನೆಯೊಂದಿಗೆ ಇನ್ನು ನಿರಂಬಳದಿಂದ ವಿಶ್ರಮಿಸುವ ಸ್ಥಿತಿ ಮೂಡಿದೆ.

ವಕೀಲರ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಆದಿಯಾಗಿ ನೀಡಿದ ಸಹಕಾರ ಹಾಗೂ ನ್ಯಾಯಾಧೀಶರ ವೃಂದವೂ ತೋರಿದ ಚಾಕ್ಯತೆಯಿಂದಾಗಿ ತಾಲೂಕು ಕಾನೂನು ಸೇವೆಗಳ ಸಮಿತಿ ಸಹಸ್ರ ಸಂಖ್ಯೆಯಲ್ಲಿ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥ ಪಡಿಸಲು ಸಾಧ್ಯವಾಯಿತು ಎಂದು ತಾಲೂಕು ಕಾನೂನು ಸಮಿತಿ ಅಧ್ಯಕ್ಷ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ ಉಮೇಶ ಆತ್ನುರೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರುಸುದ್ದಿ

ಹನುಮಾನ ಮಂದಿರಕ್ಕೆ ಅಣ್ಣಾಸಾಹೇಬ ಜೊಲ್ಲೆ ದಂಪತಿ ಭೇಟಿ

ಚಿಕ್ಕೋಡಿ: ನಿಪ್ಪಾಣಿ ಮತಕ್ಷೇತ್ರದ ಚಾಂದಶಿರದವಾಡ ಗ್ರಾಮದ ಶ್ರೀ ಹನುಮಾನ ಮಂದಿರಕ್ಕೆ ಭೇಟಿ ನೀಡಿ, ದೇವಸ್ಥಾನದ ವಾಸ್ತುಶಾಂತಿ, ಮೂರ್ತಿಪ್ರಾಣ ಪ್ರತಿಷ್ಠಾಪನೆ, ಹಾಗೂ ಕಳಸಾರೋಹಣ ಕಾರ್ಯಕ್ರಮದಲ್ಲಿ ನಿಪ್ಪಾಣಿ ಶಾಸಕಿ ಶಶಿಕಲಾ ಜೊಲ್ಲೆ ಹಾಗೂ ಡಿ.ಸಿ.ಸಿ.ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ಭಾಗವಹಿಸಿ, ಆಂಜನೇಯನ ಮೂರ್ತಿಗೆ ಹಾಲಿನ ಅಭಿಷೇಕ ಮಾಡಿ, ಸತ್ಕಾರ ಸ್ವೀಕರಿಸಿ, ಮಾತನಾಡಿದರು. ಇದಕ್ಕೂ ಮೊದಲು ಆಂಜನೇಯನ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿ ನಾಡಿನ ಜನತೆಗೆ ಒಳಿತಾಗಲಿ ಎಂದು ಪ್ರಾರ್ಥಿಸಿದರು.

ಈ ಕಾರ್ಯಕ್ರಮದಲ್ಲಿ ಡಿ.ಸಿ.ಸಿ.ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ, ಅಣ್ಣಾ ಪಾಟೀಲ, ಸಂಜಯ ಪಾಟೀಲ, ರಾಮಗೊಂಡ ಪಾಟೀಲ, ಶರದ ಜಂಗಟೆ, ಜಿತೇಂದ್ರ ಖೋತ, ಬಾಬಾಸಾಹೇಬ ಖೋತ, ರವೀಂದ್ರ ಸ್ವಾಮಿ, ಶೀತಲ ಪಾಟೀಲ, ಅಭಯ ಪಾಟೀಲ, ದೇವಸ್ಥಾನ ಕಮೀಟಿ ಸದಸ್ಯರು, ಸ್ಥಳೀಯ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ವೃತ್ತಿ ಮೇಳ ಕಾರ್ಯಕ್ರಮ ನಾಳೆ

ಬೆಳಗಾವಿ: ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಡಯಟ್ ಮಣ್ಣೂರ ಇಲ್ಲಿ ವೃತ್ತಿಪರ ಮತ್ತು ವೃತ್ತಿ ಮಾರ್ಗದರ್ಶನ ಘಟಕವನ್ನು ಸ್ಥಾಪಿಸಿ ಅದರ ಅಡಿಯಲ್ಲಿ 9 ರಿಂದ 12ನೇ (10ನೇ ತರಗತಿ ವಿದ್ಯಾರ್ಥಿಗಳನ್ನು ಹೊರತುಪಡಿಸಿ) ತರಗತಿಯ ವಿದ್ಯಾರ್ಥಿಗಳಿಗಾಗಿ ಮಾ. 17 ರಂದು ಬೆಳಿಗ್ಗೆ 10 ರಿಂದ ಸಂಜೆ 5ರ ವರೆಗೆ "ವೃತ್ತಿ ಮೇಳ" ಕಾರ್ಯಕ್ರಮವನ್ನು ಬೆಳಗಾವಿಯ ಕಾಲೇಜು ರಸ್ತೆ ಮಹಿಳಾ ವಿದ್ಯಾಲಯ ಮರಾಠಿ ಮಾಧ್ಯಮ ಪ್ರೌಢಶಾಲೆ ಇಲ್ಲಿ ಆಯೋಜಿಸಲಾಗಿದೆ.

ಈ ಮೇಳದ ಪ್ರಮುಖ ಉದ್ದೇಶಗಳು: ಎಸ್ಎಸ್ಎಲ್‌ಸಿ ಮತ್ತು ಪಿ ಯು ಸಿ ನಂತರ ಲಭ್ಯವಿರುವ ವಿವಿಧ ವಿದ್ಯಾಭ್ಯಾಸ ಮಾರ್ಗಗಳ ಪರಿಚಯ, ಪಿಯುಸಿ, ಐಟಿಐ, ಡಿಪ್ಲೋಮಾ, ಬಿ.ಇ, ಮೆಡಿಕಲ್, ಕೃಷಿ ಮುಂತಾದ ಕ್ಷೇತ್ರಗಳ ಕುರಿತು ಮಾಹಿತಿ. ವಿದ್ಯಾರ್ಥಿಗಳ ಸಾಮರ್ಥ್ಯ ಮತ್ತು ಆಸಕ್ತಿಗೆ ತಕ್ಕಂತೆ ಶೈಕ್ಷಣಿಕ ಮಾರ್ಗದರ್ಶನ, ಉದ್ಯೋಗಾವಕಾಶಗಳ ಕುರಿತು ತಿಳುವಳಿಕೆ, ವಿವಿಧ ಸಂಸ್ಥೆಗಳ ತಜ್ಞರಿಂದ ಸಲಹೆ ಮತ್ತು ಮಾರ್ಗದರ್ಶನ, ಪೋಷಕರು ಮತ್ತು ವಿದ್ಯಾರ್ಥಿಗಳಿಗಾಗಿ ಸಂವಾದ ಕಾರ್ಯಕ್ರಮ, ವಿದ್ಯಾರ್ಥಿಗಳ ಸಂಶಯಗಳಿಗೆ ತಜ್ಞರಿಂದ ಉತ್ತರ ಈ ರೀತಿಯಲ್ಲಿ ಉದ್ದೇಶಗಳನ್ನು ಒಳಗೊಂಡಿದ್ದು, ಈ ಮೇಳದಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳುವಂತೆ ಬೆಳಗಾವಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಮಣ್ಣೂರನ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ.23ರಿಂದ ಅನಿರ್ದಿಷ್ಟಾವಧಿ ಹೋರಾಟ

ಬೆಳಗಾವಿ: ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ–ಯುಕೆಜಿ ಪ್ರಾರಂಭಿಸುವ ಸರ್ಕಾರದ ನಿರ್ಧಾರದ ವಿರುದ್ಧ ಮತ್ತು ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯ ಅಂಗನವಾಡಿ ನೌಕರರು ಸಿಡಿದೆದ್ದಿದ್ದಾರೆ. ಸಚಿವ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಮನವಿ ಸಲ್ಲಿಸಿರುವ ನೌಕರರು, ಮಾ.23ರಿಂದ ಬೆಂಗಳೂರಿನಲ್ಲಿ ಅನಿರ್ದಿಷ್ಟಾವಧಿ ಹೋರಾಟ ನಡೆಸುವುದಾಗಿ ಎಚ್ಚರಿಸಿದ್ದಾರೆ. ಪ್ರಮುಖವಾಗಿ 6 ವರ್ಷದೊಳಗಿನ ಮಕ್ಕಳ ಶಿಕ್ಷಣವನ್ನು ಅಂಗನವಾಡಿ ಕೇಂದ್ರಗಳಲ್ಲೇ ಖಾತ್ರಿಪಡಿಸಬೇಕೆಂದು ಒತ್ತಾಯಿಸಿದರು. ಶಿಕ್ಷಣ ಇಲಾಖೆಯು ಪ್ರತ್ಯೇಕವಾಗಿ ಶಾಲೆಗಳಲ್ಲಿ ಎಲ್‌ಕೆಜಿ–ಯುಕೆಜಿ ಪ್ರಾರಂಭಿಸುತ್ತಿರುವುದರಿಂದ ಅಂಗನವಾಡಿಗಳಲ್ಲಿನ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಈ ಆದೇಶವನ್ನು ರದ್ದುಗೊಳಿಸಿ, ಅಂಗನವಾಡಿಗಳಲ್ಲೇ ಈ ತರಗತಿಗಳನ್ನು ಬಲಪಡಿಸಬೇಕು. ರಾಜ್ಯದ 5 ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ತಲುಪಿಸುವಲ್ಲಿ ದುಡಿಯುತ್ತಿರುವ ತಮಗೆ ಸೂಕ್ತ ಗೌರವಧನ ಹೆಚ್ಚಳ ಮಾಡದಿರುವುದು ತೀವ್ರ ನಿರಾಸೆ ಮೂಡಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಅಂಗನವಾಡಿ ನೌಕರರನ್ನು ಕನಿಷ್ಠ ಕೂಲಿ ಕಾಯ್ದೆಯ ವ್ಯಾಪ್ತಿಗೆ ತರುವುದು, ನಿವೃತ್ತ ಕಾರ್ಯಕರ್ತೆಯರಿಗೆ ಬಾಕಿ ಇರುವ 183 ಕೋಟಿ ರೂಪಾಯಿ ಗ್ರಾಚ್ಯುಟಿ ಹಣ ಬಿಡುಗಡೆ ಮಾಡುವುದು, ಮತ್ತು ಎಲೆಕ್ಷನ್ ಕೆಲಸಗಳಿಂದ ನೌಕರರನ್ನು ಮುಕ್ತಗೊಳಿಸುವುದು ಸೇರಿದಂತೆ 18 ಪ್ರಮುಖ ಬೇಡಿಕೆಗಳನ್ನು ಸಂಘವು ಮುಂದಿಟ್ಟಿದೆ. ಇಂದಿನ ಬೇಡಿಕೆಗಳಿಗೆ ಸರ್ಕಾರ ಸೂಕ್ತ ಸ್ಪಂದನೆ ನೀಡದಿದ್ದರೆ, ಮಾ.23ರಿಂದ ಬೆಂಗಳೂರಿನಲ್ಲಿ ಬೃಹತ್ ಅನಿರ್ದಿಷ್ಟಾವಧಿ ಹೋರಾಟವನ್ನು ಕೈಗೊಳ್ಳುವುದಾಗಿ ಸಂಘದ ಪದಾಧಿಕಾರಿಗಳು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಮಂದಾ ನೇವತಿ, ಸುವರ್ಣಾ ಮೋರೆ, ಲಕ್ಷ್ಮೀ ನಾಯಕ್, ಉಲ್ಲಾ, ಪುಷ್ಪಾ ಸೇರಿದಂತೆ ಹಲವು ಅಂಗನವಾಡಿ ಕಾರ್ಯಕರ್ತರು ಇದ್ದರು.



ಚಿಕ್ಕೋಡಿ: ನಿಪ್ಪಾಣಿ ಮತಕ್ಷೇತ್ರದ ಚಾಂದಶಿರದವಾಡ ಗ್ರಾಮದ ಶ್ರೀ ಹನುಮಾನ ಮಂದಿರಕ್ಕೆ ಭೇಟಿ ನೀಡಿ, ದೇವಸ್ಥಾನದ ವಾಸ್ತುಶಾಂತಿ, ಮೂರ್ತಿಪ್ರಾಣ ಪ್ರತಿಷ್ಠಾಪನೆ, ಹಾಗೂ ಕಳಸಾರೋಹಣ ಕಾರ್ಯಕ್ರಮದಲ್ಲಿ ನಿಪ್ಪಾಣಿ ಶಾಸಕಿ ಶಶಿಕಲಾ ಜೊಲ್ಲೆ ಹಾಗೂ ಡಿ.ಸಿ.ಸಿ.ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ಭಾಗವಹಿಸಿದ್ದರು. ಅಣ್ಣಾ ಪಾಟೀಲ, ಸಂಜಯ ಪಾಟೀಲ, ರಾಮಗೊಂಡ ಪಾಟೀಲ, ಶರದ ಜಂಗಟೆ, ಜಿತೇಂದ್ರ ಖೋತ, ಬಾಬಾಸಾಹೇಬ ಖೋತ ಸೇರಿದಂತೆ ಇತರರಿದ್ದರು.

ಮಕ್ಕಳಿಗೆ ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ ನೀಡಿ

ಖಾನಾಪುರ: ಇಂದಿನ ಕಾಲದ ಮಕ್ಕಳು ಯಾರ ಮಾತನ್ನೂ ಕೇಳದೇ ಮನಸ್ಸಿಗೆ ಬಂದಂತೆ ವರ್ತಿಸುತ್ತಿದ್ದಾರೆ. ಹೆತ್ತವರು ಮಕ್ಕಳಿಗೆ ಚಿಕ್ಕಂದಿನಿಂದಲೇ ಸಂಸ್ಕಾರ, ಸಂಸ್ಕೃತಿ ನೀಡಿದರೆ ಮಕ್ಕಳ ಮೇಲೆ ಹಿಡಿತ ಸಾಧಿಸಲು ಸಾಧ್ಯ ಎಂದು ಅವರೊಳ್ಳಿ–ಬಿಳಕಿ ರುದ್ರಸ್ವಾಮಿ ಮಠದ ಪೀಠಾಧ್ಯಕ್ಷ ಚನ್ನಬಸವ ದೇವರು ಹೇಳಿದರು.

ತಾಲೂಕಿನ ಹೊಸ ಲಿಂಗನಮಠ ಗ್ರಾಮದ ಹುಲಿಗೆಮ್ಮ ದೇವಿಯ ನೂತನ ಶಿಲಾ ವಿಗ್ರಹ ಪ್ರತಿಷ್ಠಾಪನೆ ಹಾಗೂ ಜಾತ್ರಾ ಮಹೋತ್ಸವದ ಸಮಾರೋಪ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿ, ಈಗಾಗಲೇ ಸರ್ಕಾರ ಚಿಕ್ಕ ಮಕ್ಕಳು ಸಾಮಾಜಿಕ ಜಾಲತಾಣ ಬಳಸದಂತೆ ಆದೇಶಿಸಿದ್ದನ್ನು ತಾವು ಸ್ವಾಗತಿಸುತ್ತಿದ್ದು, ಇದೇ ರೀತಿ ಮಕ್ಕಳು ಮೊಬೈಲ್ ಬಳಕೆಯನ್ನು ಸಂಪೂರ್ಣ ನಿಷೇಧಿಸುವಂತೆ ಸರ್ಕಾರ ಆದೇಶಿಸಬೇಕು. ಹಾಗಾದಾಗ ಮಾತ್ರ ಮನೆಯಲ್ಲಿ ತಂದೆ ತಾಯಿಯ ಮಾತುಗಳನ್ನು ಮಕ್ಕಳು ಕೇಳುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕರವೇ ಮುಖಂಡರಾದ ವಿಠ್ಠಲ ಹಿಂಡಲಕರ, ದಶರಥ ಬನೋಶಿ, ಅಖಿಲ ಭಾರತ ವೀರಶೈವ ಮಹಾಸಭಾ ಉತ್ತರ ಕನ್ನಡ ಜಿಲ್ಲಾಧ್ಯಕ್ಷ ಶಿವಲಿಂಗಯ್ಯ ಅಲ್ಲಯ್ಯನವರಮಠ, ರೈತ ಸಂಘದ ಮುಖಂಡ ಕಿಶೋರ ಮಿಠಾರಿ, ಲಿಂಗನಮಠ ಗ್ರಾಪಂ ಮಾಜಿ ಅಧ್ಯಕ್ಷ ಕಾಶೀಮ ಹಟ್ಟಿಹೊಳಿ, ಸ್ಥಳೀಯರಾದ ಪಾಂಡುರಂಗ ಮಿಟಗಾರ, ದೀಪಾ ಪಾಟೀಲ, ಮಂಜುನಾಥ ಎಚ್., ಆನಂದ ಬೆಣಚಿಕರ, ಪುಂಡಲೀಕ ಸನ್ನಾರ, ಬಸವರಾಜ ತಳವಾರ ಮತ್ತಿತರು ಇದ್ದರು.



ಖಾನಾಪುರ: ತಾಲೂಕಿನ ಹೊಸ ಲಿಂಗನಮಠ ಗ್ರಾಮದ ಹುಲಿಗೆಮ್ಮ ದೇವಿಯ ನೂತನ ಶಿಲಾ ವಿಗ್ರಹ ಪ್ರತಿಷ್ಠಾಪನೆ ಹಾಗೂ ಜಾತ್ರಾ ಮಹೋತ್ಸವದ ಸಮಾರೋಪ ಸಮಾರಂಭ ನಡೆಯಿತು. ಅವರೊಳ್ಳಿ–ಬಿಳಕಿ ರುದ್ರಸ್ವಾಮಿ ಮಠದ ಪೀಠಾಧ್ಯಕ್ಷ ಚನ್ನಬಸವ ದೇವರು, ಕರವೇ ಮುಖಂಡರಾದ ವಿಠ್ಠಲ ಹಿಂಡಲಕರ, ದಶರಥ ಬನೋಶಿ, ಅಖಿಲ ಭಾರತ ವೀರಶೈವ ಮಹಾಸಭಾ ಉತ್ತರ ಕನ್ನಡ ಜಿಲ್ಲಾಧ್ಯಕ್ಷ ಶಿವಲಿಂಗಯ್ಯ ಅಲ್ಲಯ್ಯನವರಮಠ, ರೈತ ಸಂಘದ ಮುಖಂಡ ಕಿಶೋರ ಮಿಠಾರಿ, ಲಿಂಗನಮಠ ಗ್ರಾಪಂ ಮಾಜಿ ಅಧ್ಯಕ್ಷ ಕಾಶೀಮ ಹಟ್ಟಿಹೊಳಿ ಸೇರಿದಂತೆ ಇತರರಿದ್ದರು.

ಅಧಿಕಾರ ಶಾಶ್ವತ ಅಲ್ಲ, ಅಧಿಕಾರದಲ್ಲಿ ಉಪಕಾರ ಮಾಡಿ: ಸಚಿವೆ ಹೆಬ್ಬಾಳ್ಕರ್

ಬೆಳಗಾವಿ: ಬೆಳಗಾವಿ ಗ್ರಾಮೀಣ ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯ ಜೊತೆಗೆ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದ್ದೇನೆ. ಕ್ಷೇತ್ರದ ಮಕ್ಕಳು ರಾಜ್ಯ ಹಾಗೂ ದೇಶವನ್ನು ಆಳುವಂತ ಭವಿಷ್ಯವನ್ನು ರೂಪಿಸಿಕೊಳ್ಳಲಿ ಎಂಬುದೇ ನನ್ನ ಕನಸು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಮುತಗಾ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾಜಿ ವಿದ್ಯಾರ್ಥಿಗಳ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಗುರುವಂದನಾ ಹಾಗೂ ಶಾಲೆಯ ವಜ್ರಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಸುಮಾರು 300 ಶಾಲಾ ಕೊಠಡಿಗಳನ್ನು ನಿರ್ಮಿಸಿದ್ದು, 60 ಸ್ಮಾರ್ಟ್ ಕ್ಲಾಸ್‌ಗಳನ್ನು ಆರಂಭಿಸಲಾಗಿದೆ. ಮುತಗಾ ಸೇರಿದಂತೆ 3 ಕಡೆ ಪಬ್ಲಿಕ್ ಸ್ಕೂಲ್‌ಗಳನ್ನು ಮಂಜೂರು ಮಾಡಲಾಗಿದೆ ಎಂದರು.

ಶಿಕ್ಷಕರು ನೀಡಿದ ಧೈರ್ಯವೇ ನನಗೆ ಸ್ಫೂರ್ತಿ: ಅಕ್ಷರ ಕಲಿಸಿದ ಗುರುಗಳನ್ನು ಗೌರವಿಸುವುದು ಮತ್ತು ಬೆಳೆದು ಬಂದ ಶಾಲೆಯ ಅಭಿವೃದ್ಧಿಯಲ್ಲಿ ಮಾಜಿ ವಿದ್ಯಾರ್ಥಿಗಳು ಪಾಲ್ಗೊಳ್ಳುತ್ತಿರುವುದು ಹೆಮ್ಮೆಯ ವಿಷಯ. ಈ ಶಾಲೆಯಿಂದ ನೂರಾರು ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ಕಟ್ಟಿಕೊಂಡಿದ್ದಾರೆ. ಇದಕ್ಕೆ ಗುರುಗಳ ಪರಿಶ್ರಮವೇ ಮುಖ್ಯ, ನಾನು ಲಕ್ಷಾಂತರ ಜನರ ಎದುರು ಮೈಕ್ ಹಿಡಿದು ಭಾಷಣ ಮಾಡಲು ನನಗೆ ಶಿಕ್ಷಕರು ಕೊಟ್ಟ ಧೈರ್ಯವೇ ಕಾರಣ. ಬದುಕಿನ ದಾರಿ ತೋರಿಸಿದ ಗುರುಗಳಿಗೆ ಸಲ್ಲಿಸುವ ಗುರುವಂದನಾ ನಮ್ಮ ಸಂಸ್ಕಾರದ ಸಂಕೇತ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದರು.



ಮುತಗಾ ಗ್ರಾಮದಲ್ಲಿ ನಡೆದ ಗುರುವಂದನಾ ಸಮಾರಂಭದಲ್ಲಿ ಹೇಳಿಕೆ

ಸುಸಜ್ಜಿತ ಗುರುಭವನ ನಿರ್ಮಾಣ ಅಕ್ಷರ ಕಲಿಸಿದ ಗುರುಗಳಿಗೆ ಸಹಾಯ ಮಾಡುವುದು ನಮ್ಮ ಕರ್ತವ್ಯ. ಇದಕ್ಕಾಗಿ ಬೆಳಗಾವಿಯಲ್ಲಿ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲೆ ಸುಸಜ್ಜಿತ ಗುರುಭವನ ನಿರ್ಮಾಣ ಆಗುತ್ತಿದೆ. ಗುರು ಕಾಣಿಕೆ ನೀಡುವ ಸಲುವಾಗಿ 15 ಕೋಟಿ ರೂಪಾಯಿ ಬೆಲೆ ಬಾಳುವ ಸುಮಾರು ಅರ್ಧ ಎಕರೆ ಜಾಗವನ್ನು ಶಿಕ್ಷಕರ ಸಂಘಕ್ಕೆ ಉಚಿತವಾಗಿ ನೀಡಲಾಗಿದೆ. ಗುರುಭವನ ನಿರ್ಮಾಣಕ್ಕೂ ಧನ ಸಹಾಯ ಮಾಡುವುದಾಗಿ ಮಾತು ಕೊಟ್ಟಿರುವೆ ಎಂದು ಸಚಿವರು ಹೇಳಿದರು.

ಅಧಿಕಾರ ಮೆರೆಯುವುದಕ್ಕಲ್ಲ, ಅಧಿಕಾರ ಎಂಬುದು ಶಾಶ್ವತವೂ ಅಲ್ಲ, ಅಧಿಕಾರಕ್ಕೆ ಬಂದಾಗ ನಾಲ್ಕರು ಜನರಿಗೆ ಉಪಕಾರ ಮಾಡಿಕೊಡುವ ಮನಸ್ಸು ಹೊಂದಿರಬೇಕು ಎಂದರು.

ಬಡವರ ಮಕ್ಕಳಿಗೆ ಪೌಷ್ಟಿಕ ಆಹಾರದ ಜೊತೆಗೆ ಗುಣಮಟ್ಟದ ಶಿಕ್ಷಣ ಸಿಗುವ ಉದ್ದೇಶದಿಂದಲೇ ಅಂಗನವಾಡಿ ಕೇಂದ್ರಗಳಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಆರಂಭಿಸಲಾಗಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಕಾರ್ಯಕ್ರಮದಲ್ಲಿ ರಾಯಣ್ಣ ಓಬನ್ನವರ, ಕಲ್ಲಪ್ಪ ಓಬನ್ನವರ, ಮಾರುತಿ ಮಲ್ಲವ್ವಗೋಳ, ಬಾಗಣ್ಣ ಮಲ್ಲವ್ವಗೋಳ, ನಾಗೇಶ್ ದೇಸಾಯಿ, ಮಾಲಾ ಅಂಗಡಿ, ಪ್ರಭಾಕರ್ ತಳವಾರ, ಮಧು ಕುಂಪಿ, ಭರಮಾ ಮಲ್ಲವ್ವಗೋಳ, ಭೀಮಸೇನ್, ಶಾಲೆಯ ಶಿಕ್ಷಣ ಸಿಬ್ಬಂದಿ, ಗ್ರಾಮಸ್ಥರು ಉಪಸ್ಥಿತರಿದ್ದರು.

ಋಷಿಗಳ ಜ್ಞಾನ ಇಂದಿಗೂ ದಾರಿದೀಪ

ಬೆಳಗಾವಿ: ನಮ್ಮ ದೇಶ ಪ್ರಾಚೀನ ಕಾಲದಿಂದಲೇ ಜ್ಞಾನ, ಸಂಸ್ಕೃತಿ ಮತ್ತು ಆಧ್ಯಾತ್ಮದ ಕೇಂದ್ರವಾಗಿದ್ದು, ಋಷಿ–ಮುನಿಗಳು ನೀಡಿದ ಜ್ಞಾನ ಸಂಪತ್ತು ಇಂದಿಗೂ ಮಾನವ ಸಮಾಜಕ್ಕೆ ದಾರಿದೀಪವಾಗಿವೆ. ವೇದಗಳು, ಉಪನಿಷತ್ತುಗಳು ಹಾಗೂ ಭಾರತೀಯ ದಾರ್ಶನಿಕ ಪರಂಪರೆ ಮಾನವ ಜೀವನದ ಮೌಲ್ಯಗಳನ್ನು ರೂಪಿಸುವಲ್ಲಿ ಮಹತ್ತರ ಪಾತ್ರ ವಹಿಸಿವೆ ಎಂದು ಚಕ್ರವರ್ತಿ ಸೂಲಿಬೆಲೆ ಹೇಳಿದರು.

ಕೆಎಲ್‌ಇ ಸಂಸ್ಥೆಯ ಜಿ.ಐ.ಬಾಗೇವಾಡಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ "ಭವಿಷ್ಯದ ಭಾರತ" ಎಂಬ ಶೀರ್ಷಿಕೆ ಅಡಿಯಲ್ಲಿ ಹಮ್ಮಿಕೊಂಡ ಉಪನ್ಯಾಸದಲ್ಲಿ ಮಾತನಾಡಿ, ಭಾರತದ ಇತಿಹಾಸದಲ್ಲಿ ರಾಜರು ಮತ್ತು ಸಾಮ್ರಾಟರು ದೇಶದ ಏಕತೆ, ಸಂಸ್ಕೃತಿ ಮತ್ತು ಧಾರ್ಮಿಕ ಸಹಿಷ್ಣುತೆ ಕಾಪಾಡಲು ಮಹತ್ತರ ಪಾತ್ರ ವಹಿಸಿದ್ದರು ಎಂದರು.

ದೇಶದ ಭದ್ರತೆ, ಸಾರ್ವಭೌಮತ್ವವನ್ನು ಕಾಪಾಡಲು ಭಾರತೀಯ ಸೈನ್ಯವು ಅಪಾರ ಸೇವೆ ಸಲ್ಲಿಸುತ್ತಿದೆ. ಸೇನೆಯ ಶೌರ್ಯ, ಶಿಸ್ತು ಮತ್ತು ದೇಶಭಕ್ತಿ ಯುವಕರಿಗೆ ಪ್ರೇರಣೆಯಾಗಿದೆ ಎಂದರು.

ಇಂದು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ವೇಗವಾಗಿ ಮುನ್ನಡೆಯುತ್ತಿದೆ. ಅಂತರಿಕ್ಷ ಸಂಶೋಧನೆ, ಮಾಹಿತಿ ತಂತ್ರಜ್ಞಾನ, ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಭಾರತೀಯ ವಿಜ್ಞಾನಿಗಳು ವಿಶ್ವದ ಗಮನ ಸೆಳೆದಿದ್ದಾರೆ. ಈ ಪ್ರಗತಿ ಭಾರತದ ಭವಿಷ್ಯವನ್ನು ಮತ್ತಷ್ಟು ಶಕ್ತಿಶಾಲಿಯಾಗಿ ರೂಪಿಸಲಿದೆ ಎಂದರು.

ನಾವು ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಮೌಲ್ಯಗಳನ್ನು ಕಾಪಾಡಿಕೊಂಡು ಆಧುನಿಕ ವಿಜ್ಞಾನ–ತಂತ್ರಜ್ಞಾನವನ್ನು ಅಳವಡಿಸಿಕೊಂಡರೆ ಮಾತ್ರ ಭವಿಷ್ಯದ ಭಾರತ ಅಭಿವೃದ್ಧಿ ಹೊಂದಿದ ಮತ್ತು ಸಮೃದ್ಧ ರಾಷ್ಟ್ರವಾಗಿ ಹೊರಹೊಮ್ಮುತ್ತದೆ. ವಿದ್ಯಾರ್ಥಿಗಳು, ಯುವಕರು ದೇಶದ ಅಭಿವೃದ್ಧಿಗೆ ತಮ್ಮ ಜ್ಞಾನ, ಕೌಶಲ್ಯ ಮತ್ತು ನೈತಿಕ ಮೌಲ್ಯಗಳ ಬಳಸಬೇಕು ಎಂದರು.

ಐಕ್ಯೂಎಸಿ ಸಂಯೋಜಕ ಡಾ. ಅತುಲಕುಮಾರ ಕಾಂಬಳೆ, ಡಾ. ಎಸ್.ಎಂ.ರಾಯಮಾನೆ, ಡಾ. ಎಂ.ಡಿ.ಗುರವ, ಎಸ್.ಬಿ.ಪಾಟೀಲ, ಬಿ.ಜಿ.ಉಳ್ಳೇಗಡ್ಡಿ, ಡಾ. ಬಿ.ಎಂ.ಜನಗೌಡ, ಮಹೇಶ ಕೆಂಚಗೌಡರ, ಡಾ. ಅಶೋಕ ರಾಠೋಡ, ಡಾ. ಆನಂದ ಕೆಂಚಕ್ಕನವರ, ಎಸ್.ಎಸ್.ಕುಂಬಾರ, ಸ್ಥಳೀಯ ಕೆಎಲ್‌ಇ ಎಲ್ಲ ಅಂಗಸಂಸ್ಥೆಗಳ ಪ್ರಾಚಾರ್ಯರು, ಅಧ್ಯಾಪಕರು, ವಿದ್ಯಾರ್ಥಿಗಳ ಇದ್ದರು.



ಮಹಿಳಾ ಪ್ರಧಾನ ಸಮಾಜ ನಿರ್ಮಾಣ ಅಗತ್ಯ

ಮೂಡಲಗಿ: ಭಾರತದಲ್ಲಿ ಪುರಷ ಪ್ರಾದಾನ್ಯತೆ ಹೆಚ್ಚಾಗಿದ್ದು ಮಹಿಳೆಯರನ್ನು ಸಮಾಜದ ಪ್ರದಾನ ವ್ಯವಸ್ಥೆಯಲ್ಲಿ ಅವಕಾಶ ನೀಡಿ ಮಹಿಳಾ ಪ್ರದಾನ ಸಮಾಜದ ಸೃಷ್ಟಿಯನ್ನು ಮಾಡುವುದು ಇಂದಿನ ಅಗತ್ಯವಾಗಿದೆ ಅಲ್ಲದೇ ಇಂದು ಅತೀ ಹೆಚ್ಚು ಹೆಣ್ಣು ಮಕ್ಕಳ ಭ್ರೂಣ ಹತ್ಯೆ, ಮಹಿಳಾ ದೌಜ್ಯನ್ಯಗಳು ಹೆಚ್ಚಾಗಿದ್ದು ಅವುಗಳನ್ನು ಹೋಗಲಾಡಿಸುವದರ ಜೊತೆಗೆ ಮಹಿಳೆಯರನ್ನು ಪೂಜ್ಯತಾ ಭಾವನೆಯಿಂದ ಕಾಣುವುದು ಅಗತ್ಯವಿದೆ ಎಂದು ಇಟ್ನಾಳದ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಭೀಮಶಿ ಪೂಜೇರಿ ಹೇಳಿದರು.

ಮೂಡಲಗಿ ಪಟ್ಟಣದ ಸಮೀಪದ ಇಟ್ನಾಳ ಗ್ರಾಮದ ಮಾದವಾನಂದ ದೇವಸ್ಥಾನದಲ್ಲಿ ಆರ್. ಡಿ. ಎಸ್, ಕಲಾ, ವಾಣಿಜ್ಯ, ವಿಜ್ಞಾನ, ಸಮಾಜಕಾರ್ಯ ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿಗಳ ವಾರ್ಷಿಕ ಎನ್‌ಎಸ್‌ಎಸ್ ಶಿಬಿರದ ಉಪನ್ಯಾಸದಲ್ಲಿ ಮಾತನಾಡಿ, ಮಹಿಳೆಯರು ಸ್ವಾವಲಂಬನೆ ಜೀವನ ರೂಪಿಸಿಕೊಳ್ಳಲು ಅಗತ್ಯ ಪರಿಸರವನ್ನು ನಾವುಗಳು ಒದಗಿಸಬೇಕು. ಮಹಿಳೆ ಎಲ್ಲಾ ರಂಗದಲ್ಲಿ ಬೆಳವಣಿಗೆ ಸಾಧಿಸುವಂತೆ ಪ್ರೋತ್ಸಾಹ ನೀಡುವುದು ಇಂದಿನ ಅಗತ್ಯವಾಗಿದೆ ಎಂದರು.

ಗ್ರಾಮದ ಹಿರಿಯರಾದ ಧರೆಪ್ಪಾ ಮತ್ನಾಳ ಮಾತನಾಡಿ, ಮಹಿಳೆಯರ ಸ್ಥಾನಮಾನಗಳನ್ನು ಹೆಚ್ಚಿಸುವಲ್ಲಿ ಸರಕಾರ ಅನೇಕ ಯೋಜನೆಗಳನ್ನು ರೂಪಿಸಿದ್ದು ಅವುಗಳ ಸದುಪಯೋಗವಾಗಬೇಕು ಮಹಿಳೆಯರು ತಮ್ಮ ಆತ್ಮ ರಕ್ಷಣೆಗೆ ಇರುವ ಕಾನೂನು ವ್ಯವಸ್ಥೆ ತಿಳಿದುಕೊಂಡಿರಬೇಕೆಂದರು.

ಕಾಲೇಜಿನ ಉಪನ್ಯಾಸಕಿ ಸ್ಫೂರ್ತಿ ಈಟಿ ಮಾತನಾಡಿ, ಮಹಿಳೆಯರ ರಕ್ಷಣೆಗೋಸ್ಕರ ಅನೇಕ ಕಾನೂನು ವ್ಯವಸ್ಥೆಗಳ ಜೊತೆಗೆ ಸರಕಾರ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆ ವಿವಿಧ ಕಾರ್ಯಕ್ರಮಗಳಿದ್ದು ಅವುಗಳ ಸದುಪಯೋಗವನ್ನು ಪ್ರತಿಯೊಬ್ಬ ಮಹಿಳೆ ಪಡೆದುಕೊಳ್ಳುವಂತೆ ಸಲಹೆ ನೀಡುವುದು ಅಗತ್ಯ ಇದೆ ಎಂದರು.

ಇಟನಾಳದ ಪಿಕೆಪಿಎಸ್‌ನ ಸದಸ್ಯರಾದ ಮಹಾಂತೇಶ ಚೆನ್ನಳ್ಳಿ ಅಧ್ಯಕ್ಷತೆ ವಹಿಸಿದ್ದರು. ಮಲ್ಲಪ್ಪ ಹಾಲಳ್ಳಿ, ಶಂಕರಗೌಡ ಪಾಟೀಲ, ಗೋವಿಂದ ಪೂಜೇರಿ, ಬಸವರಾಜ ಮುತ್ನಾಳ ಮಲ್ಲಪ್ಪಾ ದಾನಿಹಾಳ ಉಪನ್ಯಾಸಕರಾದ ಕಿರಣ ಪಟ್ಟಣಶೆಟ್ಟಿ ಸುನೀಲ ಸತ್ತಿ, ಶಾಂತಾ ವೆಂಕಟಾಪೂರ, ಸವಿತಾ ವೆಂಕಟಾಪೂರ, ಘಟಕಾಧಿಕಾರಿ ರಾಜು ಪತ್ತಾರ ಇದ್ದರು.

ಶಂಕರ ಕರಬನ್ನವರ ನಿರೂಪಿಸಿ, ದೀಪಾ ಉಪ್ಪಾರ ಸ್ವಾಗತಿಸಿ, ಸ್ವಾತಿ ಹುಲಕುಂದ ವಂದಿಸಿದರು.



ಆತ್ಮ ನಿರ್ಭರ ಭಾರತ ನಿರ್ಮಿಸೋಣ: ಎಸ್. ಎನ್. ಕುಂಬಾರ

ಮೂಡಲಗಿ: ಆತ್ಮನಿರ್ಭರ ಭಾರತ (ಸ್ವಾವಲಂಬಿ ಭಾರತ) ಅಭಿಯಾನವು ಪ್ರಧಾನಿ ನರೇಂದ್ರ ಮೋದಿಯವರಿಂದ ಘೋಷಿಸಲ್ಪಟ್ಟ ದೃಷ್ಟಿಕೋನವಾಗಿದ್ದು, ಭಾರತವನ್ನು ಜಾಗತಿಕ ಆರ್ಥಿಕತೆಯಲ್ಲಿ ಸ್ವಾವಲಂಬಿಯನ್ನಾಗಿ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದು ಮೂಡಲಗಿ ಆರ್.ಡಿ.ಎಸ್. ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಎಸ್. ಎನ್ ಕುಂಬಾರ ಹೇಳಿದರು.

ಮೂಡಲಗಿ ಪಟ್ಟಣದ ಸಮೀಪದ ಇಟ್ನಾಳ ಗ್ರಾಮದ ಮಾದವಾನಂದ ದೇವಸ್ಥಾನದಲ್ಲಿ ಆರ್‌ಡಿಎಸ್, ಕಲಾ, ವಾಣಿಜ್ಯ, ವಿಜ್ಞಾನ, ಸಮಾಜಕಾರ್ಯ ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿಗಳ ವಾರ್ಷಿಕ ಎನ್‌ಎಸ್‌ಎಸ್ ಶಿಬಿರದ ಎರಡನೇ ದಿನದ ಉಪನ್ಯಾಸದಲ್ಲಿ ಮಾತನಾಡಿ, ಇದು ಸ್ಥಳೀಯ ಉತ್ಪಾದನೆ, 'ವೋಕಲ್ ಫಾರ್ ಲೋಕಲ್' ಮತ್ತು ಆರ್ಥಿಕತೆ, ಮೂಲಸೌಕರ್ಯ, ವ್ಯವಸ್ಥೆ, ವೈಬ್ರೆಂಟ್ ಡೆಮೋಗ್ರಫಿ ಮತ್ತು ಬೇಡಿಕೆ ಎಂಬ ಐದು ಸ್ತಂಭಗಳ ಮೇಲೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ ಈ ವಿಷಯವನ್ನು ವಿದ್ಯಾರ್ಥಿಗಳು ತಮ್ಮ ಸ್ವಾಭಿಮಾನ ಜೀವನದಲ್ಲಿ ರೂಢಿಸಿಕೊಳ್ಳುವುದು ಅಗತ್ಯ ಎಂದರು.

ಕಾಲೇಜಿನ ಪ್ರಾಚಾರ್ಯ ಸತೀಶ ಗೋಟೂರೆ ಮಾತನಾಡಿ, ಸದೃಢ ಭಾರತವನ್ನು ನಿರ್ಮಿಸುವಲ್ಲಿ ಯುವಕರ ಪಾತ್ರ ಮಹತ್ವದಾಗಿದ್ದು ಸ್ವಾವಲಂಬನೆ ಸದೃಢ ಭಾರತವನ್ನು ಕಟ್ಟುವಲ್ಲಿ ಇಂದಿನ ಯುವಕರ ಜವಾಬ್ದಾರಿ ಅತಿಮುಖ್ಯವಾಗಿದೆ ಎಂದರು. ಇಟ್ನಾಳದ ವಿಜಯಲಕ್ಷ್ಮೀ ಬ್ಯಾಂಕಿನ ನಿರ್ದೇಶಕ ಮಹಾದೇವ ಮಗದುಮ್ಮ ಸರಕಾರಿ ಶಾಲೆಯ ಶಿಕ್ಷಕ ಎಲ್.ವೈ. ಸರಸ್ವತಿ ಪಿಕೆಪಿಎಸ್ ನಿರ್ದೇಶಕ ಮಾರುತಿ ಬೆಳಕೂಡ ಉಪನ್ಯಾಸಕರಾದ ಕಿರಣ ಪಟ್ಟಣಶೆಟ್ಟಿ, ಸುನೀಲ ಸತ್ತಿ, ಅಕ್ಷತಾ ಹೊಸಮನಿ, ಕವಿತಾ ಮಳಲಿ ಘಟಕಾಧಿಕಾರಿ ರಾಜು ಪತ್ತಾರ ಮತ್ತಿತ್ತರರು ಹಾಜರಿದ್ದರು. ಅಕ್ಷತಾ ಬಾನಿ ನಿರೂಪಿಸಿ, ಮಂಜು ಪೂಜೇರಿ ಸ್ವಾಗತಿಸಿ, ಲಕ್ಷ್ಮೀ ಗುಗ್ಗರಿ ವಂದಿಸಿದರು.



ಯೋಗದ ಮಹತ್ವ ಸಾರಿದ ತರಬೇತಿ ಶಿಬಿರ

ಯಮಕನಮರಡಿ: ಮಹಿಳಾ ಕಲ್ಯಾಣ ಸಂಸ್ಥೆಯ ಶಕ್ತಿ ಸದನ ಮಹಿಳಾ ಪುನರ್ವಸತಿ ಕೇಂದ್ರದಲ್ಲಿ ಚಂದ್ರಗಿರಿ ಮಹಿಳಾ ಶಿಕ್ಷಣ ಮಹಾವಿದ್ಯಾಲಯದ ಪೌರತ್ವ ಶಿಬಿರದ ಅಂಗವಾಗಿ ಯೋಗ ಶಿಬಿರ ಜರುಗಿತು.

ಈ ವೇಳೆ ಪತಂಜಲಿ ಯೋಗ ಸಮಿತಿ ಸಾಮಾಜಿಕ ಮಾಧ್ಯಮದ ಜಿಲ್ಲಾ ಪ್ರಭಾರಿ ರಮೇಶ್ ಮಹಾಡಿಕ ಮಾತನಾಡಿ, ಯೋಗಾಭ್ಯಾಸವು ದೇಹದ ಆರೋಗ್ಯದ ಜೊತೆಗೆ ಮನಸ್ಸಿನ ಸಮತೋಲನವನ್ನು ಕಾಪಾಡಲು ಅತ್ಯಂತ ಅಗತ್ಯವೆಂದು ಹೇಳಿದರು.

ನಿಯಮಿತವಾಗಿ ಯೋಗವನ್ನು ಅಭ್ಯಾಸ ಮಾಡುವುದರಿಂದ ಹಲವಾರು ರೋಗಗಳನ್ನು ದೂರವಿಟ್ಟು ಆರೋಗ್ಯಕರ ಜೀವನ ನಡೆಸಬಹುದು. ಶಿಕ್ಷಕ ವೃತ್ತಿ ಮಾನಸಿಕ ಏಕಾಗ್ರತೆ, ಸಹನೆ ಮತ್ತು ದೈಹಿಕ ಚುರುಕುತನವನ್ನು ಅಗತ್ಯವಿರುವ ಪವಿತ್ರ ವೃತ್ತಿಯಾಗಿದೆ. ಯೋಗಾಭ್ಯಾಸವು ಶಿಕ್ಷಕರಿಗೆ ದೇಹದ ಆರೋಗ್ಯವನ್ನು ಕಾಪಾಡುವುದರ ಜೊತೆಗೆ ಮನಸ್ಸಿಗೆ ಶಾಂತಿ ಮತ್ತು ಏಕಾಗ್ರತೆಯನ್ನು ನೀಡುತ್ತದೆ ಎಂದರು.

ನಿಯಮಿತವಾಗಿ ಯೋಗ ಮಾಡುವುದರಿಂದ ಒತ್ತಡ ಕಡಿಮೆಯಾಗುತ್ತದೆ ಧೈರ್ಯ ಮತ್ತು ಸಹನಶೀಲತೆ ಹೆಚ್ಚುತ್ತದೆ ಆದ್ದರಿಂದ ಶಿಕ್ಷಕರಾಗಿ ಸೇವೆ ಸಲ್ಲಿಸುವವರು ನಿಯಮಿತವಾಗಿ ಯೋಗಾಭ್ಯಾಸವನ್ನು ಜೀವನಶೈಲಿಯ ಭಾಗವನ್ನಾಗಿ ಮಾಡಿಕೊಂಡರೆ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವ ಜೊತೆಗೆ ವಿದ್ಯಾರ್ಥಿಗಳಿಗೆ ಉತ್ತಮ ಮಾದರಿಯಾಗಬಹುದು ಎಂದರು.

ಯೋಗ ಶಿಕ್ಷಕರಾದ ರೂಪಾ ಮಹಾಡಿಕ, ಭರಮಪ್ಪ ಪ್ರಸನ್ನವರ ವಿವಿಧ ಯೋಗಾಸನಗಳನ್ನು ಅಭ್ಯಾಸ ಮಾಡಿಸಿ ಅವುಗಳ ಮಹತ್ವವನ್ನು ವಿದ್ಯಾರ್ಥಿನಿಯರಿಗೆ ವಿವರಿಸಿದರು.

ಮಹಿಳಾ ಕಲ್ಯಾಣ ಸಂಸ್ಥೆಯ ಗೌರವ ಕಾರ್ಯದರ್ಶಿ ವೈಜಯಂತಿ ಚೌಗಲಾ ಉಪಸ್ಥಿತರಿದ್ದರು. ಶಕ್ತಿ ಸದನ ಮಹಿಳಾ ಪುನರ್ವಸತಿ ಕೇಂದ್ರದ ಸುರೇಖಾ ಪಾಟೀಲ, ಸುಗಂಧಾ ಹಾಗೂ ದ್ರಾಕ್ಷಾಯನಿ ಅವರು ಶಿಬಿರ ಸಂಘಟಿಸಿದರು. ಪ್ರಾಚಾರ್ಯ ಕಿರಣ ಚೌಗಲಾ ಸ್ವಾಗತಿಸಿ ವಂದಿಸಿದರು.



ಕ್ಷೇತ್ರದ ಸಮಗ್ರ ಅಭಿವೃದ್ಧಿಯೇ ನನ್ನ ಸಂಕಲ್ಪ

ಯರಗಟ್ಟಿ: ತಾಲೂಕಿನ ಸೋಮಾಪುರ ಗ್ರಾಮದ ಜನತೆಯ ಬಹುದಿನಗಳ ಬೇಡಿಕೆಯಾಗಿದ್ದ ರಸ್ತೆ ನಿರ್ಮಾಣ ಕಾಮಗಾರಿಗೆ ರವಿವಾರ ಶಾಸಕ ವಿಶ್ವಾಸ ವೈದ್ಯ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಶಾಸಕ ವಿಶ್ವಾಸ ವೈದ್ಯ, ಸನ್ 2025–26ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (5054 ಯೋಜನೆಯಡಿ), ಯರಗಟ್ಟಿ ತಾಲೂಕಿನ ತಲ್ಲೂರ–ಸೋಮಾಪುರ ಮುಖ್ಯ ರಸ್ತೆಯಿಂದ ರಾಜಪಪ್ಪಜ್ಜನ ದೇವಸ್ಥಾನದವರೆಗೆ ನಿರ್ಮಾಣವಾಗಲಿದೆ ಅಂದಾಜು ವೆಚ್ಚ: 25 ಲಕ್ಷ ರೂ.ಗಳು ಸಿ.ಸಿ ರಸ್ತೆ ಕಾಮಗಾರಿಯ ಚಾಲನೆ ನೀಡಲಾಗಿದೆ ಎಂದರು.

ಈ ರಸ್ತೆ ನಿರ್ಮಾಣದಿಂದ ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ಹಾಗೂ ಸ್ಥಳೀಯ ಗ್ರಾಮಸ್ಥರಿಗೆ ಸುಗಮ ಸಂಚಾರಕ್ಕೆ ಹೆಚ್ಚಿನ ಅನುಕೂಲವಾಗಲಿದೆ. ಗುಣಮಟ್ಟದ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಕ್ಷೇತ್ರದ ಪ್ರತಿಯೊಂದು ಗ್ರಾಮಕ್ಕೂ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಸುಸಜ್ಜಿತ ರಸ್ತೆಗಳ ನಿರ್ಮಾಣ ಮಾಡುವುದು ನಮ್ಮ ಆದ್ಯತೆ ನೀಡಲಾಗುವುದು ಎಂದರು.

ಜಿಲ್ಲಾ ಪಂಚಾಯತ ರಾಜ್ ಇಲಾಖೆ ಎಇಇ ಎಚ್. ಎ. ಕದ್ರಾಪೂರಕರ, ಎಪಿಎಂಸಿ ಅಧ್ಯಕ್ಷ ನೀಲಕಂಠ ಶೀದಬಸನ್ನವರ, ಫಕೀರಪ್ಪ ಗೋಟಿ, ಭೀಮಶಿ ಗೋಟಿ, ಪ್ರಕಾಶ ಮುರಗೋಡ, ರಮೇಶ ಹಮ್ಮಿನಿ, ಸಹದೇವ ನಾಯ್ಕರ, ಸಿದ್ದಾರ್ಥ ಗೋಟಿ, ಶಶಿಧರ ತಳವಾರ, ಮಹಾಂತೇಶ ಶೀಲವಂತರ, ಅದೃಶ್ಯ ಶೀಲವಂತರ, ರಾಘವೇಂದ್ರ ಗಿಡ್ಡಮಲ್ಲಪ್ಪಗೋಳ, ಸಿ.ಬಿ. ಬಾಳಿ, ಡಿ.ಡಿ. ಕಿನ್ನರಿ, ಪ್ರಕಾಶ ಸುಣ್ಣದೋಳಿ, ಪ್ರಸಾದ ವೀರಪ್ಪನ್ನವರಮಠ, ಬಸವರಾಜ್ ಕಂಬಾರ ಸೇರಿದಂತೆ ಗ್ರಾಮದ ಹಿರಿಯರು, ಸ್ಥಳೀಯ ಮುಖಂಡರು, ಇಲಾಖೆಯ ಅಧಿಕಾರಿಗಳು ಹಾಗೂ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.



ರಸ್ತೆ ಸುಧಾರಣಾ ಕಾಮಗಾರಿಗೆ ಚಾಲನೆ



ರಾಯಬಾಗ: ತಾಲೂಕಿನ ಚಿಂಚಲಿ ಪಟ್ಟಣದ ಮುಖ್ಯ ರಸ್ತೆಯಿಂದ ಮಾಂಗ ಮನೆಯವರೆಗೆ ಹಾಗೂ ಗಣಪತಿ ಪೋಳ ಮನೆಯವರೆಗೆ ರೂ.50 ಲಕ್ಷ ಅನುದಾನದಲ್ಲಿ ಸಿಸಿ, ಉಪ್ಪಾರಕೋಡಿಯಿಂದ ಬೆಕ್ಕೇರಿ ಮುಖ್ಯ ರಸ್ತೆಯವರೆಗೆ ರೂ.30 ಲಕ್ಷ ಅನುದಾನದಲ್ಲಿ ರಸ್ತೆ ಸುಧಾರಣಾ ಕಾಮಗಾರಿಗೆ ಹಾಗೂ ಧರಣ ರಸ್ತೆಯಿಂದ ಹಳಚಪಟ್ಟಿಯವರೆಗೆ ರೂ. 5ಲಕ್ಷ ಅನುದಾನದಲ್ಲಿ ರಸ್ತೆ ಸುಧಾರಣಾ ಕಾಮಗಾರಿಗೆ ಶಾಸಕ ಡಿ.ಎಂ. ಐಹೊಳೆ ಶನಿವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ರಸ್ತೆ, ಕುಡಿಯುವ ನೀರು, ಶಿಕ್ಷಣ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ನನ್ನ ಪ್ರಮುಖ ಉದ್ದೇಶವಾಗಿದೆ ಎಂದು ಹೇಳಿದರು.

ಗ್ರಾಮದ ಜನರು ನೀಡುತ್ತಿರುವ ಸಹಕಾರದಿಂದ ಅಭಿವೃದ್ಧಿ ಕಾಮಗಾರಿಗಳನ್ನು ಯಶಸ್ವಿಯಾಗಿ ನಡೆಸಲು ಸಾಧ್ಯವಾಗುತ್ತಿದೆ. ಮುಂದೆಯೂ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಅನುದಾನ ತರಲು ಪ್ರಯತ್ನಿಸುವುದಾಗಿ ಅವರು ತಿಳಿಸಿದರು. ಅಂಕುಶ ಜಾಧವ, ಸದಾಶಿವ ಘೋರ್ಪಡೆ, ಮಲ್ಲು ಪಾಟೀಲ, ಕದ್ದು ಜಾಧವ, ಪೋಪಟ ಜಾಧವ, ಸಂಜು ಮೈಶಾಳೆ, ಲಕ್ಷ್ಮಣ ತುಳಸಿಗೇರಿ, ರಾಜು ಪೋಳ ಸೇರಿದಂತೆ ಇತರರು ಇದ್ದರು.

10.20 ಲಕ್ಷಕ್ಕೂ ಹೆಚ್ಚು ಅಸಂಘಟಿತ ಕಾರ್ಮಿಕರ ನೋಂದಣಿ: ಈರಣ್ಣ ಕಡಾಡಿ

ಬೆಳಗಾವಿ: ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರವು ಶ್ರಮಿಕ ವರ್ಗದ ಕಲ್ಯಾಣಕ್ಕೆ ಹೆಚ್ಚಿನ ಒತ್ತು ನೀಡುತ್ತಿದ್ದು, ಬೆಳಗಾವಿ ಜಿಲ್ಲೆಯ ಅಸಂಘಟಿತ ವಲಯದ ಸುಮಾರು 10.20 ಲಕ್ಷಕ್ಕೂ ಹೆಚ್ಚು ಕಾರ್ಮಿಕರು 'ಇ-ಶ್ರಮ್' ಪೋರ್ಟಲ್ ಅಡಿಯಲ್ಲಿ ನೋಂದಾಯಿಸಿಕೊಂಡು ಸರ್ಕಾರದ ವಿವಿಧ ಸೌಲಭ್ಯಗಳಿಗೆ ಅರ್ಹರಾಗಿದ್ದಾರೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ತಿಳಿಸಿದ್ದಾರೆ.



ನವದೆಹಲಿಯಲ್ಲಿ ನಡೆಯುತ್ತಿರುವ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಬೆಳಗಾವಿ ಜಿಲ್ಲೆಯ ಅಸಂಘಟಿತ ವಲಯದ ಕಾರ್ಮಿಕರ ಅಭಿವೃದ್ಧಿ ಮತ್ತು ಸಾಮಾಜಿಕ ಭದ್ರತೆಗೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು ನೀಡಿರುವ ಲಿಖಿತ ಉತ್ತರದಲ್ಲಿ ಮಾಹಿತಿ ನೀಡಿದ್ದಾರೆ.

ಇ-ಶ್ರಮ್ ಪೋರ್ಟಲ್ ಅಡಿಯಲ್ಲಿ ಬೆಳಗಾವಿ ಜಿಲ್ಲೆಯ ಕಾರ್ಮಿಕರು ವಿವಿಧ ಯೋಜನೆಗಳ ಪ್ರಯೋಜನ ಪಡೆಯುತ್ತಿದ್ದು, ಪ್ರಮುಖವಾಗಿ ಆಯುಷ್ಮಾನ್ ಭಾರತ್ 3,77,920 ಫಲಾನುಭವಿಗಳು, ವಿಬಿ ಜಿ- ರಾಮ್ ಜಿ ಗ್ರಾಮೀಣ್ 2,72,136 ಫಲಾನುಭವಿಗಳು, ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ 1,58,333 ಫಲಾನುಭವಿಗಳು, ಒನ್ ನೇಷನ್ ಒನ್ ರೇಷನ್ ಕಾರ್ಡ್ 73,381 ಫಲಾನುಭವಿಗಳು ನೋಂದಾಯಿಸಿಕೊಂಡು ಸರ್ಕಾರದ ವಿವಿಧ ಸೌಲಭ್ಯಗಳಿಗೆ ಅರ್ಹರಾಗಿದ್ದಾರೆ ಎಂದರು.

ಕಟ್ಟಡ ನಿರ್ಮಾಣ ಕಾರ್ಮಿಕರು, ಕಬ್ಬು ಕಟಾವು ಮಾಡುವವರು ಮತ್ತು ಮನೆ ಕೆಲಸದವರ ಶ್ರಮಕ್ಕೆ ಗೌರವ ನೀಡುವುದು ಸರ್ಕಾರದ ಆದ್ಯತೆಯಾಗಿದೆ. ಇ-ಶ್ರಮ್ ಪೋರ್ಟಲ್ ಮೂಲಕ ಅವರಿಗೆ ಕೇವಲ ಆರ್ಥಿಕ ಭದ್ರತೆಯಷ್ಟೇ ಅಲ್ಲದೆ, 'ಸ್ಕಿಲ್ ಇಂಡಿಯಾ' ಮೂಲಕ ಕೌಶಲ್ಯಾಭಿವೃದ್ಧಿ ಮತ್ತು 'ನ್ಯಾಷನಲ್ ಕರಿಯರ್ ಸರ್ವಿಸ್' ಮೂಲಕ ಹೊಸ ಉದ್ಯೋಗಾವಕಾಶಗಳನ್ನು ಒದಗಿಸಲಾಗುತ್ತಿದೆ, ಎಂದು ಸಚಿವರು ಮಾಹಿತಿ ನೀಡಿದ್ದಾರೆಂದು ವಿವರಿಸಿದ್ದಾರೆ.

ಕಿರುಸುದ್ದಿ

ವಿದ್ಯಾರ್ಥಿಗಳ ಸಾಧನೆ



ಬಾಗಲಕೋಟೆ: ಬಿವಿವಿ ಸಂಘದ ಪಿಎಂಎನ್ಎಂ ಡೆಂಟಲ್ ಕಾಲೇಜಿನ ವಿದ್ಯಾರ್ಥಿ ಡಾ.ಮಿತಾಲಿ ಜಿ.ಕರ್ವಾ ಮತ್ತು ಡಾ.ಮಹಮದ್ ಫಾಝಿಲ್ ವಿಶ್ವವಿದ್ಯಾಲಯದ ಅಂತಿಮ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಾರೆ. ಬೆಂಗಳೂರಿನ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ 2025-26 ನೇ ಸಾಲಿನಲ್ಲಿ ನಡೆದ ಬಿ.ಡಿ.ಎಸ್ ಕೋರ್ಸಿನ ಅಂತಿಮ ಪರೀಕ್ಷೆಯಲ್ಲಿ ಡಾ.ಮಿತಾಲಿ ಜಿ.ಕರ್ವಾ ಓರಲ್ ಮೆಡಿಸಿನ್ ಆ್ಯಂಡ್ ರೇಡಿಯಾಲಜಿ ವಿಷಯದಲ್ಲಿ ಅತ್ಯಧಿಕ ಅಂಕಗಳನ್ನು ಪಡೆದಿರುವರು. ವಿದ್ಯಾರ್ಥಿನಿಯು ಬಿ.ಡಿ.ಎಸ್ ಕೋರ್ಸಿನ ಅಂತಿಮ ಪರೀಕ್ಷೆಯ ಓರಲ್ ಮೆಡಿಸಿನ್ ಆ್ಯಂಡ್ ರೇಡಿಯಾಲಜಿ ವಿಷಯದಲ್ಲಿ ಪಡೆದ ಅಂಕಗಳು ಈ ವಿಷಯದಲ್ಲಿ ರಾಷ್ಟ್ರಮಟ್ಟದಲ್ಲಿ ವಿದ್ಯಾರ್ಥಿಯೊಬ್ಬರು ಪಡೆದ ಅತ್ಯಧಿಕ ಅಂಕಗಳಾಗಿವೆ. ಈ ಸಾಧನೆಗಾಗಿ ಇಂಡಿಯನ್ ಅಕಾಡೆಮಿ ಆಫ್ ಓರಲ್ ಮೆಡಿಸಿನ್ ಆ್ಯಂಡ್ ರೇಡಿಯಾಲಜಿ ಸಂಘವು ವಿದ್ಯಾರ್ಥಿನಿಯನ್ನು ಸನ್ಮಾನಿಸಿ ಪ್ರಮಾಣ ಪತ್ರ ನೀಡಿದೆ. ನ.2025 ರಲ್ಲಿ ನಡೆದ ಎಮ್.ಡಿ.ಎಸ್ (ಸ್ನಾತಕೋತ್ತರ) ಪರೀಕ್ಷೆಯಲ್ಲಿ ಕಾಲೇಜಿನ ಡಾ.ಮಹಮದ್ ಫಾಝಿಲ್ ಓರಲ್ ಮೆಡಿಸಿನ್ ಆ್ಯಂಡ್ ರೇಡಿಯಾಲಜಿ ಕೋರ್ಸ್‌ನಲ್ಲಿ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಪ್ರಥಮ ರ‍್ಯಾಂಕ್‌ನಲ್ಲಿ ಉತ್ತೀರ್ಣರಾಗಿರುವರು.

ಬಿಟಿಡಿಎ ಅಧ್ಯಕ್ಷರಾಗಿ ಪ್ರಕಾಶ ತಪಶೆಟ್ಟಿ ನೇಮಕ

ಬಾಗಲಕೋಟೆ: ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಬಸವೇಶ್ವರ ಸಹಕಾರಿ ಬ್ಯಾಂಕಿನ ಅಧ್ಯಕ್ಷರು, ಡಿಸಿಸಿ ಬ್ಯಾಂಕಿನ ನಿರ್ದೇಶಕ ಪ್ರಕಾಶ ತಪಶೆಟ್ಟಿಯವರನ್ನು ಸರ್ಕಾರ ನೇಮಿಸಿ ಆದೇಶ ಹೊರಡಿಸಿದೆ.



ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಜಲಸಂಪನ್ಮೂಲ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ವಿಜಯಲಕ್ಷ್ಮೀ ಎಸ್. ಅವರು ಮಾ.13ರಂದು ಆದೇಶ ಹೊರಡಿಸಿದ್ದಾರೆ. ಕಳೆದ ವಿಧಾನಸಭೆಯ ಚುನಾವಣೆಯಲ್ಲಿ ಬಿಜೆಪಿಯಿಂದ ಪ್ರಕಾಶ ತಪಶೆಟ್ಟಿಯವರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದರು. ಈಗಾಗಲೇ ಒಂದು ಬಾರಿ ಬಿಟಿಡಿಎ ಅಧ್ಯಕ್ಷರಾಗಿ ಹಿಂದೆ ಅಧಿಕಾರವನ್ನು ನಡೆಸಿದ ಅನುಭವ ಕೂಡ ಅವರಿಗೆ ಇದ್ದಿದ್ದು ಈಗ ಸರ್ಕಾರ ಅವರನ್ನು ನೂತನ ಬಿಟಿಡಿಎ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿದೆ. ಬಿಟಿಡಿಎ ಅಧ್ಯಕ್ಷರನ್ನಾಗಿ ನನ್ನನ್ನು ಸರ್ಕಾರ ಮಾ.13ರಂದು ಘೋಷಣೆ ಮಾಡಿದ್ದು ನೇಮಕ ಮಾಡಿದ್ದು ತುಂಬಾ ಸಂತೋಷ ತಂದಿದೆ. ಮುಂಬರುವ ದಿನಗಳಲ್ಲಿ ಸಂತ್ರಸ್ತರ ಪರವಾಗಿ ಕೆಲಸ ಮಾಡುವುದಾಗಿ ಪ್ರಕಾಶ ತಪಶೆಟ್ಟಿಯವರು ತಿಳಿಸಿದ್ದಾರೆ.

ನಿಧನ ಸುದ್ದಿ

ಗುರುಬಸಪ್ಪ ಉಳ್ಳಾಗಡ್ಡಿ



ಕಲಾದಗಿ: ಗ್ರಾಮದ ಗುರುಲಿಂಗೇಶ್ವರ ಪ್ರೌಢ ಶಾಲೆಯ ನಿವೃತ್ತ ಶಿಕ್ಷಕರಾಗಿದ್ದ ಗುರುಬಸಪ್ಪ ಮ ಉಳ್ಳಾಗಡ್ಡಿ(70) ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗ ಇದ್ದಾರೆ.

ವಿಜಯಲಕ್ಷ್ಮೀ ಅಂಟೀನ



ಬೀಳಗಿ: ತಾಲೂಕಿನ ಆರಕೇರಿ ಗ್ರಾಮದಲ್ಲಿ ಅಂಚೆ ಇಲಾಖೆಯ ಬ್ರ್ಯಾಂಚ್ ಪೋಸ್ಟ್ ಮಾಸ್ಟರ್ ಶಿವರುದ್ರಪ್ಪ ಚನಬಸಪ್ಪ ಅಂಟೀನ ಅವರ ಪತ್ನಿ ವಿಜಯಲಕ್ಷ್ಮೀ ಶಿವರುದ್ರಪ್ಪ ಅಂಟೀನ (49) ಶನಿವಾರ ನಿಧನ ಹೊಂದಿದ್ದಾರೆ. ಮೃತರಿಗೆ ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವಿದೆ.

ವಿ.ಡಿ.ಫತ್ತೇಪೂರ



ಬಾದಾಮಿ: ನಗರದ ಹಿರಿಯ ಔಷಧ ವ್ಯಾಪಾರಿ ವಿಜಯಕುಮಾರ ವೆಂಕಪ್ಪ ಫತ್ತೇಪುರ(78) ಭಾನುವಾರ ನಿಧನರಾದರು. ಮೃತರಿಗೆ ಪತ್ನಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ. ವಿ.ಡಿ.ಫತ್ತೇಪೂರ ನಿಧನಕ್ಕೆ ಬಾದಾಮಿ ತಾಲೂಕು ಔಷಧ ವ್ಯಾಪಾರಿಗಳ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.



ಬಾದಾಮಿ: ಪಟ್ಟಣದ ಹೊರವಲಯದ ಎಂಎಲ್‌ಬಿಸಿಐಬಿ ಹಿಂದಗಡೆ ಪಟ್ಟಣಶೆಟ್ಟಿ ಲೇ ಔಟ್‌ನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ರೂ.514 ಲಕ್ಷ ಅನುದಾನದ ವೆಚ್ಚದಡಿ ಪಪಂ ಸಮುದಾಯದ ವಸತಿ ನಿಲಯ ನಿರ್ಮಾಣ ಕಾಮಗಾರಿಗೆ ಭಾನುವಾರ ಶಾಸಕ ಭೀಮಸೇನ ಚಿಮ್ಮನಕಟ್ಟಿ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಸರ್ಕಾರದ ಸೌಲಭ್ಯ ಸದುಪಯೋಗ ಪಡೆಯಿರಿ

ಬಾದಾಮಿ: ಪಪಂ ಸಮಾಜ ಬಾಂಧವರು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ ಸರ್ಕಾರದ ವಸತಿ ನಿಲಯ ಸೌಲಭ್ಯ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು. ಭಾನುವಾರ ಪಟ್ಟಣದ ಹೊರವಲಯದ ಎಂಎಲ್‌ಬಿಸಿಐಬಿ ಹಿಂದಗಡೆ ಪಟ್ಟಣಶೆಟ್ಟಿ ಲೇ ಔಟ್‌ನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ರೂ.514 ಲಕ್ಷ ಅನುದಾನದ ವೆಚ್ಚದಡಿ ಪಪಂ ಸಮುದಾಯದ ವಸತಿ ನಿಲಯ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಸಮಾಜ ಬಾಂಧವರು ತಮ್ಮ ಮಕ್ಕಳಿಗೆ ಪ್ರಾರಂಭದಿಂದಲೇ ಗುಣಮಟ್ಟದ ಶಿಕ್ಷಣ ನೀಡಲು ಆದ್ಯತೆ ನೀಡಬೇಕು. ಮಕ್ಕಳು ವಸತಿ ನಿಲಯದಲ್ಲಿ ಇದ್ದು, ಉತ್ತಮವಾಗಿ ಓದಿ ಸತ್ಪ್ರಜೆಗಳಾಗಬೇಕು ಎಂದು ಹೇಳಿದರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಎಂ.ಎಸ್.ಮಳಿಮಠ ಮಾತನಾಡಿ, ಕ್ಷೇತ್ರಕ್ಕೆ ಮಂಜೂರಾಗಿರುವ ವಸತಿನಿಲಯಗಳ ಕಾರ್ಯಕ್ರಮದ ಕುರಿತು ಮಾಹಿತಿ ನೀಡಿದರು. ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ ಹಿರೇಮಠ, ಮುಖಂಡರಾದ ಮಂಜುನಾಥ ಹೊಸಮನಿ, ಬಸವರಾಜ ತಳವಾರ, ಕೋಣಪ್ಪ ಕಾಟನ್ನವರ, ಬಸವರಾಜ ಪಾತ್ರೋಟ, ಬಸವರಾಜ ಡೊಳ್ಳಿನ, ರಂಗನಾಥ ಮೇಟಿಕಲ್, ಮಹಾಂತೇಶ ಹಟ್ಟಿ, ಶೇಖರ ಚಿಂತಾಕಲ್, ದಾದೂ ಇಟಗಿ, ಕನಕಪ್ಪ ಪರಸನ್ನವರ, ಆನಂದ ದೊಡಮನಿ, ಆನಂದ ಮರಡಿತೋಟದ, ಪಿಡಬ್ಲ್ಯೂಡಿ ಸಹಾಯಕ ಅಭಿಯಂತರ ಯಲ್ಲಪ್ಪ ಆಡಿನ, ಸೇರಿದಂತೆ ಇತರರು ಹಾಜರಿದ್ದರು. ಪಪಂ ಸಮಾಜದ ಮುಖಂಡರು ಉಪಸ್ಥಿತರಿದ್ದರು. ಡಿ.ವೈ.ಹೊಸಮನಿ ನಿರೂಪಿಸಿದರು.



ಬಾಗಲಕೋಟೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಾಗಲಕೋಟೆ ನವನಗರದ ಸಿದ್ದರಾಮೇಶ್ವರ ಮಹಾಸಂಸ್ಥಾನ ಭೋವಿ ಗುರುಪೀಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದು ಅವರೊಂದಿಗೆ ಚರ್ಚಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

ಹಿಂದು ಸಮ್ಮೇಳನ: ಬೃಹತ್ ಶೋಭಾಯಾತ್ರೆ

ಗುಳೇದಗುಡ್ಡ: ಹಿಂದು ಸಮ್ಮೇಳನದ ಅಂಗವಾಗಿ ಹಿಂದೂ ಸಮ್ಮೇಳನ ಸಂಚಾಲನ ಸಮಿತಿ ಹಾಗೂ ಪಟ್ಟಣದ ಎಲ್ಲ ಹಿಂದೂ ಸಮಾಜಗಳ ವತಿಯಿಂದ ಹಮ್ಮಿಕೊಂಡಿದ್ದ ಬೃಹತ್ ಭವ್ಯ ಶೋಭಾಯಾತ್ರೆ ಭಾನುವಾರ ನಡೆಯಿತು.

ಪಟ್ಟಣದ ಬಾದಾಮಿ ನಾಕಾದ ಹತ್ತಿರ ಚಿಕ್ಕರೇವಣಸಿದ್ದೇಶ್ವರ ಶಿವಶರಣರ ಮಠದಿಂದ ಮಧ್ಯಾಹ್ನ ಭಾರತಮಾತೆಯ ಭಾವಚಿತ್ರದೊಂದಿಗೆ ಆರಂಭಗೊಂಡ ಬೃಹತ್ ಶೋಭಾಯಾತ್ರೆಯಲ್ಲಿ ಕರಡಿ ಮಜಲು, ಭಜನಾ ಮಂಡಳಿ, ಡೊಳ್ಳು ಕುಣಿತ, ಗೊಂಬೆಗಳು, ಬಾಜಾ ಭಜಂತ್ರಿ, ಹಲಿಗೆ ಮೇಳ ಸೇರಿದಂತೆ ವಿವಿಧ ವಾದ್ಯಮೇಳಗಳು ಶೋಭಾಯಾತ್ರೆಗೆ ಕಳೆ ನೀಡಿದ್ದವು. ಕುಂಭಹೊತ್ತ ನೂರಾರು ಮಹಿಳೆಯರು ಶೋಭಾಯಾತ್ರೆಯಲ್ಲಿ ಭಾಗವಹಿಸಿದ್ದರು.

ಶೋಭಾಯಾತ್ರೆಯಲ್ಲಿ ದೇವರ, ಶರಣರು ಹಾಗೂ ಸಂತರ ಭಾವಚಿತ್ರದೊಂದಿಗೆ ವಿವಿಧ ಸಮಾಜಗಳ ಬಾಂಧವರು ಭಾಗವಹಿಸಿದ್ದರು. ಕಿತ್ತೂರು ರಾಣಿ ಚೆನ್ನಮ್ಮ, ಸ್ವಾಮಿ ವಿವೇಕಾನಂದ, ಶ್ರೀರಾಮ, ರಾಘವೇಂದ್ರಸ್ವಾಮಿ, ಶಿವಾಜಿ ಸೇರಿದಂತೆ ಅನೇಕ ಮಹಾತ್ಮರ ವೇಷಧರಿಸಿದ ಮಕ್ಕಳು ಶೋಭಾಯಾತ್ರೆಯಲ್ಲಿ ಗಮನಸೆಳೆದರು.

ಶೋಭಾಯಾತ್ರೆಯ ಅಂಗವಾಗಿ ಪಟ್ಟಣದ ವಿವಿಧೆಡೆ ಕೇಸರಿ ದ್ವಾರಗಳು, ಕೇಸರಿ ಧ್ವಜಗಳು, ಪರಪರಿಗಳಿಂದ ಅಲಂಕರಿಸಲಾಗಿತ್ತು. ಶಿವಶರಣ ಮಠದಿಂದ ಪ್ರಾರಂಭವಾದ ಭವ್ಯ ಶೋಭಾಯಾತ್ರೆ ಪಟ್ಟಣದ ಗಚ್ಚಿನಕಟ್ಟಿ, ಚೌಬಜಾರ, ಅರಳಿಕಟ್ಟಿ, ಪುರಸಭೆ, ಪವರಾಕ್ರಾಸ್ ಮೂಲಕ ಹಾಯ್ದು ಭಂಡಾರಿ ಕಾಲೇಜಿನ ಮೈದಾನ ತಲುಪಿತು. ಶೋಭಾಯಾತ್ರೆಯ ಉದ್ದಕ್ಕೂ ಭಾರತಮಾತಾಕೀ ಜೈ, ಜೈ ಶಿವಾಜಿ, ಜೈ ಭವಾನಿ ಎಂಬ ಘೋಷಣೆಗಳು ಮೊಳಗಿದವು. ಗುರುಸಿದ್ದೇಶ್ವರ





ಮಠದ ಬಸವರಾಜ ಪಟ್ಟದಾರ್ಯ ಸ್ವಾಮೀಜಿ, ಅಮರೇಶ್ವರ ಮಠದ ಡಾ. ನೀಲಕಂಠ ಶಿವಾಚಾರ್ಯ ಸ್ವಾಮೀಜಿ, ಮರಡಿಮಠದ ಶ್ರೀ ಕಾಡಸಿದ್ದೇಶ್ವರ ಸ್ವಾಮೀಜಿ ಶೋಭಾಯಾತ್ರೆಯ ಸಾನಿಧ್ಯ ವಹಿಸಿ, ಗೋಮಾತೆಗೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು.

ಹಿಂದೂ ಸಮ್ಮೇಳನ ಸಂಚಾಲನ ಸಮಿತಿ ಅಧ್ಯಕ್ಷ ಅಶೋಕ ಹೆಗಡಿ, ಸಂಪತ್ತಕುಮಾರ್ ರಾಠಿ, ಅಮಾತೆಪ್ಪ ಕೊಪ್ಪಳ, ಮಾಜಿ ಶಾಸಕ ರಾಜಶೇಖರ ಶೀಲವಂತ, ರಂಗಪ್ಪ ಶೇಬಿನಕಟ್ಟಿ, ಪಿ.ಎನ್. ಪವಾರ, ಸಂಗಣ್ಣ ಹುನಗುಂದ, ಸಂಜು ಕಾರಕೂನ, ವಿಠ್ಠಲ ಪತ್ತಾರ, ಶಂಕ್ರಪ್ಪ ರೂಡಗಿ, ಮಲ್ಲಿಕಾರ್ಜುನ ಶೀಲವಂತ, ಪ್ರಭು ತಟ್ಟಿಮಠ, ಭುವನೇಶ ಪೂಜಾರ, ವಿಠ್ಠಲ ಶಿರೂರು, ಮಧುಸೂದನ ರಾಂದಡ, ಮುರಗೇಶ ರಾಜನಾಳ, ಅಪ್ಪು ಧಾರವಾಡ, ಶಿವಾನಂದ ಬಾದವಾಡಗಿ, ಆದಪ್ಪ ಕಲಬುರ್ಗಿ, ಮಹೇಶ ಸೂಳೇಭಾವಿ, ಈರಣ್ಣ ಬಂಡಿ, ಶಿವಾನಂದ ಬಡಿಗೇರ, ಬಸವರಾಜ ಕುಂಬಾರ, ರವಿ ಶೇಬಿನಕಟ್ಟಿ, ಈರಣ್ಣ ಬಂಡಿವಡ್ಡರ, ಪ್ರಶಾಂತ ಜವಳಿ, ಪುರುಷೋತ್ತಮ ರಾಠಿ, ಮಹಾದೇವ ಜಗತಾಪ, ಈರಣ್ಣ ಹಳ್ಳಿ, ಸಂತೋಷ ನಾಯನೇಗಲಿ, ಗಣೇಶ ಶೀಲವಂತ, ಪ್ರದೀಪ ಕಂಚಾಣಿ, ರಾಮಣ್ಣ ಚಂದರಗಿ, ವಿಜಯಕುಮಾರ ಬೆಟಗೇರಿ, ಫಕಿರಪ್ಪ ತಳವಾರ, ಪಟ್ಟಣದ ಎಲ್ಲ ಸಮಾಜದ ಅಧ್ಯಕ್ಷರು, ಮುಖಂಡರು, ಯುವಕ ಮಿತ್ರರು ಮಹಿಳೆಯರು ಮತ್ತಿತರರು ಇದ್ದರು.

ಮಕ್ಕಳಿಗೆ ಸಂಸ್ಕಾರ ನೀಡಿ: ಸಾವಕಾರ

ಬೀಳಗಿ: ಮಕ್ಕಳಿಗೆ ವಿದ್ಯೆಯ ಜೊತೆಗೆ ಸಂಸ್ಕಾರ ವಂತರನ್ನಾಗಿ ಮಾಡಬೇಕು. ತಂದೆ-ತಾಯಿಗಳು ಮಕ್ಕಳನ್ನು ಶಾಲೆಗೆ ಕಳುಹಿಸುವುದರ ಜೊತೆಗೆ ಅವರ ಮೇಲೆ ಸೂಕ್ತ ನಿಗಾ ಇಡಬೇಕು ಮತ್ತು ಕಾಳಜಿ ವಹಿಸಬೇಕು. ಮನುಷ್ಯನ ನಡೆ, ನುಡಿ ಚೆನ್ನಾಗಿದ್ದರೆ ಮನುಷ್ಯ ಎತ್ತರಕ್ಕೇರಬಹುದು ಎಂದು ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ. ಸಾವಕಾರ ಹೇಳಿದರು.

ತಾಲೂಕಿನ ಆರಕೇರಿ ಗ್ರಾಮದಲ್ಲಿ ಸರ್ಕಾರಿ ಕನ್ನಡ ಹೆಣ್ಣು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿನೀಯರ ಬೀಳ್ಕೊಡುಗೆ ಸಮಾರಂಭದಲ್ಲಿ ಶಾಲೆಯ ವಾರ್ಷಿಕ ಯಶೋಗಾಥೆಯ ಹಸ್ತಪ್ರತಿ ಬಿಡುಗಡೆ ಮಾಡಿ ಮಾತನಾಡಿ, ಪಾಲಕರು ಮಕ್ಕಳಿಗೆ ಉನ್ನತ ಶಿಕ್ಷಣದ ಜೊತೆಗೆ ನಡೆ ನುಡಿಗಳನ್ನು ಕಲಿಸಿ ಕೊಡಬೇಕು. ವರ್ಗದ ಕೊಠಡಿಯಲ್ಲಿ ಶಿಕ್ಷಕರು ಶಿಕ್ಷಣದ ಜೊತೆಗೆ ಸಂಸ್ಕಾರ, ಸಂಸ್ಕೃತಿ, ಮಾನವೀಯ ಮೌಲ್ಯಗಳ ಕುರಿತು ಅಗತ್ಯ ಮಾರ್ಗದರ್ಶನ ಮಾಡಬೇಕು ಎಂದು ಹೇಳಿದರು.

ವಿಶ್ರಾಂತ ಶಿಕ್ಷಕ ಆರ್.ಎಚ್.ಚಂಡಕಿ ಮಾತನಾಡಿ, ಸಂಪತ್ತು ಬಳಸಿದಂತೆ ಕಡಿಮೆಯಾದರೆ, ವಿದ್ಯೆ ಬಳಸಿದಂತೆ ಹೆಚ್ಚಾಗುತ್ತದೆ. ವಿದ್ಯೆ ಮನುಷ್ಯನ ದುಃಖ ನಿವಾರಿಸುತ್ತದೆ. ಲಕ್ಷ್ಮೀಯನ್ನು ಮನೆಗೆ ತರುತ್ತದೆ. ದಶದಿಕ್ಕುಗಳಿಗೆ ಕೀರ್ತಿ ಹಬ್ಬಿಸುತ್ತದೆ. ಗಳಿಸಿದ ಹಣ, ಒಡವೆ, ಸಂಪತ್ತು ಅಪಹರಿಸಬಹುದು. ಆದರೆ ವಿದ್ಯೆಯನ್ನು ಯಾರು ಅಪಹರಿಸಲು ಸಾಧ್ಯವಿಲ್ಲವೆಂದು ಹೇಳಿದರು.

ಶಿಕ್ಷಕ ಬಿ.ಎಂ.ಮನಗೂಳಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಸಂಸ್ಕಾರಯುತ ಶಿಕ್ಷಣ ಉತ್ತಮ ಬದುಕು ಕಟ್ಟಿಕೊಳ್ಳಲು ಸಹಾಯ ಮಾಡುತ್ತದೆ. ಪಾಲಕರು ಮನೆಯಲ್ಲಿ ಮಕ್ಕಳಿಗೆ ಒಳ್ಳೆಯದು ಮತ್ತು ಕೆಟ್ಟದ್ದರ ಕುರಿತು ತಿಳಿಸಿ ಹೇಳಬೇಕು. ಮಕ್ಕಳಿಗೆ ಓದಿಗೆ ಪ್ರೋತ್ಸಾಹ ನೀಡಬೇಕೆಂದು ಹೇಳಿದರು.

ಶಿಕ್ಷಕ ಮುತ್ತುರಾಜ ಕುಂಬಾರ, ಸಿದ್ದು ಮೂರಮಟ್ಟಿ ಅವರನ್ನು ಸನ್ಮಾನಿಸಲಾಯಿತು. ಮುಖ್ಯಗುರು ಮಂಜುನಾಥ ಗೊರವರ ಮಾತನಾಡಿದರು. ಶಿಕ್ಷಕಿ ರೇಣುಕಾ ಕಾಜೂರ ವರದಿ ವಾಚಿಸಿದರು.

ಎಸ್‌ಡಿಎಂಸಿ ಅಧ್ಯಕ್ಷ ಪರಶು ಮಲ್ಲಾರ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಎಚ್‌ಪಿಎಸ್ ಮುಖ್ಯಗುರು ಬಿ.ಎಸ್.ಭೂಷಣ್ಣವರ, ಎಸ್‌ಡಿಎಂಸಿ ಅಧ್ಯಕ್ಷ ವಿಠ್ಠಲ ಭೂಷಣ್ಣವರ, ಎಸ್‌ಡಿಎಂಸಿ ಸದಸ್ಯರಾದ ನೇಮಣ್ಣ ಹಿರಕಣ್ಣವರ, ವಿಠ್ಠಲ ಭಬ್ಬಿ, ಸಿದ್ದಪ್ಪ ದುಲಾರಿ, ಹನುಮಂತ ಸಿಡ್ಲನ್ನವರ, ರಾಮಪ್ಪ ಹುನಮರ, ಭಾಗೀರಥಿ ಕಂಬಾರ, ಶೋಭಾ ಈರಗಾರ, ಸಕ್ಕುಬಾಯಿ ಮರೆನ್ನವರ, ಶಿಕ್ಷಕರಾದ ಸವಿತಾ ನ್ಯಾಮಗೌಡ, ಸೈದು ಹಿರೇಮನಿ, ಶಿಲ್ಪಾ ಕಂಬಿ, ಸುಜಾತಾ ನಡಗೇರಿ ಮತ್ತಿತರಿದ್ದರು.



ಪರೀಕ್ಷೆ ಬರೆಯಲಿರುವ 8,818 ವಿದ್ಯಾರ್ಥಿಗಳು

ಜಮಖಂಡಿ: ಅಖಂಡ ಜಮಖಂಡಿ ತಾಲೂಕಿನಲ್ಲಿ ಒಟ್ಟು 8818 ವಿದ್ಯಾರ್ಥಿಗಳು 10ನೇ ತರಗತಿ ಪರೀಕ್ಷೆ ಬರೆಯಲಿದ್ದಾರೆ. ಈ ಪೈಕಿ 3909 ಗಂಡು ಹಾಗೂ 4279 ಹೆಣ್ಣು ಮಕ್ಕಳು ಇದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಬಸಣ್ಣವರ ತಿಳಿಸಿದರು.

ಬಸವೇಶ್ವರ ಶಿಕ್ಷಣ ಸಂಸ್ಥೆಯ ಪ.ಪೂ ಕಾಲೇಜು ಕಡಪಟ್ಟಿಯಲ್ಲಿ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಒಟ್ಟು 25 ಪರೀಕ್ಷಾ ಕೇಂದ್ರ ಸಿದ್ಧಪಡಿಸಲಾಗಿದೆ. ರಬಕವಿ-ಬನಹಟ್ಟಿ, ತೇರದಾಳ ತಾಲೂಕಿನಲ್ಲಿ ಒಟ್ಟು 11 ಪರೀಕ್ಷಾ ಕೇಂದ್ರಗಳಿದ್ದು, 3414 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಜಮಖಂಡಿ ತಾಲೂಕಿನಲ್ಲಿ 14 ಪರೀಕ್ಷಾ ಕೇಂದ್ರಗಳಿದ್ದು, ನಗರದಲ್ಲಿ 10 ಹಾಗೂ ಗ್ರಾಮೀಣ ಭಾಗದಲ್ಲಿ 15 ಪರೀಕ್ಷಾ ಕೇಂದ್ರ ಗುರುತಿಸಲಾಗಿದೆ. 322 ಕೊಠಡಿಗಳನ್ನು ಸಿದ್ಧಪಡಿಸಲಾಗಿದೆ ಎಂದು ವಿವರಣೆ ನೀಡಿದರು.

25 ಮುಖ್ಯ ಅಧೀಕ್ಷಕರು, 25 ಪ್ರಶ್ನೆಪತ್ರಿಕೆ ಪಾಲಕರು, 25 ಸ್ಥಾನಿಕ ಜಾಗೃತದಳ, 10 ಉಪಮುಖ್ಯ ಅಧೀಕ್ಷಕರು, 25 ವೆಬ್ ಕಾಸ್ಟಿಂಗ್ ವೀಕ್ಷಕರು, 10 ಮಾರ್ಗಾಧಿಕಾರಿಗಳು ಪ್ರಶ್ನೆಪತ್ರಿಕೆ ಸಾಗಿಸುವರು, 25 ಮೊಬೈಲ್ ಸ್ವಾಧೀನಾಧಿಕಾರಿಗಳು ಸೇರಿದಂತೆ ಉಳಿದ ಸಿಬ್ಬಂದಿಗಳನ್ನು ಪರೀಕ್ಷೆಗಳು ಸುಸೂತ್ರವಾಗಿ ನಡೆಯಲು ನಿಯಮಕ ಮಾಡಲಾಗಿದೆ ಎಂದು ತಿಳಿಸಿದರು.

ಜಿಲ್ಲೆಗೆ ಕಳೆದ ಎರಡು ವರ್ಷಗಳಿಂದ ಪ್ರಥಮ ಸ್ಥಾನ ಪಡೆಯುತ್ತಿರುವ ಜಮಖಂಡಿ ಈ ಬಾರಿ ಹ್ಯಾಟ್ರಿಕ್ ಸಾಧನೆ ಮಾಡಲಿದೆ. ಪರೀಕ್ಷೆ ಪ್ರಾರಂಭ ದಿಂದ ಹಿಡಿದು ಉತ್ತರ ಪತ್ರಿಕೆಗಳನ್ನು ನಿರ್ದಿಷ್ಟ ಸ್ಥಳಕ್ಕೆ ತಲುಪಿಸುವ ವರೆಗೆ ಎಲ್ಲ ಸಿಬ್ಬಂದಿಗಳು ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು. ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿ ಎ.ಆರ್ ತೇಲಿ ಮಾತನಾಡಿ ಎಲ್ಲಾ 10ನೇ ತರಗತಿಯ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಉಚಿತ ಸಾರಿಗೆ ವ್ಯವಸ್ಥೆ ಮಾಡಲಾಗಿದೆ. ಅರ್ಧಗಂಟೆ ಮುಂಚಿತವಾಗಿ ಪರೀಕ್ಷಾ ಕೇಂದ್ರ ತಲುಪಲು ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಪ್ರಾಚಾರ್ಯ ಆರ್.ಎಸ್.ತಳಿ, ಗ್ರೇಡ್ 2 ತಹಸೀಲ್ದಾರ್ ಕೆ.ವೈ.ಬಿದರಿ, ಶಿಕ್ಷಣ ಇಲಾಖೆ ಅಧಿಕಾರಿ ಸಂಗಮೇಶ ವಿಜಾಪೂರ, ವಿದ್ಯಾರ್ಥಿನಿ ಪ್ರಭಾ ಕಾಂಬಳೆ, ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ, ಕೆಪಿಟಿಸಿಎಲ್, ಶಿಕ್ಷಣ ಇಲಾಖೆಯ ಸಿಬ್ಬಂದಿ ಭಾಗವಹಿಸಿದ್ದರು.



ಸಮಾಜದ ಪ್ರಗತಿಗೆ ಸ್ತ್ರೀಯರ ಕೊಡುಗೆ ಅಪಾರ: ತೆಗ್ಗಿಹಾಳ

ಮುಧೋಳ: ಮಹಿಳೆಯರು ಶಿಕ್ಷಣ, ಕೃಷಿ, ಆಡಳಿತ, ಉದ್ಯಮ, ವಿಜ್ಞಾನ ಮತ್ತು ಸಾಮಾಜಿಕ ಸೇವೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸಮಾಜದ ಪ್ರಗತಿಗೆ ಮಹತ್ತರ ಕೊಡುಗೆ ನೀಡುತ್ತಿದ್ದಾರೆ ಎಂದು ಅಬಕಾರಿ ನಿರೀಕ್ಷಕಿ ಗೀತಾ ತೆಗ್ಗಿಹಾಳ ಹೇಳಿದರು.



ನಗರದ ದತ್ತಮಂದಿರದಲ್ಲಿ ನಡೆದ ಭಾರತೀಯ ಜನತಾಪಾರ್ಟಿ ಮುಧೋಳ ಮಹಿಳಾ ಮೋರ್ಚಾ ನಗರ ಹಾಗೂ ಗ್ರಾಮೀಣ ಮಂಡಲ ವತಿಯಿಂದ ಹಮ್ಮಿಕೊಂಡ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಾಧನೆ ಗುರುತಿಸಲು ಅಂತಾರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಗುತ್ತದೆ ಎಂದು ತಿಳಿಸಿದರು. ನಿವೃತ್ತ ಪ್ರಾಚಾರ್ಯ ಸುಲೋಚನಾ ಜವಳಗಿ ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ಕೃಷಿ ಹಾಗೂ ಕುಟುಂಬದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದು, ಪರಿಶ್ರಮ, ಆತ್ಮವಿಶ್ವಾಸ ಮತ್ತು ದೃಢ ಸಂಕಲ್ಪದಿಂದ ಯಾವುದೇ ಸವಾಲನ್ನು ಜಯಿಸಿ ಯಶಸ್ಸನ್ನು ಸಾಧಿಸಬಹುದು' ಎಂದರು.

ರಾಜ್ಯ ಮಹಿಳಾ ಮೋರ್ಚಾ ಉಪಾಧ್ಯಕ್ಷ ಡಾ.ವಿಜಯಲಕ್ಷ್ಮಿ ತುಂಗಳ ಮಾತನಾಡಿ, ಮಹಿಳೆಯರ ಶಿಕ್ಷಣ, ಸಬಲೀಕರಣ ಮತ್ತು ಸಮಾನ ಅವಕಾಶಗಳ ಸೃಷ್ಟಿಯು ಸಮಾನತೆ ಮತ್ತು ನ್ಯಾಯಸಮ್ಮತ ಸಮಾಜ ನಿರ್ಮಾಣಕ್ಕೆ ಅತ್ಯಂತ ಅಗತ್ಯವಾಗಿದೆ ಎಂದು ಹೇಳಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಆಯಿಶಾ ಕಿಲ್ಲೆದಾರ. ಕಲಾವತಿ ದೊಡ್ಡಮನಿ, ಸಾಕ್ಷಿ ಶಿಂಧೆ, ಮೇಘ ಮೈತ್ರಿ, ಪೂಜಾ ಇಮ್ಮನವರ, ಸರಸ್ವತಿ ಮೈತ್ರಿ, ಲಾವಣ್ಯ ಕೊಟ್ಟೆಪಪ್ಪಗೋಳ, ರಂಜಿತಾ ಪಂಚಗಾವಿ ಅವರಿಗೆ ಸನ್ಮಾನಿಸಲಾಯಿತು.

ಸುಶೀಲ ರಂಗನಾಥ, ಅನಿತಾ ಪಾಟೀಲ, ಕಮಲಾ ಚೇಡರ, ವನಜಾಕ್ಷಿ ಮಂಟೂರ, ಡಾ.ಸುಮೇದ ಮಾನೆ, ವೀಣಾ ರಾಮತೀರ್ಥ, ಕಮಲ ಕುಬಸದ, ಕಾಶಿಬಾಯಿ ಪುರಾಣಿಕ, ಸೀಮಾ ರಾಮತೀರ್ಥ, ತ್ರಿವೇಣಿ ತಿಮಸಾನಿ, ಸವಿತಾ ಹಿರೇಮಠ, ಬನಶ್ರೀ ಕಂಬಿ ಮಹಿಳಾ ಪದಾಧಿಕಾರಿಗಳು ಇದ್ದರು.

ತಾಲೂಕಾಸ್ಪತ್ರೆಯಲ್ಲಿ ಔಷಧ ಖಾಲಿ: ಲಕ್ಷಾಂತರ ರೂ. ಅನುದಾನ ದುರ್ಬಳಕೆ ಆರೋಪ

ಬಾದಾಮಿ: ತಾಲ್ಲೂಕು ಸರಕಾರಿ ಆಸ್ಪತ್ರೆಯಲ್ಲಿ ಔಷಧಗಳು ಖಾಲಿಯಾಗಿದ್ದು, ವಿವಿದ ವಿಭಾಗದಲ್ಲಿದ್ದ ಲಕ್ಷಾಂತರ ರೂ.ಹಣವನ್ನು ತಾಲೂಕಾ ಆಡಳಿತ ವೈದ್ಯಾಧಿಕಾರಿ ದುರ್ಬಳಕೆ ಮಾಡಿದ್ದಾರೆ ಎಂದು ತಿಳಿದುಬಂದಿದೆ.



ಸತತ ಒಂದು ತಿಂಗಳಿನಿಂದ ರಕ್ತ ತಪಾಸಣಾ ಘಟಕ ಬಂದ್ ಆಗಿದೆ. ದೈಹಿಕ ವಿಕಲತೆಯ ಇರುವವರಿಗೆ ಯುಡಿಐಡಿ ಕಾರ್ಡ್ ಮಾಡಿಸಲು ಬಂದವರಿಗೆ ರೂ.5 ಸಾವಿರ ಹಣ ಪಡೆದು ಸಹಿ ಮಾಡುತ್ತಾನೆ. ಹಣ ಕೊಡದಿದ್ದರೆ ಸಹಿ ಮಾಡುವುದಿಲ್ಲ, ಹಾಗೆಯೇ ವಾಪಸು ಕಳುಹಿಸುತ್ತಾನೆ. ಕಿವಿ, ಕಣ್ಣಿಗೆ ಹಾಕುವ ಡ್ರಾಪ್ಸ್ ಖಾಲಿಯಾಗಿವೆ. ಚಿಕ್ಕಮಕ್ಕಳ ಔಷಧ ಇಲ್ಲ, ಜ್ವರ ಕೆಮ್ಮು ನೆಗಡಿ ಸೇರಿದಂತೆ ಯಾವುದೇ ಔಷಧ ಇಲ್ಲವಾಗಿದೆ. ವಿವಿದ ಹೆಡ್ ನಲ್ಲಿದ್ದ ಲಕ್ಷಾಂತರ ರೂ. ಅನುದಾನವನ್ನು ಡಾ.ಶೆಟ್ಟರ ಆಡಳಿತ ಮುಖ್ಯವೈದ್ಯ ದುರ್ಬಳಕೆ ಮಾಡಿಕೊಂಡಿದ್ದು, ಇದನ್ನು ಕೇಳಲು ಹೋದ ಹಾಗೂ ಆಸ್ಪತ್ರೆಯಲ್ಲಿನ ನ್ಯೂನ್ಯತೆ ಬಗ್ಗೆ ಯುಟ್ಯೂಬ್ ಚಾನೆಲ್ ನಲ್ಲಿ ಸುದ್ದಿ ಪ್ರಸಾರ ಮಾಡಿದ ಪತ್ರಕರ್ತ ಮುತ್ತಣ್ಣ ಯರಗೊಪ್ಪ ಅವರಿಗೆ ಶುಕ್ರವಾರ ರಾತ್ರಿ 11.47 ಗಂಟೆಗೆ ದೂರವಾಣಿ ಕರೆ ಮಾಡಿ ಅಶ್ಲೀಲ ಪದ ಬಳಕೆ ಮಾಡಿ ಬೈದಿದ್ದಾನೆ. ಈ ಕುರಿತು ಸ್ಥಳೀಯ ಪೊಲೀಸ್ ಠಾಣೆಗೆ ಲಿಖಿತ ದೂರು ಸಲ್ಲಿಸಿದ್ದಾರೆ. ಡಿ.ಎಚ್.ಓ.ಮಂಜುನಾಥ ಅವರಿಗೂ ದೂರು ನೀಡಲಾಗಿದ್ದು, ವೈದ್ಯರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಡಿ.ಎಚ್.ಓ.ಮಂಜುನಾಥ ಭರವಸೆ ನೀಡಿದ್ದಾರೆ.

ವ್ಯಾಪಕ ಆಕ್ರೋಶ: ಪತ್ರಕರ್ತ ಮುತ್ತಣ್ಣ ಯರಗೊಪ್ಪ ವಿರುದ್ಧ ಅಶ್ಲೀಲ ಪದ ಬಳಕೆ ಮಾಡಿದ ಡಾ.ವಿ.ಕೆ.ಶೆಟ್ಟರ ವಿರುದ್ಧ ಸಾರ್ವಜನಿಕರಿಂದ ವ್ಯಾಪಕ ಆಕ್ರೋಶ ವ್ಯಕ್ತವಾಗಿದ್ದು, ವೈದ್ಯರನ್ನು ಅಮಾನತು ಮಾಡಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಶುದ್ಧ ಕುಡಿಯುವ ನೀರಿನ ಅರವಟಿಗೆ ಉದ್ಘಾಟನೆ

ಬಾಗಲಕೋಟೆ: ನವನಗರದ ಸೆಕ್ಟರ್ ನಂಬರ್-4ರಲ್ಲಿರುವ ಡಿ.ದೇವರಾಜ ಅರಸು ಹಿಂದುಳಿದ ವರ್ಗ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬರುವ ವೃತ್ತಿಪರ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದಲ್ಲಿ ಭಾನುವಾರ ನಮನ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಅನಗವಾಡಿ ನಬಿ ಮ.ನದಾಫ್ ಅವರ ನೇತೃತ್ವದಲ್ಲಿ 3 ತಿಂಗಳು ಕಾಲ ಶುದ್ಧ ಕುಡಿಯುವ ನೀರಿನ ಅರವಟಿಗೆ ಉದ್ಘಾಟಿಸಲಾಯಿತು.



ತಾಲೂಕು ಕಲ್ಯಾಣ ಅಧಿಕಾರಿಗ ಸುರೇಶ ಬಡಿಗೇರ ಮಾತನಾಡಿ, ಅನಗವಾಡಿ ನಬಿಯವರು ಮಾಡುತ್ತಿರುವ ಕಾರ್ಯ ಅತ್ಯಂತ ಸ್ಮರಣೀಯ ಹಾಗೂ ಸಮಾಜಮುಖಿ ಇವರು ಸದಾ ಹೀಗೆ ಒಳ್ಳೆಯ ಕಾರ್ಯಗಳನ್ನು ಮಾಡಲಿ ನಮ್ಮ ಬೆಂಬಲ ಇರುತ್ತದೆ ಎಂದು ಹೇಳಿದರು.

ಡಾ.ಸುರೇಶ ಅಯ್ಯಪ್ಪ ವಸ್ತ್ರದ ಮಾತನಾಡಿ, ಅನಗವಾಡಿ ನಬಿ ಅವರು ಒಳ್ಳೆಯ ಸಮಾಜಮುಖಿ ಹಿಂದು-ಮುಸಲ್ಮಾನ ಭಾವೈಕ್ಯತೆಯ ವ್ಯಕ್ತಿಯಾಗಿ ಕೆಲಸ ಮಾಡುತ್ತಿದ್ದು ಅತ್ಯಂತ ಸಂತೋಷ ಇವರ ನಮನ ಫೌಂಡೇಶನ್‌ಗೆ ಶುಭವಾಗಲಿ ಎಂದರು.

ಹೈಕೋರ್ಟ್ ವಕೀಲರಾದ ವಿನಯ ಕುಮಾರ್ ಭರಮಗೌಡರ ಮಾತನಾಡಿ, ತನಗವಾಡಿ ನಬಿ ಅವರು ನನಗೆ ಕಳೆದ 16 ವರ್ಷಗಳಿಂದ ಅತ್ಯಂತ ಚಿರಪರಿತರು ಅವರ ಸಮಾಜಮುಖಿ ಕಾರ್ಯ ಅವರ ಶಕ್ತಿ ಸಾಮರ್ಥ್ಯ ಈ ನಾಡಿಗೆ ಈ ಸಮಾಜಕ್ಕೆ ವಿಶೇಷವಾಗಿ ಬಾಗಲಕೋಟೆ ಜಿಲ್ಲೆಗೆ ಅವಶ್ಯವಿದ್ದು, ಉನ್ನತವಾದಂತ ಸಮಾಜ ಕಲ್ಯಾಣ ಕೆಲಸ ಮಾಡಲಿ ಎಂದು ಹೇಳಿದರು.

ಹಾಸ್ಟೆಲ್ ಮೇಲ್ವಿಚಾರಕ ಆನಂದಕುಮಾರ ಪಾಟೀಲ ಮಾತನಾಡಿ, ನಮನ ಫೌಂಡೇಶನ್ ಸಣ್ಣಪುಟ್ಟ ಸೇವಾ ಕಾರ್ಯಗಳನ್ನು ಮಾಡಿ ನಾವು ನಿಮ್ಮ ಜೊತೆ ಸದಾ ಸಹಕಾರ ನೀಡುತ್ತಿವೆ ಎಂದು ಹೇಳಿದರು.

ಶಂಕರ್ ಕಡಿವಾಳ ಕರಕಲಮಟ್ಟಿ ಅವರು ಮಾತನಾಡಿ, ಅನಗವಾಡಿ ನಬಿ ನದಾಫ್ ಸರ್ ನನಗೆ ಕಳೆದ 10 ವರ್ಷಗಳಿಂದ ಅತ್ಯಂತ ಸ್ನೇಹಜೀವಿ ಒಡನಾಡಿ ಸೇವಾ ಕಾರ್ಯಗಳನ್ನು ಮಾಡುತ್ತಿರುವುದು ಅತ್ಯಂತ ಹೆಮ್ಮೆಯ ಸಂಗತಿ ಎಂದು ಹೇಳಿದರು.

ಮಹಾಂತೇಶ ಕೋಟಿ, ಸಮಾಜಸೇವಕ ಗೈಬು ಸಾಬ್, ಅಲಿಸಾಬ್ ನದಾಫ್, ಶಿಲ್ಪಿಕಾರು ಬೀಳಗಿ, ಮುನ್ನ ಚಿಕ್ಕಾಲಗುಂಡಿ, ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಂಜು ಹತ್ತಿ ಕಟಗಿ, ಬಿಬಿಡ್ ವಿದ್ಯಾರ್ಥಿಯಾದ ಹನುಮಂತ ದಾಸರ, ಪರಶುರಾಮ ಇದ್ದರು.

ಕಾನಿಪ ಅಧ್ಯಕ್ಷರಾಗಿ ಮಹೇಶ ಆಯ್ಕೆ

ಮಹಾಲಿಂಗಪುರ: ಸ್ಥಳೀಯ ಕಾನಿಪ ಘಟಕದ 2026ನೇ ಸಾಲಿನ ನೂತನ ಅಧ್ಯಕ್ಷರಾಗಿ ಮಹೇಶ ಮನ್ನಯ್ಯನವರಮಠ, ಕಾರ್ಯದರ್ಶಿಯಾಗಿ (2ನೇ ಬಾರಿಗೆ) ಮೀರಾ ತಟಗಾರ ಆಯ್ಕೆಯಾದರು.

ಭಾನುವಾರ ಬಾಗಲಕೋಟೆ ಕಾನಿಪ ಭವನದಲ್ಲಿ ಜಿಲ್ಲಾಧ್ಯಕ್ಷ ಮಹೇಶ ಅಂಗಡಿ ಅಧ್ಯಕ್ಷತೆ, ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಈಶ್ವರ ಶೆಟ್ಟರ ನೇತೃತ್ವ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಗದೀಶ ಗಾಣಿಗೇರ, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಚಂದ್ರಶೇಖರ ಮೋರೆ ಅವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಸರ್ವಾನುಮತದಿಂದ ಕಾನಿಪ ಸಂಘ ಮಹಾಲಿಂಗಪುರ ಘಟಕದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ರಬಕವಿ-ಬನಹಟ್ಟಿ ತಾಲೂಕು ಕಾನಿಪ ಕಾರ್ಯದರ್ಶಿ ಶಿವಲಿಂಗ ಸಿದ್ನಾಳ, ಉಪಾಧ್ಯಕ್ಷ ಎಸ್.ಎಸ್. ಈಶ್ವರಪ್ಪಗೋಳ, ಕಾರ್ಯಕಾರಿಣಿ ಸದಸ್ಯ ಇಲಾಹಿ ಜಮಖಂಡಿ, ಮಹಾಲಿಂಗಪುರದ ಪತ್ರಕರ್ತರಾದ ಜಯರಾಮಶೆಟ್ಟಿ, ಹನೀಫ್ ಚಿಕ್ಕೋಡಿ, ನಾರನಗೌಡ ಉತ್ತಂಗಿ, ಲಕ್ಷ್ಮಣ ಕಿಶೋರಿ ಇದ್ದರು.



ಸರ್ಕಾರಿ ಶಾಲೆ ಉಳಿಸುವ ಸಂಕಲ್ಪ ಮಾಡಿ



ರನ್ನ ಬೆಳಗಲಿ: ಮುಧೋಳ ತಾಲೂಕಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಬನದವಸ್ತಿ ನಾಗರಾಳ ಶಾಲೆಯಲ್ಲಿ ಹಮ್ಮಿಕೊಂಡ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಹಾಗೂ ಶಾಲಾ ಮಕ್ಕಳ ಕೈತೋಟ ಉದ್ಘಾಟನೆ ಕಾರ್ಯಕ್ರಮ ನಡೆಯಿತು.

ಶಾಲಾ ಮಕ್ಕಳ ಕೈತೋಟದ ಉದ್ಘಾಟಿಸಿದ ಮುಧೋಳ ಸಿದ್ಧಾರೂಢ ಆಶ್ರಮದ ಸಿದ್ದರಾಮ ಶಿವಯೋಗಿಗಳು ಮಾತನಾಡಿ, ತೋಟದ ಶಾಲೆಗಳು ಉತ್ತಮ ಪರಿಸರದ ಜೊತೆಗೆ ಉತ್ತಮ ಕೌಶಲ್ಯ ನೀಡುತ್ತಿವೆ. ಶಾಲೆಗಳ ಅಭಿವೃದ್ಧಿಗೆ ಮತ್ತು ಮೇಲ ದರ್ಜೆಗೆ ವಿದ್ಯಾರ್ಥಿಗಳ ದಾಖಲಾತಿ ಮೂಲ ಕಾರಣ. ದಾಖಲಾತಿ ಹೆಚ್ಚಿಸಿ, ಸರಕಾರಿ ಶಾಲೆಗಳನ್ನು ಉಳಿಸುವ ಸಂಕಲ್ಪ ಮಾಡಬೇಕು ಎಂದು ತಿಳಿಸಿದರು.

ನಂತರ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ವಿಜೇತ ಶಿಕ್ಷಕರಿಗೆ, ದಾನಿಗಳಿಗೆ, ಹಿರಿಯರಿಗೆ ಸನ್ಮಾನಿಸಲಾಯಿತು. ಹನಮಂತ ಒಡೆಯರ ಅಧ್ಯಕ್ಷತೆ ವಹಿಸಿದ್ದರು. ರಮೇಶ ಜಿಗಿಜಿನ್ನಿ ಸಿಆರ್‌ಪಿ ಮಲ್ಲು ಜಗದಾಳ ಗ್ರಾಪಂ ಸದಸ್ಯರು, ಜಯಪ್ರಕಾಶ ಎಸ್.ಅನೂರ, ಪಿ.ಆರ್.ಮಲ್ಲಾರಿ, ಮಂಜು ಅಮೋಜಿ, ಪ್ರಕಾಶ ಬಿರಾದಾರ, ಅವಧೂತಪ್ಪ ಒಡೆಯರ, ಮುತ್ತಪ್ಪಜ್ಜ ಒಡೆಯರ, ಯಮನಪ್ಪ ನಾಗರಾಳ, ಮಾನಿಂಗಪ್ಪ ಲಾಗದವರ, ರಾಮಣ್ಣ ಸೆಂಡಗಿ, ಸಿದ್ದಪ್ಪ ಒಡೆಯರ, ರಾಘವೇಂದ್ರ ನೀಲನ್ನವರ, ಅಶೋಕ ಯಡಹಳ್ಳಿ, ರಮೇಶ ಕಂಕಣವಾಡಿ ಇನ್ನಿತರರು ಉಪಸ್ಥಿತರಿದ್ದರು.

ಕಿರುಸುದ್ದಿ



ವಿಜಯಪುರ: ವಜ್ರ ಹನುಮಾನ್ ನಗರ ಮಹಿಳಾ ಮಂಡಳದ ವತಿಯಿಂದ ವಿಶ್ವ ಮಹಿಳಾ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು. ವಿಜಯಾ ಪಾಟೀಲ ಕಾರ್ಯಕ್ರಮ ಉದ್ಘಾಟಿಸಿದರು. ರಾಧಿಕಾ ಬಾಡಗಂಡಿ, ಸವಿತಾ ಗಲಗಲಿ, ಸುಪ್ರಿಯಾ ಪಾಟೀಲ, ಗೌರಿ ಬಾಗಲಕೋಟಕರ, ಮಂದಾಕಿನಿ ಜೋಶಿ ಇದ್ದರು.



ಮುದ್ದೇಬಿಹಾಳ: ಸರ್ಕಾರಿ ಪದವಿ ಕಾಲೇಜಿನ ವಿದ್ಯಾರ್ಥಿಗಳು ತಾಲೂಕಿನ ಬಸರಗೋಡ ಗ್ರಾಮದಲ್ಲಿ ಎನ್‌ಎಸ್‌ಎಸ್ ಶಿಬಿರದಲ್ಲಿ ಭಾಗವಹಿಸಿ ಸ್ವಚ್ಛತೆ, ಉಪನ್ಯಾಸ, ರಸ್ತೆ ದುರಸ್ತಿ, ಜಾಗೃತಿ ಹಾಗೂ ರಕ್ತದಾನ ಶಿಬಿರ ಸೇರಿದಂತೆ ಹಲವಾರು ಸಮಾಜ ಸೇವಾ ಚಟುವಟಿಕೆಗಳಲ್ಲಿ ತೊಡಗಿಕೊಂಡರು. ಎನ್‌ಎಸ್‌ಎಸ್ ಸಂಚಾಲಕ ಪರಶುರಾಮ ದೇವಿ, ಪ್ರಾಂಶುಪಾಲ ಡಾ.ಎಚ್.ಎ.ಕಟಗೂರ, ಪವಾಡ ಬಸವೇಶ್ವರ ಟ್ರಸ್ಟ್ ಕರನಂದಪ್ಪ ಪಾಟೀಲ್, ಪ್ರೊ.ಎಲ್.ಎಚ್.ಮಮದಾಪುರ, ಮುತ್ತಣ್ಣ ಗೌಡರ, ಡಾ.ಬಸವರಾಜ ಹಡಪದ, ಪ್ರೊ.ಹಂಪಣ್ಣ, ಗಿರೀಶ ವಾಗಣಗೇರಿ, ಪ್ರೊ.ಮೌನೇಶ ಸೇರಿದಂತೆ ಉಪನ್ಯಾಸಕರು ಮಾರ್ಗದರ್ಶನ ಮಾಡಿದರು.

ಸಮಗ್ರ ಮಾಹಿತಿ ಒದಗಿಸಿ: ಜಿಪಂ ಸಿಇಒ

ವಿಜಯಪುರ: ಜಿಲ್ಲಾ ಮಾನವ ಅಭಿವೃದ್ಧಿ ವರದಿ–2025 ಹಾಗೂ ಸಮಗ್ರ ಮತ್ತು ಸುಸ್ಥಿರ ಜಿಲ್ಲಾ ಅಭಿವೃದ್ಧಿ ಯೋಜನೆ–2031 ವರದಿ ತಯಾರಿಕೆಗೆ ನಿಖರವಾದ ಮತ್ತು ಸ್ಪಷ್ಟವಾದ ದತ್ತಾಂಶಗಳಿಂದ ಕೂಡಿದ ನಿಗದಿತ ನಮೂನೆಯಲ್ಲಿ ದೃಢೀಕರಿಸಿ,ವಿಳಂಬ ಮಾಡದೇ ನಿಗದಿತ ಕಾಲಾವಧಿಯೊಳಗೆ ವರದಿ ಸಲ್ಲಿಸಲು ಅಧಿಕಾರಿಗಳಿಗೆ ಜಿಪಂ ಸಿಇಒ ರಿಷಿ ಆನಂದ ಸೂಚಿಸಿದರು. ಮಾ.13ರಂದು ಜಿಲ್ಲಾ ಪಂಚಾಯತಿಯ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಾನವ ಅಭಿವೃದ್ಧಿ ವರದಿ–2025 ಹಾಗೂ ಸಮಗ್ರ ಮತ್ತು ಸುಸ್ಥಿರ ಜಿಲ್ಲಾ ಅಭಿವೃದ್ಧಿ ಯೋಜನೆ–2031 ವರದಿ ತಯಾರಿಸುವ ಕುರಿತು ವಲಯವಾರು ಉಪಸಮಿತಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲಾ ಮಾನವ ಅಭಿವೃದ್ಧಿ ವರದಿ–2025ಕ್ಕೆ ಸಂಬಂಧಿಸಿದಂತೆ 126 ಸೂಚ್ಯಾಂಕಗಳ ಪೈಕಿ 47 ಸೂಚ್ಯಾಂಕಗಳ ಮಾಹಿತಿಯನ್ನು ಸಲ್ಲಿಸಿದ್ದು, ಬಾಕಿ 79 ಸೂಚ್ಯಾಂಕಗಳ ಮಾಹಿತಿಯನ್ನು ಸಲ್ಲಿಸಲು ಹಾಗೂ ಸಮಗ್ರ ಮತ್ತು ಸುಸ್ಥಿರ ಜಿಲ್ಲಾ ಅಭಿವೃದ್ಧಿ ಯೋಜನೆ–2031ಕ್ಕೆ ಸಂಬಂಧಿಸಿದಂತೆ 176 ಸೂಚ್ಯಾಂಕಗಳ ಪೈಕಿ 69 ಸೂಚ್ಯಾಂಕಗಳ ಮಾಹಿತಿಯನ್ನು ಸಲ್ಲಿಸಿದ್ದು, ಬಾಕಿ 107 ಸೂಚ್ಯಾಂಕಗಳ ಮಾಹಿತಿಯನ್ನು ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳು ನಿಖರವಾದ ಮತ್ತು ಸ್ಪಷ್ಟವಾದ ದತ್ತಾಂಶಗಳುಳ್ಳ ವರದಿ ಸಲ್ಲಿಸಲು ಅಧಿಕಾರಿಗಳಿಗೆ ಸೂಚಿಸಿದರು. ಜಿಪಂ ಮುಖ್ಯ ಯೋಜನಾಧಿಕಾರಿ ಸಿ.ಬಿ.ಕುಂಬಾರ, ಯೋಜನಾ ಅಂದಾಜು ಮತ್ತು ಮೌಲ್ಯಮಾಪನಾ ಅಧಿಕಾರಿ ನಾಗಭೂಷಣ ಮಾಡಗಿ, ತಾಂತ್ರಿಕ ಬೆಂಬಲ ಸಂಸ್ಥೆಯಾದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಸಂಯೋಜಕ ಪ್ರೊ.ಡಿ.ಎಂ.ಮದರಿ ಇದ್ದರು.



ಆಲಮೇಲ: ಪಟ್ಟಣದ ಸಿಂದಗಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರು ಆಗಿರುವ ಶಿವಲಿಂಗಪ್ಪ ಹಳೆಮನಿ ಅವರಿಗೆ ದ್ರಾವಿಡ ವಿಶ್ವವಿದ್ಯಾಲಯ ವತಿಯಿಂದ ಗೌರವ ಡಾಕ್ಟರೇಟ್ ಪದವಿ ಪಡೆದಿದ್ದಾಕ್ಕಾಗಿ ಆಲಮೇಲ ತಾಲೂಕಿನ ನಿವೃತ್ತ ನೌಕರರ ಸಂಘದ ವತಿಯಿಂದ ಸನ್ಮಾನಿಸಲಾಯಿತು. ನಿವೃತ್ತ ನೌಕರರ ಸಂಘದ ಅಧ್ಯಕ್ಷ ಗುರುಶಾಂತಯ್ಯ ಪಶುಪತಿಮಠ, ಜಿ.ಬಿ.ಮುಂಡಸ, ಶಂಕರ ಹಳೆಮನಿ, ಎನ್.ಎ.ಬಿರಾದಾರ, ಜಿ.ಜಿ.ಕಿಣಗಿ, ಬಾಬು ಶಾಸಬಾಳ ಇದ್ದರು.

ದೇವರಹಿಪ್ಪರಗಿಗೆ ಪ್ರತ್ಯೇಕ ಉಪನೋಂದಣಾಧಿಕಾರಿ ಕಚೇರಿ ಸ್ಥಾಪನೆಗೆ ಒತ್ತಾಯ

ದೇವರಹಿಪ್ಪರಗಿ: ಪಟ್ಟಣದಲ್ಲಿ ಪ್ರತ್ಯೇಕ ಉಪನೋಂದಣಾಧಿಕಾರಿಗಳ ಕಛೇರಿ ಸ್ಥಾಪಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳ ಕುರಿತು ವಿಧಾನ ಪರಿಷತ್ತಿನ ಬಜೆಟ್ ಅಧಿವೇಶನದಲ್ಲಿ ಬುಧವಾರ ವಿಪ ಸದಸ್ಯ ಕೇಶವ ಪ್ರಸಾದ ಚುಕ್ಕೆ ಪ್ರಶ್ನೆ–787(905)ರಡಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರಿಗೆ ಪ್ರಶ್ನಿಸಿದರು. ದೇವರಹಿಪ್ಪರಗಿ ತಾಲೂಕು ಕೇಂದ್ರವಾಗಿದ್ದು,



ಉಪನೋಂದಣಾಧಿಕಾರಿಗಳ ಕಛೇರಿಗಾಗಿ ಇನ್ನು ಸಿಂದಗಿ ಅವಲಂಬಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ. ದೇವರ ಹಿಪ್ಪರಗಿಯಲ್ಲಿ ಪ್ರತ್ಯೇಕ ಉಪನೋಂದಣಾಧಿಕಾರಿಗಳ ಕಚೇರಿ ಸ್ಥಾಪಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು. ಯಾವ ಕಾಲಮಿತಿಯಲ್ಲಿ ಪ್ರತ್ಯೇಕ ಉಪನೋಂದಣಾಧಿಕಾರಿಗಳ ಕಛೇರಿ ಸ್ಥಾಪಿಸಲಾಗುವುದು. ಉಪನೋಂದಣಾಧಿಕಾರಿಗಳ ಕಛೇರಿ ಸ್ಥಾಪನೆಗೆ ಜಾಗ ಗುರುತಿಸಲಾಗಿದೆ ಎಂದು ಕೇಶವ ಪ್ರಸಾದ ಪ್ರಶ್ನಿಸಿದರು. ಕಂದಾಯ ಸಚಿವ ಕೃಷ್ಣ ಬೈರೆಗೌಡ ಉತ್ತರಿಸಿ, ಈ ಕುರಿತು ಸರ್ಕಾರದ ಗಮನಕ್ಕೆ ಬಂದಿದೆ. ನೂತನ ತಾಲೂಕಿನಲ್ಲಿ ಹೊಸದಾಗಿ ಉಪನೋಂದಣಾಧಿಕಾರಿಗಳ ಕಛೇರಿ ಸ್ಥಾಪನೆಗೆ ಆರ್ಥಿಕ ಇಲಾಖೆಯ ಸಮಾಲೋಚನೆಯೊಂದಿಗೆ ವಾರ್ಷಿಕ ರೂ.4 ಕೋಟಿಗಿಂತ ರಾಜ್ಯಸ್ವ ಸಂಗ್ರಹಣೆಯಾಗುವ ಉಪ ನೋಂದಣಿ ಕಚೇರಿಯಲ್ಲಿ ನೋಂದಣಿ ಯಾಗುವ ದಾಖಲೆಗಳ ಸಂಖ್ಯೆ/ವಹಿವಾಟುಗಳ ಸಂಖ್ಯೆ ಸ್ಥಾಪನೆ, ಹುದ್ದೆಗಳು ಮತ್ತು ಕಚೇರಿಗಳನ್ನು ಸ್ಥಳಾಂತರಗೊಳಿಸಿ ತರ್ಕಬದ್ಧಗೊಳಿಸಲು ಕ್ರಮ ವಹಿಸಲಾಗುತ್ತಿದೆ. ದೇವರಹಿಪ್ಪರಗಿ ತಾಲೂಕಿಗೆ ಸಂಬಂಧಿಸಿದಂತೆ ನೋಂದಣಿ ಆಗುವ ದಸ್ತುವೇಜೆಗಳ ಸಂಖ್ಯೆ 700ಕ್ಕಿಂತಲೂ ಜಾಸ್ತಿ ಇದ್ದು, ರಾಜ್ಯಸ್ವ ಸಂಗ್ರಹಣೆಯೂ ಕೂಡಾ ರೂ 1 ಕೋಟಿಗಿಂತ ಹೆಚ್ಚಾಗಿರುತ್ತದೆ. ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ಡಿ.7, 2018ರ ಅಧಿಕೃತ ಜ್ಞಾಪನದನ್ವಯ ನಿಗದಿಪಡಿಸಿರುವ ಎಲ್ಲಾ ಮಾನದಂಡಗಳನ್ನು ಪೂರೈಸಿರುವ ಬಗ್ಗೆ ಪರಿಶೀಲಿಸುವ ಸಂಬಂದ ನ.9, 2023ರ ಅಧಿಕೃತ ಜ್ಞಾಪನದನ್ವಯ ರಚಿಸಲಾಗಿರುವ ಉಪ ಸಮಿತಿಯಿಂದ ವರದಿ ಬಂದ ನಂತರ ಸೂಕ್ತ ಕ್ರಮ ವಹಿಸಲಾಗುವುದು ಎಂದು ಉತ್ತರಿಸಿದ್ದಾರೆ.

ಎಪಿಎಂಸಿ ಗೋದಾಮು ಉದ್ಘಾಟನೆ | ಸಚಿವ ಎಂ.ಬಿ.ಪಾಟೀಲ ಸಲಹೆ

ಬಂಗಾರದಂತ ಭೂಮಿ ಮಾರಾಟ ಬೇಡ

ವಿಜಯಪುರ: ಭೂಮಿ ಬಂಗಾರವಿದ್ದಂತೆ. ಅದನ್ನು ಯಾರೂ ಮಾರಾಟ ಮಾಡಬಾರದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಜಿಲ್ಲೆಯ ತಿಕೋಟಾ ತಾಲೂಕಿನ ರಾಂಪೂರ ಗ್ರಾಮದ ಸರ್ಕಾರಿ ಕನ್ನಡ ಗಂಡು ಮಕ್ಕಳ ಶಾಲಾ ಆವರಣದಲ್ಲಿ ನೂತನ ಅಂಗನವಾಡಿ ಕಟ್ಟಡ, ಕ್ರೀಡಾ ಸಲಕರಣೆ, ಎಪಿಎಂಸಿ ಗೋದಾಮು ಉದ್ಘಾಟನೆ ಹಾಗೂ ಚಂದ್ರಗಿರಿ ಘಟಿವಾಳೇಶ್ವರ ದೇವಸ್ಥಾನ ಜೀರ್ಣೋದ್ಧಾರ ಮತ್ತು ವಿವಿಧ ಕಟ್ಟಡ ಶಂಕುಸ್ಥಾಪನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕುಡಿಯಲು ನೀರಿನ ಕೊರತೆ ಇದ್ದ ಈ ಭಾಗದಲ್ಲಿ ಕಳೆದ ಒಂದು ದಶಕದಲ್ಲಿ ನೀರಾವರಿಯಿಂದಾಗಿ ಅಂತರ್ಜಲ ವೃದ್ಧಿಯಾಗಿದೆ. ರೈತರು ಕೃಷಿ, ತೋಟಗಾರಿಕೆಯಲ್ಲಿ ತೊಡಗುವ ಮೂಲಕ ಆರ್ಥಿಕವಾಗಿ ಸದೃಢರಾಗುತ್ತಿದ್ದಾರೆ. ಈಗ ಬಾಬಾನಗರ ಬಳಿ ಜಲಾಶಯ ಕಟ್ಟಲಾಗುವುದು. ಇದರಿಂದ ಈಗಾಗಲೇ ಹೆಚ್ಚಾಗಿರುವ ಭೂಮಿಯ ಬೆಲೆ ಮತ್ತಷ್ಟು ಹೆಚ್ಚಾಗಲಿದೆ. ಬಂಗಾರ ಖರೀದಿ ಮಾಡಬಹುದು. ಆದರೆ, ಭೂಮಿ ಮಾರಾಟ ಮಾಡಿದರೆ ಮತ್ತೆ ಖರೀದಿಸಲು ಸಾಧ್ಯವಿಲ್ಲ. ಹೀಗಾಗಿ ರೈತರು ತಮ್ಮ ಅಮೂಲ್ಯವಾದ ಭೂಮಿ ಮಾರಾಟ ಮಾಡಬಾರದು ಎಂದರು.

ಇಲ್ಲಿನ ಮಠದ ಜೀರ್ಣೋದ್ಧಾರ ಬಹಳ ದಿನಗಳ ಬೇಡಿಕೆಯಾಗಿತ್ತು. ಗ್ರಾಮದ ಸಾರ್ವಜನಿಕರ ಆಸೆಯಂತೆ 20 ಲಕ್ಷ ರೂ. ವೆಚ್ಚದಲ್ಲಿ ಜೀರ್ಣೋದ್ಧಾರಕ್ಕಾಗಿ ಕ್ರಮ ವಹಿಸಲಾಗುವುದು. ಮಠದ ಹತ್ತಿರ 2025–26ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಲ್ಲಿ ಸುಮಾರು 20.55 ಲಕ್ಷ ರೂ.ವೆಚ್ಚದಲ್ಲಿ ನಿರ್ಮಾಣವಾಗಿರುವ ಗೋದಾಮು ಈ ಗೋದಾಮು ಅನ್ಯ ಕರ್ತವ್ಯಕ್ಕೂ ಬಳಸಿಕೊಳ್ಳಬಹುದಾಗಿದೆ ಎಂದರು.



> ಈ ಭಾಗದಲ್ಲಿ ನೀರಾವರಿ ಒಳಪಟ್ಟಿದ್ದರಿಂದ ಈಗ ಎಲ್ಲ ಸಮೃದ್ಧಿಯಾಗಿದೆ. ನಾಲ್ಕೈದು ಜಿಲ್ಲೆಗಳಿಗೆ ಕೊಡುವ ಅನುದಾನವನ್ನು ಕೇವಲ ತಿಕೋಟಾ ತಾಲೂಕಿಗೆ ಕೊಡಿಸಿದ್ದೇನೆ. ಜೊತೆಗೆ ಎರಡು ಮಿನಿ ವಿಧಾನಸೌಧವನ್ನು ಕೊಡಿಸಿದ್ದೇನೆ. ಅಲ್ಲದೆ ಈ ಭಾಗದ ರೈತರೂ ಸಾಕಷ್ಟು ಸಮೃದ್ಧಿಯಾಗಿದ್ದಾರೆ.
> ■ ಎಂ.ಬಿ.ಪಾಟೀಲ ಉಸ್ತುವಾರಿ ಸಚಿವ

ನೀರು ಕೊಟ್ಟ ಎಂ.ಬಿ. ಪಾಟೀಲರನ್ನು ನೆನಪಿಟ್ಟುಕೊಳ್ಳುವುದು ನಿಮ್ಮ ಜವಾಬ್ದಾರಿ. 3600 ಕೋಟಿ ರೂ. ನೀಡಿ, ತುಬಚಿ–ಬಬಲೇಶ್ವರ ಏತ ನೀರಾವರಿ ಯೋಜನೆಯಡಿ ಅತಿ ಎತ್ತರದ ಪ್ರದೇಶಕ್ಕೆ ನೀರು ಕೊಟ್ಟಿದ್ದೇನೆ. ನೀರು ಕೊಟ್ಟಿದ್ದನ್ನು ಒಂದೆರೆಡು ದಿನ ನೆನಪಿನಲ್ಲಿಟ್ಟುಕೊಳ್ಳುವುದಲ್ಲ, ಅದನ್ನು ಸಾವಿರಾರು ವರ್ಷಗಳ ಕಾಲ ನೆನಪಿನಲ್ಲಿಟ್ಟುಕೊಳ್ಳುವಂಥದ್ದು ಎಂದರು.

ಜಪಾನಿನ ಕ್ರೋನ್ಸ್ ಕಂಪನಿ ಸಿಎಸ್ಆರ್ ಅನುದಾನದಡಿ ಆಟದ ಮೈದಾನ ನಿರ್ಮಾಣ, ಕ್ರೀಡಾ ಸಲಕರಣೆ ನೀಡಿದ್ದಾರೆ. ಮತಕ್ಷೇತ್ರದ ಎಲ್ಲ ಸರ್ಕಾರಿ ಶಾಲೆಗಳಲ್ಲಿ ಸಿಎಸ್ಆರ್ ಅನುದಾನದಲ್ಲಿ ಕ್ರೀಡಾ ಸಲಕರಣೆ, ಕಟ್ಟಡ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ ಎಂದರು.

ಗುರು ಘಟಿವಾಳೇಶ್ವರ ಮಠದ ವಿದ್ಯಾನಂದ ಓಂಕಾರಯ್ಯ ಪೂಜಾರಿ ಆಶೀರ್ವಚನ ನೀಡಿರು. ನಿಜಗುಣಯ್ಯ ಚಂದ್ರಯ್ಯ ಹಿರೇಮಠ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಗುರುಗೌಡ ದಾಶ್ಯಾಳ, ತಹಸೀಲ್ದಾರ್ ಸುರೇಶ ಚವಲರ, ಅಧಿಕಾರಿ ಕೆ.ಕೆ.ಚವ್ಹಾಣ, ಎಸ್.ಸಿ. ಮ್ಯಾಗೇರಿ, ತಾಪಂ ಇಒ ಬಸವಂತರಾಯಗೌಡ ಬಿರಾದಾರ, ಎಪಿಎಂಸಿ ಜಂಟಿ ನಿರ್ದೇಶಕ ಅಲ್ಲಾಭಕ್ಷ, ಸಿದ್ದು ಬೆಳಗಾವಿ, ಭಾಗೀರಥಿ ತೇಲಿ, ಶ್ರೀಶೈಲ ತುಳಜನ್ನವರ, ಸಾಹೇಬಗೌಡ ಕೆಂಪವಾಡ, ರಾಜು ಬೀಳೂರ ಇದ್ದರು.

ಕ್ರೀಡೆಯಲ್ಲಿ ಸ್ಫೂರ್ತಿಯಿಂದ ಭಾಗವಹಿಸಿ

ಸಿಂದಗಿ: ವಿದ್ಯಾರ್ಥಿಗಳು ಪಾಠದೊಂದಿಗೆ ಆಟದಲ್ಲಿಯೂ ಸಹ ಸಕ್ರಿಯವಾಗಿ ತೊಡಗಿಸಿಕೊಂಡು ಕ್ರೀಡೆಗಳಲ್ಲಿ ಸ್ಪರ್ಧಾ ಸ್ಫೂರ್ತಿಯಿಂದ ಭಾಗವಹಿಸಬೇಕು ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ನಗರದ ಆರ್.ಬಿ.ಬೂದಿಹಾಳ ಕ್ರೀಡಾಂಗಣದಲ್ಲಿ ಪದ್ಮರಾಜ ವಿದ್ಯಾವರ್ಧಕ ಸಂಸ್ಥೆಯಪದ್ಮರಾಜಮಹಿಳಾಪದವಿಕಾಲೇಜು ಹಾಗೂ ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಸಹಯೋಗದಲ್ಲಿ ಹಮ್ಮಿಕೊಂಡ ಅಂತರ ಮಹಾವಿದ್ಯಾಲಯಗಳ ಖೋ–ಖೋ ಪಂದ್ಯಾವಳಿ ಹಾಗೂ ವಿಶ್ವವಿದ್ಯಾಲಯ ತಂಡದ ಆಯ್ಕೆ 2025–26 ಪಾರಿತೋಷಕ ವಿತರಣಾ ಸಮಾರಂಭದಲ್ಲಿ ವಿಜೇತ ತಂಡಕ್ಕೆ ಬಹುಮಾನ ವಿತರಿಸಿ ಮಾತನಾಡಿದರು.

ಪುರಸಭೆ ಮಾಜಿ ಸದಸ್ಯ ರಾಜಶೇಖರ ಕೂಚಬಾಳ ಖೋ–ಖೊ ಪಂದ್ಯಾವಳಿಯಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದ ಕ್ರೀಡಾಪಟುಗಳಿಗೆ ಹಾಗೂ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದುಕೊಂಡವರಿಗೆ ವೈಯಕ್ತಿಕವಾಗಿ ನಗದು ಬಹುಮಾನ ನೀಡಿದರು.

ಮಹಿಳಾ ವಿವಿ ದೈಹಿಕ ಶಿಕ್ಷಣ ನಿರ್ದೇಶನಾಲಯ ಸಹಾಯಕ ನಿರ್ದೇಶಕ ಡಾ.ವಿಶ್ವನಾಥ ನಡಕಟ್ಟಿ, ಆಯ್ಕೆ ಸಮಿತಿ ಸದಸ್ಯ ಮಹಾಂತೇಶ ಲಾಯದಗುಂದಿ, ಶಿವಪ್ರಸಾದ ಎಲಿ ಹಾಗೂ ಶ್ರೀನಿವಾಸ ಮಾತನಾಡಿದರು. ಸಾನ್ನಿಧ್ಯ ವಹಿಸಿದ ಸಾರಂಗಮಠದ ಪೀಠಾಧಿಪತಿ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಆಶೀರ್ವಚನ ನೀಡಿದರು.

ಅಕ್ಕಮಹಾದೇವಿ ಮಹಿಳಾ ವಿವಿ ತಂಡ ಪ್ರಥಮ ಸ್ಥಾನ ಪಡೆದು ಚಾಂಪಿಯನ್ ಆಗಿ ಹೊರಹೊಮ್ಮಿತು. ಕೆಎಲ್ಇ ರಾಜರಾಜೇಶ್ವರಿ ಕಲಾ ಹಾಗೂ ವಾಣಿಜ್ಯ ಮಹಿಳಾ ಪದವಿ ಮಹಾವಿದ್ಯಾಲಯ ತಂಡ ದ್ವಿತೀಯ ಸ್ಥಾನ (ರನ್ನರ್) ಪಡೆದುಕೊಂಡಿತು. ಡಾ.ರವಿ ಗೋಲಾ, ಭೀಮನಗೌಡ ಸಿಂಗನಳ್ಳಿ, ವಿ.ಡಿ.ಪಾಟೀಲ, ಕೆ.ಹೆಚ್.ಸೋಮಾಪುರ, ಎಸ್.ಎಸ್.ಸಂಗಮ, ಗವಿಸಿದ್ದಪ್ಪ ಆನೆಗುಂದಿ, ನೀಲಕಂಠ ಗೋಡೇಕರ, ಗುರು ಕುಳೆಕುಮಟಗಿ, ಎಂ.ಕೆ.ಬಿರಾದಾರ, ಸಿದ್ದಲಿಂಗ ಚೌಧರಿ, ಎಂ.ಎಂ.ಕೆಂಭಾವಿ, ಬಿ.ಜಿ.ಅವಟಿ, ಉಪನ್ಯಾಸಕರಾದ ಎಸ್.ಎಸ್.ಕಲಶೆಟ್ಟಿ, ಮಹಾಂತೇಶ ನೂಲಾನವರ, ಜಿ.ಎಸ್.ಕುಲಕರ್ಣಿ, ಯು.ಸಿ.ಪೂಜೇರಿ, ಎಸ್.ಸಿ.ದುದ್ದಗಿ, ಎ.ಆರ್.ರಜಪೂತ, ಎಸ್.ಎನ್.ಕುಂದಗೋಳ, ಎಂ.ಕೆ.ಬಿರಾದಾರ, ಭಾಗ್ಯ ಬಬಲೇಶ್ವರ, ಭಾಗ್ಯಶ್ರೀ ನಂದಿಮಠ, ನೀಲಮ್ಮ ಬಿರಾದಾರ, ಡಿ.ಎಂ.ಪಾಟೀಲ, ಮಂಗಳಾ ಈಳಗೇರ, ಮಮತಾ ಹರನಾಳ, ಶಿವಶಂಕರ ಕುಂಬಾರ, ಜಿ.ಎ.ನಂದಿಮಠ ಹೇಮಾ ಹಿರೇಮಠ ಇದ್ದರು.



ಹೆಣ್ಣು ಮಕ್ಕಳೆಡೆಗೆ ವಿಶೇಷ ಗಮನಹರಿಸಿ

ಸಿಂದಗಿ/ದೇವರಹಿಪ್ಪರಗಿ: ಪ್ರಸ್ತುತ ದ್ವಿತೀಯ ಪಿಯುಸಿ ಪರೀಕ್ಷೆ ನಡೆಯುತ್ತಿದ್ದು, ಪರೀಕ್ಷೆ ಮುಗಿದ ಮೇಲೆ ಲವ್ ಜಿಹಾದ್ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆಗಳಿವೆ. ಕಾರಣ ಪೋಷಕರು ತಮ್ಮ ಹೆಣ್ಣು ಮಕ್ಕಳೆಡೆಗೆ ವಿಶೇಷ ಗಮನ ಹರಿಸಬೇಕೆಂದು ವಿಶ್ವ ಹಿಂದೂ ಪರಿಷತ್ ಪ್ರಾಂತ



ಧರ್ಮಾಚಾರ್ಯ ಸಂಪರ್ಕ ಸಹ ಪ್ರಮುಖ ಶೇಖರಗೌಡ ಹರನಾಳ ಸಲಹೆ ನೀಡಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರತಿ ವರ್ಷ 60ಸಾವಿರಕ್ಕಿಂತಲೂ ಹೆಚ್ಚು ಹಿಂದೂ ಯುವತಿಯರು ಲವ್ ಜಿಹಾದಿಗೆ ಬಲಿಯಾಗುವುದಲ್ಲದೇ ಮತಾಂತರಕ್ಕೆ ಒಳಗಾಗುತ್ತಿದ್ದಾರೆ. ಈ ವಿಷಯ ಇಡೀ ಹಿಂದೂ ಸಮಾಜಕ್ಕೆ ಎಚ್ಚರಿಕೆಯ ಘಂಟೆಯಾಗಿದೆ. ಇದನ್ನರಿತು ನಮ್ಮ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕೊಡುವುದು ಪಾಲಕರ ಆದ್ಯ ಕರ್ತವ್ಯವಾಗಿದೆ. ಹಾಗೆಯೇ ನಿಮ್ಮ ಮಕ್ಕಳ ಬಗ್ಗೆ ಗಮನಹರಿಸಿ ಲವ್ ಜಿಹಾದ್ ಮತ್ತು ಮೋಸದ ಮತಾಂತರಕ್ಕೆ ಒಳಗಾಗದಂತೆ ಎಚ್ಚರ ವಹಿಸಬೇಕೆಂದು ಎಚ್ಚರಿಕೆ ನೀಡದ್ದಾರೆ. ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದ ಲವ್ ಜಿಹಾದ್ ಪ್ರಕರಣಗಳು ಬೆಳಕಿಗೆ ಬಂದಿವೆ. ಕಾರಣ ದ್ವಿತೀಯ ಪಿಯುಸಿ ಪರೀಕ್ಷೆ ಬರೆಯುತ್ತಿರುವ ಹಿಂದೂ ಹೆಣ್ಣು ಮಕ್ಕಳೇ ಅತಿ ಹೆಚ್ಚು ಲವ್ ಜಿಹಾದಿಗೆ ಬಲಿಯಾಗುತ್ತಿದ್ದಾರೆ. ಲವ್ ಜಿಹಾದಿಗೆ ಒಳಗಾಗಿ ತಮ್ಮ ಜೀವನ ಹಾಳು ಮಾಡಿಕೊಳ್ಳದಂತೆ ಪೋಷಕರು ಎಚ್ಚರ ವಹಿಸಬೇಕಿದೆ ಎಂದು ತಿಳಿಸಿದ್ದಾರೆ.

ಪರೀಕ್ಷಾ ಪಾವಿತ್ರ್ಯತೆ ಕಾಪಾಡಿ: ಇಂಗಳೆ

ಚಡಚಣ: ಮಾ.18ರಿಂದ ಆರಂಭಗೊಳ್ಳುವ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಯಾವುದೇ ಲೋಪದೋಷವಾಗದಂತೆ ಪಾರದರ್ಶಕ, ವ್ಯವಸ್ಥಿತವಾಗಿ ಆಯೋಜಿಸಿ ಪರೀಕ್ಷಾ ಪಾವಿತ್ರ್ಯತೆ ಕಾಪಾಡಿಕೊಳ್ಳಬೇಕು ಎಂದು ತಹಶೀಲ್ದಾರ್ ಸಂಜಯ ಇಂಗಳೆ ಹೇಳಿದರು. ಪಟ್ಟಣದ ಎಂ.ಎ.ಎಸ್ ಪಬ್ಲಿಕ್ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯ ತಾಲೂಕು ಮಟ್ಟದ ಪೂರ್ವ ಸಿದ್ಧತಾ ಸಭೆಯಲ್ಲಿ ಅವರು ಮಾತನಾಡಿದರು. ಬಿಇಒ ಚಿದಾನಂದ ಕಟ್ಟಿಮನಿ ಮಾತನಾಡಿ, ಚಡಚಣ ತಾಲೂಕಿನಲ್ಲಿ 49 ಪ್ರೌಢಶಾಲೆಗಳಿದ್ದು, 11 ಪರೀಕ್ಷಾ ಕೇಂದ್ರಗಳಲ್ಲಿ 3980 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. ತಾಲೂಕಿನಲ್ಲಿ ಒಟ್ಟು ಎರಡು ಸೂಕ್ಷ್ಮ ಪರೀಕ್ಷಾ ಕೇಂದ್ರಗಳನ್ನು ಗುರುತಿಸಲಾಗಿದೆ. ಪರೀಕ್ಷೆಗಳು ಸುಸುತ್ರವಾಗಿ ನಡೆಯಲು ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಸಿಸಿ ಟಿವಿ ಕಡ್ಡಾಯಗೊಳಿಸಲಾಗಿದೆ ಎಂದರು. ಹೆಸ್ಕಾಂನ ಕಾರ್ಯನಿರ್ವಾಹಕ ಎಂಜನಿಯರ್ ವಿಜಯಕುಮಾರ ಹವಾಲ್ದಾರ ಮಾತನಾಡಿ, ಪರೀಕ್ಷಾ ದಿನಗಳಂದು ನಿರಂತರ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಳ್ಳಲಾಗುವದು ಎಂದರು.

ಪಿಎಸ್ಐ ಸೋಮೇಶ ಗೆಜ್ಜಿ ಮಾತನಾಡಿ, ಚಡಚಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 5, ಝಳಕಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2 ಹಾಗೂ ಹೊರ್ತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 4 ಪರೀಕ್ಷಾ ಕೇಂದ್ರಗಳಿದ್ದು, ಎಲ್ಲ ಪರೀಕ್ಷಾ ಕೇಂದ್ರಗಳಿಗೆ ಸೂಕ್ತ ಭದ್ರತಾ ವ್ಯವಸ್ಥೆ ಕಲ್ಪಿಸಲು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವದು ಎಂದರು.

ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸಂಜಯ ಖಡಗೇಕರ ಮಾತನಾಡಿ, ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡ ಎಲ್ಲ ಹಂತದ ಸಿಬ್ಬಂದಿ ಪರೀಕ್ಷಾ ಮಂಡಳಿಯ ಮಾರ್ಗಸೂಚಿ ಪಾಲಿಸುವದು ಕಡ್ಡಾಯವಾಗಿದೆ ಎಂದರು.

ಪರೀಕ್ಷಾ ನೋಡಲ್ ಅಧಿಕಾರಿ ಎನ್.ಜೆ ಸಿನಖೇಡ ಮಾತನಾಡಿ, ಪರೀಕ್ಷಾ ಮಂಡಳಿಯ ಮಾರ್ಗಸೂಚಿ ಹಾಗೂ ರೂಪರೇಷೆಗಳನ್ನು ತಿಳಿಸಿದರು.

ಬಿಆರ್.ಸಿ ಬಿ.ಜೆ.ನಾಡಗೇರ, ಎಂಇಎಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಮೋಹನ ಚೋಳಕೆ, ಪರೀಕ್ಷಾ ಕೇಂದ್ರಗಳಿಗೆ ನಿಯೋಜಿಸಿದ ಎಲ್ಲ ಹಂತದ ಅಧಿಕಾರಿಗಳು, ಸಿಬ್ಬಂದಿ ಇದ್ದರು.



ವಿವಿಧ ಬೇಡಿಕೆ ಈಡೇರಿಸಲು ಆಗ್ರಹ

ಬಸವನಬಾಗೇವಾಡಿ: ಬಜೆಟ್‌ನಲ್ಲಿ ಅಂಗವಿಕಲರನ್ನು ನಿರಂತರವಾಗಿ ನಿರ್ಲಕ್ಷಿಸುತ್ತಿರುವ ರಾಜ್ಯ ಸರ್ಕಾರದ ನಡೆಯನ್ನು ಖಂಡಿಸಿ ಹಾಗೂ ರಾಜ್ಯದ ವಿಕಲಚೇತನರ ವಿವಿಧ ಬೇಡಿಕೆ ಈಡೇರಿಸುವ ಒತ್ತಾಯಿಸಿ ಕರ್ನಾಟಕ ಅಂಗವಿಕಲರ ರಾಜ್ಯ ಒಕ್ಕೂಟ ತಾಲೂಕು ಘಟಕದ ನೇತೃತ್ವದಲ್ಲಿ ಬಸವೇಶ್ವರ ದೇವಸ್ಥಾನದಿಂದ ತಹಶೀಲ್ದಾರ ಕಚೇರಿವರೆಗೆ ಪ್ರತಿಭಟನೆ ನಡೆಸಿ ತಹಶೀಲ್ದಾರ್ ವೈ.ಎಸ್.ಸೋಮನಕಟ್ಟಿ ಅವರಿಗೆ ಮನವಿ ಸಲ್ಲಿಸಿದರು.

ತಾಲೂಕು ಸಂಚಾಲಕ ಮಲ್ಲಿಕಾರ್ಜುನ ಬಿರಾದಾರ ಮಾತನಾಡಿ, ರಾಜ್ಯ ಸರ್ಕಾರ ಅಂಗವಿಕಲರನ್ನು ನಿರಂತರವಾಗಿ ನಿರ್ಲಕ್ಷ್ಯ ಮಾಡುತ್ತಲೇ ಬಂದಿದೆ ಈ ಬಜೆಟ್ ನಲ್ಲಿ ಅಂಗವಿಕಲರ ಮಾಶಾಸನ ಹೆಚ್ಚಳ ಮಾಡದೆ ಹಾಗೂ ವಿಕಲಚೇತನರ ವಿವಿಧ ಬೇಡಿಕೆಗಳನ್ನು ಅಧಿವೇಶನದಲ್ಲಿ ಮಾತನಾಡದೆ ಇರುವುದರಿಂದ ಖಂಡಿಸಿದರು.

ಅಂಗವಿಕಲರ ಹಕ್ಕುಗಳ ಕಾಯ್ದೆ 2016ರಲ್ಲಿ ಅಂಗವಿಕಲರ ಶಿಕ್ಷಣ ಉದ್ಯೋಗಾವಕಾಶದ ಕುರಿತಂತೆ ಸ್ಪಷ್ಟವಾಗಿ ಹೇಳಿದೆ ಇದಕ್ಕೆ ಪೂರಕವಾಗಿ ಬಜೆಟ್ ನಲ್ಲಿ ಯಾವುದೇ ಕಾರ್ಯಕ್ರಮಗಳನ್ನು ರೂಪಿಸಿಲ್ಲ, ಮಾತ್ರವಲ್ಲ ಅಂಗವಿಕಲರ ಹಕ್ಕುಗಳನ್ನು ಜಾರಿಗೆ ತರಲು ಬಜೆಟ್ ನಲ್ಲಿ ಹಣಕಾಸು ನೆರವು ಇಲ್ಲ ಉದ್ಯೋಗದಿಂದ ವಂಚಿತರಾಗಿರುವ ಅಂಗವಿಕಲರಿಗೆ ಜೀವನ ನಿರ್ವಹಣೆಗೆ ಅನುಕೂಲವಾಗುವ ಮಾಶಾಸನ ನೀಡಬೇಕಾಗಿದೆ. ಈಗ ಕೇವಲ 800ರೂ,ಗಳಿಂದ 1400ರೂ,ಗಳವರೆಗೆ ಮಾತ್ರ ಕೊಡುತ್ತಿದ್ದು ಕೆಲಸ ಮಾಡಲು



ಸಶಕ್ತರಲ್ಲದ ಅಂಗವಿಕಲರು ಎಷ್ಟು ಚಿಕ್ಕ ಪಿಂಚಣಿಯಿಂದ ಹೇಗೆ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ಸರ್ಕಾರ ಅರ್ಥ ಮಾಡಿಕೊಳ್ಳಬೇಕಾಗಿದೆ.

ರಾಜ್ಯದಲ್ಲಿ ಬ್ಲಾಕ್ ಲಾಕ್ ಹುದ್ದೆಗಳನ್ನು ಸೃಷ್ಟಿಸಿ ಅಂಗವಿಕಲರನ್ನು ನೇರ ನೇಮಕಾತಿ ಮಾಡಿಕೊಳ್ಳಬೇಕು. ಅದರಂತೆ ಖಾಸಗಿ ಕಂಪನಿಗಳಲ್ಲಿ ಶೇ.10ರಷ್ಟು ವಿಕಲಚೇತನರನ್ನು ಕಡ್ಡಾಯವಾಗಿ ನೇಮಕಾತಿ ಮಾಡಿಕೊಳ್ಳಲು ಆದೇಶ ಬೇಕು, ವಿಕಲಚೇತನರಿಗೆ ರಾಜಕೀಯ ಮೀಸಲಾತಿ ಕೊಡಲು ಆದೇಶಬೇಕೆಂದು ಒತ್ತಾಯಿಸಿದರು.

ಚನ್ನಯ್ಯ ಸಾರಂಗಮಠ, ಬಸವರಾಜ ಶಂಕ್ರಪ್ಪಗೋಳ, ನಾಗೇಶ ಗಬ್ಬೂರ, ರಾಜು ಹಾರಿವಾಳ, ಸಂಗಮೇಶ ಹೊಸಮನಿ, ಮೌಲಾಲಿ ಮಂಟೂರ, ಯಮುನಪ್ಪ ಚಲವಾದಿ, ವಿಠ್ಠಲ, ಬಸವರಾಜ ರಾಂಪುರ, ರವಿ ಉಕ್ಕಲಿ, ಶರತಿ ಚವ್ಹಾಣ, ಕವಿತಾ ಗಬ್ಬೂರ, ಕಾಶೀಬಾಯಿ ದೇವಣಗಾವಿ ಡಿಎಸ್ ಎಸ್ ಮುಖಂಡರಾದ ಗುರು ಗುಡಿಮನಿ ಹಾಗೂ ರಾಷ್ಟ್ರೀಯ ಬಸವಸೈನ್ಯ ಬೆಂಬಲ ವ್ಯಕ್ತಪಡಿಸಿದರು.

ಮಕ್ಕಳ ಪ್ರತಿಭೆ ಗುರುತಿಸಲು ವಾರ್ಷಿಕೋತ್ಸವ ಉತ್ತಮ ವೇದಿಕೆ: ಕದಮ

ಝಳಕಿ: ಮಕ್ಕಳಲ್ಲಿರುವ ಪ್ರತಿಭೆ ಗುರುತಿಸಲು ವಾರ್ಷಿಕೋತ್ಸವ ಉತ್ತಮ ವೇದಿಕೆಯಾಗಿದೆ ಎಂದು ಸಿ.ಎ.ಕಮಲ್ಲಾಕರ ಕದಮ ಹೇಳಿದರು.

ಸಮೀಪದ ಭತಗುಣಕಿ ಗ್ರಾಮದ ಸರ್ಕಾರಿ ಕನ್ನಡ ಹೆಣ್ಣು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ 2025–26ನೇ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನ ಸಮಾರಂಭದಲ್ಲಿ ಉದ್ಘಾಟಿಸಿ ಮಾತನಾಡಿ, ಶಿಕ್ಷಕರು ಆಟ ಪಾಠ ಜೊತೆ ಸಂಸ್ಕಾರ ಸಂಸ್ಕೃತಿಕ ಶಿಕ್ಷಣ ನೀಡಿದಾಗ ಮಕ್ಕಳಲ್ಲಿ ಮನೋಭಾವನೆ ಮೂಡಲು ಸಾಧ್ಯವಾಗುತ್ತದೆ. ಮಕ್ಕಳಲ್ಲಿರುವ ಪ್ರತಿಭೆ ಗುರುತಿಸಲು ವಾರ್ಷಿಕ ಸ್ನೇಹ ಸಮ್ಮಳನ ಕಾರ್ಯಕ್ರಮ ಸಹಕಾರಿಯಾಗಿದೆ. ಪಾಲಕರು ನೀಮ್ಮ ಮಕ್ಕಳು ಮೇಲೆ ಗಮನ ಹರಿಸಿ ನೀಮ್ಮ ಮಕ್ಕಳ ನೀಮ್ಮ ಆಸ್ತಿ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಸಂಸ್ಕೃತಿ ಬೆಳಸಿ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಎಸ್ಡಿಎಂಸಿ ಅದ್ಯಕ್ಷ ಮಹಾಂತೇಷ ವಾಲಿಕಾರ ಮಾತನಾಡಿ, ಮಕ್ಕಳ ಕೈಯಲ್ಲಿ ಮೊಬೈಲ್ ಬಳಕೆ ಕಡಿಮೆ ಮಾಡಿ ಓದು ಬರಹ ಕಡೆ ಗಮನ ಹರಸಿರಿ ಉತ್ತಮ ಸಂಸ್ಕಾರ, ಸಂಸ್ಕೃತಿ ಬೆಳಸರಿ ಎಂದು ಹೇಳಿದರು.



ಶಾಲಾ ಮುಖ್ಯಗುರು ಆರ್.ಆರ್.ಹತ್ತೂರ, ಡಾ.ಮಾಹಾಂತೇಷ ಬನಗೂಂಡೆ, ರಾಜಶೇಖರ ಕಾಡೆ, ಸುರೇಶ ಈಕಳಕಿ, ಅರವಿಂದ ಪಾಟೀಲ, ಸಿದ್ದಾರಾಮ ನಿಚ್ಚಳ, ವಿಜಯಲಕ್ಷ್ಮೀ ಹೊಸಮನಿ, ಸುರೇಶ ಮುಜಗೊಂಡ, ಶಿವಾನಂದ ಬೇರಶೇಟ್ಟಿ, ಕಲ್ಲಪ್ಪ ಪವಾರ, ರಾಜು ಬನಗೂಂಡೆ, ಗ್ರಾಮಸ್ಥರು, ಪಾಲಕರು, ಸಿಬ್ಬಂದಿ ಉಪಸ್ಥಿತರಿದ್ದರು.

ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ

ವಿಜಯಪುರ: ನಗರದ ಬಿಜೆಪಿ ಕಚೇರಿಯಲ್ಲಿ ಪಂಡಿತ್ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನದ ನಿಮಿತ್ತ ಜಿಲ್ಲಾ ಮಟ್ಟದ ಯೋಜನಾ ಸಭೆಯು ಯಶಸ್ವಿಯಾಗಿ ಜರುಗಿತು. ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಅವರು ಸುಶ್ರಾವ್ಯವಾಗಿ ವರ್ಗ ಗೀತೆ ಹಾಡುವ ಮೂಲಕ ಮಹತ್ವದ ಸಭೆಗೆ ವಿದ್ಯುಕ್ತ ಚಾಲನೆ ನೀಡಿದರು.

ಬಿಜೆಪಿ ಮುಖಂಡ ಚಂದ್ರಶೇಖರ ಕವಟಗಿ ಮಾತನಾಡಿ, ಪಕ್ಷದ ಸೈದ್ಧಾಂತಿಕ ನೆಲೆಗಟ್ಟಿನ ಕುರಿತು ಆಳವಾದ ವಿಚಾರಗಳನ್ನು ಹಂಚಿಕೊಂಡರು. ಭಾರತೀಯ ಜನತಾ ಪಾರ್ಟಿಯ ಸೈದ್ಧಾಂತಿಕ ಹಿನ್ನೆಲೆ ಹಾಗೂ ಪಂಡಿತ ದೀನದಯಾಳ ಉಪಾಧ್ಯಾಯರು ಪ್ರತಿಪಾದಿಸಿದ ಏಕಾತ್ಮ ಮಾನವ ದರ್ಶನ ಸಿದ್ಧಾಂತದ ಮಹತ್ವ ಮನವರಿಕೆ ಮಾಡಿಕೊಟ್ಟರು. ಪ್ರತಿಯೊಬ್ಬ ಬಿಜೆಪಿ ಕಾರ್ಯಕರ್ತನಲ್ಲೂ ಸೈದ್ಧಾಂತಿಕ ಸ್ಪಷ್ಟತೆ ಮೂಡಿಸುವುದು ಮತ್ತು ಸಂಘಟನಾತ್ಮಕ ಕೌಶಲ್ಯಗಳನ್ನು ಬಲಪಡಿಸುವುದು ಈ ಪ್ರಶಿಕ್ಷಣ ವರ್ಗದ ಪ್ರಮುಖ ಉದ್ದೇಶವಾಗಿದೆ. ರಾಜ್ಯದಾದ್ಯಂತ ಪಕ್ಷದ ಸಂಘಟನಾತ್ಮಕ ಚಟುವಟಿಕೆಗಳನ್ನು ಇನ್ನಷ್ಟು ಚುರುಕುಗೊಳಿಸಲು ದೊಡ್ಡ ಪ್ರಮಾಣದಲ್ಲಿ ತರಬೇತಿ ಶಿಬಿರಗಳನ್ನು ಆಯೋಜಿಸುವ ಅಗತ್ಯತೆಯ ಕುರಿತು ಚರ್ಚಿಸಲಾಯಿತು.



ಮಂಡಲ ಮಟ್ಟದ ಪ್ರಶಿಕ್ಷಣ ವರ್ಗಗಳ ಸಂಪೂರ್ಣ ವಿವರ, ರೂಪುರೇಷೆ ಹಾಗೂ ಜವಾಬ್ದಾರಿಗಳ ಕುರಿತು ವಿವರಿಸಲಾಯಿತು. ಪಕ್ಷವನ್ನು ತಳಮಟ್ಟದಿಂದಲೇ ಗಟ್ಟಿಗೊಳಿಸಲು ಈ ಪ್ರಶಿಕ್ಷಣ ಮಹಾಭಿಯಾನವು ಪ್ರಮುಖ ಪಾತ್ರ ವಹಿಸಲಿದೆ ಎಂದು ಅಭಿಪ್ರಾಯ ವ್ಯಕ್ತವಾಯಿತು.

ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಮಾತನಾಡಿ, ಎಲ್ಲ ಮಂಡಲಗಳಲ್ಲಿ ಪ್ರಶಿಕ್ಷಣ ವರ್ಗಗಳು ಜರುಗಲಿದ್ದು, ರಾಜ್ಯಮಟ್ಟದ ಭಾಷಣಕಾರರು ಭಾಗವಹಿಸುವರು ಎಂದರು. ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಮಾಜಿ ಶಾಸಕ ರಮೇಶ ಭೂಸನೂರ, ಪ್ರಮುಖರಾದ ಉಮೇಶ ಕಾರಜೋಳ, ಸಂಜಯಪಾಟೀಲ ಕನಮಡಿ, ಅನಿಲ ಜಮಾದಾರ, ಮಳುಗೌಡ ಪಾಟೀಲ, ಈರಣ್ಣ ರಾವೂರ, ಸಾಬು ಮಾಶ್ಯಾಳ, ಚಿದಾನಂದ ಚಲವಾದಿ, ಸ್ವಪ್ನಾ ಕಣಮುಚನಾಳ, ರಾಜೇಶ ತಾವಸೆ ಇತರರು ಇದ್ದರು.

ಸರ್ಕಾರಿ ಶಾಲಾ ಮಕ್ಕಳಲ್ಲಿ ಕೀಳರಿಮೆ ಬೇಡ

ವಿಜಯಪುರ: ರಾಜಕಾರಣಿಗಳು ಹಾಗೂ ಸ್ವಾಮೀಜಿಗಳು ಕಟ್ಟಿಸಿದ ಶಾಲೆ, ಕಾಲೇಜುಗಳಿಂದ ದೂರಿದ್ದು, ಬಡವರು, ದೀನ– ದಲಿತರು, ಹಿಂದುಳಿದವರೆ ಹೆಚ್ಚಾಗಿ ಓದುತ್ತಿರುವ ಸರ್ಕಾರಿ ಶಾಲಾ, ಕಾಲೇಜಿನ ಮಕ್ಕಳಲ್ಲಿ ಕೀಳರಿಮೆ ಬೆಳೆಯುತ್ತಿರುವುದು ಸರಿಯಲ್ಲ ಎಂದು ರಾಜ್ಯಮಟ್ಟದ ಉತ್ತಮ ಉಪನ್ಯಾಸಕ ಪ್ರಶಸ್ತಿ ಪುರಸ್ಕೃತ ಪ್ರೊ. ಬಸವರಾಜ ಚಾಲವಾದಿ ಹೇಳಿದರು.

ವಿಜಯಪುರ ತಾಲೂಕಿನ ಭುರಣಾಪುರ ಸರ್ಕಾರಿ ಸಂಯುಕ್ತ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡ ಶಾಲಾ ವಾರ್ಷಿಕೋತ್ಸವದಲ್ಲಿ ಅವರು ಮಾತನಾಡಿದರು.

ಕಣ್ಣು ಕುಕ್ಕುವಂತಹ ಖಾಸಗಿ ಶಾಲಾ ಕಾಲೇಜುಗಳ ಕಟ್ಟಡಗಳನ್ನು ನೋಡಿ ಪಕ್ಕದಲ್ಲಿನ ಸೌಲಭ್ಯ ವಂಚಿತ ಸರ್ಕಾರಿ ಶಾಲೆಯೊಳಗೆ ಓದುತ್ತಿರುವ ಮಕ್ಕಳು ಕೀಳರಿಮೆ ಬೆಳೆಸಿಕೊಳ್ಳುತ್ತಿವೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ಖಾಸಗಿ ಶಾಲೆಗಳ ಮಟ್ಟಕ್ಕೆ ಸರ್ಕಾರಿ ಶಾಲಾ, ಕಾಲೇಜುಗಳ ಸೌಲಭ್ಯ ಒದಗಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಯಲ್ಲಡಗಿ ಮಾತನಾಡಿ, ಸಮಯ, ಸಂಯಮ ಮೂರೇ ಅಕ್ಷರಗಳಾದರೂ ಕೂಡ ಬದುಕಿನಲ್ಲಿ ಇವು ಮಹತ್ತರ ಪಾತ್ರವನ್ನು ವಹಿಸುತ್ತವೆ. ಪರೀಕ್ಷೆಯ ಸಮಯ ಇದಾದುದರಿಂದ ಧನಾತ್ಮಕ ವಿಚಾರಗಳನು ಮೈಗೂಡಿಸಿಕೊಂಡು ತಲೆತಗ್ಗಿಸಿ ಓದಿ ತಲೆ ಎತ್ತಿ ಬಾಳುವಂತಾಗಬೇಕು ಎಂದರು. ನಾಗಪ್ಪ ಪೂಜಾರಿ, ಭೀಮಸಿ ವಂಬಾಸೆ, ಮಾಳಪ್ಪ ಮಾನೆ, ಹಾಜೀಮಾಬಿ ಮುಲ್ಲಾ, ವಿಶ್ವನಾಥ ಮೇತ್ರಿ, ರಾಜಕುಮಾರ್ ಬಳಗಾರ, ಡಾ.ಮಲ್ಲನಗೌಡ ಹಡಲಗೇರಿ ಇದ್ದರು.



ಗ್ಯಾರಂಟಿ ಯೋಜನೆಗಳಿಂದ ಮಹಿಳಾ ಸಬಲೀಕರಣ ಬಲಿಷ್ಠ

ಕೊಲ್ಹಾರ: ರಾಜ್ಯ ಸರ್ಕಾರದ ಮಹತ್ವದ ಪಂಚ ಗ್ಯಾರಂಟಿ ಯೋಜನೆಗಳಿಂದ ಮಹಿಳಾ ಸಬಲೀಕರಣ ಬಲಿಷ್ಠವಾಗಿದೆ ಎಂದು ಕರ್ನಾಟಕ ಸರ್ಕಾರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಕೊಲ್ಹಾರ ತಾಲೂಕು ಅಧ್ಯಕ್ಷ ಸಂತೋಷ ಗಣಾಚಾರಿ ಹೇಳಿದರು.

ತಾಲೂಕು ಪಂಚಾಯತಿ ವತಿಯಿಂದ ತಾಲೂಕಿನ ಹಳೇರೊಳ್ಳಿ ಗ್ರಾಮದ ಆಂಜನೇಯ ದೇವಸ್ಥಾನದಲ್ಲಿ ಬುದುವಾರ ಹಳಿರೋಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಪಂಚ ಗ್ಯಾರಂಟಿ ಯೋಜನೆಗಳ ಅರಿವು ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರ ಮಹಿಳೆಯರ ಸಬಲೀಕರಣಕ್ಕೋಸ್ಕರ ಯೋಜನೆಗಳನ್ನು ಕೊಟ್ಟು ಮಹಿಳೆಯರಿಗೆ ಆರ್ಥಿಕವಾಗಿ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಮುಂದೆ ಬರಲು ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಪಂಚ ಗ್ಯಾರಂಟಿ ಯೋಜನೆಗಳಿಂದ ಯಾರಾದರೂ ವಂಚಿತರಾಗಿದ್ದಲ್ಲಿ ಸೂಕ್ತ ದಾಖಲೆ ಸಲ್ಲಿಸಿದರೆ ಸಮಸ್ಯೆಗೆ ಸ್ಪಂದಿಸಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿಯ ಉಪಾಧ್ಯಕ್ಷೆ ಭಾರತಿ ಹಡಪದ ಮಾತನಾಡಿ, ಗೃಹಲಕ್ಷ್ಮೀ ಯೋಜನೆಯಡಿ ದೊರೆತ ಹಣದಲ್ಲಿ ಹಸು ಖರೀದಿಸಿದ್ದಾರೆ . ಇದರಿಂದ ಅವರ ಕುಟುಂಬ ನಿರ್ವಹಣೆ ಸುಧಾರಿಸಿದ್ದಾರೆ ಕೆಲವೊಂದು ಕುಟುಂಬಗಳು ಭೂರಹಿತರಾದ ಜನರಿದ್ದಾರೆ ಅನ್ನಭಾಗ್ಯ ಯೋಜನೆಯಿಂದ ಹೊಟ್ಟೆತುಂಬಾ ಊಟ ಮಾಡುವಂತಾಗಿದೆ. ಶಕ್ತಿ ಯೋಜನೆಯಿಂದ ಪ್ರಯಾಣದ ಹಣ ಉಳಿತಾಯ ಮಾಡಿದ್ದಾರೆ . ಗ್ಯಾರಂಟಿ ಯೋಜನೆಯಿಂದ ಮಹಿಳೆಯರಿಗೆ ಸಾಕಷ್ಟು ಅನುಕೂಲ ಆಗಿದೆ' ಎಂದು ಅವರು ಹೇಳಿದರು.



ಉಪತಹಶೀಲ್ದಾರ್ ಎನ್.ಕೆ ನದಾಫ್, ತಾಪಂ ಅಧಿಕಾರಿ ಸುನಿಲ್ ಮುದ್ದಿನ್, ರಾಮನಗೌಡ ಪಾಟೀಲ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಧಿಕಾರಿ ಪಾರ್ವತಿ ಹಳ್ಳದ, ಜ್ಯೋತಿ ಆಳಗಿ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಜಿಲ್ಲಾ ಉಪಾಧ್ಯಕ್ಷೆ ಭಾರತಿ ಹಡಪದ, ಗ್ರಾಪಂ ಅಭಿವೃದ್ಧಿ ಅಧಿಕಾರಿ ಆನಂದ ಕೋಟ್ಯಾಳ, ಈರಣ್ಣ ನಾಗರಾಳ, ಲಕ್ಷ್ಮಣ ಸುನಗದ, ದುಂಡಪ್ಪ ರೊಳ್ಳಿ, ತಾಲೂಕು ಗ್ಯಾರಂಟಿ ಸದಸ್ಯ ಮೋತಿಲಾಲ್ ಲಮಾಣಿ, ಜಯಶ್ರೀ ಲಮಾಣಿ, ಕೃಷ್ಣ ರಾ. ಲಮಾಣಿ ಹಾಗೂ ಬಸು ಚಲವಾದಿ ಹಾಗೂ ಗ್ಯಾರಂಟಿ ಯೋಜನೆಯ ಸದಸ್ಯರು ಇದ್ದರು.

ಕಿರುಸುದ್ದಿ

ಪಕ್ಷಿಗಳಿಗಾಗಿ ನೀರಿನ ಮಡಿಕೆಯ ಪಾತ್ರೆ ವಿತರಣೆ

ಕಲಬುರಗಿ: ವಿಶ್ವ ಹಿಂದೂ ಪರಿಷತ್ ಬಜರಂಗದಳ ಕಲಬುರಗಿಯಿಂದ ಬೇಸಿಗೆ ಕಾಲದಲ್ಲಿ ನೀರಿನ ಅಭಾವದಿಂದ ಸಂಕಷ್ಟ ಅನುಭವಿಸುವ ಪಕ್ಷಿಗಳ ರಕ್ಷಣೆಗೆ ವಿಶೇಷ ಕಾರ್ಯಕ್ರಮ ಆರಂಭಿಸಿದ್ದು, ನಗರದ ಸೂಪರ್ ಮಾರ್ಕೆಟ್ ಪ್ರದೇಶದಲ್ಲಿರುವ ಹನುಮಾನ ದೇವಸ್ಥಾನದಲ್ಲಿ ಮಡಿಕೆಯ ನೀರಿನ ಪಾತ್ರೆಗಳನ್ನು ಸಾರ್ವಜನಿಕರಿಗೆ ಉಚಿತವಾಗಿ ವಿತರಿಸುವ ಮೂಲಕ ಕಾರ್ಯಕ್ರಮದ ಮೊದಲ ಹಂತಕ್ಕೆ ಚಾಲನೆ ನೀಡಲಾಯಿತು.



ಬೇಸಿಗೆಯ ತೀವ್ರ ಬಿಸಿಲಿನಿಂದ ಪಕ್ಷಿಗಳಿಗೆ ನೀರು ದೊರಕುವುದು ಕಷ್ಟವಾಗುತ್ತಿರುವ ಹಿನ್ನೆಲೆ, ಸಾರ್ವಜನಿಕರು ತಮ್ಮ ಮನೆಗಳ ಮುಂದೆ ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ಮಡಿಕೆಯ ಪಾತ್ರೆಗಳಲ್ಲಿ ನೀರು ಹಾಗೂ ಧಾನ್ಯಗಳನ್ನು ಇಟ್ಟು ಪಕ್ಷಿಗಳ ಜೀವ ರಕ್ಷಣೆ ಹಾಗೂ ಪರಿಸರ ಸಂರಕ್ಷಣೆಗೆ ಸಹಕರಿಸಬೇಕು ಎಂದು ಸಂಘಟನೆಯವರು ಮನವಿ ಮಾಡಿದರು.

ಈ ಕಾರ್ಯಕ್ರಮದ ಭಾಗವಾಗಿ ಮೊದಲ ಹಂತದ 1000 ಮಣ್ಣಿನ ಮಡಿಕೆ ಪಾತ್ರೆಗಳನ್ನು ವಿತರಣೆ ಮಾಡಿದ್ದು,ಇನ್ನೂ 4000 ಮಡಿಕೆಗಳನ್ನು ಮುಂಬರುವ ನಾಲ್ಕು ಶನಿವಾರಗಳಂದು ಇದೇ ಸ್ಥಳವಾದ ಹನುಮಾನ ದೇವಸ್ಥಾನದಲ್ಲಿ ನಡೆಸಲಾಗುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿ ಪರಿಸರ ಕಾಳಜಿಯ ಈ ಕಾರ್ಯದಲ್ಲಿ ಕೈಜೋಡಿಸಬೇಕೆಂದು ವಿಶ್ವ ಹಿಂದೂ ಪರಿಷತ್ ಬಜರಂಗದಳ ಕಲಬುರ್ಗಿ ಘಟಕದವರು ತಿಳಿಸಿದ್ದಾರೆ.ವಿಶ್ವ ಹಿಂದೂ ಪರಿಷತ್, ಬಜರಂಗದಳ ಹಲವು ಕಾರ್ಯಕರ್ತರು ಉಪಸ್ಥಿತರಿದ್ದರು.

ನಾರಾಯಣಸ್ವಾಮಿ ಹೇಳಿಕೆಗೆ ಆಕ್ರೋಶ



ಕಲಬುರಗಿ: ವಿಧಾನ ಪರಿಷತ್ ವಿಪಕ್ಷ ನಾಯಕ ಚಲುವಾದಿ ನಾರಾಯಣಸ್ವಾಮಿ ಅವರ ಹೇಳಿಕೆಗೆ ಕಾಂಗ್ರೆಸ್ ಮಹಿಳಾ ಮೋರ್ಚಾ ಪದಾಧಿಕಾರಿಗಳ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ರೇಣುಕಾ ಸಿಂಗೆ ಮಾತನಾಡಿ, ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ನಿರಂತರವಾಗಿ ಆರೋಪ ಮಾಡುತ್ತಿರುವುದು ರಾಜಕೀಯ ಪ್ರೇರಿತವಾಗಿದೆ ಎಂದು ಆರೋಪಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಜಕೀಯವಾಗಿ ಅವಕಾಶ ನೀಡಿ ಬೆಳೆಸಿದ ವ್ಯಕ್ತಿಯೇ, ಇಂದು ಅದೇ ಕುಟುಂಬದ ವಿರುದ್ಧ ಮಾತನಾಡುತ್ತಿರುವುದು ಉಂಡು ಮನೆಗೆ ದ್ರೋಹ ಬಗೆದಂತೆ ಎಂದು ಟೀಕಿಸಿದರು.

ಬಿಜೆಪಿಯವರು ಖರ್ಗೆ ಕುಟುಂಬದ ವಿರುದ್ಧ ಮಾತನಾಡಿಸಲು ಚಲುವಾದಿ ನಾರಾಯಣಸ್ವಾಮಿ ಅವರನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳಲ್ಲಿ ಇರುವ ಕುಟುಂಬ ರಾಜಕೀಯದ ಬಗ್ಗೆ ಅವರು ಯಾವತ್ತೂ ಮಾತಾಡುವುದಿಲ್ಲ ಎಂದು ಪ್ರಶ್ನಿಸಿದ ರೇಣುಕಾ ಸಿಂಗೆ, ದಲಿತ ರಾಜಕೀಯದ ಹೆಸರಿನಲ್ಲಿ ಅನಗತ್ಯ ಆರೋಪಗಳನ್ನು ಮಾಡುವುದು ಸರಿಯಲ್ಲ ಎಂದು ಹೇಳಿದರು.ಇದೇ ವೇಳೆ ಅಂಬಾರಾಯ ಅಷ್ಟಗಿ ಅವರ ಹೇಳಿಕೆಗಳನ್ನೂ ಖಂಡಿಸಿದ ಅವರು, ಪ್ರಿಯಾಂಕ್ ಖರ್ಗೆ ಅವರ ಶಿಕ್ಷಣದ ಬಗ್ಗೆ ಮಾತನಾಡುವ ಮೊದಲು ತಮ್ಮ ಯೋಗ್ಯತೆಯನ್ನು ಪರಿಶೀಲಿಸಿಕೊಳ್ಳಬೇಕು ಎಂದು ಹೇಳಿದರು.ಸವಿತಾ ಒಂಟಿ, ಜಯಶ್ರೀ ಚಿಂತನವಳ್ಳಿ ಹಾಗೂ ಲಕ್ಷ್ಮೀ ಸರಸಂಬಕರ್ ಉಪಸ್ಥಿತರಿದ್ದರು.

ಅಬ್ದುಲ್ ರಫಿ ಆಯ್ಕೆ

ಸಿಂಧನೂರು: ಕಾಂಗ್ರೆಸ್ ಸಮಿತಿಯ ಅಲ್ಪಸಂಖ್ಯಾತರ ನಗರ ಘಟಕದ ಅಧ್ಯಕ್ಷರಾಗಿ ಅಬ್ದುಲ್ ರಫಿ ಬಡಿಬೇಸ್ ಅವರನ್ನು ನೇಮಕ ಮಾಡಿ ಜಿಲ್ಲಾ ಅಧ್ಯಕ್ಷರಾದ ಸೈಯದ್ ಫಯಾಜುದೀನ್ ಆದೇಶಿಸಿದ್ದಾರೆ.

ಅಲ್ಪಸಂಖ್ಯಾತರ ಘಟಕದ ರಾಜ್ಯಾಧ್ಯಕ್ಷರು ವಿಧಾನ ಪರಿಷತ್ತು ಶಾಸಕರು ಅಬ್ದುಲ್ ಜಬ್ಬರ್ ಆದೇಶದ ಹಿನ್ನೆಲೆಯಲ್ಲಿ ಮತ್ತು ವಿಧಾನ ಪರಿಷತ್ತು ಶಾಸಕರಾದ ಬಸನಗೌಡ ಬಾದರ್ಲಿ ಶಿಫಾರಸ್ಸಿನ ಮೇರೆಗೆ ಕಾಂಗ್ರೆಸ್ ಪಕ್ಷದ ಸಂಘಟನೆ ಹಿತದೃಷ್ಟಿಯಿಂದ ಅಬ್ದುಲ್ ರಫಿ ಬಡಿಬೇಸ್ ಅವರನ್ನು ನೇಮಿಸಿದ್ದು ಕೂಡಲೇ ಪಕ್ಷ ನೀಡಿದ ಜವಾಬ್ದಾರಿಯನ್ನು ವಹಿಸಿಕೊಂಡು ಪಕ್ಷದ ಸಂಘಟನೆಯ ಜೊತೆಗೆ ಅಲ್ಪಸಂಖ್ಯಾತರ ಸಮುದಾಯದ ಎಲ್ಲಾ ಅಭಿವೃದ್ಧಿಗಾಗಿ ಶ್ರಮಿಸಬೇಕೆಂದು ಸೂಚಿಸಿದ್ದಾರೆ.



ಗಂಗಾವತಿ: ನಗರದಲ್ಲಿ ಕುಂಬಾರ ಸಮಾಜ ಬಾಂಧವರು ವತಿಯಿಂದ ನಡೆದ 'ತ್ರಿಪದಿ ಕವಿ ಸರ್ವಜ್ಞನ' ಜಯಂತಿ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಪರಣ್ಣ ಮುನವಳ್ಳಿ ಭಾಗವಹಿಸಿದರು. ವೀರಭದ್ರಪ್ಪ ಕುಂಬಾರ, ಪಂಪಾಪತಿ ಕುಂಬಾರ, ರಮೇಶ ಕುಂಬಾರ, ಕೊಟ್ರೇಶ ಕುಂಬಾರ, ಶರಣಪ್ಪ ಕುಂಬಾರ, ಅಂಬರೀಶ್ ಕುಂಬಾರ್, ಬಸವರಾಜ ಕುಂಬಾರ, ಸಂಗಯ್ಯ ಸ್ವಾಮಿ ಸಂತೀಮಠ್, ವೆಂಕಟೇಶ್ ಜಾದವ್ ಹಾಗೂ ಕುಂಬಾರ ಸಮಾಜದ ಬಾಂಧವರೆಲ್ಲ ಉಪಸ್ಥಿತರಿದ್ದರು.

ಆತ್ಮಸ್ಥೈರ್ಯ ಹೆಚ್ಚಿಸಲು ಕರಾಟೆ ಸಹಕಾರಿ

ಹನುಮಸಾಗರ: ಕರಾಟೆಯಿಂದ ಆತ್ಮ ರಕ್ಷಣೆ ಮತ್ತು ಆತ್ಮಸ್ಥೈರ್ಯ ಜೊತೆಗೆ ದೈಹಿಕ, ಮಾನಸಿಕ ಆರೋಗ್ಯ ವೃದ್ಧಿಯಾಗುತ್ತದೆ. ಈ ಕ್ರೀಡೆಯಿಂದ ಏಕಾಗ್ರತೆ ಹೆಚ್ಚುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಕರಾಟೆಯನ್ನು ಕಲಿಯಲು ಮುಂದಾಗಬೇಕು ಎಂದು ಕರಾಟೆ ತರಬೇತಿದಾರ ಮಲ್ಲೇಶ್ ಕೋಳೂರು ತಿಳಿಸಿದರು.

ಸಮೀಪದ ಯರಗೇರಾ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಬಾಲಕಿಯರಿಗೆ ಕರಾಟೆ ತರಬೇತಿ ಶಿಬಿರದಲ್ಲಿ ಅವರು ಮಾತನಾಡಿದರು.

ಮುಖ್ಯ ಶಿಕ್ಷಕ ಶಂಕ್ರಪ್ಪ ಹೊರಪೇಟೆ, ಕರಾಟೆ ಕಲೆಯು ಸಮಾಜದ ಆರೋಗ್ಯ ರಕ್ಷಣೆಗೂ ಸಹಕಾರಿಯಾಗಿದೆ ಮತ್ತು ಆತ್ಮರಕ್ಷಣೆಗಾಗಿ ಪ್ರತಿಯೊಬ್ಬರೂ ಕರಾಟೆ ಕಲಿಯಬೇಕು ಎಂದು ಹೇಳಿದರು.ಕುಷ್ಟಗಿ, ಯರಗೇರ, ತಳುಗೇರಾ, ಕೊರಡಕೇರ,ದೋಟಿಹಾಳ, ಮನ್ನೇರಾಳ, ಕಬ್ಬರಗಿ, ಹನುಮನಾಳ, ಜಹಗೀರಗುಡದೂರ, ತುಗ್ಗಲದೋಣಿಯಲ್ಲಿ ತರಬೇತಿ ನೀಡಲಾಗಿದೆ ಎಂದರು. ಮುಖ್ಯಶಿಕ್ಷಕರಾದ ಉಮೇಶ ಎತ್ತಿನಮನಿ, ರಾಮಚಂದ್ರ ಖಾರವಿ, ಸತ್ಯಪ್ಪ ಯಲಬುರಗಿ, ಶಿವಪ್ಪ ಇಲಾಳ, ಮಾಂತೇಶ ಮ್ಯಾಂದರಗಿ, ಯಮನೂರಪ್ಪ ಚೂರಿ,ಜ್ಞಾನೇಶ್ವರ ಅಂಬೋರಿ, ಸಂಗಪ್ಪ ಕಿರಸೂರು, ಮಾಂತೇಶ ಚೆನ್ನಿಗಣ್ಣನವರ, ಮೈಲಾರಪ್ಪ ಹಾದಿಮನಿ, ದೈಹಿಕ ಶಿಕ್ಷಕ ಚಂದ್ರು ಮುಸಿಗೇರಿ, ರಮೇಶ ಬಿ.ನಾಯ್ಕ, ಶರಣಪ್ಪ ಗುಜ್ಜಲ, ಸಂಗನಗೌಡ ನಾಗೋಡ, ದುರ್ಗಪ್ಪ ಬಂಕದ, ವಿಜಯಕುಮಾರ ಜಾಲಿಹಾಳ, ಮಲ್ಲಿಕಾರ್ಜುನ ಬಡಿಗೇರ, ರುದ್ರಮ್ಮ ಬಿರಾದಾರ ಇತರರು ಇದ್ದರು.



ಹನುಮಸಾಗರ: ಸಮೀಪದ ಯರಗೇರಾ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಬಾಲಕಿಯರಿಗೆ ಕರಾಟೆ ತರಬೇತಿ ಶಿಬಿರ ನಡೆಯಿತು. ಕರಾಟೆ ತರಬೇತಿದಾರ ಮಲ್ಲೇಶ್ ಕೋಳೂರು, ಮುಖ್ಯ ಶಿಕ್ಷಕ ಶಂಕ್ರಪ್ಪ ಹೊರಪೇಟೆ, ಮುಖ್ಯಶಿಕ್ಷಕರಾದ ಉಮೇಶ ಎತ್ತಿನಮನಿ, ರಾಮಚಂದ್ರ ಖಾರವಿ, ಸತ್ಯಪ್ಪ ಯಲಬುರಗಿ, ಶಿವಪ್ಪ ಇಲಾಳ, ಮಾಂತೇಶ ಮ್ಯಾಂದರಗಿ, ಯಮನೂರಪ್ಪ ಚೂರಿ,ಜ್ಞಾನೇಶ್ವರ ಅಂಬೋರಿ, ಸಂಗಪ್ಪ ಕಿರಸೂರು, ಮಾಂತೇಶ ಚೆನ್ನಿಗಣ್ಣನವರ, ಇತರರು ಇದ್ದರು.

ಹೆಚ್ಚುತ್ತಿರುವ ತಾಪಮಾನ | ನಿತ್ಯ ನೀರು ತರುವ ಕಾಯಕ

ಕುಡಿಯುವ ನೀರಿಗೆ ಹಾಹಾಕಾರ

ಎಚ್.ಕೆ.ಬಡಿಗೇರ್

ದಿಗಂತ ವಿಶೇಷ

ಸಿಂಧನೂರು: ತಾಲೂಕಿನಲ್ಲಿ ಹೆಚ್ಚುತ್ತಿರುವ ತಾಪಮಾನದ ಕಾರಣ ಒಂದೊಂದು ಗ್ರಾಮದಲ್ಲಿ ಜಲಕ್ಷಾಮ ಉಂಟಾಗಿದ್ದು, ಕುಡಿಯುವ ನೀರಿಗಾಗಿ ಜನರು ಒಂದರಿಂದ ಎರಡು ಕಿಲೋ ಮೀಟರ್ ನಷ್ಟು ದೂರ ಹೋಗಿ ನೀರು ತರುವ ಪರಿಸ್ಥಿತಿ ಉದ್ಭವ ಆಗಿರುವುದು ಕಂಡು ಬಂದಿದೆ.

ಹಳ್ಳ ಕೊಳ್ಳಗಳು ಬತ್ತಿ ಹೋದರೆ ಇತ್ತ ಗ್ರಾಮಕ್ಕೆ ಕುಡಿಯುವ ನೀರಿನ ಜೊತೆಗೆ ಬೆಳೆಗಳಿಗೆ ಆಶ್ರಯವಾಗಿದ್ದ ತುಂಗಾಭದ್ರ ಎಡದಂಡೆ ಕಾಲುವೆಯಲ್ಲಿ ನೀರಿಲ್ಲದಕಾರಣಯದ್ದಲದೊಡ್ಡಿ ಸೇರಿದಂತೆ ತಾಲೂಕಿನ ಸುತ್ತಲಿನ ಹಳ್ಳಿಗಳ ಜನತೆಗೆ ಕುಡಿಯುವ ನೀರಿನ ಹಾಹಾಕಾರ ತಲೆದೋರಿದೆ.

ಅಂತರ್ಜಲವಿರದ ಕಾರಣ ನೀರುಬೀಳುತ್ತಿಲ್ಲ, ಕಿಮೀ. ಗಟ್ಟಲೆ ದೂರದಿಂದ ಶಾಲಾ, ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ತಳ್ಳುವ ಬಂಡಿಗಳಿಂದ ದಿನನಿತ್ಯ ನೀರು ತರುವ ಕೆಲಸ ಆಗಿದೆ. ವರ್ಷವಿಡೀ ಈ ಗ್ರಾಮದಲ್ಲಿ ನೀರಿಗಾಗಿ ಯದ್ದಲ್ಲದೊಡ್ಡಿ ಗ್ರಾಮದ ಮಹಿಳೆಯರು ಬಂಡಿಯಲ್ಲಿ 8 ಕೊಡಗಳನ್ನು ಇಟ್ಟುಕೊಂಡು ನೀರು ತರುತ್ತಿರುವುದು ಸಾಮಾನ್ಯವಾಗಿ ಕಾಣುತ್ತದೆ.

ಕೆರೆಯಲ್ಲಿರುವ ನೀರು ಕೆಂಪು ಕೆಂಪು: ಗ್ರಾಮದಿಂದ ಸುಮಾರು ಒಂದರಿಂದ ಎರಡು ಕಿಲೋಮೀಟರ್ ದೂರದಲ್ಲಿರುವ ಸರ್ಕಾರಿ ಕೆರೆಯಲ್ಲಿನ ನೀರನ್ನು ಬಂಡಿಯ ಮುಖಾಂತರ ವಿದ್ಯಾರ್ಥಿಗಳು, ಸಾರ್ವಜನಿಕರು ತರುತ್ತಾರೆ ಆದರೆ ಕೆರೆಯ ಸುತ್ತಮುತ್ತ ಸ್ವಚ್ಛತೆ ಇಲ್ಲದ ಕಾರಣ, ರಸ್ತೆ ಸರಿಯಾಗಿ ಇಲ್ಲದ ಕಾರಣ ಕೆರೆಯ ಒಳಗಡೆ ಇರುವ ಕುಡಿಯುವ ನೀರು ಕೆಂಪು ಬಣ್ಣದಿಂದ ಕೂಡಿರುತ್ತದೆ ಇದನ್ನೇ ಸಾರ್ವಜನಿಕರು ಕುಡಿಯಲು ಬಳಕೆ ಮಾಡುತ್ತಿದ್ದಾರೆ. ಅಲ್ಲಿಯ ಗ್ರಾಮಸ್ಥರು ಅನೇಕ ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಿಕೊಂಡರು ಯಾವುದೇ ಪ್ರಯೋಜನವಾಗಿಲ್ಲ ಎಂಬುವುದು ಸಾರ್ವಜನಿಕರ ಆಕ್ರೋಶದ ಮಾತುಗಳು ಕೇಳಿ ಬಂದಿವೆ.



> ನೀರಿನ ಸಮಸ್ಯೆ ಹೆಚ್ಚು ಕಂಡು ಬಂದರೆ ಮತ್ತೊಂದು ಖಾಸಗಿ ಕೆರೆ ತೆಗೆದುಕೊಳ್ಳುತ್ತೇವೆ,ಯಾವುದೇ ರೀತಿಯಲ್ಲಿ ಗ್ರಾಮಸ್ಥರಿಗೆ ಕುಡಿಯುವ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮ ಇಲಾಖೆಯಿಂದ ಆಗುತ್ತದೆ. ಆ ಗ್ರಾಮದಲ್ಲಿ ರಸ್ತೆ ಸಮಸ್ಯೆ ತುಂಬಾ ಇದೆ. ಅದನ್ನು ಮುಂದಿನ ದಿನಮಾನದಲ್ಲಿ ರಸ್ತೆ ಸುಧಾರಣೆ ಮಾಡುತ್ತೇವೆ ಇನ್ನಿತರ ಯಾವುದೇ ಸೌಲಭ್ಯಗಳನ್ನು ಒದಗಿಸಲು ಸಿದ್ಧ.
>
> ■ ಚಂದ್ರಶೇಖರ, ತಾಪಂ ಇಒ

ಗ್ರಾಮದಲ್ಲಿ ಧೂಳೋ ಧೂಳು: ಆಧ್ಯಾತ್ಮಿಕ ಕ್ಷೇತ್ರ ಎಂದೇ ಪ್ರಸಿದ್ಧಿ ಹೊಂದಿರುವ ಯದ್ದಲ್ಲದೊಡ್ಡಿ ಗ್ರಾಮಕ್ಕೆ ಬೇರೆ ಬೇರೆ ತಾಲೂಕು ಜಿಲ್ಲಾ ಕೇಂದ್ರದಿಂದ ಅಲ್ಲಿರುವ ಒಳ ಬಳ್ಳಾರಿ ಚನ್ನಬಸವೇಶ್ವರ ಮಠಕ್ಕೆ ಸಾವಿರಾರು ಭಕ್ತರು ಆಗಮಿಸುತ್ತಾರೆ,ಗ್ರಾಮಕ್ಕೆ ಹೋಗುತ್ತಿದ್ದಂತೆ ದೂಳು ಹೆಚ್ಚು ಇರೋದ್ರಿಂದ ಹಾಗೂ ಆಧ್ಯಾತ್ಮಿಕ ಕ್ಷೇತ್ರ ಎಂಬ ಬಿರುದು ಹೊಂದಿರುವ ಯದ್ದಲದೊಡ್ಡಿ ಗ್ರಾಮಕ್ಕೆ ಅಭಿವೃದ್ಧಿ ಕಾರ್ಯ ಆಗುವುದು ಮುಖ್ಯವಾಗಿದೆ.

ಸಂಗೀತ ಕಲೆಯಲ್ಲ, ಮನುಷ್ಯನ ಆಲೋಚನೆ

ರಾಯಚೂರು: ಸುಗಮ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡುವುದರೊಂದಿಗೆ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ ಇತರರನ್ನು ಗುರುತಿಸಿ ಪ್ರಶಸ್ತಿ ನೀಡು ಗುರುತಿಸುತ್ತಿರುವ ಪ್ರತಿಭಾ ಸುಗಮ ಸಂಗೀತ ಸಂಸ್ಥೆಯ ಕಾರ್ಯ ಶ್ಲಾಘನೀಯವಾದುದು ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್ .ಬೋಸರಾಜು ಹೇಳಿದರು.

ನಗರದ ಪಂ.ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಭಾನುವಾರ ಆಯೋಜಿಸಿದ್ದ ಮಹಾಂತಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದ 16ರನೇ ಜಾನಪದ ಸಂಭ್ರಮ-2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಂಗೀತ ಎನ್ನುವುದು ಕೇವಲ ಒಂದು ಕಲೆಯಲ್ಲ ಅದು ಮನುಷ್ಯನ ಆಲೋಚನೆ ಮತ್ತು ಜೀವನದಲ್ಲಿ ಬದಲಾವಣೆ ತರುವ ದೊಡ್ಡ ಸಾಧನವಾಗಿದೆ. ಸಂಗಿತಗಾರರನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಿ ಗುರುತಿಸುವ ಕೆಲಸವನ್ನು ಮಾಡುತ್ತಿರುವುದು ಶರಣಪ್ಪ ಗೋನಾಳರ ಕಾರ್ಯ ಹೆಮ್ಮೆ ಪಡುವಂತಹುದು ಮಹಾಂತಮ್ಮ ಶಿವಬಸಪ್ಪ ಗೋನಾಳ ಪ್ರತಿಷ್ಠಾನದಿಂದ ಇನ್ನು ಹೆಚ್ಚಿನ ಕಲವಿದರನ್ನು ಗುರುತಿಸಿ ಸನ್ಮಾನಿಸುವ ಕೆಲವಾಗಲಿ ಎಂದು ಹೇಳಿದರು.

ಮಾಹಿತಿ ಹಕ್ಕು ಆಯೋಗದ ಆಯುಕ್ತ ಬಿ.ವೆಂಕಟಸಿಂಗ್ ಗುರು ರಕ್ಷೆ ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ರಾಯಚೂರು ಜಿಲ್ಲೆ ಸಾಹಿತ್ಯ, ಸಂಗೀತ ಕ್ಷೇತ್ರಕ್ಕೆ ಅಪಾರ ಕೊಡುಗೆಯನ್ನು ನೀಡುವುದರೊಂದಿಗೆ ತನ್ನದೇ ಆದಂತಹ ಛಾಪನ್ನು ಮೂಡಿಸಿದೆ. ಇದೇ ಜಿಲ್ಲೆಯುವರಾಜ ಶರಣಪ್ಪ ಗೋನಾಳ ಅವರು ಕಳೆದ ಕೆಲ ದಶಕಗಳಿಂದ ಸಂತೀಗ ಕ್ಷೇತ್ರದಲ್ಲಿ ಸಾಧನೆಗೈದವರನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಶರಣ ಸಾಹುತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಸಿ.ಸೋಮಶೇಖರ ವಿಜಯ ಮಹಾಂತ ಅನುಗ್ರಹ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ, ಸಂಗೀತಕ್ಕೆ ಜೀವನವನ್ನು ಹಸನು ಮಾಡುವ ಶಕ್ತಿ ಇದೆ. ಸಂಗೀತದಿಂದ ನಮ್ಮ ಜೀವನವನ್ನು ಸಂತೋಷವಾಗಿ ಇಟ್ಟುಕೊಳ್ಳುವುದರೊಂದಿಗೆ ಬೇರೆಯವರ ಬದುಕನ್ನು ಸಂತೋಷಮಯ ವಾಗಿ ಇಡಬಹುದು ಎಂದರು.

ಅಪ್ಪಗೆರೆ ತಿಮ್ಮಪ್ಪ ಮಾತನಾಡಿದರು. ಅಂತಾರಾಷ್ಟ್ರೀಯ ಕ್ಲಾರೋನೆಟ್ ಕಲಾವಿದ ನರಸಿಂಹುಲು ವಟವಾಟಿ ಸಂಗೀತ ಪ್ರಸ್ತುತಪಡಿಸಿದರು. ವೇದಿಕೆಯಲ್ಲಿ ಸಂಸ್ಥೆಯ ಅಧ್ಯಕ್ಷ ಡಾ.ಶರಣಪ್ಪ ಗೋನಾಳ, ಪ್ರ. ಕಾರ್ಯದರ್ಶಿ ಪ್ರತಿಬಾ ಗೋನಾಳ, ಜಾನಪದ ಸಾಹುತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಎಸ್ .ಬಾಲಾಜಿ, ಜಯಂತರಾವ ಪತಂಗೆ, ನಾಗರಾಜ ಮಸ್ಕಿ, ಸೂಗಪ್ಪ ಸಾಹುಕಾರ, ಬಸವಂತರಾಯ ಕುರಿ ಸೇರಿದಂತೆ ಅನೇಕರಿದ್ದರು.



ಮದ್ಯ ಮಾರಾಟ ನಿಷೇಧಕ್ಕೆ ಆಗ್ರಹಿಸಿ ಪ್ರತಿಭಟನೆ

ಯಲಬುರ್ಗಾ: ತಾಲೂಕಿನ ತರಲಕಟ್ಟಿ ಗ್ರಾಮದಲ್ಲಿ ಮದ್ಯ ಮಾರಾಟ ನಿಷೇಧಿಸುವಂತೆ ಆಗ್ರಹಿಸಿ ಸೇವಾಲಾಲ್ ದೇವಸ್ಥಾನದ ಮುಂಭಾಗದಲ್ಲಿ ನೂರಾರು ಮಹಿಳೆಯರು ಹಾಗೂ ಗ್ರಾಮಸ್ಥರು ಕೆಲಕಾಲ ಪ್ರತಿಭಟನೆ ನಡೆಸಿದರು.

ತರಲಕಟ್ಟಿ ಗ್ರಾಮದಲ್ಲಿ ವಿಪರೀತ ಅಕ್ರಮ ಮದ್ಯ ಮಾರಾಟ ನಡೆಯುತ್ತಿದ್ದು, ಕೂಲಿನಾಲಿ ಮಾಡಿಕೊಂಡು ಜೀವನ ಸಾಗಿಸುವ ನಮ್ಮ ಗಂಡಂದಿರು ಮದ್ಯಸೇವನೆ ಮಾಡಿ ತಮ್ಮ ಆರೋಗ್ಯ ಹದಗೆಡಿಸಿಕೊಂಡು ಮನೆಯಲ್ಲಿ ನೆಮ್ಮದಿಯನ್ನು ಹಾಳು ಮಾಡುತ್ತಿದ್ದಾರೆ. ಕೂಡಲೇ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದು ಮಹಿಳೆಯರು ಆಕ್ರೋಶ ವ್ಯಕ್ತಪಡಿಸಿದರು.

ಗಂಗಾವತಿಯ ಕೃಷಿ ಅಧಿಕಾರಿ ಪ್ರಕಾಶ ರಾಠೋಡ ಮಾತನಾಡಿ ಗ್ರಾಮದಲ್ಲಿ ಪ್ರತಿ ವರ್ಷ 10ರಿಂದ 12ಜನ ಯುವಕರು ಸಾರಾಯಿ ದುಶ್ಚಟಕ್ಕೆ ಬಲಿಯಾಗಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಮದ್ಯಪಾನ ಒಂದು ಸಾಮಾಜಿಕ ಪಿಡುಗು, ಇತ್ತೀಚಿನ ದಿನಗಳಲ್ಲಿ ಎಷ್ಟೋ ಕುಟುಂಬಗಳು ಮದ್ಯಪಾನದಿಂದ ಬೀದಿ ಪಾಲಾಗುತ್ತಿವೆ ಎಂದರು.

ತಾಂಡಾದ ಹಿರಿಯ ಮುಖಂಡ ವೆಂಕೋಬ ನಾಯ್ಕ ಮಾತನಾಡಿ, ದಿನಸಿ ಅಂಗಡಿ ಅಥವಾ ಚಿಕನ್ ಅಂಗಡಿ ನೆಪದಲ್ಲಿ ಸಾರಾಯಿ ಮಾರುವವರನ್ನು ತಕ್ಷಣವೇ ನಿಲ್ಲಿಸಬೇಕು. ಇಲ್ಲದಿದ್ದರೆ ಗ್ರಾಮದಿಂದ ಬಹಿಷ್ಕರಿಸಲಾಗುವುದು ಮತ್ತು 1 ಲಕ್ಷ ರೂ. ದಂಡ ವಿಧಿಸಲಾಗುವುದು. ಯುವಕರು ಮದ್ಯಪಾನ, ಧೂಮಪಾನ, ಜೂಜಾಟದಂತಹ ದುಶ್ಚಟಗಳಿಗೆ ಬಲಿಯಾಗದೆ ಒಳ್ಳೆಯ ಬದುಕು ಕಟ್ಟಿಕೊಳ್ಳಬೇಕು. ಯಾವುದೇ ಅಕ್ರಮವಾಗಿ ಮಾರಾಟ ಮಾಡಿದರೆ ನಾವೇ ನೇರವಾಗಿ ಪೊಲೀಸರಿಗೆ ದೂರು ಸಲ್ಲಿಸಲಾಗುವದು ಎಂದರು.

ಮುಖಂಡರಾದ ಪ್ರಭುಗೌಡ ಪೊಲೀಸ್ ಪಾಟೀಲ, ಶ್ರೀಕಾಂತಗೌಡ ಮಾಲಿಪಾಟೀಲ, ತೋಟಪ್ಪ ಬೇವೂರು ಶಿಕ್ಷಕ ಲೋಹಿತ್ ರಾಠೋಡ, ರಮೇಶ ರಾಠೋಡ, ಯಂಕಪ್ಪ ರಾಠೋಡ, ದೇವಪ್ಪ ಕಾರಬಾರಿ, ಸಕ್ರಪ್ಪ ರಾಠೋಡ, ಹನುಮಂತಪ್ಪ ಮೈಲಾರಿ, ಶರಣಪ್ಪ ನಾಯ್ಕ, ವೀರೇಶಪ್ಪ ನಾಯ್ಕ, ವೆಂಕೋಬ ಚವ್ಹಾಣ, ಅಯ್ಯಪ್ಪ, ಶರಣಪ್ಪ ಬಡಗಿ, ಮಂಜುನಾಥ ಲಮಾಣಿ, ಮಾರುತಿ ಲಮಾಣಿ, ಪ್ರೇಮಿಳವ್ವ, ರಾಠೋಡ ಬಸಮ್ಮ, ರಾಠೋಡ ಅಂಬವ್ವ ರಾಠೋಡ, ಶಾಂತವ್ವ ರಾಠೋಡ ಹೋರಾಟದಲ್ಲಿ ಭಾಗವಹಿಸಿದ್ದರು.



ಮಹಿಳೆ ಕುಟುಂಬದ ಬೆನ್ನೆಲುಬು: ಮಮತಾ

ಕುಕನೂರು: ಸುರಕ್ಷಿತ ಕುಟುಂಬದ ನಿರ್ವಹಣೆ ಹಾಗೂ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಹೋಗುವುದರಲ್ಲಿ ಮಹಿಳೆಯರ ಪಾತ್ರ ಅತ್ಯಂತ ಪ್ರಾಮುಖ್ಯವಾದದ್ದು, ಆದ್ದರಿಂದ ಮಹಿಳೆ ಕುಟುಂಬದ ಬೆನ್ನೆಲುಬು ಎಂದು ಆರಾಮ್ ಸಂಸ್ಥೆಯ ಸಂಸ್ಥಾಪಕಿ ಮಮತಾ ರಾಯರೆಡ್ಡಿ ಹೇಳಿದರು.

ಅವರು ಕುಕನೂರು ಪಟ್ಟಣದ ಬಿ.ವಿ ಶೆಟ್ಟರ್ ಮಂಗಲ ಭವನದಲ್ಲಿ ಹಮ್ಮಿಕೊಂಡ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಉದ್ಘಾಟನೆ ನೆರವೇರಿಸಿ ಮಾತನಾಡಿ ಪ್ರತಿಯೊಬ್ಬ ಮಹಿಳೆಯರ ಶಕ್ತಿ ತ್ಯಾಗ, ತಾಳ್ಮೆ ನಮ್ಮ ನೆನಪಿಗೆ ಬರಬೇಕು. ಮಹಿಳೆ ಎಂದರೆ ಕೇವಲ ಮಗಳು, ಪತ್ನಿ, ಅಥವಾ ತಾಯಿ ಮಾತ್ರವಲ್ಲ ಅವಳು ಕುಟುಂಬದ ಬೆನ್ನೆಲುಬು ಎಂದರು.

ಮಹಿಳೆಯರು ಶಕ್ತಿಶಾಲಿಗಳಾಗಿದ್ದಾರೆ ಆದರೆ ಒತ್ತಡದಲ್ಲಿ ಕೂಡ ಜೀವನ ನಡೆ ಸುತ್ತಿದ್ದಾಳೆ. ಕುಟುಂಬದ ಜವಾಬ್ದಾರಿಗಳು ಆರ್ಥಿಕ ಒತ್ತಡ ಸಾಮಾಜಿಕ ನಿರೀಕ್ಷೆಗಳು ಮತ್ತು ಭಾವನಾತ್ಮಕ ಭಾರವನ್ನು ಹೊರುತ್ತಿದ್ದಾರೆ ಎಂದರು.

ಈ ಮಣ್ಣಿನ ನಿಜವಾದ ಹೀರೋಯಿನ್‌ಗಳನ್ನು ಗುರುತಿಸಬೇಕು ಎಂಬ ಉದ್ದೇಶದಿಂದ ಕೊಪ್ಪಳ ಸ್ತ್ರೀರತ್ನ ಪ್ರಶಸ್ತಿಯನ್ನು ಆರಂಭಿಸಿದ್ದೇವೆ ಎಂದರು.

ಆದ್ದರಿಂದ ವಿವಿಧ ರಂಗದಲ್ಲಿ ಸಾಧನೆಗೈದ 14 ಜನ ಮಹಿಳೆಯರನ್ನು ಗುರುತಿಸಿ, ಕೊಪ್ಪಳದ ಸ್ತ್ರೀ ರತ್ನ ಪ್ರಶಸ್ತಿಯನ್ನು ನೀಡಿದ್ದೇವೆ ಎಂದರು.



ವಿವಿಧ ಸಂಸ್ಕೃತಿಕ ಕಾರ್ಯಕ್ರಮಗಳು ನಡೆಸಲಾಯಿತು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಭೀಮವ್ವ ದೊಡ್ಡಬಾಳಪ್ಪ ಸಿಳ್ಳಿಕ್ಯಾತರ್, ಅಂತಾರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪುರಸ್ಕೃತರಾದ ಶರಣಮ್ಮ ಚೆನ್ನಪ್ಪ ಶೆಟ್ಟಿ, ಜಿಲ್ಲಾ ಕಾಂಗ್ರೆಸ್ ಮಹಿಳಾ ಅಧ್ಯಕ್ಷರಾದ ಜ್ಯೋತಿ ಎಂ.ಗೊಂಡಬಾಳ, ಕೆಪಿಸಿಸಿ ಸದಸ್ಯರಾದ ಗಿರಿಜಾ ಸಂಗಟಿ, ಕುಕನೂರು ತಾಲೂಕು ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಫರೀದ ಬೇಗಮ್ ತಂಬಾಕದಾರ್, ಯಲಬುರ್ಗಾ ತಾಲೂಕು ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಸಾವಿತ್ರಿ ಎಸ್ ಗೊಲ್ಲರ್, ಜಿಲ್ಲಾ ದಿಶಾ ಕಮಿಟಿ ಸದಸ್ಯರಾದ ನಂದಿತಾ ಎಸ್ ದಾನರೆಡ್ಡಿ, ಪಪಂ ಅಧ್ಯಕ್ಷರಾದ ಲೀಲಾವತಿ ಮುಧೋಳ್, ಉಪಾಧ್ಯಕ್ಷರು ಇತರರರಿದ್ದರು.

ಮಾ.22ಕ್ಕೆ ಬೆಂಗಳೂರು ಚಲೋ: ಬೆಟ್ಟದೂರು

ಕೊಪ್ಪಳ: ಇಲ್ಲಿನ ನಗರಸಭೆ ಆವರಣದಲ್ಲಿ ನಡೆಯುತ್ತಿರುವ ಮಾಲಿನ್ಯಕಾರಕ ಕಾರ್ಖಾನೆ ವಿಸ್ತರಣೆ ವಿರೋಧಿ ಹೋರಾಟ 136ನೇ ದಿನ ಪೂರೈಸಿದ್ದು, ಮಾ.22ಕ್ಕೆ ಬೆಂಗಳೂರು ಚಲೋ ನಡೆಸಲಾಗುವುದು ಎಂದು ಜಂಟಿ ಕ್ರಿಯಾ ವೇದಿಕೆ ಪ್ರಧಾನ ಸಂಚಾಲಕ ಅಲ್ಲಮಪ್ರಭು ಬೆಟ್ಟದೂರು ಘೋಷಿಸಿದರು.

ಹೋರಾಟ ಸ್ಥಳದಲ್ಲಿ ಮಾತನಾಡಿ, ಮಾ.22ರ ರಾತ್ರಿ 10ಕ್ಕೆ ಧರಣಿ ಸ್ಥಳದಿಂದ ಬಸ್ ಮೂಲಕ ಬೆಂಗಳೂರು ಚಲೋ ಹೋರಾಟಕ್ಕೆ ಚಾಲನೆ ನೀಡಲಾಗುವುದು. ಮಾ.23ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನ ವನದಲ್ಲಿ ಉಪವಾಸ ಸತ್ಯಾಗ್ರಹ ನಡೆಸುವ ಮೂಲಕ ಸರ್ಕಾರದ ಕಣ್ಣು ತೆರೆಸೋಣ. ಇಷ್ಟಕ್ಕೂ ಸರ್ಕಾರ ಮಣಿಯದಿದ್ದರೆ, ಮುಂದೆ ರೈಲು ತಡೆ, ಹೆದ್ದಾರಿ ತಡೆ ಚಳವಳಿ ರೂಪಿಸೋಣ ಎಂದು ವಿವರಿಸಿದರು.

ಬೆಂಗಳೂರು ಹೋರಾಟಕ್ಕೆ ಬರುವವರು ವ್ಯಾಟ್ಸಾಪ್ ಗ್ರೂಪ್ ನಲ್ಲಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು. ಮಹಿಳೆಯರಿಗೆ ಪ್ರತ್ಯೇಕ ಬಸ್ ವ್ಯವಸ್ಥೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ವೇದಿಕೆ ಸಂಚಾಲಕ ಮಲ್ಲಿಕಾರ್ಜುನ ಬಿ.ಗೋನಾಳ, ಮಂಜುನಾಥ ಜಿ. ಗೊಂಡಬಾಳ, ನಿವೃತ್ತ ಪ್ರಾಚಾರ್ಯ ಡಾ.ವಿ.ಬಿ.ರಡ್ಡೇರ,ಎಸ್.ಬಿ. ರಾಜೂರು, ಬಿ.ಜಿ.ಕರಿಗಾರ, ಡಾ.ಬಸವರಾಜ ಪೂಜಾರ, ನಿವೃತ್ತ ನ್ಯಾಯಾಂಗ ಅಧಿಕಾರಿ ಜಿ.ಬಿ.ಪಾಟೀಲ, ಚಾರಣ ಬಳಗದ ಚಂದ್ರಗೌಡ ಬಿ. ಪಾಟೀಲ್ (ಚಂಪಾ), ರಾಜಶೇಖರ ಏಳುಬಾವಿ, ಸುಭಾನ ಸಾಬ್ ನೀರಲಗಿ, ಬಸವರಾಜ ಉಂಡಿ, ಮಹಾದೇವಪ್ಪ ಮಾವಿನಮಾಡು, ಮಖ್ಬುಲ್ ರಾಯಚೂರು, ವಿಜಯ ಮಹಾಂತೇಶ ಹಟ್ಟಿ, ರೇವಣಸಿದ್ದಯ್ಯ ಸ್ವಾಮಿ ಚಿತ್ರಗಾರ ಇದ್ದರು.



ಮಕ್ಕಳಿಗೆ ಕನ್ನಡ ಪಠ್ಯ ಪುಸ್ತಕ ವಿತರಣೆಗೆ ಕ್ರಮ: ಸಚಿವ

ಮಾನ್ವಿ: ತಾಲೂಕಿನ ನೀರಮಾನ್ವಿ ಗ್ರಾಮದಲ್ಲಿನ ಅಮರಶಿವ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕದ ವತಿಯಿಂದ ನಡೆದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಅಂತರ್ಧ್ವನಿ ಮಂಗಳ ಮುಖಿಯರ ಮನದಾಳದ ಮಾತುಗಳು ಪುಸ್ತಕ ಬಿಡುಗಡೆಗೊಳಿಸಿದರು.



ಬಳಿಕ ಮಾತನಾಡಿದ ಅವರು, ಕನ್ನಡನಾಡಿನ ಗಡಿಭಾಗದಲ್ಲಿರುವ ಬೆಳಗಾವಿ, ರಾಯಚೂರು, ಜಿಲ್ಲೆಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ ಹೆಚ್ಚಿನ ಕನ್ನಡ ಪರ ಕಾರ್ಯಕ್ರಮಗಳ ಮೂಲಕ ಅಲ್ಲಿನ ಜನರಲ್ಲಿ ಕನ್ನಡ ಭಾಷೆ, ನಾಡು, ನುಡಿ ಕುರಿತು ಜಾಗೃತಿ ಮೂಡಿಸುತ್ತಿರುವುದರಿಂದ ಇತ್ತೀಚಿನ ದಿನಗಳಲ್ಲಿ ಗಡಿ ಭಾಗದಲ್ಲಿ ಸಂಘರ್ಷಗಳು ಕಡಿಮೆಯಾಗಿವೇ ರಾಯಚೂರು ಜಿಲ್ಲೆಯ ಗಡಿ ಭಾಗದ ಕೃಷ್ಣ ಗ್ರಾಮದ ಕನ್ನಡ ಶಾಲೆಗಳಿಗೆ ರಾಯಚೂರು ಜಿಪಂ ಸಿಇಒ ಅವರನ್ನು ಕಳುಹಿಸಿ ಅಲ್ಲಿನ ಶಾಲಾ ಮಕ್ಕಳಿಗೆ ಕನ್ನಡ ಪಠ್ಯ ಪುಸ್ತಕಗಳನ್ನು ವಿತರಿಸುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ವಿಧಾನ ಪರಿಷತ್ ಅಧಿವೇಶನದಲ್ಲಿ ಸಭಾಪತಿ ಹೊರಟ್ಟಿಯವರ ಅಧ್ಯಕ್ಷತೆಯಲ್ಲಿ ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಶೋಷಣೆ ಹಾಗೂ ದೌರ್ಜನ್ಯಗಳ ಕುರಿತು ಚರ್ಚೆ ನಡೆಸಿ ಆಸಿಡ್ ದಾಳಿಯಿಂದ ನೊಂದ ಮಹಿಳೆಯರಿಗೆ ಮಾಸಿಕ 50 ಸಾವಿರ ರೂ.ಗಳವರೆಗೆ ಸಹಾಯಧನವನ್ನು ಹೆಚ್ಚಿಸುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ. ಜೊತೆಗೆ ವಸತಿ ಹಾಗೂ ಉಚಿತ ಆರೋಗ್ಯ ಚಿಕಿತ್ಸೆ ನೀಡುವ ಕುರಿತು ವಿಧಾನಪರೀಷತ್ ಸಭಾನಾಯಕನಾಗಿ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ನಡೆಸಿ ಜಾರಿ ಮಾಡಿಸಲಾಯಿತು ಎಂದು ತಿಳಿಸಿದರು.

ಶಾಸಕ ಹಂಪಯ್ಯನಾಯಕ ಮಾತನಾಡಿ, ತಾಲೂಕಿನ ಗಡಿ ಭಾಗದ ಗ್ರಾಮೀಣ ಪ್ರದೇಶದಲ್ಲಿ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಹೆಚ್ಚು,ಹೆಚ್ಚು ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಗ್ರಾಮೀಣ ಸಾಹಿತಿಗಳಿಗೆ , ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವಂತೆ ಕರೆ ನೀಡಿದರು.

ಹಿರಿಯ ಸಾಹಿತಿ ರಮೇಶಬಾಬು ಯಾಳಗಿ ಅಂತರ್ಧ್ವನಿ ಮಂಗಳ ಮುಖಿಯರ ಮನದಾಳದ ಮಾತುಗಳು ಪುಸ್ತಕ ಕುರಿತು ಮಾಹಿತಿ ನೀಡಿದರು. ಅಂತರ್ಧ್ವನಿ ಕೃತಿಯ ಲೇಖಕರಾದ ಅಂಬಮ್ಮ ಪ್ರತಾಪಸಿಂಗ್ ಪುಸ್ತಕದ ಕುರಿತು ಮಾತನಾಡಿದರು.

11 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವ ಅಧ್ಯಕ್ಷರಾದ ಡಾ. ಬಸವಪ್ರಭು ಪಾಟೀಲ ಬೆಟ್ಟದೂರು ಮಾತನಾಡಿದರು. ಸಚಿವ ಎನ್.ಎಸ್.ಬೋಸರಾಜು,ಶಾಸಕ ಹಂಪಯ್ಯನಾಯಕ, ಕಸಾಪ ತಾ.ಅಧ್ಯಕ್ಷರಾದ ಶರಣಬಸವ ನೀರಮಾನ್ವಿ, ಅಂತರ್ಧ್ವನಿ ಕೃತಿಯ ಲೇಖಕರಾದ ಅಂಬಮ್ಮ ಪ್ರತಾಪಸಿಂಗ್ ಅವರನ್ನು ಸನ್ಮಾನಿಸಲಾಯಿತು.

ಮುಖಂಡರಾದ ಶರಣಯ್ಯ ಕೆ.ಗುಡದಿನ್ನಿ, ಕಸಾಪ ತಾ.ಅಧ್ಯಕ್ಷ ಶರಣಬಸವ ನೀರಮಾನ್ವಿ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ತಾಯಪ್ಪ ಬಿ.ಹೊಸೂರು. ಎಚ್.ಶರ್ಫುದ್ದೀನ್ ಪೋತ್ನಾಳ್, ಹನುಮಂತಪ್ಪ ಕೊಟ್ನೆಕಲ್, ಲಕ್ಷ್ಮಣ ಜಾನೇಕಲ್, ಜಿ.ಎಸ್. ಬಾಲಾಜಿಸಿಂಗ್, ರವಿಶರ್ಮ ಇತರರಿದ್ದರು.

ಶರಣಬಸವೇಶ್ವರ ಜಾತ್ರಾ ಮಹೋತ್ಸವ: ಪ್ರವಚನಕ್ಕೆ ಚಾಲನೆ

ಕುಷ್ಟಗಿ: ಪ್ರತಿ ವರ್ಷದಂತೆ ಈ ವರ್ಷವೂ ಕೂಡ 71ನೇ ವರ್ಷದ ಮಹಾದಾಸೋಹಿ ಶ್ರೀಶರಣ ಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆಯುತ್ತಿರುವ ಕಾರ್ಯಕ್ರಮಗಳ ಸರಣಿಯಲ್ಲಿ 15 ದಿನದ ಪುರಾಣ ಪ್ರವಚನ ಕಾರ್ಯಕ್ರಮವು ಶುಕ್ರವಾರ ಭಕ್ತಿಭಾವದ ವಾತಾವರಣದಲ್ಲಿ ಆರಂಭವಾಯಿತು.



ಕರಿಬಸವಶಿವಾಚಾರ್ಯಸ್ವಾಮೀಜಿಗಳ ನೇತೃತ್ವದಲ್ಲಿ ನಡೆದ ಉದ್ಘಾಟನಾ ಕಾರ್ಯಕ್ರಮ ವನ್ನು ಸುಕ್ಷೇತ್ರ ಎಂ.ಗುಡದೂರಿನ ನೀಲಕಂಠಯ್ಯ ತಾತನವರು ಉದ್ಘಾಟಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಸಿಪಿಐ ವಿಶ್ವನಾಥ ಹಿರೇಗೌಡ್ರು ಮಾತನಾಡಿ, ಶರಣಬಸವೇಶ್ವರರಂತಹ ಮಹನೀಯರ ಜಾತ್ರೆಗಳು ಕೇವಲ ಧಾರ್ಮಿಕ ಆಚರಣೆಗಳಿಗೆ ಸೀಮಿತವಾಗದೇ, ಸಮಾಜದಲ್ಲಿ ಭಕ್ತಿ, ಸಂಸ್ಕಾರ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಬಲಪಡಿಸುವ ಮಹತ್ವದ ವೇದಿಕೆಗಳಾಗಿವೆ ಎಂದು ಹೇಳಿದರು.

ಪುರಾಣ ಪ್ರವಚನಗಳ ಮೂಲಕ ನಮ್ಮ ಪುರಾತನ ಪರಂಪರೆ, ಧರ್ಮದ ಸಾರ ಹಾಗೂ ಜೀವನ ಮೌಲ್ಯಗಳನ್ನು ಹೊಸ ತಲೆಮಾರಿಗೆ ಪರಿಚಯಿಸುವ ಕಾರ್ಯ ನಡೆಯುತ್ತಿದೆ ಎಂದು ತಿಳಿಸಿದರು.

ಭಕ್ತಿ ಮಾನವನ ಬದುಕಿಗೆ ಆತ್ಮಶಕ್ತಿಯನ್ನು ನೀಡುತ್ತದೆ. ಸಂಸ್ಕಾರವು ವ್ಯಕ್ತಿತ್ವವನ್ನು ರೂಪಿಸುತ್ತದೆ. ಸಂಸ್ಕೃತಿಯು ಸಮಾಜವನ್ನು ಒಗ್ಗೂಡಿಸುವ ಶಕ್ತಿಯಾಗಿದೆ. ಇಂತಹ ಜಾತ್ರಾ ಮಹೋತ್ಸವಗಳು ಜನರಲ್ಲಿ ಪರಸ್ಪರ ಸಹಕಾರ, ಸೌಹಾರ್ದತೆ ಮತ್ತು ಸೇವಾಭಾವವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಹೇಳಿದರು.

ಜಾತ್ರೆಯ ಅಂಗವಾಗಿ ನಡೆಯುತ್ತಿರುವ ಅನ್ನದಾಸೋಹ, ಧಾರ್ಮಿಕ ಕಾರ್ಯಕ್ರಮಗಳು, ಪುರಾಣ ಪ್ರವಚನಗಳು ಹಾಗೂ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಸಮಾಜದಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಸಹಕಾರಿಯಾಗಿವೆ. ಸಮಾಜದ ಎಲ್ಲ ವರ್ಗದ ಜನರು ಇಂತಹ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಾಂಸ್ಕೃತಿಕ ಮತ್ತು ಸಂಪ್ರದಾಯಗಳನ್ನು ಉಳಿಸಿ ಬೆಳೆಸಬೇಕು ಎಂದು ಕರೆ ನೀಡಿದರು.

ಪಿಎಸ್ಐ ಹನುಮಂತಪ್ಪ ತಳವಾರ, ಪ್ರವಚನಕಾರ ಕಲ್ಲಯ್ಯ ಶಾಸ್ತ್ರಿ ತಬಲಾ ವಾದಕ ಭಾಷೂಸಾಬ ಜಿನ್ನದ್, ದೊಡ್ಡಯ್ಯ ಗದ್ದಡಕಿ, ಕಳಕಪ್ಪ ಮರದ, ಸಣ್ಣಪ್ಪ ಲೈನದ್, ಹನುಮಂತಪ್ಪ ಕಜ್ಜಿ, ಗವಿಸಿದ್ದಪ್ಪ ಸೂಡಿ, ಬಸವರಾಜ ಮೆಳ್ಳಿ, ಸಂಗನಗೌಡ ಕೊಡಗಲಿ ದೊಡ್ಡಬಸಯ್ಯ ಹಿರೇಮಠ ಸೇರಿದಂತೆ ಗ್ರಾಮದ ಅನೇಕ ಭಕ್ತರು ಹಾಗೂ ಮುಖಂಡರು ಉಪಸ್ಥಿತರಿದ್ದರು.

ಭಕ್ತರಭಾರೀ ಉಪಸ್ಥಿತಿಯಲ್ಲಿ ನಡೆದ ಪುರಾಣ ಪ್ರವಚನ ಕಾರ್ಯಕ್ರಮವು ಜಾತ್ರಾ ಮಹೋತ್ಸವಕ್ಕೆ ಧಾರ್ಮಿಕ ಭಾವನೆಗಳನ್ನು ಮತ್ತಷ್ಟು ಉಜ್ವಲಗೊಳಿಸಿತು. ಶರಣಪ್ಪ ಲೈನದ ನಿರ್ವಹಿಸಿ, ವಂದಿಸಿದರು.

ಕಿರುಸುದ್ದಿ

ಸಮಿತಿ ಅಧ್ಯಕ್ಷರಾಗಿ ಒಡೆಯರ್ ಆಯ್ಕೆ



ಯಾದಗಿರಿ: ಭಾರತ ರತ್ನ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವವನ್ನು ಆಚರಿಸಲು ಯಾದಗಿರಿಯಲ್ಲಿ ಜಯಂತ್ಯುತ್ಸವ ಸಮಿತಿ ರಚಿಸಲಾಗಿದೆ. ಸಮಿತಿಯ ಅಧ್ಯಕ್ಷರಾಗಿ ಪರಶುರಾಮ ಒಡೆಯರ್ ಅವರನ್ನು ಆಯ್ಕೆ ಮಾಡಲಾಗಿದೆ.

ನಗರದ ಅಂಬೇಡ್ಕರ್ ಭವನದಲ್ಲಿ ಭಾನುವಾರ ನಡೆದ ಸಭೆಯಲ್ಲಿ ಎಲ್ಲ ಹಿರಿಯರ ಸಹಮತದಿಂದ ಸಮಿತಿಯ ಗೌರವ ಅಧ್ಯಕ್ಷರಾಗಿ ವೀರಭದ್ರಪ್ಪ ಯಡ್ಡಳ್ಳಿ, ಉಪಾಧ್ಯಕ್ಷರಾಗಿ ಗಂಗಿಮಾಳಮ್ಮ, ಮಂಜುನಾಥ ದಾಸನಕೇರಿ, ಶ್ರೀಕಾಂತ ಸುಂಗಲಕರ್ ಹಾಗೂ ಸುಭಾಷ್ ವಾಡಿ, ಮಂಜುನಾಥ ಗುರಸಣಗಿ ಆಯ್ಕೆಯಾಗಿದ್ದಾರೆ.ಪ್ರಧಾನ ಕಾರ್ಯದರ್ಶಿಯಾಗಿ ಕಾಶೀನಾಥ್ ನಾಟೇಕಾರ್, ಸಹ ಕಾರ್ಯದರ್ಶಿಯಾಗಿ ಪ್ರಜ್ವಲ್ ಸಾಗರ ಕುರಕುಂಬಳಕರ್, ಖಜಾಂಚಿಯಾಗಿ ಅರುಣ್‌ಕುಮಾರ ದಾಸನಕೇರಿ ಹಾಗೂ ಸಹ ಖಜಾಂಚಿಯಾಗಿ ಭೀಮಾಶಂಕರ ಆರಿಕೇರಿ ಅವರನ್ನು ನೇಮಕ ಮಾಡಲಾಗಿದೆ. ಡಾ.ಭಗವಂತ ಅನ್ವಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಆಯ್ಕೆ ಪ್ರಕ್ರಿಯೆ ನಡೆಯಿತು. ಸಭೆಯಲ್ಲಿ ಹಿರಿಯ ಮುಖಂಡರಾದ ಮರೆಪ್ಪ ಚಟ್ಟೇರಕರ್, ಗೋಪಾಲ ತೇಳಗೇರಿ, ಶರಣು ಎಸ್.ನಾಟೇಕಾರ್, ಮಲ್ಲಿಕಾರ್ಜುನ ಈಟೇ, ಸಾಮದೇವ ದಾಸನಕೇರಿ, ವಿಜಯ ಶಿರಗೋಳ, ನರೇಂದ್ರ ಕುಮಾರ್ ಅನ್ವಾರ ಸೇರಿದಂತೆ ನಗರದ ಯುವಕರು ಮತ್ತು ಹಲವರು ಭಾಗವಹಿಸಿದ್ದರು.

ವಾರ್ಷಿಕ ಕ್ರೀಡಾಕೂಟ ಇಂದಿನಿಂದ

ವಿಜಯನಗರ: ಜಿಪಂ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಹೊಸಪೇಟೆಯ ಜಿಲ್ಲಾ ಕ್ರೀಡಾಂಗಣದಲ್ಲಿ ಮಾ.16 ಮತ್ತು 17ರಂದು ಜಿಲ್ಲೆಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಿಬ್ಬಂದಿಗೆ ವಾರ್ಷಿಕ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮಾ.16ರಂದು ಬೆಳಗ್ಗೆ 10ಗಂಟೆಗೆ ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಕ್ರೀಡಾಕೂಟವನ್ನು ಉದ್ಘಾಟಿಸಲಿದ್ದು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಕಾರ್ಯದರ್ಶಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಹಾಗೂ ಜಿಪಂ ಆಡಳಿತಾಧಿಕಾರಿ ಡಾ.ಕೆ.ಜಿ.ಜಗದೀಶ ಉಪಸ್ಥಿತರಿರುವರು. ಜಿಪಂ ಸಿಇಒ ನೊಂಗ್ಜಾಯ್ ಮಹ್ಮದ್ ಅಲಿ ಅಕ್ರಂ ಷಾ ಅಧ್ಯಕ್ಷತೆ ವಹಿಸುವರು. ಎಸ್ಪಿ ಎಸ್. ಜಾಹ್ನವಿ, ಎಡಿಸಿ ಇ.ಬಾಲಕೃಷ್ಣ, ಜಿಪಂ ಉಪಕಾರ್ಯದರ್ಶಿ ಕೆ.ತಿಮ್ಮಪ್ಪ, ಮುಖ್ಯ ಲೆಕ್ಕಾಧಿಕಾರಿ ಡಂಕಣಾ ನಾಯ್ಕ, ಸಹಾಯಕ ಲೆಕ್ಕಾಧಿಕಾರಿಗಳಾದ ರುದ್ರಪ್ಪ ಆಕ್ಕಿ, ವಿ.ಬಿ.ಮೌನೇಶ, ಮುಖ್ಯ ಯೋಜನಾಧಿಕಾರಿ ಅನ್ನದಾನಸ್ವಾಮಿ, ಸಹಾಯಕ ಯೋಜನಾಧಿಕಾರಿ ಎಂ.ಉಮೇಶ್, ಯೋಜನೆ ಅಂದಾಜು ಮತ್ತು ಮೌಲ್ಯಮಾಪನ ಅಧಿಕಾರಿ ಪಿ.ಶಿವರಾಜ್, ತಾಪಂ ಇಒ ಆಲಂ ಪಾಷಾ ಸೇರಿದಂತೆ ಜಿಪಂ, ತಾಪಂ, ಗ್ರಾಪಂ ಸೇರಿದಂತೆ ಪಿಆರ್‌ಇಡಿ, ಕೆಆರ್‌ಐಡಿಎಲ್ ಮತ್ತು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ವಿದ್ಯುತ್ ವ್ಯತ್ಯಯ

ಹೂವಿನಹಡಗಲಿ: ತಾಲೂಕಿನ ಇಟ್ಟಿಗಿ ಗ್ರಾಮದಲ್ಲಿ 220ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರ, ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ 11ಕೆವಿ ಫೀಡರ್‌ಗಳಿಗೆ ಮಾ.16ರಂದು ವಿದ್ಯುತ್ ವ್ಯತ್ಯಯವಾಗಲಿದೆ. 11ಕೆವಿ ಮಾರ್ಗಗಳ 12.5 ಎಂವಿಎ-1, 2 ವಿದ್ಯುತ್ ಪರಿವರ್ತಕಗಳ ನಾಲ್ಕನೇ ತ್ರೈಮಾಸಿಕ ತುರ್ತು ನಿರ್ವಹಣೆ ಕೆಲಸ ಕೈಗೆತ್ತಿಕೊಂಡಿರುವುದರಿಂದ ವಿದ್ಯುತ್ ವ್ಯತ್ಯಾಯವಾಗುತ್ತದೆ.

ಮತ್ತು 220 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರ ಇಟ್ಟಿಗಿ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ 11ಕೆವಿ ಫೀಡರ್‌ಗಳಿಗೆ ಮಾರ್ಗದ 11ಕೆವಿ ಮಾರ್ಗಗಳ 12.5 ಎಂವಿಎ-1, 2 ವಿದ್ಯುತ್ ಪರಿವರ್ತಕಗಳ ನಾಲ್ಕನೇ ತ್ರೈಮಾಸಿಕ ತುರ್ತು ನಿರ್ವಹಣೆ ಕೆಲಸ ಕೈಗೆತ್ತಿಕೊಂಡಿರುವುದರಿಂದ ಅಂದು ಬೆಳಗ್ಗೆ 7 ಗಂಟೆಯಿಂದ ಮಧ್ಯಾಹ್ನ 1ಗಂಟೆಯವರೆಗೆ ವಿದ್ಯುತ್ ಸರಬರಾಜುನಲ್ಲಿ ವ್ಯತ್ಯಯ ಆಗುತ್ತದೆ ಎಂದು ಜೆಸ್ಕಾಂ ಪ್ರಕಟಣೆ ತಿಳಿಸಿದೆ.

ಅಡುಗೆ ಅನಿಲ ಕೊರತೆ ವದಂತಿಗೆ ಕಿವಿಗೊಡಬೇಡಿ

ವಿಜಯನಗರ: ಪ್ರಸ್ತುತ ಮಧ್ಯ ಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಸನ್ನಿವೇಶಗಳ ಹಿನ್ನೆಲೆಯಲ್ಲಿ ಅಡುಗೆ ಅನಿಲ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂಬ ಸುಳ್ಳು ಸುದ್ದಿ, ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಈ ಕುರಿತು ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಡಿಸಿ ಕವಿತಾ ಎಸ್.ಮನ್ನಿಕೇರಿ ತಿಳಿಸಿದ್ದಾರೆ.

ದೇಶಾದ್ಯಂತ ಎಲ್‌ಪಿಜಿ ಉತ್ಪಾದನೆ ಮತ್ತು ಬಾಟಲಿಂಗ್ ಪ್ರಕ್ರಿಯೆ ಉತ್ತಮವಾಗಿದ್ದು, ಸಾಕಷ್ಟು ಪ್ರಮಾಣದ ದಾಸ್ತಾನು ಲಭ್ಯವಿದೆ. ಆದರೆ, ಹೆಚ್ಚಿನ ಗ್ರಾಹಕರು ಏಕಕಾಲದಲ್ಲಿ ಬುಕ್ಕಿಂಗ್ ಮಾಡುತ್ತಿರುವುದರಿಂದ ಸರ್ವರ್ ಮೇಲೆ ಒತ್ತಡ ಉಂಟಾಗಿ ತಾಂತ್ರಿಕ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ ಎಂದಿದ್ದಾರೆ.



ಕುರುಗೋಡು: ಪಟ್ಟಣದ 4ನೇ ವಾರ್ಡ್‌ನ ನಿವಾಸಿ ರಾಜಮ್ಮ ಅವರಿಗೆ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿ ವಾತ್ಸಲ್ಯ ಕಾರ್ಯಕ್ರಮದ ಮೂಲಕ ವಾಸ್ತಲ್ಯ ಮನೆಯನ್ನು ನಿರ್ಮಿಸಿ ನೀಡಲಾಯಿತು. ಈ ಮನೆಯನ್ನು ಶ್ರೀಕ್ಷೇತ್ರ ಧರ್ಮಸ್ಥಳ ಮಂಜುನಾಥ ಸಂಸ್ಥೆಯ ಸೂರು ಮನೆ ನಿರ್ಮಾಣ ಯೋಜನೆಯಡಿ ನಿರ್ಮಿಸಿ ನೀಡಲಾಗಿತು. ಧರ್ಮಸ್ಥಳ ಸಂಘದ ನಿರ್ದೇಶಕರು, ತಾಲೂಕು ಸಂಯೋಜಕರು, ಪುರಸಭೆ ಉಪಾಧ್ಯಕ್ಷರು, ಹಾಗೂ ಸಂಘದ ಸದಸ್ಯರು ಇದ್ದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಬಳ್ಳಾರಿ: ನಗರದ 22ನೇ ವಾರ್ಡ್ ವ್ಯಾಪ್ತಿಯ ಆಕುಲ ಚೆಲುವಯ್ಯ ಬೀದಿ ಪ್ರದೇಶದ ಸಮುದಾಯ ಭವನದಲ್ಲಿ ಶನಿವಾರ ಸಂಜೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅದ್ದೂರಿಯಾಗಿ, ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸ್ವಚ್ಛ ಸರ್ವೇಕ್ಷಣ ಅಡಿಯಲ್ಲಿ ಸ್ವಚ್ಛ ಭಾರತ 2.0 ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಿಮಿತ್ತ ವಿವಿಧ ಸ್ವಸಹಾಯ ಸಂಘದ ಪದಾಧಿಕಾರಿಗಳಿಗೆ ಹಾಗೂ ಪೌರಕಾರ್ಮಿಕರಿಗೆ ಸನ್ಮಾನ ಸಮಾರಂಭಕ್ಕೆ 22ನೇ ವಾರ್ಡ್ ಪಾಲಿಕೆ ಸದಸ್ಯ ಹಾಗೂ ಲೆಕ್ಕಪತ್ರಗಳ ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಹನುಮಂತಪ್ಪ ಅವರು ಚಾಲನೆ ನೀಡಿ ಮಾತನಾಡಿದರು.

ಮಹಿಳೆಯರು ಇತ್ತೀಚೆಗೆ ಎಲ್ಲ ಕ್ಷೇತ್ರಗಳಲ್ಲಿಯೂ ಮುಂಚುಣಿಯಲ್ಲಿದ್ದು, ಸಂತಸ ಮೂಡಿಸಿದೆ. ಮಹಿಳೆಯರು ಪುರುಷರಷ್ಟೇ ಸಮಾನರು ಎಂಬುದನ್ನು ಸಾಬೀತು ಪಡಿಸಿದ್ದಾರೆ. ಪ್ರತಿಯೊಬ್ಬ ಮಹಿಳೆಯರಿಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ತಿಳಿಸುವೆ ಎಂದರು.ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಸನ್ಮಾನಿ ಗೌರವಿಸಿದರು. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಿಮಿತ್ತ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಪೌರ ಕಾರ್ಮಿಕರನ್ನು ಬಹುಮಾನ ವಿತರಿಸಿ ಗಮನಸೆಳೆದರು.

ಪಾಲಿಕೆಯ ಆರೋಗ್ಯ ನಿರೀಕ್ಷಕರಾದ ಕಡ್ಲೆ ಬಸವರಾಜ್ ಸೇರಿದಂತೆ ಪರ್ವೀನ್ ಬಾನು, ಸುಮಾ ರೆಡ್ಡಿ ಸೇರಿದಂತೆ ವಲಯ 1 ವ್ಯಾಪ್ತಿಯ ಮಹಿಳಾ ಮುಖಂಡರು, ಪ್ರಮುಖರು, ವಿವಿಧ ಗಣ್ಯರು ಭಾಗವಹಿಸಿದ್ದರು.



ಬಳ್ಳಾರಿ: ನಗರದ 22ನೇ ವಾರ್ಡ್ ವ್ಯಾಪ್ತಿಯ ಆಕುಲ ಚೆಲುವಯ್ಯ ಬೀದಿ ಪ್ರದೇಶದ ಸಮುದಾಯ ಭವನದಲ್ಲಿ ಶನಿವಾರ ಸಂಜೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅದ್ದೂರಿಯಾಗಿ, ಅರ್ಥಪೂರ್ಣವಾಗಿ ಆಚರಿಸಲಾಯಿತು.

ಹೆಚ್ಚಿದ ಬಿಸಿಲಿನ ತಾಪ | ಹೈರಾಣಾದ ಕೊಟ್ಟೂರು ಪಟ್ಟಣದ ಜನತೆ

ತಂಪು ಪಾನೀಯಗಳಿಗೆ ಮೊರೆ

ಅರವಿಂದ್ ಬಸಾಪುರ್

ಕೊಟ್ಟೂರು: ವಿಜಯನಗರ ಜಿಲ್ಲೆಯ ಪಟ್ಟಣದಲ್ಲಿ ಬಿಸಿಲಿನ ಧಗೆ ಹೆಚ್ಚಾಗಿದ್ದು, ಬಿಸಿಲಿನ ತಾಪವನ್ನು ತಾಳಿಕೊಳ್ಳಲಾರದೆ ಪಟ್ಟಣದ ಜನತೆಯು ಎಳನೀರು, ತಂಪುಪಾನಿಯಗಳ ಹಾಗೂ ಹಣ್ಣುಗಳ ಮೊರೆ ಹೋಗಿದ್ದಾರೆ.

ಪಟ್ಟಣದಲ್ಲಿ ದಿನದಿಂದ ದಿನಕ್ಕೆ ಬಿಸಿಲಿನ ಪ್ರಖರತೆಯು ಹೆಚ್ಚಾಗುತ್ತಿದ್ದು ಪಟ್ಟಣದ ಜನತೆಯು ಬೆಳಗ್ಗೆ 10 ಗಂಟೆ ಆಯಿತೆಂದರೆ ಮನೆಯಿಂದ ಹೊರಬರಲು ಹಿಂಜರಿಯುತ್ತಿದ್ದಾರೆ. ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ ಬೇಸಿಗೆ ಬಂತೆಂದರೆ ಬೇಸಿಗೆ ಧಗೆಯು ಹೆಚ್ಚಾಗುತ್ತಿದ್ದು ಮನೆಯಿಂದ ಹೊರಗೆ ಬರದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಕೊಟ್ಟೂರು ಪಟ್ಟಣ ಮಳೆಯಾಶ್ರಿತ ಪ್ರದೇಶವಾಗಿದ್ದು, ಈ ಭಾಗದಲ್ಲಿ ಮಳೆಯಾಗುವುದು ಅಪರೂಪ ಎನ್ನುವಂತಹ ಪರಿಸ್ಥಿತಿ ಇದೆ. ಮಳೆಗಾಲ ಬಂದಾಗ ಇಲ್ಲಿನ ಕೆರೆ ತುಂಬಿದರೆ ಮಾತ್ರ ಅಂತರ್ಜಲ ಹೆಚ್ಚಾಗಿ ರೈತರಿಗೆ ಸಹಕಾರಿಯಾಗುತ್ತದೆ. ಕೊಟ್ಟೂರು ಕೆರೆ ತುಂಬಿದರೆ ಸುತ್ತಮುತ್ತಲ ನೂರಾರು ಹಳ್ಳಿಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚುತ್ತದೆ. ಆದರೆ ಈ ಬಾರಿ ಪ್ರಖರ ಬಿಸಿಲಿನಿಂದಾಗಿ ಪಟ್ಟಣದ ಕೆರೆಯು ಮಳೆಗಾಲಕ್ಕು ಮುಂಚೆ ಬತ್ತಿ ಹೋಗುತ್ತಿರುವುದರಿಂದ ಅಂತರ್ಜಲ ಕುಸಿವ ಭೀತಿ ಎದುರಾಗಿದೆ. ಈಗಾಗಲೇ ಪಟ್ಟಣದಲ್ಲಿ ಹತ್ತು ದಿನಕೊಮ್ಮೆ ಕುಡಿಯುವ ನೀರು ಪೂರೈಕೆ ಆಗುತ್ತಿದ್ದು. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ತೊಂದರೆಗಳಾಗುವ ಆತಂಕ ಪಟ್ಟಣದ ಜನತೆಯಲ್ಲಿ ಕಾಡುತ್ತಿದೆ.

ಪಟ್ಟಣದಲ್ಲಿ ಸುಮಾರು 35 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗುತ್ತಿದ್ದು ಮಾರ್ಚ್ ತಿಂಗಳಲ್ಲಿಯೇ ಈ ಪರಿಯ ಉಷ್ಣಾಂಶ ಹೆಚ್ಚಾಗಿದ್ದರೆ ಮುಂದಿನ ದಿನಗಳಲ್ಲಿ ಇಲ್ಲಿನ ಉಷ್ಣಾಂಶ 42 ಡಿಗ್ರಿ ಹೆಚ್ಚಾಗುವ ಸಾಧ್ಯತೆ ಇದೆ. ಬೆಳಗ್ಗೆ 10 ಗಂಟೆಗೆ ಪ್ರಾರಂಭವಾಗುವ ಉರಿಬಿಸಲು ಸಂಜೆ 6:00 ವರೆಗೂ ಹಾಗೆ ಇರುತ್ತದೆ. ಈ ಅವಧಿಯಲ್ಲಿ ಆಕಸ್ಮಿಕವಾಗಿ ವಿದ್ಯುತ್ ಕಡಿತವಾದರೆ ಮನೆಗಳಲ್ಲಿ ಕೂಡುವುದು ಕಷ್ಟದಾಯಕವಾಗಿದ್ದು ಮನೆಗಳಲ್ಲಿ ಜನರು ಫ್ಯಾನ್ ಮತ್ತು ಎಸಿಗಳ ಮೊರೆ ಹೋಗಿದ್ದಾರೆ.

ಬಿಸಿಲಿನ ತಾಪ ಹೆಚ್ಚುವುದರಿಂದ ಅತಿಯಾದ ಶಾಖ ಉಂಟಾಗಿ ಅನೇಕ ಜನರಲ್ಲೂ ಅದರಲ್ಲೂ ವಿಶೇಷವಾಗಿ ಮಕ್ಕಳಲ್ಲಿ ಜ್ವರ ಕಾಣಿಸಿಕೊಳ್ಳುತ್ತಿದೆ. ಬಿಸಿಲಿಗೆ ಮಕ್ಕಳನ್ನು ಬಿಡದಂತೆ ಪೋಷಕರು ಎಚ್ಚರಿಕೆ ವಹಿಸಬೇಕೆಂದು ವೈದ್ಯರು ಸಲಹೆ ನೀಡುತ್ತಿದ್ದಾರೆ. ದೇಹವನ್ನು ತಂಪಾಗಿಸುವ ಹಣ್ಣುಗಳನ್ನು ಹಾಗೂ ಹೆಚ್ಚು ಹೆಚ್ಚು ನೀರನ್ನು ಸೇವಿಸುವಂತೆ ವೈದ್ಯರು ಸಲಹೆ ನೀಡುತ್ತಾರೆ.

ಬೆಳಗ್ಗೆ 10ರಿಂದ ಸಂಜೆ ಐದರವರೆಗೂ ಹೊರಗಡೆ ಬಿಸಿಲಲ್ಲಿ ಓಡಾಡುವುದನ್ನು ಕಡಿಮೆ ಮಾಡುವಂತೆ ವೈದ್ಯರು ಸಲಹೆ ನೀಡುತ್ತಾರೆ. ಅನಿವಾರ್ಯವಾಗಿ ಓಡಾಡುವ ಪರಿಸ್ಥಿತಿ ಬಂದರೆ ನೆರಳಿಗಾಗಿ ಛತ್ರಿಗಳನ್ನು ಬಳಸಲು ವೈದ್ಯರು ಸೂಚನೆ ನೀಡಿದ್ದಾರೆ.



ಹಣ್ಣುಗಳು ಭರ್ಜರಿ ಮಾರಾಟ

ಪಟ್ಟಣದಲ್ಲಿ ಬಿಸಿಲಿನ ಧಗೆ ಹೆಚ್ಚಾಗುತ್ತಿರುವುದರಿಂದ ಪಟ್ಟಣದ ಜನತೆಯು ಎಳನೀರು, ಕಲ್ಲಂಗಡಿ ಹಣ್ಣು, ಕರ್ಬೂಜ ಹಣ್ಣು , ಕಬ್ಬಿನ ಹಾಲುಗಳು, ಹಾಗೂ ಇತರೆ ತಂಪಾದ ಪಾನೀಯಗಳ ಮೊರೆ ಹೋಗುತ್ತಿದ್ದಾರೆ. ಬಿಸಿಲಿನ ಧಗೆಯಿಂದಾಗಿ ಹಣ್ಣುಗಳ ಮಾರಾಟ ಭರ್ಜರಿಯಾಗಿ ನಡೆಯುತ್ತಿದ್ದು ವ್ಯಾಪಾರಿಗಳಲ್ಲಿ ಸಂತಸವನ್ನುಂಟು ಮಾಡಿದೆ, ಪಟ್ಟಣದಲ್ಲಿ ಎಳನೀರು ರೂ. 40 ಗಳಿಗೆ ಮಾರಾಟವಾಗುತ್ತಿದ್ದರು ಜನತೆ ಕೊಂಡು ಕುಡಿಯುತ್ತಿದ್ದಾರೆ.

ನೆಮ್ಮದಿ ಜೀವನಕ್ಕೆ 'ವಾತ್ಸಲ್ಯ' ಆಸರೆ

ಸಿರುಗುಪ್ಪ: ಅಸಹಾಯಕರ ಬಾಳಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ವತಿಯಿಂದ ನೀಡುತ್ತಿರುವ ವಾತ್ಸಲ್ಯ ಮನೆ ನೆಮ್ಮದಿಯ ಬದುಕಿಗೆ ಆಸರೆಯಾಗಿದೆ ಎಂದು ಜಿಲ್ಲಾ ನಿರ್ದೇಶಕ ರೋಹಿತಾಕ್ಷ ಹೇಳಿದರು.

ತಾಲೂಕಿನ ಉಪ್ಪಾರ ಹೊಸಳ್ಳಿ ಗ್ರಾಮದ ಫಲಾನುಭವಿ ಹೋಟೆಲ್ ನೀಲಮ್ಮ ಅವರಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ 1,35,000 ರೂ. ವೆಚ್ಚದಲ್ಲಿ ನಿರ್ಮಿಸಿದ ವಾತ್ಸಲ್ಯ ಮನೆಯನ್ನು ಭಾನುವಾರ ಹಸ್ತಾಂತರ ಮಾಡಿ ಮಾತನಾಡಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಡ, ನಿರ್ಗತಿಕ ಮಹಿಳೆಯರ ಬದುಕಿನಲ್ಲಿ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡುತ್ತಿದೆ. ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಸಮಾಜದಲ್ಲಿರುವ ಅತಿ ದುರ್ಬಲ ಮತ್ತು ಅಸಹಾಯಕ ಸ್ಥಿತಿಯಲ್ಲಿರುವ ಕುಟುಂಬಗಳನ್ನು ಗುರುತಿಸಿ ಅವರ ಜೀವನ ನಿರ್ವಹಣೆಗೆ ಬೇಕಾದ ಮಾಸಾಶನ ಹಾಗೂ ಅಗತ್ಯಕ್ಕೆ ಅನುಕೂಲವಾಗುವಂತೆ ವಾತ್ಸಲ್ಯ ಕಿಟ್‌ಗಳನ್ನು ಕೊಡುವುದರೊಂದಿಗೆ ಸೂರು ಇಲ್ಲದವರಿಗೆ ಸ್ವಂತ ಸೂರು ನಿರ್ಮಾಣ ಮಾಡಿ ಕೊಡಲಾಗುತ್ತಿದೆ. ದುಸ್ಥಿತಿಯಲ್ಲಿ ಜೀವಿಸುತ್ತಿರುವ ಅಸಹಾಯಕ ಬಂಧುಗಳಿಗೆ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಜೀವಿತಾವಧಿಯ ಕೊನೆಯ ಕ್ಷಣದಲ್ಲಿ ನೆಮ್ಮದಿಯ ಜೀವನವನ್ನು ಕಲ್ಪಿಸುವುದು ಮಾತೃಶ್ರೀ ಹೇಮಾವತಿ ಅವರ ಆಶಯವಾಗಿದೆ ಎಂದರು.

ಮಾಜಿಶಾಸಕ ಎಂ.ಎಸ್.ಸೋಮಲಿಂಗಪ್ಪ ಮಾತನಾಡಿ, ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ಸಮಾಜದಲ್ಲಿ ಇರುವ ಕಡು ಬಡವರು, ನಿರ್ಗತಿಕರು, ಅಸಹಾಯಕರಿಗೆ ಸಹಾಯ ಮಾಡುವುದರ ಮೂಲಕ ಸೂರಿಲ್ಲದವರಿಗೆ ಸೂರು ಕಲ್ಪಿಸಿಕೊಡುತ್ತಿರುವುದು ಶ್ಲಾಘನೀಯ ಇಂತಹ ಕಾರ್ಯಕ್ರಮಗಳು ಗ್ರಾಮದಲ್ಲಿ ಆಗಬೇಕಾದರೆ ಗ್ರಾಮದವರ ಸಹಕಾರವೂ ಅಗತ್ಯವಾಗಿರುತ್ತದೆ ಎಲ್ಲರ ಸಹಕಾರದಲ್ಲಿ ಉತ್ತಮ ಕೆಲಸಗಳು ಆಗಲು ಸಾಧ್ಯವಾಗುತ್ತದೆ ಎಂದರು.



ತಾಲೂಕು ಕ್ಷೇತ್ರ ಯೋಜನಾಧಿಕಾರಿ ಸುಧೀರ್ ಹಂಗಳೂರು, ಗ್ರಾಪಂ ಮಾಜಿ ಅಧ್ಯಕ್ಷೆ ಸುವರ್ಣಮ್ಮ, ತಾಲೂಕು ವಿಚಕ್ಷಣಾಧಿಕಾರಿ ರಾಕೇಶ, ತಾಲೂಕು ಜ್ಞಾನವಿಕಾಸ ಸಮನ್ವಯಾಧಿಕಾರಿ ಪ್ರಿಯಾ, ಮೇಲ್ವಿಚಾರಕಿ ರಾಧಿಕಾ, ತಾಲೂಕು ಕೃಷಿ ಮೇಲ್ವಿಚಾರಕ ವೀರೇಶ್ ಸೇವಾಪ್ರತಿನಿಧಿ ಶಕುಂತಲಾ, ಊರಿನ ಗಣ್ಯರಾದ ವೆಂಕಟೇಶ, ಶ್ರೀಧರ, ಶ್ರೀನಿವಾಸ, ಅರುಣ್‌ಕುಮಾರ, ಮೌನೇಶ ಯಾದವ್ ಸ್ವ ಸಹಾಯ ಸಂಘದ ಸದಸ್ಯರು ಉಪಸ್ಥಿತರಿದ್ದರು.

ನೀರಿನ ಪ್ರತಿ ಹನಿಯೂ ರೈತರ ಭವಿಷ್ಯದ ದೀಪ



ಹುಣಸಗಿ: ನೀರಿನ ಪ್ರತಿಯೊಂದು ಹನಿಯು ರೈತರ ಭವಿಷ್ಯದ ದೀಪವಾಗಿದ್ದು, ಮಿತವಾಗಿ ಬಳಸಿ ಎಂದು ಧಾರವಾಡ ವಾಲ್ಮಿ ಸಂಸ್ಥೆ ನಿರ್ದೇಶಕ ಗಿರೀಶ್ ಮರಡ್ಡಿ ಹೇಳಿದರು.

ತಾಲೂಕಿನ ಬಲಶೆಟ್ಟಿಹಾಳ ಗ್ರಾಮದಲ್ಲಿ ಕೃಷಿ ಸಂಶೋಧನಾ ಕೇಂದ್ರ ಮಾಳನೂರು ಹಾಗೂ ನ್ಯೂ ಇಂಡಿಯಾ ರೈತ ಉತ್ಪಾದಕರ ಕಂಪನಿ ಹುಣಸಗಿ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಕೃಷ್ಣ ಅಚ್ಚುಕಟ್ಟು ಪ್ರದೇಶದಲ್ಲಿ ಸವಳು ಮಣ್ಣು ಮತ್ತು ನೀರಿನ ನಿರ್ವಹಣೆ, ನೆಲ ಮತ್ತು ಜಲ, ಸವಳು-ಜವಳು ಕುರಿತು ಕಾರ್ಯಾಗಾರದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಮ್ಮ ಕೃಷ್ಣ ಅಚ್ಚುಕಟ್ಟು ಪ್ರದೇಶದ ಪ್ರಮುಖ ಸವಾಲು. ಈ ಮಣ್ಣಿನಲ್ಲಿ ನೀರಿನ ಶೋಷಣೆ ವೇಗವಾಗಿ ನಡೆಯುತ್ತಿದೆ, ಆದರೂ ತೇವಾಂಶ ಉಳಿಯುವುದಿಲ್ಲ, ಹೀಗಾಗಿ ರೈತರು ಇದನ್ನು ಅರ್ಥಮಾಡಿಕೊಂಡು, ನೀರಿನ ನಿರ್ವಹಣೆಗೆ ಹೊಸ ತಂತ್ರಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಗಂಗಾವತಿ ಕೃಷಿ ಸಂಶೋಧನಾ ಕೇಂದ್ರ ಪ್ರಾಧ್ಯಾಪಕ ಡಾ.ಕರಿಗೌಡರ ಮಾತನಾಡಿ, ಯುಕೆಪಿ ಭಾಗದಲ್ಲಿ 59 ಸಾವಿರ ಹೆಕ್ಟೇರ್ ಭೂಮಿ ಸವಳು ಆಗಿದೆ. ಭತ್ತ ಬೆಳೆಯುವ ಪದ್ಧತಿ ಹೆಚ್ಚು ನೀರು ಬಳಕೆಯೆ ಸವಳಿಗೆ ಕಾರಣ. ಹಾಗಾಗಿ ಮೊದಲು ಹಳ್ಳಗಳ(ಬಸಿಗಾಲುವೆ) ಸ್ವಚ್ಛಗೊಳಿಸಿದಾಗ ಸವಳು ನಿಯಂತ್ರಣ ಮಾಡಬಹುದು ಎಂದು ತಿಳಿಸಿದರು.

ರಾಯಚೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಡಾ.ಅಮರೇಗೌಡ ಮಾತನಾಡಿ, ಸಾವಯವ ಗೊಬ್ಬರ, ಹಸಿರು ಗೊಬ್ಬರ ಬಳಸಿ ಮಣ್ಣನ್ನು ಉಳಿಸುವ ಕೆಲಸ ಆಗಬೇಕು ಎಂದು ರೈತರಿಗೆ ಮಾರ್ಗದರ್ಶನ ನೀಡಿದರು.

ಜಾನುವಾರುಗಳೊಂದಿಗೆ ಕೃಷಿ ಆಗಬೇಕು. ನೈಸರ್ಗಿಕ ಮತ್ತು ಸಾವಯವ ಕೃಷಿಗೆ ಆದ್ಯತೆ ಕೊಡಬೇಕು. ಇದರಿಂದಾಗಿ ವಾತಾವರಣ ಜೊತೆಗೆ ಮನುಷ್ಯನ ಆರೋಗ್ಯವೂ ಉತ್ತಮವಾಗಿರಲಿದೆ ಎಂದು ಸಮಗ್ರ ಕೃಷಿ ಪದ್ಧತಿ ಕುರಿತು ತಿಳಿಸಿದರು. ನೀರಾವರಿ ಸಲಹಾ ಸಮಿತಿ ಸದಸ್ಯ ಎಂ.ಆರ್.ಖಾಜಿ, ವೀರಸಂಗಪ್ಪ ಕೊಡೇಕಲ್, ಮುರಿಗೆಣ್ಣ ದೇಸಾಯಿ, ಷಣ್ಮುಖಪ್ಪ, ರಾಘವೇಂದ್ರ ಕಾಮನಟಗಿ ಸೇರಿದಂತೆ ಮುಖಂಡರು, ಪ್ರಗತಿಪರ ರೈತರು ಇದ್ದರು. ಡಾ.ವಿಜಯಕುಮಾರ ಪಲ್ಲೇದ್ ಸ್ವಾಗತಿಸಿದರು. ಡಾ.ಅಣ್ಣರಾವ್ ತಳವಾರ ನಿರೂಪಿಸಿ, ಮಲ್ಲಿಕಾರ್ಜುನ ವಂದಿಸಿದರು.

ಕ್ಲೇ ಮಾಡಲಿಂಗ್‌ನಲ್ಲಿ ಪ್ರೀತಮ್ ಪ್ರಥಮ

ಹೂವಿನಹಡಗಲಿ: ತಾಲೂಕಿನ ಆಡವಿಮಲ್ಲನಕೇರಿ ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳು ಪಕ್ಷಿಗಳಿಗೆ ನೀರು ಕುಡಿಯಲು ರಟ್ಟಿನ ಕ್ಲೇ ಮಾಡಲಿಂಗ್‌ನಿಂದ ತಮ್ಮ ಕೈಯಾರೆ ಹಕ್ಕಿಗಳ ಗೂಡನ್ನು ನಿರ್ಮಿಸಿರುವುದು ಪರಿಸರ ಜಾಗೃತಿ ಮತ್ತು ಧಯೆಯ ಒಳ್ಳೆಯ ಉದಾಹರಣೆಯಾಗಿದೆ.


ಇಂತಹ ಕಾರ್ಯಗಳಿಂದ ಪಕ್ಷಿಗಳಿಗೆ ಬೇಸಿಗೆಯ ಸಮಯದಲ್ಲಿ ನೀರು ಸಿಗುತ್ತದೆ ಹಾಗೂ ಮಕ್ಕಳಲ್ಲಿ ಪ್ರಕೃತಿ ಪ್ರೀತಿ ಬೆಳೆಸುತ್ತದೆ. ಮರಗಳಲ್ಲಿ ಅಥವಾ ಶಾಲಾ ಆವರಣದಲ್ಲಿ ಹಕ್ಕಿಗಳ ಗೂಡು ಮತ್ತು ನೀರಿನ ಪಾತ್ರಗಳನ್ನು ಇಡುವುದರಿಂದ ಪಕ್ಷಿಗಳಿಗೆ ವಿಶ್ರಾಂತಿ ಮತ್ತು ಆಹಾರ-ನೀರು ದೊರೆಯುತ್ತದೆ.

ಮಕ್ಕಳು ಮಾಡಿದ ಈ ಪ್ರಯತ್ನವು ಇತರರಿಗೂ ಪ್ರೇರಣೆಯಾಗುತ್ತದೆ. ನಾವು ಕೂಡ ನಮ್ಮ ಮನೆಗಳ ಬಳಿ ಅಥವಾ ತೋಟದಲ್ಲಿ ಸಣ್ಣ ಪಾತ್ರೆಗಳಲ್ಲಿ ನೀರು ಇಟ್ಟರೆ ಪಕ್ಷಿಗಳಿಗೆ ಬಹಳ ಸಹಾಯವಾಗುತ್ತದೆ.

ಬೇಸಿಗೆಯಲ್ಲೂ ಪರಿಸರ ಪ್ರೇಮ ಮರೆತಿಲ್ಲ, ಪ್ರತಿ ನಿತ್ಯ ಮಕ್ಕಳು ಶಾಲೆಯಲ್ಲಿ ಬೆಳೆದಿರುವ ಗಿಡಗಳಿಗೆ ಹಾಗೂ ಪಕ್ಷಿಗಳಿಗೆ ಆಹಾರ ಒದಗಿಸುವ ಮೂಲಕ ಪರಿಸರ ಕಾಳಜಿ ತೋರ್ಪಡಿಸುತ್ತಿದ್ದಾರೆ.

ಬಣ್ಣದ ರಟ್ಟಿನ ಕ್ಲೇ ಮಾಡಲಿಂಗ್‌ನಲ್ಲಿ ಪ್ರಥಮ ಸ್ಥಾನ ಪ್ರೀತಮ್ 7ನೇ ತರಗತಿ ವಿದ್ಯಾರ್ಥಿ, ದ್ವಿತೀಯ ಸ್ಥಾನ ಗಣೇಶ್ 6ನೇ ತರಗತಿ ವಿದ್ಯಾರ್ಥಿ ಪಡೆದುಕೊಂಡರೆ ತೃತೀಯ ಸ್ಥಾನವನ್ನು 6ನೇ ತರಗತಿ ವಿದ್ಯಾರ್ಥಿ ವಿನೀತ್ ಪಡೆದುಕೊಂಡಿದ್ದಾರೆ. ಉಳಿದ ವಿದ್ಯಾರ್ಥಿಗಳಾದ ಹರಿದಾಸ್, ಪ್ರಜ್ವಲ್, ಕಾರ್ತಿಕ್, ಅರ್ಜುನ್ ಚಿತ್ರಪಟಗಳಲ್ಲಿ ಭಾಗವಹಿಸಿ ತೃಪ್ತಿ ಪಟ್ಟಿದ್ದಾರೆ.

ವಸತಿ ನಿಲಯದ ವಿದ್ಯಾರ್ಥಿಗಳಿಗೆ ನಿಲಯ ಪಾಲಕರಾದ ಡಿಕೆ ಪರಶುರಾಮ, ಹಾಗೂ ಸಮಾಹಿಪ್ರಾ ಶಾಲೆ ಮುಖ್ಯ ಶಿಕ್ಷಕ ವೀರಣ್ಣ ಶಾಲಾ ಶಿಕ್ಷಕ ಸಿಬ್ಬಂದಿ, ಪೋಷಕ ವರ್ಗ, ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದ್ದಾರೆ.



ಸ್ಪರ್ಧಾತ್ಮಕ ಯುಗದಲ್ಲಿ ಮಹಿಳೆ ಪಾತ್ರ ಅಪಾರ



ಕುರುಗೋಡು: ಮಹಿಳೆಯರು ಕೂಡ ಪುರುಷರಷ್ಟೇ ಸಮಾನರು ಮನೆ ಯಜಮಾನಿಕೆಯಿಂದ ಹಿಡಿದು ನಮ್ಮ ಭಾರತ ದೇಶದ ಪ್ರಸ್ತುತ ಹಣಕಾಸು ಸಚಿವೆಯವರೆಗೂ ಮಹಿಳೆಯರ ಪಾತ್ರ ಅತ್ಯುತ್ತಮವಾದದ್ದು ಎಂದು ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ಕೆ.ಚಿದಾನಂದಪ್ಪ ಹೇಳಿದರು.

ಅವರು ಗ್ಯಾರಂಟಿ ಸಮಿತಿ ವತಿಯಿಂದ ತಾಪಂ ರೈತ ಭವನದಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಕರ್ನಾಟಕ ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ತಾಪಂ ಇಒ ನಿರ್ಮಲಾ ಮಾತನಾಡಿ, ಇಂದಿನ ಆಧುನಿಕ ಸಮಾಜದಲ್ಲಿ ಮಹಿಳೆಯರು ಸಮಾಜದ ಮುಖ್ಯ ವಾಹಿನಿಗೆ ಬಂದು ಹಲವಾರು ರಂಗದಲ್ಲಿ ತಮ್ಮದೇ ಆದ ಪ್ರತಿಭೆಯ ಜೊತೆಗೆ ಸ್ಪರ್ಧಾತ್ಮಕ ಯುಗದಲ್ಲಿ ಕೂಡ ಪ್ರಬಲ ಪೈಪೋಟಿ ನೀಡುತ್ತಿರುವುದು ಸಂತೋಷದ ವಿಷಯ ಎಂದರು.

ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಬಸನಗೌಡ ಮಾತನಾಡಿ, ಫಲಾನುಭವಿಗಳಿಗೆ ಯಾವುದೇ ತೊಂದರೆಯಾಗದಂತೆ ಅಧಿಕಾರಿಗಳು ಪ್ರಾಮಾಣಿಕವಾಗಿ ಯೋಜನೆಗಳನ್ನು ತಲುಪಿಸಬೇಕು. ಏನೇ ತೊಡಕು ಉದ್ಭವಿಸಿದಲ್ಲಿ ನಮ್ಮ ಗಮನಕ್ಕೆ ತರಬೇಕು. ಒಟ್ಟು ಸರ್ಕಾರದ ಯೋಜನೆಗಳನ್ನು ಸಾರ್ಥಕ ಗೊಳಿಸುವಲ್ಲಿ ಅಧಿಕಾರಿಗಳು ಶ್ರಮಿಸಬೇಕು ಎಂದು ಎಂದು ಹೇಳಿದರು.

ಪುರಸಭೆ ಉಪಾಧ್ಯಕ್ಷ ಚನ್ನಪಟ್ಟಣ ಮಲ್ಲಿಕಾರ್ಜುನ, ಜಿಲ್ಲಾ ಸದಸ್ಯರಾದ ಬಿ.ಎಂ.ಆನಂದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನ ಬಸವರಾಜ, ಶಿವರಾಜ್, ಶಿವರಾಮ ರೆಡ್ಡಿ, ತಾಲೂಕಿನ ಪಿಡಿಒಗಳು, ಸಿಡಿಪಿಒ ಮತ್ತು ವಿವಿಧ ಇಲಾಖೆ ಅಧಿಕಾರಿಗಳು ಅಂಗನವಾಡಿ ಆಶಾ ಕಾರ್ಯಕರ್ತರು, ಸಿಬ್ಬಂದಿ, ಸಾರ್ವಜನಿಕರು ಉಪಸ್ಥಿತರಿದ್ದರು.

ಶಿಕ್ಷಕರು ಸಂಶೋಧನೆಯಲ್ಲಿ ತೊಡಗಿಕೊಳ್ಳಲಿ: ಡಾ. ರುಮಾಲೆ

ವಿಜಯನಗರ: ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರು ಪಿಎಚ್‌ಡಿ ಪಡೆಯುವುದರಿಂದ ಶಾಲಾ ಪರಿಸರದಲ್ಲಿ ಗುಣಾತ್ಮಕ ಬದಲಾವಣೆ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರಿ ಶಾಲಾ ಶಿಕ್ಷಕರು ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ನಿವೃತ್ತ ಪ್ರಾಧ್ಯಾಪಕ ಡಾ.ಮೃತ್ಯುಂಜಯ ರುಮಾಲೆ ಸಲಹೆ ನೀಡಿದರು.

ಸ್ನೇಹ ಬಳಗ ಹೊಸಪೇಟೆ, ರಾಜ್ಯ ಸರ್ಕಾರಿ ನೌಕರರ ಸಂಘ, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಶನಿವಾರ ನಗರದ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ನೇಮಕಗೊಂಡ ಹಾಗೂ ಕನ್ನಡ ವಿವಿಯಿಂದ ಪಿಎಚ್‌ಡಿ ಪದವಿ ಪಡೆದ ಡಾ.ಬಸವರಾಜ ಕೆ. ಅವರ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕೆಲ ಪ್ರಾಥಮಿಕ ಶಾಲಾ ಶಿಕ್ಷಕರು ಶ್ರದ್ಧೆಯಿಂದ ಸಂಶೋಧನೆಯಲ್ಲಿ ತೊಡಗಿಸಿಕೊಂಡವರಲ್ಲಿ ಬಸವರಾಜ್ ಕೆ. ಕೂಡ ಒಬ್ಬರು. ಶಿಕ್ಷಕರು ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಅವರಲ್ಲಿ ಸಾಹಿತ್ಯಕ ಚಟುವಟಿಕೆಗಳ ಸಕ್ರಿಯವಾಗುತ್ತವೆ. ಅದು ಶಾಲೆಯಲ್ಲಿ ಭೋದನೆಯಲ್ಲಿ ಸಾಕಾರಾತ್ಮಕ ಪರಿಣಾಮ ಬೀರಲಿದ್ದು, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕುತ್ತದೆ ಎಂದು ಹೇಳಿದರು.

ಡಿಡಿಪಿಐ ವೆಂಕಟೇಶ ರಾಮಚಂದ್ರಪ್ಪ ಮಾತನಾಡಿ, ಮಕ್ಕಳ ಕಲಿಕೆಯ ಬುನಾದಿ ಎಂದರೆ ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಶಾಲಾ ಶಿಕ್ಷಕರು ಹೇಗೆ ಮಕ್ಕಳಲ್ಲಿ ಜ್ಞಾನದ ಬೀಜ ಬಿತ್ತುತ್ತಾರೋ ಅದೇ ರೀತಿ ಮಕ್ಕಳು ಉತ್ತಮ ಸತ್‌ಪ್ರಜೆಗಳಾಗಿ ರೂಪುಗೊಳ್ಳುತ್ತಾರೆ ಎಂದರು.



ಚಿತ್ರದುರ್ಗದ ಸಿಟಿಇ ಪ್ರಾಚಾರ್ಯ ಹಾಗೂ ಶಿಕ್ಷಣ ಇಲಾಖೆಯ ಸಹ ನಿರ್ದೇಶಕಿ ಎ.ಹನುಮಕ್ಕ ಮಾತನಾಡಿದರು. ನಂತರ ಡಾಕ್ಟರೇಟ್ ಪದವಿ ಪಡೆದ ಹಾಗೂ ನೌಕರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಬಸವರಾಜ್ ಕೆ. ಅವರನ್ನು ಅಭಿನಂದಿಸಲಾಯಿತು. ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜಿ.ಮಲ್ಲಿಕಾರ್ಜುನಗೌಡ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಉಪನ್ಯಾಸಕ ಎಲ್.ಡಿ.ಜೋಷಿ, ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಚನ್ನಬಸಪ್ಪ, ಪಿ.ಸುನಂದ, ಸಂಘದ ಪದಾಧಿಕಾರಿಗಳಾದ ಕೆ.ಮಲ್ಲೇಶಪ್ಪ, ಎಸ್.ಬಸವರಾಜ, ಮಾರ್ಗದಪ್ಪ, ಆರ್.ಸುಧಾದೇವಿ, ವರಪ್ರಸಾದ್, ಕ.ಸಾ.ಪ. ಅಧ್ಯಕ್ಷ ಗುಂಡಿ ಮಾರುತಿ, ಮಲಿಯಪ್ಪ ಉಪಸ್ಥಿತರಿದ್ದರು. ಪ್ರದೀಪ್‌ಕುಮಾರ್ ನಿರ್ವಹಿಸಿದರು. ದಿವಾಕರ ನಾರಾಯಣ ಸ್ವಾಗತಿಸಿದರು, ಪ್ರಕಾಶ ವಂದಿಸಿದರು.

ಸಿಲಿಂಡರ್ ಕೊರತೆಯಾಗದಂತೆ ಕ್ರಮ ವಹಿಸಿ

ಹಗರಿಬೊಮ್ಮನಹಳ್ಳಿ: ಗ್ಯಾಸ್ ಸಿಲೆಂಡರ್ ಸಂಗ್ರಹಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಕರಾಳ ವ್ಯಾಪಾರಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಸಿಪಿಐಎಂ ಪಕ್ಷದ ಕಾರ್ಯಕರ್ತರು ಬಸವೇಶ್ವರ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

ಅಮೆರಿಕಾ ಮತ್ತು ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧವು ದೇಶದ ಜನರ ಜೀವನದ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡಿದೆ ವಿದ್ಯಾರ್ಥಿ ವಸತಿ ನಿಲಯಗಳಿಗೆ ಗ್ಯಾಸ್ ಸಿಲಿಂಡರ್ ನಿರಂತರ ಸರಬರಾಜು ಮಾಡುವಂತೆ ಇಂಧನ ಸಂಪನ್ಮೂಲ ಕೊರತೆಯಾಗದಂತೆ ಕ್ರಮ ವಹಿಸುವಂತೆ ಒತ್ತಾಯಿಸಲಾಯಿತು.

ಕಾರ್ಯದರ್ಶಿ.ಬಿ.ಮಾಳಮ್ಮ. ಸಿಪಿಐ(ಎಂ). ಪಕ್ಷದ ಜಿಲ್ಲಾ ಮುಖಂಡ ಆರ್.ಎಸ್.ಬಸವರಾಜ ತಾಲೂಕ ಮುಖಂಡರಾದ ಎಸ್.ಜಗನ್ನಾಥ, ಕೆ.ರಮೇಶ್, ಕೆ.ಅಂಜೀನಮ್ಮ, ಪಿ.ಚಾಂದಬೀ, ತಟ್ನಮ್ಮ, ರಾಮಣ್ಣ, ರಮೇಶ್, ಮೈಲಮ್ಮ ಇತರರಿದ್ದರು.



ಗ್ರಾಮೀಣ ಕ್ರೀಡಾ ಪ್ರತಿಭೆಗೆ ಪ್ರೋತ್ಸಾಹ ಅಗತ್ಯ: ಮಾಗನೂರ

ಯಾದಗಿರಿ: ಗ್ರಾಮೀಣ ಪ್ರದೇಶಗಳ ಯುವಕರಲ್ಲಿ ಅಡಗಿರುವ ಕ್ರೀಡಾ ಪ್ರತಿಭೆ ಹೊರಹೊಮ್ಮಲು ಕ್ರೀಡೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವುದು ಅಗತ್ಯ. ಹಳ್ಳಿಗಳಲ್ಲಿ ಉತ್ತಮ ಸಾಮರ್ಥ್ಯ ಹೊಂದಿರುವ ಅನೇಕ ಯುವಕರು ಇದ್ದರೂ ಸೂಕ್ತ ಅವಕಾಶಗಳ ಕೊರತೆಯಿಂದ ಅವರ ಪ್ರತಿಭೆ ಬೆಳಕಿಗೆ ಬರುವುದಿಲ್ಲ, ಗ್ರಾಮ ಮಟ್ಟದಲ್ಲಿ ಕ್ರೀಡಾಕೂಟಗಳನ್ನು ಆಯೋಜಿಸುವ ಮೂಲಕ ಯುವಕರಿಗೆ ವೇದಿಕೆ ಕಲ್ಪಿಸಬೇಕು ಎಂದು ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಚಂದ್ರಶೇಖರಗೌಡ ಮಾಗನೂರ ಹೇಳಿದರು.

ಯಾದಗಿರಿ ವಿಧಾನಸಭಾ ಕ್ಷೇತ್ರದ ವಡಗೆರಾ ತಾಲೂಕಿನ ಗೋನಾಲ ಗ್ರಾಮದಲ್ಲಿ ಯುವಕರು ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಉತ್ತಮ ಅವಕಾಶ ಸೃಷ್ಟಿಯಾದರೆ ಅನೇಕ ಪ್ರತಿಭೆಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಳ್ಳುವ ಸಾಧ್ಯತೆ ಇದೆ. ಕ್ರೀಡೆಗಳು ಕೇವಲ ಮನರಂಜನೆಗಾಗಿ ಮಾತ್ರವಲ್ಲದೆ ಯುವಕರಲ್ಲಿ ಶಿಸ್ತು, ಆತ್ಮವಿಶ್ವಾಸ, ತಂಡದ ಮನೋಭಾವ ಮತ್ತು ನಾಯಕತ್ವ ಗುಣಗಳನ್ನು ಬೆಳೆಸುವ ಮಹತ್ವದ ಸಾಧನವಾಗಿವೆ ಎಂದು ಹೇಳಿದರು.



ಹಳ್ಳಿಗಳಲ್ಲಿ ಸಾಕಷ್ಟು ಕ್ರೀಡಾ ಪ್ರತಿಭೆಗಳು ಅಡಗಿವೆ. ಆದರೆ ಸೂಕ್ತ ತರಬೇತಿ, ಕ್ರೀಡಾಂಗಣಗಳು ಮತ್ತು ಮೂಲಸೌಕರ್ಯಗಳ ಕೊರತೆಯಿಂದಾಗಿ ಅನೇಕ ಯುವಕರು ತಮ್ಮ ಸಾಮರ್ಥ್ಯ ಪ್ರದರ್ಶಿಸಲು ಸಾಧ್ಯವಾ ಗುತ್ತಿಲ್ಲ, ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ಗ್ರಾಮೀಣ ಮಟ್ಟದಲ್ಲಿ ಕ್ರೀಡಾ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿದರೆ ಯುವಕರಿಗೆ ಹೆಚ್ಚಿನ ಅವಕಾಶಗಳು ಲಭ್ಯವಾಗುತ್ತವೆ ಎಂದು ಅವರು ಅಭಿಪ್ರಾಯಪಟ್ಟರು.

ಗ್ರಾಮದ ಹಿರಿಯ ಮುಖಂಡರಾದ ಶಂಕರಪ್ಪಗೌಡ ಮಾಲಿಪಾಟೀಲ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಶ್ರೀಧರ್ ಸಾಹುಕಾರ, ಮಾಜಿ ಗ್ರಾಪಂ ಅಧ್ಯಕ್ಷ ಸಂದೀಪ್ ಪಾಟೀಲ್, ಮಹದೇವಪ್ಪ ಪೂಜಾರಿ, ಮರಿಸ್ವಾಮಿ ಪೂಜಾರಿ, ನಾಗಪ್ಪ ಪೂಜಾರಿ, ಡಾ.ಮಂಜು, ಮಂಜುನಾಥ್, ರಾಜಪ್ಪ ಸಾಹುಕಾರ್, ಸೂಗಪ್ಪ ಗೌಡ ಕೊಂಗಂಡಿ, ಸಿದ್ದಯ್ಯ ಮುತ್ಯಾ, ರಾಚಪ್ಪ ಗೌಡ, ಮಹಮ್ಮದ್ ಗುಂಡ್ಲೂರು, ವಿಶ್ವನಾಥ್ ಬೆಂಡ್ಡೆಬೆಂಬಳಿ ಸೇರಿದಂತೆ ಗ್ರಾಮಸ್ಥರು, ಯುವಕರು, ಕ್ರೀಡಾಪಟುಗಳು ಇದ್ದರು.